ವಿಶ್ವವಾಣಿ
ವಿಶ್ವಾಸವೇ ವಿಶ್ವ

ಮೆಲೋನಿಗೆ 'ಮೆಲೋಡಿ' ಕೊಡುಗೆ

ಇಟಲಿ ಪ್ರವಾಸದಲ್ಲಿರುವ ಭಾರತದ ಪ್ರಧಾನಿ ಮೋದಿ ಬುಧವಾರ ಇಟಲಿ ಪ್ರಧಾನಿ ಜಾರ್ಜಿಯಾ ಮೆಲೋನಿಗೆ ಪಾರ್ಲೆ ಕಂಪನಿಯ 'ಮೆಲೋಡಿ' ಚಾಕೋಲೇಟನ್ನು ಉಡುಗೊರೆಯಾಗಿ ನೀಡಿದ್ದಾರೆ. ಈ ವಿಡಿಯೋ ಆನ್‌ಲೈನ್‌ನಲ್ಲಿ ವೈರಲ್ ಆಗಿದೆ. ಮೆಲೋನಿ, ಮೋದಿ ಹೆಸರು ಸೇರಿ ಮೆಲೋಡಿ ಎಂದೇ ಜನಪ್ರಿಯವಾಗಿ ಕರೆಯಲಾಗುತ್ತದೆ. ಮೋದಿ ಅದೇ ಹೆಸರಿನ ಚಾಕೋಲೇಟ್ ನೀಡಿರುವುದು ಬಗೆಬಗೆಯ ಚರ್ಚೆಗೆ ಕಾರಣವಾಗಿದೆ.

ದಾರಿದೀಪೋಕ್ತಿ

ನಿಮ್ಮ ಗುರಿ ಸ್ಪಷ್ಟವಾಗಿದ್ದರೆ ಹಾದಿಯಲ್ಲಿನ ಕಲ್ಲುಗಳೂ ಮೆಟ್ಟಿಲುಗಳಾಗುತ್ತವೆ. ಕಠಿಣ ಪರಿಶ್ರಮ ಮತ್ತು ತಾಳ್ಮೆ ನಿಮ್ಮ ಜತೆಗಿದ್ದರೆ, ಜಗತ್ತಿನ ಯಾವುದೇ ಶಿಖರವೂ ಏರಲು ಅಸಾಧ್ಯವಲ್ಲ. ನಿಮ್ಮ ಶಕ್ತಿಯನ್ನು ನೀವು ನಂಬಿ, ಯಶಸ್ಸು ತಾನಾಗಿಯೇ ಹುಡುಕಿಕೊಂಡು ಬರುತ್ತದೆ.

ವಕ್ರತುಂಡೋಕ್ತಿ

'ಇನ್ನೈದು ನಿಮಿಷದಲ್ಲಿ ಬರ್ತೀನಿ' ಎಂದು ಯಾರು ಫೋನ್‌ನಲ್ಲಿ ಹೇಳುತ್ತಾರೋ, ಅಸಲಿಗೆ ಅವರು ಇನ್ನೂ ಸ್ನಾನಕ್ಕೇ ಹೋಗಿರುವುದಿಲ್ಲ.

ಸಚಿವ ಸಂಪುಟ ಪುನಾರಚನೆಗೆ ರಾಹುಲ್ ಯಾತ್ರಾ ವಿರಾಮ

ಮೇ 24ರಿಂದ 11 ದಿನಗಳ ಕಾಲ ರಾಹುಲ್ ವಿದೇಶ ಯಾತ್ರೆ

ಪಂಚರಾಜ್ಯ ಚುನಾವಣೆ ನಂತರವೂ ಆಕಾಂಕ್ಷಿಗಳಿಗೆ ನಿರಾಶೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಪಂಚರಾಜ್ಯ ಚುನಾವಣೆಯ ಬಳಿಕ ಸಚಿವ ಸಂಪುಟ ಪುನಾರಚನೆಯ ಉತ್ಸಾಹದಲ್ಲಿದ್ದ ರಾಜ್ಯ ಕಾಂಗ್ರೆಸ್ ಸರಕಾರದ ಆಕಾಂಕ್ಷಿಗಳಿಗೆ ಮತ್ತೆ ನಿರಾಶೆಯೆದುರಾಗಿದೆ. ಕಾಂಗ್ರೆಸ್ ವರಿಷ್ಠ ರಾಹುಲ್ ಗಾಂಧಿ ಅವರು ಮೇ 24ರಿಂದ 11 ದಿನಗಳ ವಿದೇಶ ಪ್ರವಾಸಕ್ಕೆ ಹೊರಟುನಿಂತಿದ್ದಾರೆ. ಈ ಹಿನ್ನೆಲೆಯಲ್ಲಿ ಮಾತುಕತೆಗಳು ಮುಂದೂಡಿಕೆಯಾಗಿವೆ.

ಅದಾದ ನಂತರ ಜಿಬಿಎ ಚುನಾವಣೆಯ ಲೆಕ್ಕಾಚಾರಗಳು ಆರಂಭವಾಗುವುದರಿಂದ ಸದ್ಯಕ್ಕೆ ಕಾಯುವುದೊಂದೇ ದಾರಿಯಾಗಿದೆ.

ಪಂಚರಾಜ್ಯ ಚುನಾವಣೆ ಹಾಗೂ ಕೇರಳ ಮುಖ್ಯ ಮಂತ್ರಿ ಆಯ್ಕೆಯ ಬಳಿಕ ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿಗಳನ್ನು ದೆಹಲಿಗೆ ಕರೆಸಿಕೊಂಡು ಗೊಂದಲವನ್ನು ರಾಹುಲ್ ಗಾಂಧಿ ನೇತೃತ್ವದಲ್ಲಿ ಸರಿಪಡಿಸ ಲಿದ್ದಾರೆ. ಅದರಲ್ಲಿಯೂ ಸಿದ್ದರಾಮಯ್ಯ ಅವರು ಸಚಿವ ಸಂಪುಟ ಪುನಾರಚನೆಗೆ ಅನುಮತಿ ಪಡೆದುಕೊಂಡೇ ಬರಲಿ ದ್ದಾರೆ ಎನ್ನುವ ಮಾತುಗಳು ಕೇಳಿಬಂದಿತ್ತು. ಆದರೀಗ ರಾಹುಲ್ ಗಾಂಧಿ ಅವರು ವಿದೇಶದಿಂದ ವಾಪಸಾಗುವುದೇ ಜೂನ್ ಮೊದಲ ವಾರದಲ್ಲಿ ಎನ್ನಲಾಗಿದೆ.

ಸುಮಾರು 11 ದಿನಗಳ ಕಾಲ ಜರ್ಮನಿ, ಬ್ರೆಜಿಲ್ ದೇಶಗಳಿಗೆ ರಾಹುಲ್ ಗಾಂಧಿ ಭೇಟಿ ನೀಡಲಿದ್ದಾರೆ. ಈ ಅವಧಿಯಲ್ಲಿ ರಾಜ್ಯ ನಾಯಕರು ದೆಹಲಿಗೆ ಭೇಟಿ ನೀಡಿದರೂ, ಅಂತಿಮ ತೀರ್ಮಾನ ಕೈಗೊಳ್ಳಲು ಸಾಧ್ಯವಾಗುವುದಿಲ್ಲ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸೇರಿದಂತೆ ಇತರೆ ನಾಯಕರನ್ನು ಭೇಟಿ ಮಾಡಿದರೂ, ರಾಹುಲ್ ಗಾಂಧಿಯತ್ತ ಈ ಎಲ್ಲ ನಾಯಕರೂ ಬೊಟ್ಟು ಮಾಡುವುದು ನಿಶ್ಚಿತ. ಜೂನ್ 4–5ಕ್ಕೆ ರಾಹುಲ್ ವಾಪಸಾದರೂ, ಜಿಬಿಎ ಚುನಾವಣೆಯ ನೆಪದಲ್ಲಿ ಸಂಪುಟ ಪುನಾರಚನೆ ಅಥವಾ ನಾಯಕತ್ವ ಬದಲಾವಣೆಯ ವಿಷಯವನ್ನು ಹೈಕಮಾಂಡ್ ನಾಯಕರು ಪರಿಗಣಿಸು ವುದಿಲ್ಲ ಎನ್ನುವುದು ಸ್ಪಷ್ಟವಾಗಿರುವುದರಿಂದ, ಮುಂದಿನ ಮೂರು ತಿಂಗಳ ಕಾಲ ನಾಯಕತ್ವ ಬದಲಾವಣೆ ಅಥವಾ ಸಂಪುಟ ಪುನಾರಚನೆಯ ಚರ್ಚೆ ಮುಂದಕ್ಕೆ ಹೋಗುವುದು ಖಚಿತವಾಗಿದೆ.

ಜಿಬಿಎ ಚುನಾವಣೆ ಹೊತ್ತಿನಲ್ಲಿ ಬಂಡಾಯ ಎದುರಿಸಲು ಸಿದ್ಧರಿಲ್ಲ

ರಾಜ್ಯ ಕಾಂಗ್ರೆಸ್ ಪಾಲಿಗೆ ಗ್ರೇಟರ್ ಬೆಂಗಳೂರಿನ ಐದು ನಗರ ಪಾಲಿಕೆಗಳು ಪ್ರತಿಷ್ಠೆಯ ಪ್ರಶ್ನೆಯಾಗಿದೆ. ಚುನಾವಣೆಯನ್ನೂ ಕೆಲ ತಿಂಗಳ ಕಾಲ ಮುಂದೂಡಲು ಪ್ರಯತ್ನಿಸಿದರೂ, ಸುಪ್ರೀಂ ಕೋರ್ಟ್ ತ್ರಿಸದಸ್ಯ ಪೀಠ ಆಗಸ್ಟ್‌ನೊಳಗೆ ಚುನಾವಣೆಯನ್ನು ಪೂರ್ಣಗೊಳಿಸಿ ಎನ್ನುವ ಸ್ಪಷ್ಟ ಸೂಚನೆಯನ್ನು ನೀಡಿದ್ದು, ಇನ್ನೊಮ್ಮೆ ಕೋರ್ಟ್‌ಗೆ ಹೋದರೂ ಛೀಮಾರಿ ಹಾಕಿಸಿಕೊಳ್ಳುವ ಆತಂಕವಿದೆ. ಆದ್ದರಿಂದ ಚುನಾವಣೆ ನಡೆಸುವುದು ಅನಿವಾರ್ಯ ಎನ್ನಲಾಗುತ್ತಿದೆ. ಆಗಸ್ಟ್ ಅಂತ್ಯಕ್ಕೆ ಚುನಾವಣೆ ನಡೆಯಬೇಕೆಂದರೂ ಜುಲೈ ಎರಡನೇ ವಾರದಲ್ಲಿ ಅಧಿಸೂಚನೆ ಹೊರಡಿಸಬೇಕು. ಹೀಗಿರುವಾಗ, ಸಚಿವ ಸಂಪುಟ ಪುನಾರಚನೆಗೆ ಕೈಹಾಕಿದರೆ ಪಕ್ಷದಲ್ಲಿ ಏಳುವ ಬಂಡಾಯವನ್ನು 'ನಿಯಂತ್ರಿಸುವುದು' ಸವಾಲಾಗಲಿದೆ. ಜಿಬಿಎ ಚುನಾವಣೆ ಮುಗಿಯುವ ತನಕ ಯಾವುದೇ ಬದಲಾವಣೆ ಬೇಡ ಎನ್ನುವ ತೀರ್ಮಾನಕ್ಕೆ ಹೈಕಮಾಂಡ್ ಬರುವುದು ನಿಶ್ಚಿತ ಎನ್ನಲಾಗಿದೆ.

ನಾಯಕರ ಭೇಟಿಗೆ ಸಮಯ ನೀಡಿಲ್ಲ ರಾಗಾ

ಕೇರಳ ಮುಖ್ಯಮಂತ್ರಿ ಆಯ್ಕೆಯ ಬಳಿಕ ಕೆಲ ನಾಯಕರು ರಾಹುಲ್ ಗಾಂಧಿ ಅವರನ್ನು ಭೇಟಿಯಾಗಿ ಸಂಪುಟ ಪುನಾರಚನೆಗೆ ಒತ್ತಡ ಹೇರುವ ಪ್ರಯತ್ನ ಮಾಡಿದ್ದಾರೆ. ಆದರೆ ಕರ್ನಾಟಕದ ಯಾವ ನಾಯಕರಿಗೂ ಭೇಟಿಗೆ ಸಮಯಾವಕಾಶ ನೀಡಿಲ್ಲ ಎನ್ನುವ ಮಾತುಗಳು ಕೇಳಿಬರುತ್ತಿದೆ. ಹೈಕಮಾಂಡ್ ಮಟ್ಟದಲ್ಲಿ ಸಂಪುಟ ಪುನಾರಚನೆ ಅಥವಾ ನಾಯಕತ್ವ ಬದಲಾವಣೆ ವಿಷಯದಲ್ಲಿ ಸ್ಪಷ್ಟನೆ ಸಿಗುವ ತನಕ ರಾಜ್ಯದ ಯಾವ ನಾಯಕರಿಗೂ ಭೇಟಿಗೆ ಸಮಯಾವಕಾಶ ನೀಡುವುದಿಲ್ಲ ಎನ್ನುವ ತೀರ್ಮಾನಕ್ಕೆ ರಾಹುಲ್ ಗಾಂಧಿ ಬಂದಿದ್ದಾರೆ ಎನ್ನಲಾಗಿದೆ. ಇದಕ್ಕೆ ಪೂರಕವಾಗಿ ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿಗಳಿಬ್ಬರೂ, 'ರಾಹುಲ್ ಗಾಂಧಿ ಕರೆದಾಗ ನಾವು ಹೋಗುತ್ತೇವೆ' ಎನ್ನುವ ಮಾತನ್ನು ಆಡಿದ್ದಾರೆ.

ಭೋಜನಕೂಟ ನಡೆದರೂ ಇತ್ಯರ್ಥವಾಗಿಲ್ಲ

ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸಿಎಂ ಸಿದ್ದರಾಮಯ್ಯ, ಡಿಸಿಎಂ ಶಿವ ಕುಮಾರ್ ಕೆಲ ದಿನಗಳ ಹಿಂದೆ ಇಂಧನ ಸಚಿವ ಕೆ.ಜೆ.ಜಾರ್ಜ್ ಅವರ ನಿವಾಸದಲ್ಲಿ ಮಧ್ಯಾಹ್ನ ಒಟ್ಟಿಗೆ ಊಟ ಮಾಡಿದ್ದಾರೆ. ಇದೀಗ ಚರ್ಚೆಗೆ ಕಾರಣವಾಗಿದೆ. ಕೇರಳ ಮುಖ್ಯಮಂತ್ರಿ ವಿ.ಡಿ.ಸತೀಶನ್ ಅವರ ಪ್ರಮಾಣವಚನ ಸಮಾರಂಭದಲ್ಲಿ ಭಾಗವಹಿಸಿ ತಿರುವನಂತಪುರಂನಿಂದ ಬಂದ ಬಳಿಕ ಜಾರ್ಜ್ ಅವರು ಖರ್ಗೆ, ಸಿದ್ದರಾಮಯ್ಯ ಮತ್ತು ಶಿವಕುಮಾರ್ ಅವರನ್ನು ತಮ್ಮ ನಿವಾಸಕ್ಕೆ ಊಟಕ್ಕೆ ಕರೆದೊಯ್ದರು. ಮೂಲಗಳ ಪ್ರಕಾರ, ಈ ಭೋಜನ ಕೂಟ ಸುಮಾರು 45 ನಿಮಿಷಗಳ ಕಾಲ ನಡೆಯಿತು. ಈ ಸಭೆಯಲ್ಲಿ ತಮ್ಮ ತಮ್ಮ ಅಭಿಪ್ರಾಯಗಳನ್ನು ರಾಜ್ಯ ನಾಯಕರು ಮಂಡಿಸಿದ್ದಾರೆ ಹೊರತು, ಯಾವುದೇ ಸ್ಪಷ್ಟನೆ ಬಂದಿಲ್ಲ ಎನ್ನಲಾಗಿದೆ.

ಸೊಂಪಾದ ಪುಟಗಳು

ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಪ್ರಧಾನಿ ಮಾತಾಡಲೇಬೇಕಾ?
ನೂರೆಂಟು ವಿಶ್ವ
ವಿಶ್ವೇಶ್ವರ ಭಟ್ 6

ಗೆಜ್ಜೆ ಬಿಚ್ಚುವ ಸಮಯ, ಒಳಕೋಣೆಯಲಿ ಮೌನ
ಕಾಡುದಾರಿ
ಹರೀಶ್ ಕೇರ 7

ಇನ್ನೊಂದು ವಾರ ಬಿರುಮಳೆ ಸಾಧ್ಯತೆ, ಯೆಲ್ಲೋ ಅಲರ್ಟ್

ಬೆಂಗಳೂರು: ರಾಜ್ಯದಲ್ಲಿ ಕಳೆದ ಕೆಲದಿನಗಳಿಂದ ಮಳೆಯಾಗುತ್ತಿದ್ದು, ಇನ್ನೊಂದು ವಾರ ಇದೇ ರೀತಿ ಮಳೆ ಮುಂದುವರಿಯಲಿದೆ. ರಾಜ್ಯದ ಉತ್ತರ ಹಾಗೂ ದಕ್ಷಿಣ ಒಳನಾಡಿನ ಕೆಲವೆಡೆ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಅವಧಿಗೂ ಮುನ್ನ ಈ ಬಾರಿ ಮುಂಗಾರು ಆಗಮಿಸುವ ಮುನ್ಸೂಚನೆ ಇದ್ದು, ಈಗಾಗಲೇ ಅದಕ್ಕೆ ಪೂರಕವಾದ ಸನ್ನಿವೇಶಗಳು ವಾತಾವರಣದಲ್ಲಿ ಕಂಡುಬರುತ್ತಿವೆ. ಪೂರ್ವ ಮುಂಗಾರು ಚೇತರಿಸಿಕೊಂಡಿದ್ದು, ರಾಜ್ಯದ ಹಲವೆಡೆ ಮಳೆಯಾಗಿದೆ. ಬಂಗಾಳ ಕೊಲ್ಲಿಯಲ್ಲಿ ಉಂಟಾಗಿದ್ದ ವಾಯುಭಾರ ಕುಸಿತ ಹಾಗೂ ಒಳನಾಡಿನಲ್ಲಿ ಉಂಟಾಗಿರುವ ಸುಳಿಗಾಳಿಯಿಂದಾಗಿ ರಾಜ್ಯದ ದಕ್ಷಿಣ ಒಳನಾಡಿನ ಜಿಲ್ಲೆಗಳಲ್ಲಿ ಯೆಲ್ಲೋ ಅಲರ್ಟ್ ನೀಡಲಾಗಿದೆ.

ಫನ್‌ತರಂಗ
- ರಘುಪತಿ ಶೃಂಗೇರಿ -

ಆಕ್ರಮಣಕಾರಿ ಬೀದಿ ನಾಯಿಗಳನ್ನು ಕೊಲ್ಲಲು ಅನುಮತಿ ನೀಡಿ ಆದೇಶಿಸಿದ ಕೋರ್ಟ್

ಸುದ್ದಿ

ಆಗಸ್ಟ್ ಅಂತ್ಯದೊಳಗೆ ಜಿಬಿಎ ಚುನಾವಣೆ ನಡೆಸಿ: ಸುಪ್ರೀಂ

ಸರ್ವೋಚ್ಚ ಪೀಠದಿಂದ ಅಂತಿಮ ಗಡುವು, ಇನ್ನು ವಿಸ್ತರಿಸಲ್ಲ

ಸಿಬ್ಬಂದಿ ಕೊರತೆಯಿದೆ ಎಂದ ರಾಜ್ಯ ಸರಕಾರಕ್ಕೆ ಸ್ಪಷ್ಟ ಎಚ್ಚರಿಕೆ

ವಿಶ್ವವಾಣಿ ಸುದ್ದಿಮನೆ ದೆಹಲಿ/ಬೆಂಗಳೂರು

ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ)ದ ಚುನಾವಣೆಯನ್ನು ಜೂನ್ 30ಕ್ಕೆ ಪೂರ್ಣಗೊಳಿಸಬೇಕು ಎಂದು ಈ ಹಿಂದೆ ವಿಧಿಸಿದ್ದ ಗಡುವನ್ನು ಸುಪ್ರೀಂ ಕೋರ್ಟ್ ಆಗಸ್ಟ್ 31ರವರೆಗೆ ವಿಸ್ತರಿಸಿದೆ. ಆದರೆ ಮತ್ತೊಮ್ಮೆ ಯಾವುದೇ ಕಾರಣಕ್ಕೂ ಅವಧಿಯನ್ನು ವಿಸ್ತರಿಸುವುದಿಲ್ಲ ಎಂದು ಅಂತಿಮ ಎಚ್ಚರಿಕೆ ನೀಡಿದೆ. ಬಿಬಿಎಂಪಿ ಚುನಾವಣೆಗೆ ವಿಧಿಸಿದ್ದ ಅಂತಿಮ ಅವಧಿ ವಿಸ್ತರಣೆ ಮಾಡಬೇಕು ಎಂದು ಕೋರಿ ರಾಜ್ಯ ಸರಕಾರ ಸಲ್ಲಿಸಿದ್ದ ಮಧ್ಯಂತರ ಅರ್ಜಿಯ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್, ನ್ಯಾಯಮೂರ್ತಿ ಜೋಯ್ಮಲ್ಯ ಬಾಗ್ಚಿ ಮತ್ತು ನ್ಯಾಯಮೂರ್ತಿ ವಿಪುಲ್ ಪಂಚೋಲಿ ಅವರ ತ್ರಿಸದಸ್ಯ ಪೀಠ ಜಿಬಿಎ ಚುನಾವಣೆಗೆ ಅಂತಿಮ ಗಡುವು ವಿಧಿಸಿದೆ.

ವಿಚಾರಣೆ ವೇಳೆ ಪ್ರತಿಕ್ರಿಯಿಸಿದ ನ್ಯಾಯಪೀಠ, ಈ ಪ್ರಕರಣ ನೋಡಿದರೆ ರಾಜ್ಯ ಸರಕಾರ ಪಾಲಿಕೆ ಚುನಾವಣೆಯನ್ನು ಮುಂದೂಡಲು ಯತ್ನಿಸುತ್ತಿರುವಂತೆ ಕಾಣುತ್ತಿದೆ ಎಂದು ಹೇಳಿತು. ಅಂತಿಮವಾಗಿ, ಪರಿಸ್ಥಿತಿಯನ್ನು ಸಂಪೂರ್ಣವಾಗಿ ಪರಿಗಣಿಸಿ ಗ್ರೇಟರ್ ಬೆಂಗಳೂರು ಪ್ರಾಧಿಕಾರದಡಿ ಬರುವ ಐದೂ ಪಾಲಿಕೆಗಳಿಗೆ ಚುನಾವಣೆ ನಡೆಸಲು ಕೊನೆಯ ಬಾರಿಗೆ ಆಗಸ್ಟ್ 31ರವರೆಗೆ ಕಾಲಾವಕಾಶ ನೀಡಲಾಗಿದೆ ಎಂದು ಆದೇಶಿಸಿತು.

ವಿಚಾರಣೆ ಆರಂಭವಾಗುತ್ತಿದ್ದಂತೆ ರಾಜ್ಯ ಸರಕಾರವನ್ನು ಪ್ರತಿನಿಧಿಸಿದ್ದ ಹಿರಿಯ ವಕೀಲ ಡಾ.ಅಭಿಷೇಕ್ ಮನುಸಿಂಘ್ವಿ, ಬೆಂಗಳೂರಿನ ಐದು ಪಾಲಿಕೆಗಳಿಗೆ ಜೂನ್ 30ರ ಒಳಗೆ ಚುನಾವಣೆ ನಡೆಸುವಂತೆ ಸುಪ್ರೀಂ ಕೋರ್ಟ್ ಈ ಹಿಂದೆ ನಿರ್ದೇಶಿಸಿತ್ತು. ಐದೂ ಪಾಲಿಕೆಗಳಿಗೆ ಚುನಾವಣೆ ನಡೆಸಲು ಬಜೆಟ್‌ನಲ್ಲಿ ಹಣ ಮೀಸಲಿರಿಸಲಾಗಿದೆ. ರಾಜ್ಯದಲ್ಲಿ ಮತದಾರರ ಪಟ್ಟಿಯ ಪರಿಷ್ಕರಣೆ (ಎಸ್‌ಐಆರ್) ನಡೆಯುತ್ತಿದ್ದು, ಇದಕ್ಕೆ ಸರಕಾರದ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಸಿಬ್ಬಂದಿಯ ಕೊರತೆ ಎದುರಾಗಿದೆ. ಚುನಾವಣೆಗೆ ನಿಗದಿಪಡಿಸಿರುವ ದಿನಾಂಕವನ್ನು 60ರಿಂದ 90 ದಿನಗಳ ಕಾಲ ವಿಸ್ತರಿಸಬೇಕು ಎಂದು ಕೋರಿದರು. → 4

2020ರಿಂದಲೇ ಶುರುವಾಗಿತ್ತು!

ಸಾಧ್ಯವಾದಷ್ಟು ಬೇಗ ಬಿಬಿಎಂಪಿ ಚುನಾವಣೆ ನಡೆಸಬೇಕು ಎಂದು ರಾಜ್ಯ ಚುನಾವಣಾ ಆಯೋಗಕ್ಕೆ 2020ರ ಡಿಸೆಂಬರ್ 4ರಂದು ಹೈಕೋರ್ಟ್ ನಿರ್ದೇಶನ ನೀಡಿತ್ತು. ಈ ಆದೇಶಕ್ಕೆ ಸುಪ್ರೀಂ ಕೋರ್ಟ್ 2020, ಡಿ.18ರಂದು ತಡೆ ನೀಡಿತ್ತು. ಬಿಬಿಎಂಪಿ ವಾರ್ಡ್‌ಗಳ ಪುನರ್ ವಿಂಗಡಣೆ ಬಳಿಕ ಚುನಾವಣೆ ನಡೆಸಿ ಎಂದು 2022ರಲ್ಲಿ ಸೂಚಿಸಿತ್ತು. ಆದರೆ ಸರಕಾರ ಮತ್ತೆ ಸರ್ವೋಚ್ಚ ನ್ಯಾಯಾಲಯದ ಮೆಟ್ಟಿಲೇರಿತ್ತು.

ಇರಾನ್ ಯುದ್ಧ: ಅಮೆರಿಕದ 42 ಯುದ್ಧವಿಮಾನಗಳು ಧ್ವಂಸ

ವಾಷಿಂಗ್ಟನ್: ಇರಾನ್ ವಿರುದ್ಧ ಫೆಬ್ರವರಿ 28ರಂದು ಆರಂಭಿಸಿದ್ದ ಯುದ್ಧದಲ್ಲಿ ಅಮೆರಿಕವೂ ನಷ್ಟ ಅನುಭವಿಸಿದೆ ಎಂದು ಸಿಆರ್‌ಎಸ್ (ಕಾಂಗ್ರೆಸ್ ರೀಸರ್ಚ್ ಸರ್ವೀಸ್) ಸಂಸ್ಥೆ ವರದಿ ಮಾಡಿವೆ. ಫೈಟರ್ ಜೆಟ್‌ಗಳು, ಅತ್ಯಾಧುನಿಕ ಡ್ರೋನ್‌ಗಳು ಸೇರಿದಂತೆ ಕನಿಷ್ಠ 42 ಯುದ್ಧವಿಮಾನಗಳು ನಾಶವಾಗಿವೆ ಎಂದು ಸಿಆರ್‌ಎಸ್ ವರದಿಯಲ್ಲಿ ಹೇಳಲಾಗಿದೆ. ಒಟ್ಟಾರೆ ಅಮೆರಿಕಕ್ಕೆ ಆರ್ಥಿಕವಾಗಿ 2.4 ಲಕ್ಷ ಕೋಟಿ ರು. ವೆಚ್ಚವಾಗಿದೆ. ಸ್ಟ್ರೈಕ್ ಈಗಲ್, ಥಂಡರ್‌ಬೋಲ್ಟ್, ಜಾಲಿ ಗ್ರೀನ್, ಟ್ರೈಟಾನ್, ಎಂಕ್ಯೂ–9 ರೀಪರ್ ಮತ್ತು ಎಂಕ್ಯೂ–4ಸಿ ಸೇರಿ ಹಲವು ದುಬಾರಿ ಡ್ರೋನ್‌ಗಳು ನಾಶವಾಗಿವೆ.

ಜಾತಿಗಣತಿಯನ್ನು ಪ್ರಶ್ನಿಸಿದ್ದ ಅರ್ಜಿ ತಿರಸ್ಕರಿಸಿದ ಸುಪ್ರೀಂ

ದೆಹಲಿ: ಜಾತಿಗಣತಿಯನ್ನು ವಿರೋಧಿಸಿ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ಸರ್ವೋಚ್ಚ ನ್ಯಾಯಾಲಯ ತಿರಸ್ಕರಿಸಿದೆ. ಜನಗಣತಿಯೊಂದಿಗೆ ಜಾತಿಗಣತಿಯನ್ನೂ ಮಾಡಲು ಹೊರಟಿರುವ ಕೇಂದ್ರ ಸರಕಾರದ ನಡೆಯನ್ನು ವಿರೋಧಿಸಿ ವ್ಯಕ್ತಿಯೊಬ್ಬರು ಪಿಐಎಲ್ ಸಲ್ಲಿಸಿದ್ದರು. ಇದಕ್ಕೆ ಪ್ರತಿಕ್ರಿಯಿಸಿದ ಸರ್ವೋಚ್ಚ ಪೀಠ, ದೇಶದಲ್ಲಿ ಹಿಂದುಳಿದ ಜಾತಿಗಳಿಗೆ ಸೇರಿದವರು ಎಷ್ಟು ಮಂದಿಯಿದ್ದಾರೆಂದು ತಿಳಿದುಕೊಳ್ಳುವುದು ಕಲ್ಯಾಣ ಯೋಜನೆಗಳನ್ನು ರೂಪಿಸಲು ಸರಕಾರಕ್ಕೆ ನೆರವಾಗುತ್ತದೆ. ಅದನ್ನು ಮಾಡಲೇಬೇಕು ಎಂದು ಹೇಳಿದೆ.

ತೆರೆದ ಜೀಪ್‌ನಲ್ಲಿ ಸಫಾರಿಗೆ ಅವಕಾಶವಿಲ್ಲ: ಖಂಡ್ರೆ

ಬೆಂಗಳೂರು: ರಾಜ್ಯದ ಐದು ಹುಲಿ ಸಂರಕ್ಷಿತ ಪ್ರದೇಶ ಹಾಗೂ ವನ್ಯಜೀವಿಧಾಮಗಳ ಸಫಾರಿ ಯಲ್ಲಿ ತೆರೆದ ವಾಹನದ ಬದಲಿಗೆ ಸುರಕ್ಷಿತ ಬಸ್ ಬಳಕೆ ಮಾಡುವಂತೆ ಸಚಿವ ಈಶ್ವರ ಖಂಡ್ರೆ ಸೂಚನೆ ನೀಡಿ ದ್ದಾರೆ. ದುಬಾರೆ ಆನೆ ಶಿಬಿರದಲ್ಲಿ ಸೋಮವಾರ ಎರಡು ಸಾಕಾನೆಗಳ ಕಾಳಗದ ವೇಳೆ ಪ್ರವಾಸಿ ಮಹಿಳೆ ಮೃತಪಟ್ಟ ಆಘಾತಕಾರಿ ಘಟನೆ ಹಿನ್ನೆಲೆಯಲ್ಲಿ ಸಫಾರಿಗಳಲ್ಲಿ ಪ್ರವಾಸಿಗರ ಸುರಕ್ಷತೆಗೂ ಹೆಚ್ಚಿನ ಗಮನ ಹರಿಸುವಂತೆ ಮುಖ್ಯ ವನ್ಯಜೀವಿ ಪರಿಪಾಲಕರಿಗೆ ಸಚಿವರು ನಿರ್ದೇಶನ ನೀಡಿದ್ದಾರೆ. ಬಂಡೀಪುರ, ನಾಗರ ಹೊಳೆ, ಕಾಳಿ, ಬಿಳಿಗಿರಿರಂಗನಬೆಟ್ಟ ಮತ್ತು ಭದ್ರಾ ಹುಲಿ ಸಂರಕ್ಷಿತ ಪ್ರದೇಶ ಹಾಗೂ ಮಲೆಮಹದೇಶ್ವರ ಬೆಟ್ಟ, ದಾಂಡೇಲಿ, ಕೆ.ಗುಡಿ ಸೇರಿ ರಾಜ್ಯದ ವಿವಿಧೆಡೆ ಸಫಾರಿ ನಡೆಯುತ್ತಿದೆ.

ಸಮಾಚಾರ ಸಣ್ಣದಲ್ಲ

ಉಗ್ರ ಹಮ್ರಾಜ್ ಶೇಖ್‌ಗೆ ಏಳು ವರ್ಷ ಜೈಲು ಶಿಕ್ಷೆ

ಬೆಂಗಳೂರು: ತಾಲಿಬಾನ್ ಮತ್ತು ತೆಹ್ರಿಕ್-ಇ-ತಾಲಿಬಾನ್ ಪಾಕಿಸ್ತಾನ (ಟಿಟಿಕೆ) ಗೆ ಸಂಬಂಧಿಸಿದ ಭಯೋತ್ಪಾದನೆ ಪ್ರಕರಣದಲ್ಲಿ ಮಹಾರಾಷ್ಟ್ರ ನಿವಾಸಿ ಹಮ್ರಾಜ್ ವೋರ್ಷಿದ್ ಶೇಖ್‌ಗೆ ಬೆಂಗಳೂರಿನ ಎನ್‌ಐಎ ವಿಶೇಷ ನ್ಯಾಯಾಲಯವು ನಿಷೇಧಿತ ದೋಷಿ ಎಂದು ತೀರ್ಪು ನೀಡಿದ್ದು, 7 ವರ್ಷ ಕಠಿಣ ಜೈಲು ಶಿಕ್ಷೆ ಮತ್ತು 63,000 ರು. ದಂಡ ವಿಧಿಸಿದೆ. ವಿಚಾರಣೆ ವೇಳೆ ಹಮ್ರಾಜ್ ತಪ್ಪೊಪ್ಪಿಕೊಂಡಿದ್ದನು. ಈ ಪ್ರಕರಣವು ಜಿಹಾದಿ ಮತ್ತು ಭಯೋತ್ಪಾದಕ ಚಟುವಟಿಕೆಗಳ ಹರಡುವಿಕೆ ಮತ್ತು ಭಾರತದಲ್ಲಿ ತಾಲಿಬಾನ್ ಮತ್ತು ಟಿಟಿಪಿ ಸಂಬಂಧಿತ ಉದ್ದೇಶಗಳನ್ನು ಬೆಂಬಲಿಸಲು ದುರ್ಬಲ ಯುವಕರನ್ನು ನೇಮಿಸಿಕೊಳ್ಳುವ ಪ್ರಯತ್ನಗಳನ್ನು ಮಾಡಲಾಗುತ್ತಿತ್ತು ಎಂದು ಹೇಳಿದ್ದನು. ಎನ್‌ಐಎ ವಿಶೇಷ ನ್ಯಾಯಾಲಯವು ಹಮ್ರಾಜ್‌ಗೆ ಕಾನೂನುಬಾಹಿರ ಚಟುವಟಿಕೆಗಳು (ತಡೆಗಟ್ಟುವಿಕೆ) ಕಾಯಿದೆ ಅಡಿಯಲ್ಲಿ ತಪ್ಪಿತಸ್ಥನೆಂದು ತೀರ್ಪು ನೀಡಿದೆ. ಐಪಿಸಿ ಸೆಕ್ಷನ್ 120ಬಿ ಮತ್ತು 121ಎ ಅಡಿ ಯಲ್ಲಿ ಏಳು ವರ್ಷಗಳ ಕಠಿಣ ಜೈಲು ಶಿಕ್ಷೆಯನ್ನು ವಿಧಿಸಿದೆ. ತಾಲಿಬಾನ್ ಮತ್ತು ಟಿಟಿಪಿ ಸಿದ್ಧಾಂತಕ್ಕೆ ಸಂಬಂಧಿಸಿದ ಮೂಲಭೂತೀಕರಣ ಮತ್ತು ಭಯೋತ್ಪಾದನಾ ಚಟುವಟಿಕೆಗಳಿಗೆ ಸಂಬಂಧಿಸಿ ದಂತೆ ಎನ್‌ಐಎ ಏಪ್ರಿಲ್ 2023ರಲ್ಲಿ ಪ್ರಕರಣ ದಾಖಲಿಸಿ, ಅಕ್ಟೋಬರ್ 2023ರಲ್ಲಿ ಸಹ-ಆರೋಪಿ ಮೊಹಮ್ಮದ್ ಆರಿಫ್ ವಿರುದ್ಧ ಆರೋಪಪಟ್ಟಿ ಸಲ್ಲಿಸಿತ್ತು.

ಯುಟಿಲಿಟಿ ಆಫ್ ದಿ ಇಯರ್ ಸೇರಿ 3 ವಿಭಾಗಗಳಲ್ಲಿ ಸ್ಥಾನ ಪಡೆದ ಭಾರತದ ಏಕೈಕ ಜಲಮಂಡಳಿ

ಜಾಗತಿಕ ಟಾಪ್ 5 ಪಟ್ಟಿಯಲ್ಲಿ ಜಲಮಂಡಳಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ನಗರದ ಕುಡಿಯುವ ನೀರು ಹಾಗೂ ನೈರ್ಮಲ್ಯ ನಿರ್ವಹಣೆಯಲ್ಲಿ ಬೆಂಗಳೂರು ಜಲಮಂಡಳಿ ಸಾಧಿಸಿರುವ ಪ್ರಗತಿಗೆ ಜಾಗತಿಕ ಮಟ್ಟದಲ್ಲಿ ಭಾರೀ ಮನ್ನಣೆ ದೊರೆತಿದೆ. ಸ್ಪೇನ್‌ನ ಮ್ಯಾಡ್ರಿಡ್‌ನಲ್ಲಿ ನಡೆದ ಪ್ರತಿಷ್ಠಿತ ಗ್ಲೋಬಲ್ ವಾಟರ್ ಸಮಿಟ್ 2026ರಲ್ಲಿ ಬೆಂಗಳೂರು ಜಲಮಂಡಳಿಯು ವಿಶ್ವದ ಟಾಪ್-5 ನೀರು ನಿರ್ವಹಣಾ ಸಂಸ್ಥೆಗಳ ಪಟ್ಟಿಯಲ್ಲಿ ಸ್ಥಾನ ಪಡೆದು ಐತಿಹಾಸಿಕ ಸಾಧನೆ ಮಾಡಿದೆ. ವಿಶೇಷವೆಂದರೆ, ಯುಟಿಲಿಟಿ ಆಫ್ ದಿ ಇಯರ್, ವಾಟರ್ ಪ್ರಾಜೆಕ್ಟ್ ಆಫ್ ದಿ ಇಯರ್ ಸೇರಿದಂತೆ ಮೂರು ಪ್ರಮುಖ ವಿಭಾಗಗಳಲ್ಲಿ ಜಾಗತಿಕ ಟಾಪ್-5 ಸ್ಥಾನ ಪಡೆದ ಭಾರತದ ಏಕೈಕ ಜಲ ಸಂಸ್ಥೆ ಎಂಬ ಹೆಗ್ಗಳಿಕೆಗೆ ಜಲಮಂಡಳಿ ಪಾತ್ರವಾಗಿದೆ.

ನೀರಿನ ಸದ್ಬಳಕೆ, ಮರುಬಳಕೆ ಹಾಗೂ ಸಮರ್ಥ ನಿರ್ವಹಣೆಗೆ ಜಾರಿಗೆ ತಂದಿರುವ 5 ಪಂಚಸೂತ್ರಗಳು ಜಾಗತಿಕ ವೇದಿಕೆಯಲ್ಲಿ ವಿಶೇಷ ಗಮನ ಸೆಳೆದಿವೆ. ವಿಶ್ವ ಸಂಸ್ಥೆಯ ಸುಸ್ಥಿರ ಅಭಿವೃದ್ಧಿ ಗುರಿಗಳಾದ ಎಸ್‌ಡಿಜಿ-6 ಅನುಷ್ಠಾನದಲ್ಲಿ ಜಲಮಂಡಳಿ ಮಾದರಿಯ ಸಂಸ್ಥೆಯಾಗಿ ಹೊರಹೊಮ್ಮಿದೆ. ಈ ವಿಭಾಗದಲ್ಲಿ ಚಿಲಿಯ ಅಗುವಾಸ್ ನ್ಯೂವಾಸ್, ಮಲೇಷ್ಯಾದ ಇಂಡಾ ವಾಟರ್ ಕನ್ಸೋರ್ಷಿಯಮ್, ಬ್ರೆಜಿಲ್‌ನ ಸನಾಸಾ ಹಾಗೂ ಪರಾನಾದ ಸನೇಪರ್ ಸಂಸ್ಥೆಗಳೊಂದಿಗೆ ಬೆಂಗಳೂರು ಜಲಮಂಡಳಿ ಟಾಪ್-5 ಪಟ್ಟಿಯಲ್ಲಿ ಸ್ಥಾನ ಪಡೆದಿದೆ.

ಇದರ ಜತೆಗೆ, ನಗರದ ನೀರಿನ ಸಮಸ್ಯೆ ನಿವಾರಣೆಗೆ ಜಾರಿಗೊಂಡಿರುವ ಮಹತ್ವಾಕಾಂಕ್ಷೆಯ ಕಾವೇರಿ 5ನೇ ಹಂತ ಯೋಜನೆಯೂ ವಾಟರ್ ಪ್ರಾಜೆಕ್ಟ್ ಆಫ್ ದಿ ಇಯರ್ ವಿಭಾಗದಲ್ಲಿ ಜಾಗತಿಕ ಟಾಪ್-5 ಪಟ್ಟಿಗೆ ಆಯ್ಕೆಯಾಗಿದೆ. ಚೀನಾ, ಫಿಲಿಪ್ಪೈನ್ಸ್ ಹಾಗೂ ಸೆರ್ಬಿಯಾದ ಬೃಹತ್ ನೀರು ಶುದ್ಧೀಕರಣ ಯೋಜನೆಗಳೊಂದಿಗೆ ಈ ಯೋಜನೆ ಸ್ಪರ್ಧಾತ್ಮಕ ಪಟ್ಟಿಯಲ್ಲಿ ಸ್ಥಾನ ಪಡೆದಿದೆ. ಸಮ್ಮೇಳನದಲ್ಲಿ ಬೆಂಗಳೂರು ಜಲಮಂಡಳಿ ಅಧ್ಯಕ್ಷ ಡಾ.ರಾಮ್ ಪ್ರಸಾತ್ ಮನೋಹರ್ ಪ್ರತಿನಿಧಿಸಿದ್ದರು. ಜಾಗತಿಕ ಜಲ ನಿರ್ವಹಣಾ ತಜ್ಞರೊಂದಿಗೆ ನಡೆದ ಚರ್ಚೆಯಲ್ಲಿ ಬೆಂಗಳೂರಿನ ನವೀನ ಜಲ ನಿರ್ವಹಣಾ ಕ್ರಮಗಳು ಹಾಗೂ ಸುಸ್ಥಿರ ಅಭಿವೃದ್ಧಿ ಉಪಕ್ರಮಗಳು ವಿಶೇಷ ಮೆಚ್ಚುಗೆ ಪಡೆದಿದೆ ಎಂದರು.

ಗ್ಲೋಬಲ್ ವಾಟರ್ ಸಮಿಟ್ ಕಾರ್ಯಕ್ರಮದಲ್ಲಿ ಜಲಮಂಡಳಿ ಅಧ್ಯಕ್ಷ ಡಾ.ರಾಮ್ ಪ್ರಸಾತ್ ಮನೋಹರ್ ಮಾತನಾಡಿದರು. ಈ ವೇಳೆ ಫ್ರೆಡ್ರಿಕ್ ರೋಯನ್ ಸೇರಿದಂತೆ ಇನ್ನಿತರರು ಇದ್ದರು.

> ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಮಾರ್ಗದರ್ಶನದಲ್ಲಿ ಜಲಮಂಡಳಿ ಬ್ರ್ಯಾಂಡ್ ಬೆಂಗಳೂರು ಪರಿಕಲ್ಪನೆಯಡಿ ಜಾಗತಿಕ ಮಟ್ಟದ ಜಲ ನಿರ್ವಹಣಾ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಜಾರಿಗೊಳಿಸುತ್ತಿದೆ. ಇದು ಅವರ ಬ್ರ್ಯಾಂಡ್ ಬೆಂಗಳೂರು ಸಂಕಲ್ಪಕ್ಕೆ ಜಾಗತಿಕ ವೇದಿಕೆಯಲ್ಲಿ ಸಿಕ್ಕಿರುವ ಬಹುದೊಡ್ಡ ಮನ್ನಣೆಯಾಗಿದೆ.
> -ಡಾ.ರಾಮ್ ಪ್ರಸಾತ್ ಮನೋಹರ್ ಜಲಮಂಡಳಿ ಅಧ್ಯಕ್ಷ

3 ಕೋಟಿ ರುಪಾಯಿ ಮೌಲ್ಯದ ಚಿನ್ನಾಭರಣ ದೋಚಿದ ಗ್ಯಾಂಗ್

ಬೆಂಗಳೂರು: ಹೋಲ್‌ಸೇಲ್ ದರದಲ್ಲಿ ಚಿನ್ನ ಖರೀದಿಸುವುದಾಗಿ ನಂಬಿಸಿ ಕೋಟ್ಯಂತರ ರುಪಾಯಿ ಮೌಲ್ಯದ ಚಿನ್ನಾಭರಣ ದೋಚಿರುವ ಘಟನೆ ತಡವಾಗಿ ಬೆಳಕಿಗೆ ಬಂದಿದೆ.

ನಗರತ್‌ಪೇಟೆಯಲ್ಲಿರುವ ಮೆಹ್ತಾ ಜ್ಯುವೆಲ್ಲರಿ ಶಾಪ್ ಮಾಲೀಕರನ್ನು ನಂಬಿಸಿರುವ ವಂಚಕರು ಬರೋಬ್ಬರಿ 3 ಕೋಟಿ ರೂಪಾಯಿ ಮೌಲ್ಯದ 1 ಕೆ.ಜಿ 850 ಗ್ರಾಂ ಚಿನ್ನಾಭರಣ ದೋಚಿದ್ದಾರೆ. ಚಿನ್ನ ಕಳೆದುಕೊಂಡ ಉದ್ಯಮಿ ಮಲ್ಲೇಶ್ವರ ಠಾಣೆಗೆ ದೂರು ನೀಡಿದ್ದು, ಆರೋಪಿಗಳಾದ ಶ್ಯಾಮ್, ರಾಮಚಂದ್ರ ಹಾಗೂ ಪರೇಶ್ ಸೋನಿ ಎಂಬುವವರ ವಿರುದ್ಧ ಪ್ರಕರಣ ದಾಖಲಾಗಿದೆ.

ನಕಲಿ ಕಂಪನಿ ಹೆಸರಿನಲ್ಲಿ ಮಹಾಮೋಸ: ಮೆಹ್ತಾ ಜ್ಯುವೆಲ್ಲರಿ ಮಾಲೀಕರಿಗೆ ಕರೆ ಮಾಡಿದ್ದ ಪರೇಶ್ ಸೋನಿ, ಮಾಹಿ ಎಂಟರ್‌ಪ್ರೈಸಸ್ ಹೆಸರಿನ ತನ್ನ ಸಂಸ್ಥೆಗೆ ಹೋಲ್‌ಸೇಲ್ ದರದಲ್ಲಿ ಭಾರಿ ಪ್ರಮಾಣದ ಚಿನ್ನದ ಆಭರಣಗಳು ಬೇಕಾಗಿವೆ ಎಂದು ನಂಬಿಸಿದ್ದ. ಅದರಂತೆ ಮೇ 16ರಂದು ಮೆಹ್ತಾ ಜ್ಯುವೆಲ್ಲರ್ಸ್ ಸೇಲ್ಸ್ ಮ್ಯಾನೇಜರ್ ಮಹೇಂದ್ರ ಕುಮಾರ್ ಜೈನ್ ಮಲ್ಲೇಶ್ವರನ ಸಂಪಿಗೆ ರಸ್ತೆಯಲ್ಲಿರುವ ಆರೋಪಿಯ ಆಫೀಸ್‌ಗೆ ಚಿನ್ನಾಭರಣಗಳೊಂದಿಗೆ ತೆರಳಿದ್ದರು.

ಆರೋಪಿಗಳು ತಮಗೆ ಸಂಬಂಧವೇ ಇರದ ಕಚೇರಿ ಬಾಗಿಲಿನ ಮೇಲೆ 'ಮಾಹಿ ಎಂಟರ್‌ಪ್ರೈಸಸ್ ಎಂದು ನಕಲಿ ಬೋರ್ಡ್ ಹಾಕಿ ಈ ವ್ಯವಸ್ಥಿತವಾದ ಸಂಚು ರೂಪಿಸಿದ್ದರು. ಮ್ಯಾನೇಜರ್ ಆಭರಣ ತಂದಾಗ, ಅವುಗಳ ವಿನ್ಯಾಸ ಪರಿಶೀಲಿಸುವಂತೆ ನಟಿಸಿದ್ದ ಪರೇಶ್ ಸೋನಿ, ಪಕ್ಕದ ಕ್ಯಾಬಿನ್‌ನಲ್ಲಿ ಕುಳಿತಿದ್ದ ತನ್ನ ಸಹಚರರಾದ ಶ್ಯಾಮ್ ಹಾಗೂ ಚಂದ್ರಶೇಖರ್ ಎಂಬಾತನಿಗೆ ಆಭರಣಗಳ ಪಟ್ಟಿ ಸಿದ್ಧಪಡಿಸಲು ಹೇಳಿದ್ದ. ಆಭರಣಗಳ ಫೋಟೋ ತೆಗೆಯುವ ನೆಪದಲ್ಲಿ ಪಕ್ಕದ ಕೋಣೆಗೆ ಹೋದ ಆರೋಪಿಗಳು ಅಲ್ಲಿಂದಲೇ ಚಿನ್ನದೊಂದಿಗೆ ನಾಪತ್ತೆಯಾಗಿದ್ದಾರೆ. ಒಳಗೆ ಹೋದವರು ಎಷ್ಟು ಹೊತ್ತಾದರೂ ಬಾರದಿದ್ದಾಗ ಅನುಮಾನಗೊಂಡು ಮ್ಯಾನೇಜರ್ ಪರಿಶೀಲಿಸಿದಾಗ ವಂಚನೆ ನಡೆದಿರುವುದು ಬೆಳಕಿಗೆ ಬಂದಿದೆ. ಸದ್ಯ ವಂಚನೆಯ ಕುರಿತು ಪರೇಶ್ ಸೋನಿ, ಶ್ಯಾಮ್, ಚಂದ್ರಶೇಖರ್ ಎಂಬುವರ ವಿರುದ್ಧ ಸಂತ್ರಸ್ತ ಉದ್ಯಮಿ ದೂರು ನೀಡಿದ್ದು, ಮಲ್ಲೇಶ್ವರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಸಿಸಿಟಿವಿ ದೃಶ್ಯಾವಳಿಗಳ ಆಧಾರದ ಮೇಲೆ ತನಿಖೆ ಚುರುಕುಗೊಳಿಸಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

35 ಕೋಟಿ ಮೌಲ್ಯದ ಡ್ರಗ್ಸ್ ವಶ: 8 ಮಂದಿ ಬಂಧನ

ಬೆಂಗಳೂರು: ದೆಹಲಿಯಿಂದ ನಗರಕ್ಕೆ ಮಾದಕ ವಸ್ತುವನ್ನು ಕಡಿಮೆ ಬೆಲೆಗೆ ಖರೀದಿ ಮಾಡಿಕೊಂಡು ಬಂದು ಸಾರ್ವಜನಿಕರಿಗೆ ಮಾರಾಟ ಮಾಡುತ್ತಿದ್ದ ಮೂವರು ವಿದೇಶಿ ಪ್ರಜೆಗಳು ಸೇರಿದಂತೆ ಎಂಟು ಮಂದಿಯನ್ನು ಹೆಬ್ಬಾಳ ಠಾಣೆ ಪೊಲೀಸರು ಬಂಧಿಸಿ 35 ಕೋಟಿ ರು. ಮೌಲ್ಯದ ಎಂಡಿಎಂಎ ವಶಪಡಿಸಿ ಕೊಂಡಿದ್ದಾರೆ.

ಬಂಧಿತರ ಪೈಕಿ ಮೂವರು ವಿದೇಶಿಗರು, ಮೂವರು ಹೊರರಾಜ್ಯದವರು ಹಾಗೂ ರಾಜ್ಯದ ಇನ್ನಿಬ್ಬರು ಸೇರಿದ್ದಾರೆ. ಪ್ರವಾಸಿ ವೀಸಾದಲ್ಲಿ ಭಾರತಕ್ಕೆ ಬಂದು ನಂತರ ನಗರದಲ್ಲಿ ಮಾದಕ ವಸ್ತು ಮಾರಾಟ ಮಾಡುತ್ತಿದ್ದ ವಿದೇಶಿ ಪ್ರಜೆಗಳಾದ ಸೆನೆಗಲ್‌ನ ಡ್ಯಾನ್ಫಾ ಗೆಲರಾಲ್ಡ್ ಅಲಿಯಾಸ್ ಡೇವಿಡ್, ಟಾಂಜೇನಿಯಾದ ಮ್ಯಾಗ್ರೆತ್ ಲಿಜಿನಿಕೋ ಚಾಲೆ ಮತ್ತು ಆರೋಗ್ಯ ಚಿಕಿತ್ಸೆ ವೀಸಾದಡಿ ಬಂದಿದ್ದ ಒಬಿಯಾನುಜು ರೀಟಾ ಒಕೆಕೆ ಅಲಿಯಾಸ್ ಸಾನಿಯಾ ಹಾಗೂ ದೆಹಲಿಯ ರೀನಾ, ದೇಬಾಶಿಶ್ ಅಲಿಯಾಸ್ ದೇಬು, ಧೀರಜ್ ಮತ್ತು ದಕ್ಷಿಣ ಕನ್ನಡ ಜಿಲ್ಲೆ ಬೆಳ್ತಂಗಡಿಯ ಮೊಹಮದ್ ಮನ್ಸೂರು, ಬಂಟ್ವಾಳದ ಅಬ್ದುಲ್ ಸಾಮೇದ್ ಬಂಧಿತರು.

ಆನಂದನಗರದ ಉನ್ನತಿ ಲೇಔಟ್ ಮುಖ್ಯ ರಸ್ತೆಯ ಅಪಾರ್ಟ್‌ಮೆಂಟ್ ಒಂದರ ಮುಂಭಾಗ ಕಾರಿನಲ್ಲಿ ಮಹಿಳೆ ಸೇರಿದಂತೆ ಮೂವರು ಕುಳಿತು ಮಾದಕ ವಸ್ತು ಮಾರಾಟ ಮಾಡುತ್ತಿದ್ದಾರೆಂಬ ಮಾಹಿತಿ ಪೊಲೀಸರಿಗೆ ಲಭಿಸಿತ್ತು. ಸ್ಥಳಕ್ಕೆ ಧಾವಿಸಿದ ಪೊಲೀಸರು ಮಹಿಳೆ ಹಾಗೂ ಇನ್ನಿಬ್ಬರನ್ನು ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸಿದಾಗ ದೆಹಲಿಯ ಅಪರಿಚಿತ ವ್ಯಕ್ತಿಯಿಂದ ಮಾದಕ ವಸ್ತು ಎಂಡಿಎಂಎ ಖರೀದಿಸಿಕೊಂಡು ಬಂದು ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿದ್ದುದ್ದಾಗಿ ಹೇಳಿದ್ದಾರೆ. ಆರೋಪಿಗಳಿಂದ 4 ಕೆ.ಜಿ ಎಂಡಿಎಂಎ, 1 ಕಾರು, 4 ಮೊಬೈಲ್ ವಶಪಡಿಸಿಕೊಂಡಿದ್ದಾರೆ.

ಈ ಮೂವರನ್ನು ಹೆಚ್ಚಿನ ವಿಚಾರಣೆಗೆ ಒಳಪಡಿಸಿದಾಗ ನಗರದ ದೊಡ್ಡಕನ್ನಹಳ್ಳಿಯ ಚೂಡಸಂದ್ರದಲ್ಲಿರುವ ಆರೋಪಿಯೊಬ್ಬನ ವಾಸದ ಮನೆಯಲ್ಲಿ ಮಾದಕ ವಸ್ತು ಇಟ್ಟಿರುವುದಾಗಿ ತಿಳಿಸಿದ್ದು, ಪೊಲೀಸರು ಸ್ಥಳಕ್ಕೆ ತೆರಳಿ 10 ಕೆಜಿ 120 ಗ್ರಾಂ ಎಂಡಿಎಂಎ ವಶಪಡಿಸಿಕೊಂಡಿದ್ದಾರೆ. ಆರೋಪಿಗಳು ನೀಡಿದ ಮಾಹಿತಿಯ ಮೇರೆಗೆ ಕಾರ್ಯಾಚರಣೆ ಮುಂದುವರೆಸಿದ ಪೊಲೀಸರು, ಮಾದಕ ವಸ್ತು ಸರಬರಾಜು ಮಾಡುತ್ತಿದ್ದ ವಿದೇಶದ ವ್ಯಕ್ತಿ ಹಾಗೂ ಇಬ್ಬರು ಮಹಿಳೆಯರು ಸೇರಿ ಮೂವರನ್ನು ಹಾಗೂ ದೆಹಲಿ ಮೂಲದ ವ್ಯಕ್ತಿಯೊಬ್ಬನನ್ನು ಹರಿಯಾಣ ಹಾಗೂ ದೆಹಲಿಯಲ್ಲಿ ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸಿದ್ದಾರೆ. ಒಟ್ಟಾರೆ 8 ಮಂದಿ ಆರೋಪಿಗಳಿಂದ 35 ಕೋಟಿ ಮೌಲ್ಯದ ಎಂಡಿಎಂಎ ವಶಪಡಿಸಿಕೊಳ್ಳುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ.

1ನೇ ತರಗತಿಗೆ ವಯೋಮಿತಿ ಸಡಿಲಿಸಿ; ಹೈಗೆ ಮಕ್ಕಳ ಅರ್ಜಿ

ಬೆಂಗಳೂರು: ಮುಂಬರುವ 2026-27ನೇ ಶೈಕ್ಷಣಿಕ ಸಾಲಿಗೆ ಒಂದನೇ ತರಗತಿಗೆ ದಾಖಲಾಗಲು ವಯೋಮಿತಿ ಸಡಿಲಿಕೆ ವಿಚಾರ ಮರುಪರಿಶೀಲಿಸಿ ಒಂದು ವಾರದೊಳಗೆ ಸೂಕ್ತ ಆದೇಶ ಹೊರಡಿಸುವಂತೆ ಶಾಲಾ ಶಿಕ್ಷಣ ಇಲಾಖೆಗೆ ಹೈಕೋರ್ಟ್ ನಿರ್ದೇಶನ ನೀಡಿದೆ.

ಬೆಂಗಳೂರಿನ ಮಾಸ್ಟರ್ ಕೃಷ್ಣ ಗಣೇಶ್ ಸೇರಿ 6 ಮಂದಿ ವಿದ್ಯಾರ್ಥಿಗಳು ಹಾಗೂ ಅವರ ಪರವಾಗಿ ಸಲ್ಲಿಸಿರುವ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಸ್. ಆರ್.ಕೃಷ್ಣಕುಮಾರ್ ಅವರ ರಜಾಕಾಲದ ನ್ಯಾಯಪೀಠ ಈ ಆದೇಶ ನೀಡಿದೆ. ಅಲ್ಲದೇ, ವಯೋಮಿತಿ ವಿಚಾರದಲ್ಲಿ ವಿದ್ಯಾರ್ಥಿಗಳು ಹಾಗೂ ಪೋಷಕರು ತೊಂದರೆ ಎದುರಿಸುತ್ತಿದ್ದು, ಈ ಸಂಬಂಧ ಒಂದು ವಾರದೊಳಗೆ ಎಲ್ಲಾ ಆಯಾಮಗಳಲ್ಲೂ ಪರಿಶೀಲಿಸಿ ಆದೇಶ ಹೊರಡಿಸುವಂತೆ ಸೂಚನೆ ನೀಡಿದೆ.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, ವಯೋಮಿತಿ ನಿಗದಿಪಡಿಸಿ ಶಾಲಾ ಶಿಕ್ಷಣ ಇಲಾಖೆ ಮಾ. 28ರಂದು ಆದೇಶ ಹೊರಡಿಸಲಾಗಿದೆ. ಅರ್ಜಿದಾರರು ಇನ್ನೂ 6 ವರ್ಷ ಪೂರ್ಣಗೊಳಿಸಿಲ್ಲ. ಆದರೆ, 2025-26ನೇ ಸಾಲಿನ ಪೂರ್ವ ಪ್ರಾಥಮಿಕ ಶಿಕ್ಷಣ ಪೂರೈಸಿದ್ದಾರೆ. ಸರಕಾರದ ಆದೇಶದಿಂದ ಸುಮಾರು ಐದು ಲಕ್ಷ ವಿದ್ಯಾರ್ಥಿಗಳಿಗೆ ತೊಂದರೆಯಾಗಲಿದೆ. ಆ ವಿದ್ಯಾರ್ಥಿಗಳು ಮತ್ತೆ ಯುಕೆಜಿ ಅಧ್ಯಯನ ಮಾಡುವ ಪರಿಸ್ಥಿತಿ ನಿರ್ಮಾಣವಾಗಲಿದೆ. ಹಾಗಾಗಿ ಮುಂದಿನ ಶೈಕ್ಷಣಿಕ ವರ್ಷಕ್ಕೆ ವಯೋಮಿತಿ ಸಡಿಲಿಸಿ ಶಾಲಾ ದಾಖಲಾತಿಗೆ ಅವಕಾಶ ಕಲ್ಪಿಸಬೇಕು ಎಂದು ವಿವರಿಸಿದರು. ಅದಕ್ಕೆ ಉತ್ತರಿಸಿದ ಸರಕಾರಿ ವಕೀಲರು, ನ್ಯಾಯಸಮ್ಮತ ಸಮಯ ನೀಡಿದಲ್ಲಿ ಅರ್ಜಿದಾರರು ಸಲ್ಲಿಸಿರುವ ವಯೋಮಿತಿ ಸಡಿಲಿಕೆ ಮನವಿ ಪರಿಗಣಿಸಿ ಅಗತ್ಯ ಆದೇಶವನ್ನು ಹೊರಡಿಸಲಾಗುವುದು ಎಂದು ನ್ಯಾಯಾಲಯಕ್ಕೆ ತಿಳಿಸಿದರು.

ಏನಿದು ಪ್ರಕರಣ?: ಕಳೆದ ಶೈಕ್ಷಣಿಕ ವರ್ಷದಲ್ಲಿನೀಡಿದ ಮಾದರಿಯಲ್ಲಿಯೇ 2026-27ನೇ ಶೈಕ್ಷಣಿಕ ವರ್ಷದ ಪ್ರಥಮ ತರಗತಿ ಪ್ರವೇಶಕ್ಕಾಗಿ ಕನಿಷ್ಠ ವಯೋಮಿತಿಯಲ್ಲಿ ಒಮ್ಮೆ ಸಡಿಲಿಕೆ ನೀಡಿ 5 ವರ್ಷ 5 ತಿಂಗಳು ವಯಸ್ಸಿನ ಮಕ್ಕಳಿಗೂ ಪ್ರವೇಶ ಅವಕಾಶ ಕಲ್ಪಿಸಬೇಕು ಎಂದು ಅರ್ಜಿಯಲ್ಲಿ ಕೋರಲಾಗಿದೆ. ಕಳೆದ ಹಲವು ವರ್ಷದಿಂದ ಶಾಲೆಗಳು ಅನುಸರಿಸುತ್ತಿದ್ದ ಪ್ರವೇಶ ಪದ್ಧತಿ ಮತ್ತು ಅರ್ಹತಾ ಮಾನದಂಡಗಳ ಆಧಾರದ ಮೇಲೆ ಶಾಲಾ ಶಿಕ್ಷಣ ವ್ಯವಸ್ಥೆಗೆ ಸೇರ್ಪಡೆಯಾಗಿದ್ದಾರೆ. ಪೋಷಕರು ತಮ್ಮ ಮಕ್ಕಳು 2026-27ನೇ ಶೈಕ್ಷಣಿಕ ವರ್ಷದಲ್ಲಿ ಪ್ರಥಮ ತರಗತಿಗೆ ಮುಂದುವರಿಯುತ್ತಾರೆ ಎಂಬ ನಿರೀಕ್ಷೆಯೊಂದಿಗೆ ಪೂರ್ವ ಪ್ರಾಥಮಿಕ ಶಾಲೆಗೆ ದಾಖಲಿಸಿದ್ದರು. ಪ್ರಿ-ಸ್ಕೂಲ್ ಶಿಕ್ಷಣ ಯಶಸ್ವಿಯಾಗಿ ಪೂರ್ಣಗೊಳಿಸಿ, ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಮತ್ತು ಮಾನಸಿಕವಾಗಿ ಪ್ರಥಮ ತರಗತಿಗೆ ಸಿದ್ಧರಾಗಿರುವ ಅನೇಕ ಮಕ್ಕಳು ಈಗ ಒಂದು ಸಂಪೂರ್ಣ ಶೈಕ್ಷಣಿಕ ವರ್ಷ ಕಳೆದುಕೊಳ್ಳುವ ಆತಂಕ ಎದುರಿಸುತ್ತಿದ್ದಾರೆ ಎಂದು ಅರ್ಜಿಯಲ್ಲಿ ವಿವರಿಸಲಾಗಿದೆ.

बैंक ऑफ़ बड़ौदा
Bank of Baroda

ಕನಕಪುರ ಶಾಖೆ
ಆರ್‌ಇಎಸ್ ಕಾಂಪ್ಲೆಕ್ಸ್, ಎಂಜಿರಸ್ತೆ,
ಕನಕಪುರ-562117.

ಲಾಕರ್ ಓಪನ್ ನೋಟಿಸ್

ನಮ್ಮ ಆತ್ಮೀಯ ಗ್ರಾಹಕರಿಗೆ ಈ ಮೂಲಕ ತಿಳಿಸುವುದೇನೆಂದರೆ, ನಮ್ಮ ಬ್ಯಾಂಕ್ ಆಫ್ ಬರೋಡ, ಕನಕಪುರ ಶಾಖೆಯಲ್ಲಿ ಈ ಕೆಳಗೆ ತಿಳಿಸಿದ ಗ್ರಾಹಕರು ಲಾಕರನ್ನು ಹೊಂದಿರುತ್ತಾರೆ ಮತ್ತು ಒಪ್ಪಂದವನ್ನು ಉಲ್ಲಂಘಿಸಿರುತ್ತಾರೆ. ಆರ್‌ಬಿಐನ ಮಾರ್ಗ ಸೂಚಿಗಳ ಪ್ರಕಾರ ಈ ಗ್ರಾಹಕರು ದಾಖಲಿಸಿರುವ ವಿಳಾಸಗಳಿಗೆ ಕಳುಹಿಸಲಾದ ನೋಟಿಸ್‌ಗಳು ಅಂತಹ ಯಾವುದೇ ವ್ಯಕ್ತಿಗಳು ಈ ವಿಳಾಸದಲ್ಲಿ ಕಂಡು ಬಂದಿಲ್ಲ ಅಥವಾ ಖಾಲಿ ಮಾಡಿರುತ್ತಾರೆ ಎಂದು ನಮೂದಿಸಿ ವಿತರಣೆಯಾಗದೇ ಹಿಂದಿರುಗಿರುತ್ತದೆ ಮತ್ತು ಅವರನ್ನು ವೈಯಕ್ತಿಕವಾಗಿ ಸಂಪರ್ಕಿಸುವ ನಮ್ಮ ಪ್ರಯತ್ನಗಳೆಲ್ಲವೂ ವಿಫಲವಾಗಿದೆ. ಹಾಗಾಗಿ ಯಾವುದೇ ಪರ್ಯಾಯ ಮಾರ್ಗವಿಲ್ಲದೆ ಮೇಲೆ ತಿಳಿಸಿದ ಶಾಖೆಯನ್ನು ಸಂಪರ್ಕಿಸಲು ಮತ್ತು ಬ್ಯಾಂಕಿನ ಬಾಕಿಯನ್ನು ಹದಿನೈದು ದಿನಗಳ ಒಳಗೆ ಸಂದಾಯ ಮಾಡಲು ತಿಳಿಸಿ ನೋಟೀಸ್ ನೀಡಲಾಗಿರುತ್ತದೆ. ಇದಕ್ಕೆ ವಿಫಲವಾದಲ್ಲಿ ಈ ಗ್ರಾಹಕರ ವೆಚ್ಚದಲ್ಲಿಯೇ ಲಾಕರ್‌ಗಳನ್ನು ಒಡೆದು ತೆಗೆಯುವ ಕ್ರಮ ತೆಗೆದುಕೊಂಡು ಮತ್ತು ಈ ಸಂಬಂಧ ಬಾಡಿಗೆ ವೆಚ್ಚ ಮತ್ತು ಇತರೆ ಶುಲ್ಕಗಳನ್ನು ವಸೂಲು ಮಾಡಲು ಹಕ್ಕನ್ನು ಚಲಾಯಿಸಲಾಗುತ್ತದೆ.

ಶಾಖೆ ಹೆಸರು	ಸಾಲಗಾರರ ಹೆಸರು & ವಿಳಾಸ	ಲಾಕರ್ ವಿಧ	ಲಾಕರ್ ಸಂಖ್ಯೆ	ಒಟ್ಟು ಬಾಕಿ ಮೊತ್ತ
ಕನಕಪುರ ಶಾಖೆ	ಭವ್ಯ ರಾಣಿ ಹೆಚ್ ಕೋಂ ಆದಿತ್ಯ ರಾಜು ಬಸವೇಶ್ವರ ನಗರ, ವೆಂಕಟೇಶ್ವರ ನಿಲಯ, ಕನಕಪುರ-562117	A	8938AX0088 (OLD NO 11)	ರೂ. 10,856/-

ದಿನಾಂಕ: 20.05.2026
ಸ್ಥಳ: ಬೆಂಗಳೂರು
ಸಹಿ/- ಅಧಿಕೃತ ಅಧಿಕಾರಿ
ಬ್ಯಾಂಕ್ ಆಫ್ ಬರೋಡ



ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕ್‌ಗಳ ಮಹಾಮಂಡಳ ವತಿಯಿಂದ ಬುಧವಾರ ಬೆಳಗಾವಿಯ ಆದರ್ಶ ಹೋಟೆಲ್‌ನ ಸಭಾಂಗಣದಲ್ಲಿ ಆಯೋಜಿಸಿದ್ದ ಕಾರ್ಯಾಗಾರವನ್ನು ಹಿರಿಯ ನಿರ್ದೇಶಕ ಡಿ.ಟಿ. ಪಾಟೀಲ್ ಮತ್ತು ಆರ್‌ಬಿಐನ ಜನರಲ್ ಮ್ಯಾನೇಜರ್ ಮೀನಾಕ್ಷಿ ಘುಡ್ ಹಾಗೂ ತ್ಯಾಗರಾಜ ಕೋಆಪರೇಟಿವ್ ಬ್ಯಾಂಕ್‌ನ ಅಧ್ಯಕ್ಷ ಎಂ.ಆರ್.ವೆಂಕಟೇಶ್ ಉದ್ಘಾಟಿಸಿದರು. ಈ ವೇಳೆ ನಿರ್ದೇಶಕರಾದ ಮೇಟಗುಡ್, ಸತೀಶ್, ಎಣ್ಣೆಗೆರೆ ಆರ್. ವೆಂಕಟರಾಮಯ್ಯ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ನಮ್ಮ ನಡಿಗೆ ಮತ್ತು ರೈತ ಸಂತೆ 23ರಂದು

ಬೆಂಗಳೂರು: ನಗರದ ಒತ್ತಡದ ಬದುಕು, ವಾಹನ ದಟ್ಟಣೆ ಹಾಗೂ ಮಾಲಿನ್ಯದ ನಡುವೆ ಹಸಿರು ಪರಿಸರದ ಅನುಭವ ನೀಡಲು ಬೆಂಗಳೂರಿನ ಕೃಷಿ ವಿಶ್ವವಿದ್ಯಾಲಯ ಜಿಕೆವಿಕೆ ಆವರಣದಲ್ಲಿ ಮೇ 23ರ ಬೆ.6ರಿಂದ 9.30ರವರೆಗೆ ಕೃಷಿ ಪರಿಸರದೆಡೆಗೆ ನಮ್ಮ ನಡಿಗೆ ಜಿಕೆವಿಕೆ ಹಾಗೂ ರೈತ ಸಂತೆ ಕಾರ್ಯಕ್ರಮ ಆಯೋಜಿಸಲಾಗಿದೆ. 1320 ಎಕರೆ ವಿಸ್ತೀರ್ಣದ ಜಿ.ಕೆ.ವಿ.ಕೆ. ಆವರಣವು ವೈವಿಧ್ಯಮಯ ಗಿಡಮರಗಳು, ಪ್ರಾಣಿ-ಪಕ್ಷಿ ಸಂಕುಲಗಳನ್ನು ಒಳಗೊಂಡ ಅದ್ಭುತ ಜೀವ ವೈವಿಧ್ಯತೆಯ ತಾಣವಾಗಿದೆ. ನಗರವಾಸಿಗಳಲ್ಲಿ ಮುಂಜಾನೆಯ ವಾಯುವಿಹಾರದೊಂದಿಗೆ ಕೃಷಿ ಮತ್ತು ಪರಿಸರದ ಕುರಿತು ಅರಿವು ಮೂಡಿಸುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿದೆ. ಈ ನಡಿಗೆಯಲ್ಲಿ ಸಾರ್ವಜನಿಕರು ಪ್ರಕೃತಿಯ ಸೊಬಗನ್ನು ಸವಿಯುವುದರ ಜತೆಗೆ ಹಲವು ವೈವಿಧ್ಯತೆಗಳನ್ನು ಪ್ರತ್ಯಕ್ಷವಾಗಿ ವೀಕ್ಷಿಸಬಹುದಾಗಿದೆ. ನಡಿಗೆಯ ನಂತರ ವಿಶ್ವವಿದ್ಯಾನಿಲಯದ ಹಕ್ಕುಸ್ವಾಮ್ಯದ ಉತ್ಪನ್ನಗಳು ಹಾಗೂ ಕೃಷಿಕರು ತಾವೇ ಸ್ವತಃ ಬೆಳೆದ ತಾಜಾ ಹಣ್ಣು, ಹಂಪಲು ಮತ್ತು ತರಕಾರಿಗಳನ್ನು ಸಾರ್ವಜನಿಕರು ನೇರವಾಗಿ ರೈತರಿಂದಲೇ ಖರೀದಿಸಲು 'ರೈತ ಸಂತೆ'ಯ ವ್ಯವಸ್ಥೆ ಮಾಡಲಾಗಿದೆ. ಕಾರ್ಯಕ್ರಮದಲ್ಲಿ ಭಾಗವಹಿಸಲು ಇಚ್ಛಿಸುವವರು ನಿಗದಿತ ಕನಿಷ್ಠ ಶುಲ್ಕವನ್ನು ಪಾವತಿಸಿ ಮೇ 21ರೊಳಗೆ ಆನ್‌ಲೈನ್ ಮೂಲಕ ನೊಂದಣಿ ಮಾಡಿಕೊಳ್ಳಬೇಕು. ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂಖ್ಯೆ 6360466004/9482230588 ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಪ್ರಾಜೆಕ್ಟ್ ಸುರಕ್ಷಾ ರಾಮನಗರಕ್ಕೆ ವಿಸ್ತರಣೆ

ಬೆಂಗಳೂರು: ಆತ್ಮಹತ್ಯೆ ತಡೆಗಟ್ಟುವಿಕೆಗೆ ಸಮುದಾಯ ಆಧಾರಿತ ಸಮಗ್ರ ಮಾದರಿಯಾಗಿ ಗುರುತಿಸಿಕೊಂಡಿರುವ ನಿಮ್ಹಾನ್ಸ್‌ನ ಪ್ರಾಜೆಕ್ಟ್ ಸುರಕ್ಷಾ ಯೋಜನೆಯನ್ನು ರಾಮನಗರ ಜಿಲ್ಲೆಗೆ ವಿಸ್ತರಿಸಿ ಘೋಷಣೆ ಮಾಡಲಾಯಿತು. ಪ್ರಾಜೆಕ್ಟ್ ಸುರಕ್ಷಾದ ಪ್ರಧಾನ ತನಿಖಾಧಿಕಾರಿ ಡಾ. ಅನಿಶ್ ಚೆರಿಯನ್ ಮಾತನಾಡಿ, ಸ್ಥಳೀಯ ಮಟ್ಟದ ಪ್ರಾಯೋಗಿಕ ಯೋಜನೆಯನ್ನು ಜಿಲ್ಲಾ ಮಟ್ಟಕ್ಕೆ ವಿಸ್ತರಿಸುವುದು ಕೇವಲ ಆಡಳಿತಾತ್ಮಕ ಸಾಧನೆ ಅಲ್ಲ, ಇದು ಕ್ಲಿನಿಕಲ್ ಅಗತ್ಯವೂ ಆಗಿದೆ. ಸಂಶೋಧನೆ ಮತ್ತು ನೆಲಮಟ್ಟದ ಕಾರ್ಯಾಚರಣೆಯ ನಡುವಿನ ಅಂತರವನ್ನು ಈ ಯೋಜನೆ ಕಡಿಮೆ ಮಾಡುತ್ತಿದೆ ಎಂದರು. ಡಾ. ರಾಜನಿ ಪಾರ್ಥಸಾರಥಿ, ಕೆ.ಜಿ. ಉಮೇಶ್ ಇದ್ದರು.

ACRE
MAKING ASSETS WORK

ಅಸೆಟ್ಸ್ ಕೇರ್ ಆ್ಯಂಡ್ ರೀಕನ್‌ಸ್ಟ್ರಕ್ಷನ್‌ಎಂಟರ್‌ಪ್ರೈಸ್ ಲಿಮಿಟೆಡ್
ಕಾರ್ಪೊರೇಟ್ ಕಚೇರಿ: ಘಟಕ ಸಂಖ್ಯೆ. 502, ಸಿ ವಿಂಗ್, ಒನ್ ಬಿಕೆಸಿ, ಪ್ಲಾಟ್ ಸಂಖ್ಯೆ. ಸಿ - 66, ಜಿ - ಬ್ಲಾಕ್, ಬಾಂದ್ರಾ ಕುರ್ಲಾ ಕಾಂಪ್ಲೆಕ್ಸ್, ಮುಂಬೈ - 400051. ದೂರವಾಣಿ : 022 68643101.
ನೋಂದಾಯಿತ ಕಚೇರಿ: 14 ನೇ ಮಹಡಿ, ಇರಾಸ್ ಕಾರ್ಪೊರೇಟ್ ಟವರ್, ನೆಹರು ಪ್ಲೇಸ್, ನವದೆಹಲಿ - 110019.
ಇಮೇಲ್ : acre.arc@acreindia.in I ವೆಬ್‌ಸೈಟ್: www.acreindia.in I CIN : U65993DL2002PLC115769

ಅನುಬಂಧ IV-ಎ
ಸ್ಥಿರಾಸ್ತಿಗಳ ಮಾರಾಟಕ್ಕಾಗಿ ಮಾರಾಟದ ಸೂಚನೆ

ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳು, 2002ರ ನಿಯಮ 8(6)ರ ನಿಬಂಧನೆಗೊಂದಿಗೆ ಓದಲಾಗುವ ಸೆಕ್ಯುರೈಟೇಶನ್ ಆ್ಯಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ಸ್ ಆ್ಯಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಕಾಯ್ದೆ, 2002ರಡಿಯಲ್ಲಿ ಸ್ಥಿರಾಸ್ತಿಗಳ ಮಾರಾಟದ ಸಲುವಾಗಿ ಇ-ಹರಾಜು ಮಾರಾಟ ಸೂಚನೆ.

ಈ ಮೂಲಕ ಸಾರ್ವಜನಿಕರಿಗೆ ಮತ್ತು ಮುಖ್ಯವಾಗಿ ಸಾಲಗಾರರು (ಗಳು) ಮತ್ತು ಗ್ಯಾರಂಟರ (ಗಳು) ರಿಗೆ ಸೂಚನೆ ನೀಡುವುದೇನೆಂದರೆ, **ಅಸೆಟ್ಸ್ ಕೇರ್ ಆ್ಯಂಡ್ ರೀಕನ್‌ಸ್ಟ್ರಕ್ಷನ್ ಎಂಟರ್ಪ್ರೈಸ್ ಲಿ. [CIN: U65993DL2002PLC115769] (''ಸೆಕ್ಯೂರ್ಡ್ ಕ್ರೆಡಿಟರ್'')** ಇವರಿಗೆ ಮಾರ್ಟ್‌ಗೇಜ್ ಮಾಡಲಾದ ಈ ಕೆಳಗೆ ವಿವರಿಸಲಾದ ಸ್ಥಿರಾಸ್ತಿ(ಗಳು)ಯ **ಭೌತಿಕ ಸ್ವಾಧೀನತೆಯನ್ನು** ಸೆಕ್ಯೂರ್ಡ್ ಕ್ರೆಡಿಟರರ ಅಕೃತ ಅಕಾರಿಯವರು ಪಡೆದುಕೊಂಡಿದ್ದು, ಸೆಕ್ಯೂರ್ಡ್ ಕ್ರೆಡಿಟರರಿಗೆ ಅಸಲು, ಹಿಂದಿನ ಬಾಕಿ (ಸಂಚಯಿತ ವಿಳಂಬ ಶುಲ್ಕವನ್ನೊಳಗೊಂಡು) ಮತ್ತು **17.04.2026**ರ ತನಕದ ಬಡ್ಡಿ **ರೂ. 1,29,41,348/- (ರೂಪಾಯಿ ಒಂದು ಕೋಟಿ ಇಪ್ಪತ್ತ ಒಂಬತ್ತು ಲಕ್ಷ ನಲವತ್ತ ಒಂದು ಸಾವಿರದ ಮುನ್ನೂರ ನಲವತ್ತ ಎಂಟು ಮಾತ್ರ)** ಅಂದರೆ **ರೂ. 75,38,020/- (ರೂಪಾಯಿ ಎಪ್ಪತ್ತ ಐದು ಲಕ್ಷ ಮೂವತ್ತ ಎಂಟು ಸಾವಿರದ ಇಪ್ಪತ್ತು ಮಾತ್ರ)** ಸಾಲ ಖಾತೆ ಸಂಖ್ಯೆ. **HHEBAN00204764** ಯಿಂದ ಬಾಕಿ ಇದ್ದು ಮತ್ತು **ರೂ. 54,03,328/- (ರೂಪಾಯಿ ಐವತ್ತ ನಾಲ್ಕು ಲಕ್ಷ ಮೂರು ಸಾವಿರದ ಮುನ್ನೂರ ಇಪ್ಪತ್ತ ಎಂಟು ಮಾತ್ರ)** ಸಾಲ ಖಾತೆ ಸಂಖ್ಯೆ. **HHLBAN00202490** ಯಲ್ಲಿ **ಎನ್ ರಹಮತುಲ್ಲಾ ಖಾನ್ ಮತ್ತು ಸಮೀಹಾ ಶಾಜಿಯಾ** ಅವರಿಂದ ಬಾಕಿ ಇರುತ್ತದೆ. ಸಾಲ ಒಪ್ಪಂದ ಮತ್ತು ಇತರ ಸಂಬಂಧಿತ ದಸ್ತಾವೇಜಿ(ಗಳು) ನಂತೆ ಕಾನೂನು ಸಂಬಂಧಿತ ವೆಚ್ಚಗಳು ಮತ್ತು ಸೆಕ್ಯೂರ್ಡ್ ಕ್ರೆಡಿಟರರಿಗೆ ಬರ ಬೇಕಾದ ಇತರ ಶುಲ್ಕಗಳೊಂದಿಗೆ **18.04.2026**ರಿಂದ ವಿಷ್ಯದ ಬಡ್ಡಿಯ ವಸೂಲಿಗಾಗಿ **''ಎಲ್ಲಿದೆಯೊ ಹಾಗೆ'', ''ಏನಿದೆಯೊ ಹಾಗೆ''** ಮತ್ತು **''ಯಾವುದೇ ರಿಕೊರ್ಸ್ ಇಲ್ಲದ''** ಆಧಾರದಲ್ಲಿ ತಾರೀಖು **22.06.2026**ರಂದು **ಸಂಜೆ 05.00 ರಿಂದ ಸಂಜೆ 06.00 ರವರೆಗೆರ** ತನಕ ಮಾರಾಟ ಮಾಡಲಿದ್ದಾರೆ.

ಸಮ್ಮಾನ್ ಕ್ಯಾಪಿಟಲ್ ಲಿಮಿಟೆಡ್ (**''ಎಸ್‌ಸಿಎಲ್''**) (ಹಿಂದೆ ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು) ಇಂಡಿಯಾಬುಲ್ಸ್ ಅಸೆಟ್ ರೀಕನ್‌ಸ್ಟ್ರಕ್ಷನ್ ಕಂ. ಲಿಮಿಟೆಡ್‌ಗೆ (**''ಐಎಆರ್‌ಸಿಎಲ್''**) ದಿನಾಂಕ **30.09.2020**ರ ನಿಯೋಜನೆ ಒಪ್ಪಂದದ ಪ್ರಕಾರ, ಹಳೆಯ ಸಾಲ ಖಾತೆಗಳು ಹೊಂದಿರುವ ಸಂಖ್ಯೆ **HHEBAN00204764** ಮತ್ತು **HHLBAN00202490**, ಜೊತೆಗೆ ಎಲ್ಲಾ ಹಕ್ಕು(ಗಳು), ಶೀರ್ಷಿಕೆ(ಗಳು), ಆಸಕ್ತಿ(ಗಳು), ಆಧಾರವಾಗಿರುವ ಭದ್ರತೆ(ಗಳು), ಪ್ರತಿಜ್ಞೆ(ಗಳು) ಮತ್ತು/ಅಥವಾ ಸ್ಥಿರಾಸ್ತಿ ಸೇರಿದಂತೆ ಗ್ಯಾರಂಟಿ(ಗಳು) ಮತ್ತು ಅದೇ ಐಎಆರ್‌ಸಿಎಲ್ ನಿಂದ ಮರುಸಂಖ್ಯೆಯನ್ನು ಮಾಡಲಾಗಿದೆ ಮತ್ತು ಕ್ರಮವಾಗಿ ಹೊಸ ಸಾಲ ಖಾತೆ ಸಂಖ್ಯೆ **R003OXVI-2** ಮತ್ತು **R003OXVI-3** ಅನ್ನು ಹೊಂದಿದೆ. **26.04.2021** ರ ನಿಯೋಜನೆ ಒಪ್ಪಂದ **26.08.2021** ರ ತಿದ್ದುಪಡಿ ಪತ್ರದ ಪ್ರಕಾರ ಸದರಿ ಸಾಲ ಖಾತೆಗಳನ್ನು ಐಎಆರ್‌ಸಿಎಲ್, **ಎ.ಸಿ.ಆರ್.ಇ -102-ಟ್ರಸ್ಟ್‌ನ ಟ್ರಸ್ಟಿಯಾಗಿ** ಕಾರ್ಯನಿರ್ವಹಿಸುವ ಸೆಕ್ಯೂರ್ಡ್ ಕ್ರೆಡಿಟಾರ್‌ಗೆ ಮತ್ತು ಅವರ ಪರವಾಗಿ ನಿಯೋಜಿಸಿದೆ. ಸದರಿ ಸಾಲ ಖಾತೆಗಳನ್ನು ಅಸೆಟ್ಸ್ ಕೇರ್ ರಿಕನ್‌ಸ್ಟ್ರಕ್ಷನ್ ಎಂಟರ್‌ಪ್ರೈಸ್ ಲಿಮಿಟೆಡ್, **ಎ.ಸಿ.ಆರ್.ಇ-102-ಟ್ರಸ್ಟ್‌ನ ಟ್ರಸ್ಟಿಯಾಗಿ** ಕಾರ್ಯನಿರ್ವಹಿಸುತ್ತಿದ್ದು, ಅವರು ದಿನಾಂಕ **23.06.2025**ರ ನಿಯೋಜನೆ ಒಪ್ಪಂದದ ಮೂಲಕ **ಎ.ಸಿ.ಆರ್.ಇ-180-ಟ್ರಸ್ಟ್‌ನ ಟ್ರಸ್ಟಿಯಾಗಿ** ಕಾರ್ಯನಿರ್ವಹಿಸುತ್ತಿರುವ ಸುರಕ್ಷಿತ ಸಾಲದಾತರಿಗೆ ಪರವಾಗಿ ನಿಯೋಜಿಸಿದ್ದಾರೆ.

ಸ್ಥಿರಾಸ್ತಿ(ಗಳ)ಯ ರಿಸರ್ವ್ ಬೆಲೆ **ರೂ. 75,00,000/- (ರೂಪಾಯಿ ಎಪ್ಪತ್ತ ಐದು ಲಕ್ಷ ಮಾತ್ರ)** ಆಗಿದೆ ಮತ್ತು ಅರ್ನೆಸ್ಟ್ ಮನಿ ಡಿಪಾಸಿಟ್ (**''ಇಎಮ್‌ಡಿ''**) **ರೂ. 7,50,000/- (ರೂಪಾಯಿ ಏಳು ಲಕ್ಷ ಐವತ್ತು ಸಾವಿರ ಮಾತ್ರ)** ಅಂದರೆ, ರಿಸರ್ವ್ ಬೆಲೆಯ 10%ಕ್ಕೆ ಸಮನಾಗಿದೆ.

ಸ್ಥಿರಾಸ್ತಿ(ಗಳ) ವಿವರಣೆ

ಶಿನವಗಲು ಬಾಗೂರು ಹೋಬಳಿ, ಬೆಂಗಳೂರು ದಕ್ಷಿಣ ತಾಲೂಕು ಮತ್ತು ಈಗ ಬೆಂಗಳೂರು ಮಹಾನಗರ ಪಾಲಿಕೆಯಡಿಯಲ್ಲಿದ್ದು ಹೊಸ ನಂ. 18, **ಸ್ಟ್ಯಾಗ್ ಎಕ್ಸ್‌ಟೆನ್ಶನ್, ಬೆಂಗಳೂರು ವಾರ್ಡ್ ನಂ.-68, ಈಜಿಪುರ, ಖಾತಾ ನಂ. ಬಿಎಮ್‌ಪಿ/ಆರ್‌ಇವಿ**/2006-07/**ಕೆಸಿ**/175451, **ಪಿಐಡಿ ನಂ.** -68-9-18/5**ಎ, ಬೆಂಗಳೂರು** - 560068, **ಕರ್ನಾಟಕ, ಇಲ್ಲಿರುವ ಡೆಲ್ ಪ್ರಾಡೊ ಅಪಾರ್ಟ್‌ಮೆಂಟ್‌ನಲ್ಲಿ ಮೊದಲನೆಯ ಮಹಡಿಯಲ್ಲಿ ವಾಸ್ತವ್ಯದ ಯೂನಿಟ್/ಫ್ಲ್ಯಾಟ್ ನಂ. ಸಿ**-203 (**ಸೂಪರ್ ಬಿಲ್ಟ್ ಅಪ್ ಏರಿಯಾ** 1276 **ಅಡಿ), ಟೈಪ್-ಸಿ,** 1/12 **ಪಾಲಿನಷ್ಟರ ಮಟ್ಟಿಗೆ ಜಮೀನಿನಲ್ಲಿ ಪ್ರಮಾಣಾನುಸಾರ ಅವಿಭಜಿತ ಪಾಲಿನೊಂದಿಗೆ ಅಂದರೆ** 358.33 **ಚ. ಅಡಿ, ಒಟ್ಟು** 4300 **ಚ.ಅಡಿ ಮಾಪನದ ಇಡೀ ಜಮೀನಿನ ಆ ತುಂಡು ಮತ್ತು ಪಾರ್ಸೆಲ್‌ನಲ್ಲಿ, ಈಗ** 16.01.2007**ರಿಂದ ಹೊಸದಾಗಿ ರಚಿಸಲಾದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಡಿಯಲ್ಲಿ ಬರುತ್ತಿದ್ದು (ಹಿಂದಿನ ಸಿಎಮ್‌ಸಿ, ಬೊಮ್ಮನಹಳ್ಳಿ) ಹಳೇ ಹೌಸ್ ಲಿಸ್ಟ್ ಖಾತಾ ನಂ.** 123/170/2, **ಪ್ಲಾಟ್ ನಂ.** 8 **ಹೊಂದಿದ್ದು, ಸ್ಟಿಲ್ಟ್ ಮಹಡಿಯಲ್ಲಿ ಕವರ್ ಮಾಡಲಾದ ಒಂದು ಕಾರ್ ಪಾರ್ಕಿಂಗ್ ಜಾಗದೊಂದಿಗೆ. ಸದರಿ ಜಮೀನು ಈ ಕೆಳಗಿನಂತೆ ಸುತ್ತುವರಿಯಲ್ಪಟ್ಟಿದೆ:**

ಪೂರ್ವ : ಪ್ಲಾಟ್ ನಂ.-7 ಮತ್ತು ಆ ಸೈಡ್‌ನಲ್ಲಿ 85 ಅಡಿ ಮಾಪನ ಹೊಂದಿದೆ, ಉತ್ತರ : ಖಾಸಗಿ ಸ್ವತ್ತು ಮತ್ತು ಆ ಸೈಡ್‌ನಲ್ಲಿ 50 ಅಡಿ ಮಾಪನ ಹೊಂದಿದೆ,
ಪಶ್ಚಿಮ : ಪ್ಲಾಟ್ ನಂ.-9 ಮತ್ತು ಆ ಸೈಡ್‌ನಲ್ಲಿ 87 ಅಡಿ ಮಾಪನ ಹೊಂದಿದೆ, ದಕ್ಷಿಣ : ರಸ್ತೆ ಮತ್ತು ಆ ಸೈಡ್‌ನಲ್ಲಿ 50 ಅಡಿ ಮಾಪನ ಹೊಂದಿದೆ.

ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, ದಯವಿಟ್ಟು ಸುರಕ್ಷಿತ ಸಾಲಗಾರರ ವೆಬ್‌ಸೈಟ್‌ನಲ್ಲಿ ಒದಗಿಸಲಾದ ಲಿಂಕ್ ಅನ್ನು ಉಲ್ಲೇಖಿಸಿ ಅಂದರೆ www.acreindia.in; ಸಂಪರ್ಕ ಸಂಖ್ಯೆ: 0124-6910910, +91 7065451024; ಇ-ಮೇಲ್ ಐಡಿ : auctionhelpline@sammaancapital.com. ಬಿಡ್ಡಿಂಗ್‌ಗಾಗಿ, www.auctionfocus.in ಗೆ ಲಾಗಿನ್ ಮಾಡಿ.

ದಿನಾಂಕ : 12.05.2026
ಸ್ಥಳ : ಬೆಂಗಳೂರು
ಸಹಿ
ಅಧಿಕೃತ ಅಧಿಕಾರಿ
ಅಸೆಟ್ಸ್ ಕೇರ್ ಆ್ಯಂಡ್ ರಿಕನ್‌ಸ್ಟ್ರಕ್ಷನ್ ಎಂಟರ್‌ಪ್ರೈಸ್ ಲಿ
ಎ.ಸಿ.ಆರ್.ಇ -180 -ಟ್ರಸ್ಟ್‌ನ ಟ್ರಸ್ಟೀ.

amagi
AMAGI MEDIA LABS LIMITED
(formerly known as Amagi Media Labs Private Limited)
CIN: L73100KA2008PLC045144
Registered Office: Raj Alkaa Park, Sy. No. 29/3 & 32/2, 4th floor, Kalena Agrahara Village, Begur Hobli, Bengaluru - 560076, Karnataka
P: +91 80 4663 4444 | **E:** ir@amagi.com | **W:** http://www.amagi.com

STATEMENT OF AUDITED FINANCIAL RESULTS (STANDALONE AND CONSOLIDATED) OF THE COMPANY FOR THE QUARTER AND YEAR ENDED MARCH 31, 2026

The Board of Directors of Amagi Media Labs Limited ("Company") at its meeting held on May 20, 2026, approved the Audited Financial Results (standalone & consolidated) of the Company for the quarter and year ended March 31, 2026 ("**Financial Results**").

The Financial Results along with Auditor's Report, have been hosted on the Company's website at https://www.amagi.com/investors/quarterly-financials and can be accessed by scanning the Quick Response Code.

For and on behalf of the Board of Directors
Amagi Media Labs Limited
(formerly known as Amagi Media Labs Private Limited)
Sd/-
Baskar Subramanian
Managing Director & CEO
DIN: 02014529

Date: May 21, 2026
Place: Bengaluru

Note: *The above information is in accordance with Regulation 33 read with Regulation 47(1) of the SEBI (Listing Obligations and Disclosure Requirements) Regulations 2015.*

Adfactors 84/26

INDIQUBE®
GROW YOUR BUSINESS

INDIQUBE SPACES LIMITED
(Formerly known as 'Indiqube Spaces Private Limited, Innovent Spaces Private Limited')
CIN: L45400KA2015PLC133523
Registered Office: Plot # 53, Careernet Campus, Kariyammanna Agrahara Road, Devarabisanahalli, Outer Ring Road, Bengaluru 560103, Karnataka, India
Phone: +91 99000 92210, **E-mail:** cs.compliance@indiqube.com, **Website:** www.indiqube.com

AUDITED FINANCIAL RESULTS FOR THE QUARTER AND YEAR ENDED MARCH 31, 2026

The Board of Directors of **Indiqube Spaces Limited ("the Company")** at its meeting held on Wednesday, May 20, 2026 approved the Audited Financial Results of the Company for the quarter and year ended March 31, 2026 **(the "Results")**

The complete Results with the Audit Report of the Statutory Auditors have been posted on the website of stock exchanges (www.bseindia.com and www.nseindia.com) and Company's website at https://indiqube.com/investor/ and can be accessed by scanning the QR code.

For and on Behalf of the Board of Directors
INDIQUBE SPACES LIMITED
Sd/-
Bhasker Dubey
Company Secretary and Compliance Officer
Membership No: A33287

Place: Bengaluru, Karnataka
Date: May 20, 2026

Note: *The above information is in accordance with Regulation 33 read with Regulation 47 (1) of the SEBI (Listing Obligations and Disclosure Requirements) Regulations, 2015*

ಸಮಾಚಾರ ಸಣ್ಣದಲ್ಲ

ನಾಳೆ ನೇರ ಫೋನ್ ಇನ್ ಕಾರ್ಯಕ್ರಮ

ಬೆಂಗಳೂರು: ಜಲಮಂಡಳಿ ವತಿಯಿಂದ ಮೇ 22ರಂದು ಬೆಳಗ್ಗೆ 9.30ರಿಂದ 10.30ರವರೆಗೆ ನೇರ ಫೋನ್ ಇನ್ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಮಂಡಳಿ ತಿಳಿಸಿದೆ. ಬೆಂಗಳೂರು ಜಲ ಮಂಡಳಿ ಅಧ್ಯಕ್ಷ ಡಾ. ವಿ.ರಾಮ್‌ಪ್ರಸಾತ್ ಮನೋಹರ್ ಅಧ್ಯಕ್ಷತೆ ವಹಿಸಲಿದ್ದು, ಸಾರ್ವಜನಿಕರು ತಮ್ಮ ವಲಯ/ಪ್ರದೇಶಗಳಲ್ಲಿನ ಕುಡಿಯುವ ನೀರಿನ ಸಮಸ್ಯೆ ಮತ್ತು ಒಳಚರಂಡಿ ಕೊಳವೆ/ ಇಳಿ ಗುಂಡಿಯಿಂದ ತ್ಯಾಜ್ಯ ನೀರು ಹೊರಬರುತ್ತಿರುವ ಬಗ್ಗೆ, ಜಲಮಾಪನ ಹಾಗೂ ನೀರಿನ ಬಿಲ್ಲಿನ ಸಮಸ್ಯೆಯ ಬಗ್ಗೆ ನೇರವಾಗಿ ಮಾತನಾಡಿ ಕುಂದು-ಕೊರತೆಗಳನ್ನು ಬಗೆಹರಿಸಿಕೊಳ್ಳಬಹುದು. ನೀರಿನ ಸಂಪರ್ಕ ಹೊಂದಿರುವ ಗ್ರಾಹಕರು ತಮ್ಮ ಆರ್.ಆರ್.ಸಂಖ್ಯೆಯನ್ನು ತಿಳಿಸಿ ದೂರನ್ನು ನೀಡಬೇಕು. ಸಂಪರ್ಕ ಸಂಖ್ಯೆ 080-22945119 ಮತ್ತು 080-22229639.

ಇಂದು ಜಲಮಂಡಳಿ ಅದಾಲತ್

ಬೆಂಗಳೂರು: ಬೆಂಗಳೂರು ಜಲಮಂಡಳಿ ವತಿಯಿಂದ ಮೇ 21 ರ ಬೆಳಗ್ಗೆ 9.30ರಿಂದ 11.00 ಗಂಟೆಯವರೆಗೆ ನೀರಿನ ಅದಾಲತ್‌ನ್ನು ಆಯೋಜಿಸಲಾಗಿದೆ ಎಂದು ಮಂಡಳಿ ತಿಳಿಸಿದೆ. ನಗರದ (ಆಗ್ನೇಯ-3), (ಆಗ್ನೇಯ-6)(ಪಶ್ಚಿಮ-1-3), (ವಾಯುವ್ಯ-5), (ಉತ್ತರ-2-3), (ದಕ್ಷಿಣ-1-3), (ನೈರುತ್ಯ-3), (ನೈರುತ್ಯ-6)ಮತ್ತು (ಪೂರ್ವ-2-4)ಉಪವಿಭಾಗಗಳಲ್ಲಿ ನೀರಿನ ಬಿಲ್ಲು, ನೀರು ಮತ್ತು ಒಳಚರಂಡಿ ಸಂಪರ್ಕ ಕಲ್ಪಿಸುವಲ್ಲಿನ ವಿಳಂಬ, ಗೃಹ ಬಳಕೆಯಿಂದ ಗೃಹೇತರ ಬಳಕೆ ಪರಿವರ್ತನೆ ವಿಳಂಬ ಮತ್ತಿತರ ಕುಂದುಕೊರತೆಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಲು ಸಾರ್ವಜನಿಕರು ಮಂಡಳಿಯ 24/7 ದೂರು ನಿರ್ವಹಣಾ ಕೇಂದ್ರದ ಸಹಾಯವಾಣಿ 1916 ಗೆ ಕರೆಮಾಡಿ ಅಥವಾ ವಾಟ್ಸ್‌ಆಪ್ ಸಂಖ್ಯೆ: 8762228888 ಸಂದೇಶದ ಮೂಲಕ ದೂರನ್ನು ಸಲ್ಲಿಸಬಹುದು ಎಂದು ಮಂಡಳಿ ತಿಳಿಸಿದೆ.

ಇಂದಿನಿಂದ ವಾರ್ಷಿಕ ಸಾಮಾನ್ಯ ಸಭೆ

ಬೆಂಗಳೂರು: ಬಾಗಲಕೋಟೆ ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯ ಮತ್ತು ಅಖಿಲ ಭಾರತ ಸಮನ್ವಯ ಸಂಶೋಧನಾ ಯೋಜನೆ (ಗಡ್ಡೆ ಗೆಣಸು ಬೆಳೆಗಳು) ಇವರ ಜಂಟಿ ಆಶ್ರಯದಲ್ಲಿ 26ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ಮೇ 21 ರಿಂದ 23 ರವರೆಗೆ ಬೆಂಗಳೂರಿನ ಜಿಕೆವಿಕೆ ಆವರಣದಲ್ಲಿರುವ ತೋಟಗಾರಿಕಾ ಮಹಾವಿದ್ಯಾಲಯದಲ್ಲಿ ಆಯೋಜಿಸಲಾಗಿದೆ. ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ವಿಷ್ಣುವರ್ಧನ ಅವರ ಅಧ್ಯಕ್ಷತೆಯಲ್ಲಿ ಈ ಕಾರ್ಯಕ್ರಮದ ಉದ್ಘಾಟನೆ ನೆರವೇರಲಿದೆ. ದೆಹಲಿಯ ಭಾರತೀಯ ಕೃಷಿ ಅನುಸಂದಾನ ಪರಿಷ್ತಿನ ಉಪ ಮಹಾನಿರ್ದೇಶಕರು (ತೋಟಗಾರಿಕೆ ವಿಜ್ಞಾನ) ಆದ ಡಾ. ಸಂಜಯ್ ಕುಮಾರ್ ಸಿಂಗ್ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ. ಗೌರವಾನ್ವಿತ ಅತಿಥಿಗಳಾಗಿ ಬಾಗಲಕೋಟೆ ತೋ.ವಿ.ವಿ. ಸಂಶೋಧನಾ ನಿರ್ದೇಶಕರಾದ ಡಾ.ಬಿ.ಫಕ್ರುದ್ದೀನ್ ಸೇರಿ ಹಲವು ತಜ್ಞರು ಭಾಗವಹಿಸಲಿದ್ದಾರೆ. ಚರ್ಚೆಯ ಪ್ರಮುಖ ವಿಷಯಗಳು ಮೂರು ದಿನಗಳ ಕಾಲ ನಡೆಯಲಿರುವ ಈ ಉನ್ನತ ಮಟ್ಟದ ಸಭೆಯಲ್ಲಿ ಭಾರತದ ವಿವಿಧ ಕೃಷಿ-ಹವಾಮಾನ ವಲಯಗಳಿಗೆ ಸೂಕ್ತವಾದ ಗಡ್ಡೆ ಗೆಣಸು ಬೆಳೆಗಳ ಬಗ್ಗೆ ವ್ಯಾಪಕ ಸಮಾಲೋಚನೆ ನಡೆಯಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಸಂಗೀತ ತರಬೇತಿಗೆ ಅರ್ಜಿ ಆಹ್ವಾನ

ಬೆಂಗಳೂರು: ಮೈಸೂರಿನ ಗಂಗೂಬಾಯಿ ಹಾನಗಲ್ ಸಂಗೀತ ವಿಶ್ವವಿದ್ಯಾಲಯದ ಮೂಲಕ ದೇವನಹಳ್ಳಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸವಿತಾ ಸಮಾಜದ ಪಾರಂಪರಿಕ ಕಲೆಗಳಾದ ಡೋಲು ಮತ್ತು ನಾದಸ್ವರ ಸಂಗೀತ ತರಬೇತಿ ಕೇಂದ್ರಕ್ಕೆ ದಾಖಲಾತಿ ಪಡೆಯಲು ಆಫ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಪ್ರವೇಶ ಪಡೆಯಲು ಹಿಂದುಳಿದ ವರ್ಗಗಳ ಪ್ರವರ್ಗ-2(ಎ) ರಲ್ಲಿ ಬರುವ ಸವಿತಾ ಸಮಾಜ ಹಾಗೂ ಅದರ ಉಪ ಜಾತಿಗಳ ವಿದ್ಯಾರ್ಥಿಗಳು ಅರ್ಹರಾಗಿದ್ದು, ಮೇ 30 ಕ್ಕೆ ಅರ್ಜಿ ಸಲ್ಲಿಸಲು ಕೊನೆದಿನ. ಕನಿಷ್ಠ ವಯೋಮಿತಿ 10 ವರ್ಷ ಹಾಗೂ ಗರಿಷ್ಠ ವಯೋಮಿತಿ 15 ವರ್ಷ (ಒಂದು ವೇಳೆ, ಅಧ್ಯಯನ ಮಾಡುತ್ತಿರುವ 15 ವರ್ಷ ವಯೋಮಿತಿಯೊಳಗಿನ ವಿದ್ಯಾರ್ಥಿಗಳು ದೊರೆಯದ ಪಕ್ಷದಲ್ಲಿ ಮಾತ್ರ 18 ವರ್ಷದವರೆಗಿನ ಮಕ್ಕಳನ್ನು ಸೇರಿಸಲು ಅವಕಾಶ ನೀಡಲಾಗುವುದು). ಕುಟುಂಬದ ವಾರ್ಷಿಕ ಆದಾಯ ಮಿತಿ ಎರಡು ಲಕ್ಷ ರು. ಆಗಿರಬೇಕು. ಅರ್ಜಿ ಪಡೆಯಲು ಹಾಗೂ ಹೆಚ್ಚಿನ ಮಾಹಿತಿಗಾಗಿ ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಚೇರಿ, ಮಿನಿ ವಿಧಾನ ಸೌಧದ ಹಿಂಭಾಗ, ಡಿವಿಎಂ ಕಾಲೋನಿ, ದೇವನಹಳ್ಳಿ ಟೌನ್ / ತಾಲ್ಲೂಕು, ದೂ. ಸಂಖ್ಯೆ 080-22449999 ಗೆ ಸಂಪರ್ಕಿಸಲು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

{ ಛಲವಾದಿ ನಾರಾಯಣಸ್ವಾಮಿ } ಪರಿಷತ್ ಪ್ರತಿಪಕ್ಷ ನಾಯಕ

ಜಿಬಿಎ ಚುನಾವಣೆಗೆ 2 ತಿಂಗಳು ಕಾಲಾವಕಾಶ ಸುಪ್ರೀಂಕೋರ್ಟ್ ನೀಡಿದೆ. ಮೂರು ತಿಂಗಳು ಕಾಲಾವಕಾಶ ಸರಕಾರ ಕೇಳಿತ್ತು. ಆದರೆ ಎರಡು ತಿಂಗಳು ಮಾತ್ರ ನೀಡಿದೆ. ಚುನಾವಣೆಯ ಬಗ್ಗೆ ಸಮೀಕ್ಷೆ ಮಾಡಿಸಿದ್ದಾರೆ. ಆದರೆ ಅವರಿಗೆ ಗೆಲುವಿನ ವರದಿ ಸಿಕ್ಕಿಲ್ಲ. ಆದ್ದರಿಂದ ಹೇಗಾದರೂ ಮಾಡಿ ಚುನಾವಣೆ ಮುಂದಕ್ಕೆ ಹಾಕಲು ನೋಡಿದ್ದರು.

ಬಿಡದಿ ಟೌನ್‌ಶಿಪ್ ವಿಷಯದಲ್ಲಿ ಡಿಕೆಶಿ ಹಾಗೂ ಕುಮಾರಸ್ವಾಮಿ ನಡುವೆ ಮುಂದುವರಿದ ಮಾತಿನ ಚಕಮಕಿ

ಎಚ್‌ಡಿಕೆ ಪಂಥಾಹ್ವಾನ ಸ್ವೀಕರಿಸಲು ಸಿದ್ಧ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಬಿಡದಿ ಟೌನ್‌ಶಿಪ್ ವಿಷಯದಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ದೇವೇಗೌಡರ ಕುಟುಂಬದ ನಡುವಿನ ವಾಕ್ಸಮರ ಮುಂದುವರಿದಿದ್ದು, ಕುಮಾರಸ್ವಾಮಿ ಅವರು ನೀಡಿದ್ದ ಪಂಥಾಹ್ವಾನ ಸ್ವೀಕರಿಸಲು ಸಿದ್ಧ ಎಂದು ಡಿ.ಕೆ.ಶಿವಕುಮಾರ್ ಪ್ರತಿಸವಾಲು ಹಾಕಿದ್ದಾರೆ.

ಸರಕಾರಿ ಗೃಹ ಕಚೇರಿ ಕುಮಾರಪಾರ್ಕ್‌ನಲ್ಲಿ ಡಿ.ಕೆ.ಶಿವಕುಮಾರ್ ಅವರು ಬುಧವಾರ ಬಿಡದಿ ಟೌನ್‌ಶಿಪ್ ಯೋಜನೆ ಕುರಿತು ಆ ಭಾಗದ ರೈತರೊಂದಿಗೆ ಸಭೆ ನಡೆಸಿ ಚರ್ಚಿಸಿದರು. ಈ ಸಭೆಯಲ್ಲಿ ಭಾಗವಹಿಸಿದ ರೈತರು ನಮಗೆ ಪರಿಹಾರದ ಜತೆಗೆ ನಿವೇಶನವನ್ನು ನೀಡಿ ಎಂದು ಬೇಡಿಕೆ ಇಟ್ಟರು. ರೈತರ ಎಲ್ಲಾ ಅಹವಾಲುಗಳನ್ನು ಆಲಿಸಿದ ಶಿವಕುಮಾರ್ ಅವರು ಕಾನೂನು ರೀತಿಯಲ್ಲಿ ಯಾರ ರೀತಿ ಸಹಾಯ ಮಾಡಲು ಸಾಧ್ಯವೋ ಅದನ್ನು ಮಾಡುವುದಾಗಿ ರೈತರಿಗೆ ಭರವಸೆ ನೀಡಿದರು. ಈ ವೇಳೆ ರೈತರು ಕೆಲ ಸಲಹೆ-ಸೂಚನೆಗಳನ್ನು ನೀಡಿದರು.

ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕುಮಾರಸ್ವಾಮಿ ಅವರ ಪಂಥಾಹ್ವಾನವನ್ನು ನಾನು ಸ್ವೀಕರಿಸುವೆ. ನನಗೆ ಮೂರು ದಿನ ಸಮಯ ಸಾಕು. ಯಾವತ್ತು ಸಮಯ ನಿಗದಿ ಮಾಡುವಿರೋ ನಾನು ಅಂದು ತಯಾರಿದ್ದೇನೆ. ಜಾಗ ಹಾಗೂ ಸಮಯ ಅವರೇ ನಿಗದಿ ಮಾಡಲಿ. ಬಿಡದಿ ಭಾಗದ ರೈತರೊಂದಿಗೆ ಚರ್ಚೆ ಮಾಡಿದ್ದೇನೆ. ಬಿಡದಿ ಟೌನ್‌ಶಿಪ್‌ಗೆ ಜಮೀನು ನೀಡಿರುವ ರೈತರಿಗೆ ಜೂನ್ ಮೊದಲನೇ ವಾರದಿಂದ ಪರಿಹಾರದ ಹಣ ಬಿಡುಗಡೆಗೆ ಕ್ರಮ ವಹಿಸುತ್ತೇನೆ. ಮೂರು, ಮೂರು ಹಳ್ಳಿಗಳನ್ನು ಸೇರಿಸಿ ಪ್ರತ್ಯೇಕವಾದ ಅಂತಿಮ ಹಂತದ ನೋಟಿಫಿಕೇಶನ್ ಮಾಡಬೇಕು ಎಂದು ನಾವು ತೀರ್ಮಾನ ಮಾಡಿದ್ದೇವೆ. ಬಿಡದಿ ಟೌನ್‌ಶಿಪ್ ವಿಚಾರವಾಗಿ ಅಲ್ಲಿನ ಶೇ.80ರಷ್ಟು ರೈತರು ಒಪ್ಪಿಗೆ ನೀಡಿದ್ದು. ಆದಷ್ಟು ಬೇಗ ಪರಿಹಾರ ವಿತರಿಸಿ ಎಂದು ಒತ್ತಾಯ ಮಾಡಿದ್ದಾರೆ. ಭೂ ರಹಿತರ ಬಗ್ಗೆ ಕಾಳಜಿ ವಹಿಸಿದ್ದು ಈ ವಿಚಾರ ಬಗೆಹರಿಸಲಾಗುವುದು ಎಂದರು.

ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಸರಕಾರಿ ಗೃಹ ಕಚೇರಿ ಕುಮಾ ಕೃಪಾ ಆವರಣದಲ್ಲಿ ಬುಧವಾರ ಬಿಡದಿ ಟೌನ್ ಶಿಪ್ ಯೋಜನೆ ಕುರಿತು ಆ ಭಾಗದ ರೈತರೊಂದಿಗೆ ಸಭೆ ನಡೆಸಿ ಚರ್ಚಿಸಿದರು.

ಈ ಯೋಜನೆ ನಾನು ಮಾಡಿದ್ದಲ್ಲ, ಕುಮಾರಸ್ವಾಮಿ ಅವರ ಕಾಲದಲ್ಲೇ ನೋಟಿಫಿಕೇಷನ್ ಮಾಡಲಾಗಿತ್ತು. ಅವರ ಕಾಲದಲ್ಲೇ ಎಂಟು ಸಾವಿರ ಅಡಿ ಕೊಡಬೇಕೆಂದು ತೀರ್ಮಾನ ಮಾಡಲಾಗಿತ್ತು. ಈ ಯೋಜನೆಯನ್ನು ಡಿಎಲ್‌ಎಫ್ ಕಂಪನಿಗೆ ನೀಡಿದ್ದರು. ಆ ಕಂಪನಿ ಈ ಯೋಜನೆ ನಮಗೆ ಕಾರ್ಯಸಾಧು ಇಲ್ಲವೆಂದು ಹಣವನ್ನು ವಾಪಸ್ ತೆಗೆದುಕೊಂಡು ಹೋದರು. ಬಳಿಕ ಜಗದೀಶ್ ಶೆಟ್ಟರ್, ಬಸವರಾಜ ಬೊಮ್ಮಾಯಿ ಅವರು ಇದ್ದಂತಹ ಕಾಲದಲ್ಲಿ ಕೆಐಡಿಬಿಯವರು ಒಂದು ಸಾವಿರ ಎಕರೆ ತೆಗೆದುಕೊಂಡಿದ್ದರು. ಆಗ ಯಾರು ಮಾತನಾಡಲಿಲ್ಲ, ಆಗ ರೈತರು ಕುಮಾರಸ್ವಾಮಿ ಅವರನ್ನು ಪ್ರಶ್ನಿಸಿದಾಗ. ನಾನೇ ಮಾಡಿಸಿದ್ದು ಈಗ ಏನು ಮಾಡೋಕೆ ಆಗಲ್ಲ ಎಂದರಂತೆ ಎಂದರು.

ರೈತರ ವಿಶ್ವಾಸ ಪಡೆದು ಯೋಜನೆ ಮುಂದುವರಿಕೆ: ಈ ಪ್ರದೇಶವನ್ನು ರೆಡ್ ಜೋನ್ ಎಂದು ತೀರ್ಮಾನ ಮಾಡಲಾಗಿತ್ತು. ಅಂದರೆ ಯಾರು ಸಹ ಭೂಮಿ ಮಾರುವಂತಿಲ್ಲ. ಬೇರೆ ಯಾರಿಗೂ ಕೂಡ ವಹಿವಾಟು ಮಾಡುವಂತಿಲ್ಲ ಎಂದು ಕಾನೂನು ಮಾಡಲಾಗಿತ್ತು. ಈ ಯೋಜನೆ ಕೈ ಬಿಡಬೇಕು ಎಂದು ಕೆಲವರು ನ್ಯಾಯಾಲಯಕ್ಕೂ ಅರ್ಜಿ ಹಾಕಿಕೊಂಡಿದ್ದರು. ಆದರೆ ನ್ಯಾಯಾಲಯ ಕೂಡ ಯೋಜನೆ ಕೈ ಬಿಡಲು ನಿರಾಕರಿಸಿತ್ತು. ಈ ಕಾರಣಕ್ಕೆ ನಾನು ರೈತರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಯೋಜನೆ ಮುಂದುವರಿಸುತ್ತಿದ್ದೇನೆ. ಸ್ವಲ್ಪ ಹೆಚ್ಚಿನ ಪರಿಹಾರ ಕೊಟ್ಟಿದ್ದೇನೆ. ಜತೆಗೆ ಅವರೆಲ್ಲರೂ ನಮ್ಮನ್ನು ಬೆಂಗಳೂರಿನವರು ಎಂದು ಗುರುತಿಸಿ ಆ ಜಿಲ್ಲೆಗೆ ಸೇರಿಸಿದ್ದೀರಿ ಎಂದು ಸಂತೋಷಗೊಂಡಿದ್ದಾರೆ. ಮೊದಲಿಗೆ ಇದ್ದಂತಹ ಬೆಂಗಳೂರು ಜಿಲ್ಲೆಯನ್ನು ಉಳಿಸಿದ್ದೀರಿ ಎಂದು ಸಂತಸಗೊಂಡಿದ್ದಾರೆ. ಯಾವ ರೈತರೂ ಸಹ ಭೂಮಿ ಮಾರಿಕೊಳ್ಳಬೇಡಿ ಎಂದು ಮನವರಿಕೆ ಮಾಡಿಕೊಟ್ಟಿದ್ದೇನೆ. ಏಕೆಂದರೆ ನಿಮಗೆಲ್ಲರಿಗೂ ಇದರ ಬೆಲೆ ಅರ್ಥವಾಗುವುದಿಲ್ಲ ಎಂದು ಹೇಳಿದ್ದೇನೆ. ಎಲ್ಲರೂ ಸಹ ಇದಕ್ಕೆ ಒಪ್ಪಿಕೊಂಡಿದ್ದಾರೆ ಎಂದರು.

ಪಂಥಾಹ್ವಾನದ ಬಗ್ಗೆ ರೈತರಿಗೆ ಹೇಳಿದಾಗ. ಅಣ್ಣ ನೀವು ಬೇಡ ನಾವೇ ಪಂಥಾಹ್ವಾನ ಸ್ವೀಕರಿಸುತ್ತೇವೆ, ನಾವೇ ಅವರಿಗೆ ಉತ್ತರ ಕೊಡುತ್ತೇವೆ ಎಂದು ರೈತರೇ ಹೇಳಿದ್ದಾರೆ. ಕಬ್ಬಿಣ, ಸ್ಟೀಲ್ ಬೆಲೆ ಟನ್ ಗೆ ಐದು ಸಾವಿರ ಹೆಚ್ಚಳವಾಗಿದೆ.

ಕುಮಾರಣ್ಣನವರೇ ಇದರ ಸಚಿವರು. ಇದನ್ನು ಮೊದಲು ಇದನ್ನು ಕಡಿಮೆ ಮಾಡಿಸಲು ಹೇಳಿ ಆನಂತರ ಪಂಥಾಹ್ವಾನಕ್ಕೆ ಕುಮಾರಸ್ವಾಮಿ ಅವರು ಬರಲಿ ಎಂದು ರೈತರು ನನಗೆ ಸಲಹೆ ನೀಡಿದರು. ಕುಮಾರಣ್ಣ ಅವರು ಬೆಲೆ ಏರಿಕೆ ತಡೆಯಲಿ. ಬಡವರು ಮನೆ ಕಟ್ಟಲು ಆಗುತ್ತಿಲ್ಲ. ಕಬ್ಬಿಣ, ಸಿಮೆಂಟ್ ಬೆಲೆ ಹೆಚ್ಚಳವಾಗಿದೆ. ಪೆಟ್ರೋಲ್, ಡೀಸೆಲ್ ಬೆಲೆಯೂ ಹೆಚ್ಚಳವಾಗಿದೆ. ಮೋದಿ ಅವರು ನಿಮಗೆ ಒಳ್ಳೆಯ ಸ್ಥಾನ ಕೊಟ್ಟಿದ್ದಾರೆ. ಇದರ ಮೂಲಕ ಬಡವರಿಗೆ ಸಹಾಯ ಮಾಡಿದರೆ ಒಂದಷ್ಟು ಒಳ್ಳೆ ಹೆಸರು ಬರುತ್ತದೆ. ರಾಜ್ಯದ ಬಡ ಜನತೆಯ ಪರವಾಗಿ ಅವರಿಗೆ ವೈಯಕ್ತಿಕವಾಗಿ ಮನವಿ ಮಾಡುತ್ತೇನೆ. ನಮ್ಮ ರಾಜ್ಯದ ಜನರಿಗೆ ಕಡಿಮೆ ಬೆಲೆಯಲ್ಲಿ ಕಬ್ಬಿಣ ದೊರೆಯುವಂತೆ ಯೋಜನೆ ಮಾಡಿದರೆ ಒಳ್ಳೆಯದು ಎಂದು ವ್ಯಂಗ್ಯವಾಡಿದರು.

> ಈ ಯೋಜನೆಗೆ ಅಧಿಸೂಚನೆ ಹೊರಡಿಸಿದವರು ಕುಮಾರಸ್ವಾಮಿ. ನಾನು ಈ ಯೋಜನೆ ಕೈಬಿಡಬಹುದೇ ಎಂದು ಆಲೋಚನೆ ಮಾಡಿದೆ. ನಾನು, ಕಾಗೋಡು ತಿಮ್ಮಪ್ಪ ಅವರು ಭೈರಮಂಗಲಕ್ಕೆ ಬಂದು ಪರಿಶೀಲನೆ ಮಾಡಿದೆವು. ಇಲ್ಲಿ ನ್ಯಾಯಾಲಯದ ಪ್ರಕರಣದಲ್ಲಿ ತೀರ್ಪುಗಳು ಬಂದಿವೆ. ಹೀಗಾಗಿ ಇದನ್ನು ಡಿನೋಟಿಫಿಕೇಷನ್ ಮಾಡಲು ಯಾರೂ ಧೈರ್ಯ ಮಾಡಲಿಲ್ಲ. ಈ ಯೋಜನೆ ಕೈಬಿಡುವುದಾದರೇ ಅವರೇ ಡಿನೋಟಿಫಿಕೇಶನ್ ಮಾಡಬಹುದಿತ್ತಲ್ಲವೇ?
>
> - ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ಹುಡುಗನಿಗೆ ಉತ್ತರ ಕೊಡುವುದಿಲ್ಲ

136 ಜನ ಶಾಸಕರಿದ್ದರೂ ಏನು ಮಾಡಿದ್ದೀರಿ ಎಂಬ ನಿಖಿಲ್ ಕುಮಾರಸ್ವಾಮಿ ಟೀಕೆಗೆ, ಆ ಹುಡುಗನಿಗೆ ಉತ್ತರ ಕೊಡುವುದಕ್ಕೆ ನನಗೆ ಇಷ್ಟವಿಲ್ಲ. ಆತನಿಗೆ ಉತ್ತರ ಕೊಡಲು ಸ್ಥಳೀಯ ನಾಯಕರಿದ್ದಾರೆ. ಅವರ ಸ್ಟೇಟಸ್ ಏನು ನನಗೆ ಗೊತ್ತಿಲ್ಲ. ಪಕ್ಷದ ಅಧ್ಯಕ್ಷರಾದ ಮೇಲೆ ಉತ್ತರ ನೀಡಬಹುದು. ಈ ಹಿಂದೆ ದೇವೇಗೌಡರು ನರೇಂದ್ರ ಮೋದಿ ಗೆದ್ದರೆ ದೇಶ ಬಿಡುತ್ತೇನೆ ಎಂದಿದ್ದರು. ಆಗ ನರೇಂದ್ರ ಮೋದಿಯವರು ಬೇಡ, ನಮ್ಮ ಮನೆಯಲ್ಲೇ ಜಾಗ ಕೊಡುತ್ತೇನೆ ಎಂದು ಕರೆದಿದ್ದರು. ಹೀಗಾಗಿ ಅವರ ಮಾತನ್ನೆಲ್ಲಾ ನಾವು ಗಂಭೀರವಾಗಿ ತೆಗೆದುಕೊಳ್ಳಲು ಆಗುವುದಿಲ್ಲ. ಸಮಯಕ್ಕೆ ತಕ್ಕಂತೆ ಬದಲಾಗುತ್ತಾರೆ. ಈಗ ರಾಜ್ಯಸಭಾ ಸದಸ್ಯರು ಆಗಬೇಕಲ್ಲವೇ? ಎಂದು ತಿರುಗೇಟು ನೀಡಿದರು. ದೇವೇಗೌಡರು ಮೋದಿಯವರಿಗೆ, ಅವರ ಬೇರೆ ನಾಯಕರಿಗೆ ಪತ್ರ ಬರೆಯಬೇಕು. ನಮ್ಮ ನಾಯಕರಿಗೆ ಪತ್ರ ಬರೆದರೆ ಏನು ಪ್ರಯೋಜನ? ರಾಹುಲ್ ಗಾಂಧಿ ಅವರು ಅಧಿಕಾರದಲ್ಲಿಲ್ಲ, ಅವರು ಯಾಕೆ ಇದಕ್ಕೆಲ್ಲಾ ಬಾಯಿ ಹಾಕಬೇಕು. ದೇವೇಗೌಡರು ಏಕೆ ಏನೂ ಮಾಡಲು ಆಗಲಿಲ್ಲ ಎಂದು ಡಿ.ಕೆ.ಶಿವಕುಮಾರ್ ತಿರುಗೇಟು ನೀಡಿದರು.

ಗೊರುಚ ದತ್ತಿನಿಧಿ ಪ್ರಶಸ್ತಿಗೆ ಕೃತಿಗಳ ಆಹ್ವಾನ

ಬೆಂಗಳೂರು: 2025ನೇ ಸಾಲಿನ ಗೊರುಚ ದತ್ತಿನಿಧಿ ಪ್ರಶಸ್ತಿಗೆ ಕೃತಿಗಳನ್ನು ಆಹ್ವಾನಿಸಿದೆ. ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನಿಂದ 2017ರಿಂದ ಗೊ.ರು.ಚನ್ನಬಸಪ್ಪರವರ ಹೆಸರಿನಲ್ಲಿ ಪ್ರತಿವರ್ಷ ನೀಡಲಾಗುವ ಶರಣ ಸಾಹಿತ್ಯ ಮತ್ತು ಜನಪದ ಸಾಹಿತ್ಯಗಳಲ್ಲಿನ ಆಯ್ದ ಕೃತಿಗಳಿಗೆ ಗೊರುಚ ದತ್ತಿ ಪ್ರಶಸ್ತಿಗಳನ್ನು ನೀಡಲು 2025ನೇ ಸಾಲಿನಲ್ಲಿ ಪ್ರಕಟಿತವಾದ ಕೃತಿಗಳನ್ನು ಆಹ್ವಾನಿಸಲಾಗಿದೆ. ಪ್ರಶಸ್ತಿಗೆ ಆಯ್ಕೆಯಾದ ಶರಣ ಸಾಹಿತ್ಯ ಮತ್ತು ಜನಪದ ಸಾಹಿತ್ಯ ಕೃತಿಗಳ ಲೇಖಕರಿಗೆ ಪ್ರಶಸ್ತಿಧನ, ಫಲಕ ನೀಡಿ ಸನ್ಮಾನಿಸಿ ಗೌರವಿಸಲಾಗುವುದು. ಲೇಖಕರು / ಸಂಪಾದಕರು 2025ನೇ ಸಾಲಿನಲ್ಲಿ ಪ್ರಕಟಿತ ಕೃತಿಗಳ 3 ಪ್ರತಿಗಳನ್ನು ಮೇ.30 ರೊಳಗಾಗಿ ಅಧ್ಯಕ್ಷರು, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಜಗದ್ಗುರು ಶ್ರೀ ಶಿವರಾತ್ರೀಶ್ವರ ವೃತ್ತ, 1ನೆಯ ಮುಖ್ಯ ರಸ್ತೆ, ಜಯನಗರ 8ನೆಯ ವಿಭಾಗ, ಬೆಂಗಳೂರು-560070. ಇವರಿಗೆ ಖುದ್ದಾಗಿ ಅಥವಾ ಅಂಚೆ/ಕೊರಿಯರ್ ಮೂಲಕ ಕಳುಹಿಸಿಕೊಡಬಹುದು. ಶರಣ ಸಾಹಿತ್ಯ ಮತ್ತು ಜನಪದ ಸಾಹಿತ್ಯ ಕ್ಷೇತ್ರಗಳಲ್ಲಿ ಲೇಖಕರು ರಚಿಸಿರುವ ತಮ್ಮ ಕೃತಿಗಳೊಂದಿಗೆ ತಮ್ಮ ಸ್ವವಿವರಗಳ ಜತೆ ಸಂಪೂರ್ಣ ವಿಳಾಸ ಹಾಗೂ ದೂರವಾಣಿ ಮಾಹಿತಿ ಯೊಂದಿಗೆ ಮೇಲಿನ ವಿಳಾಸಕ್ಕೆ ಕಳುಹಿಸಿಕೊಡಬಹುದಾಗಿದೆ ಎಂದು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ.ಸಿ.ಸೋಮಶೇಖರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ 080-22970125 ಸಂಪರ್ಕಿಸಬಹುದು.

ಆನ್‌ಲೈನ್ ಮಾರಾಟ ವಿರೋಧಿಸಿ ಪ್ರತಿಭಟನೆ

ಔಷಧಂಗಡಿ ಬಂದ್‌ಗೆ ಮಿಶ್ರ ಪ್ರತಿಕ್ರಿಯೆ

ಬೆಂಗಳೂರು: ದೇಶವ್ಯಾಪಿ ಕರೆಯಲಾಗಿರುವ ಔಷಧಿ ಅಂಗಡಿಗಳ(ಮೆಡಿಕಲ್ ಸ್ಟೋರ್) ಬಂದ್‌ಗೆ ರಾಜ್ಯದಲ್ಲಿ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಬೆಂಗಳೂರು ನಗರ ಪ್ರದೇಶ ಸೇರಿದಂತೆ ಮೈಸೂರು, ಹುಬ್ಬಳ್ಳಿ ಸೇರಿ ಹಲವೆಡೆ ಪ್ರಮುಖ ಕೆಲವು ಮೆಡಿಕಲ್ ಶಾಪ್‌ಗಳು ಬಂದ್ ಆಗಿದ್ದವು. ಜಿಲ್ಲಾ ಮಟ್ಟದಲ್ಲಿ ಅಲ್ಲಲ್ಲಿ ಅಂಗಡಿ ಮುಚ್ಚಲ್ಪಟ್ಟಿದ್ದರೆ ತಾಲೂಕು ಹಾಗೂ ಹೋಬಳಿ ಮಟ್ಟದಲ್ಲಿ ಎಂದಿನಂತೆ ವ್ಯಾಪಾರ ನಡೆಸಿವೆ. ರಾಜ್ಯದ ಮೆಡಿಕಲ್ ಸ್ಟೋರ್ ಮಾಲೀಕರಲ್ಲಿ ಪೂರ್ಣ ಒಮ್ಮತ ಕಾಣಿಸದ ಕಾರಣ ಕೆಲ ಅಂಗಡಿಗಳು ಮಾತ್ರ ಬಂದ್ ಆಗಿದ್ದು, ಇನ್ನೂ ಅನೇಕ ಮೆಡಿಕಲ್‌ಗಳು ಸಾಮಾನ್ಯವಾಗಿ ಕಾರ್ಯನಿರ್ವಹಿಸಿದೆ. ಆಸ್ಪತ್ರೆಗಳ ಒಳಗಿರುವ ಹಾಗೂ ದೊಡ್ಡ ಮೆಡಿಕಲ್ ಶಾಪ್‌ಗಳು ಎಂದಿನಂತೆ ವಹಿವಾಟು ನಡೆಸಿದೆ. ಬಂದ್ ಮಾಡುವಂತೆ ಯಾವುದೇ ಒತ್ತಡ ಇಲ್ಲದಿದ್ದರೂ ಕೂಡ ಕೆಲವೆಡೆ ಮಾತ್ರ ಅಂಗಡಿಗಳನ್ನು ಬಂದ್ ಮಾಡಲಾಗಿತ್ತು.

ರಾಜ್ಯದಲ್ಲಿ ಸುಮಾರು 26 ಸಾವಿರಕ್ಕೂ ಅಧಿಕ ಮೆಡಿಕಲ್ ಅಂಗಡಿಗಳು ಹಾಗೂ ಬೆಂಗಳೂರಿನಲ್ಲಿ ಸುಮಾರು 6,500ಕ್ಕೂ ಹೆಚ್ಚು ಮೆಡಿಕಲ್ ಸ್ಟೋರ್‌ಗಳಿದ್ದು, ದೇಶಾದ್ಯಂತ ಸುಮಾರು 12 ಲಕ್ಷ ಮೆಡಿಕಲ್ ಶಾಪ್‌ಗಳು ಈ ಪ್ರತಿಭಟನೆಯಲ್ಲಿ ಭಾಗಿಯಾಗಲಿವೆ ಎಂದು ಸಂಘಟನೆ ತಿಳಿಸಿದೆ.

ಆ್ಯಪ್‌ಗಳ ಮೂಲಕ ಹಾಗೂ ಆನ್‌ಲೈನ್ ಔಷಧ ಮಾರಾಟ ವೇಗವಾಗಿ ಹೆಚ್ಚುತ್ತಿರುವುದು ಸಾಂಪ್ರದಾಯಿಕ ಮೆಡಿಕಲ್ ಅಂಗಡಿಗಳಿಗೆ ದೊಡ್ಡ ಹೊಡೆತವಾಗಿದೆ ಎಂದು ವ್ಯಾಪಾರಿಗಳು ಆರೋಪಿಸಿದ್ದರು. ಪ್ರಿಸ್ಕ್ರಿಪ್ಷನ್ ಇಲ್ಲದೇ ಔಷಧಿ ಮಾರಾಟ, ನಕಲಿ ಔಷಧಿಗಳ ಭೀತಿ, ಆಂಟಿಬಯೋಟಿಕ್ ದುರುಪಯೋಗ ಹಾಗೂ ನಿಯಂತ್ರಣರಹಿತ ಇ-ಫಾರ್ಮಸಿ ವ್ಯವಸ್ಥೆಯಿಂದ ಸಾರ್ವಜನಿಕ ಆರೋಗ್ಯಕ್ಕೆ ಅಪಾಯ ಉಂಟಾಗುತ್ತಿದೆ. ಹೀಗಾಗಿ ಅಕ್ರಮ ಇ-ಫಾರ್ಮಸಿಗಳನ್ನು ಬಂದ್ ಮಾಡಬೇಕು, ಅತಿಯಾದ ಡಿಸ್ಕೌಂಟ್ ನೀತಿಗೆ ಕಡಿವಾಣ ಹಾಕಬೇಕು, ಸಣ್ಣ ಔಷಧ ವ್ಯಾಪಾರಿಗಳನ್ನು ರಕ್ಷಿಸಬೇಕು ಎಂಬ ಬೇಡಿಕೆ ಇಟ್ಟು ಬಂದ್‌ಗೆ ಕರೆ ನೀಡಿದ್ದವು.

ಚಲಿಸುತ್ತಿರುವ ಮುಂಗಾರು ಪೂರ್ವ ಮಾರುತಗಳು ಬುಧವಾರ ಮಧ್ಯಾಹ್ನದ ವೇಳೆ ವಿಧಾನಸೌಧದ ಮುಂಭಾಗದಿಂದ ಕಂಡು ಬಂದಿದ್ದು ಹೀಗೆ...

ಫೋಟೋ: ಸುಧಾಕರ್ ದೇವರಾಜ್

ಬೀದಿ ನಾಯಿಗಳ ಆಶ್ರಯತಾಣ ಕಾಮಗಾರಿಗೆ ವೇಗ

ಬೆಂಗಳೂರು: ಬೀದಿ ನಾಯಿಗಳಿಗೆ ಸುರಕ್ಷಿತ ಆಶ್ರಯ ಒದಗಿಸುವ ಉದ್ದೇಶದಿಂದ ಸುಮನಹಳ್ಳಿಯಲ್ಲಿ ನಿರ್ಮಾಣವಾಗುತ್ತಿರುವ ಬೀದಿ ನಾಯಿಗಳ ಆಶ್ರಯ ತಾಣ ಕಾಮಗಾರಿ ಶೀಘ್ರ ಪೂರ್ಣಗೊಳಿಸಲು ಬೆಂಗಳೂರು ಪಶ್ಚಿಮ ನಗರ ಪಾಲಿಕೆ ಆಯುಕ್ತ ಡಾ.ರಾಜೇಂದ್ರ ಕೆ.ವಿ. ಅಧಿಕಾರಿಗಳಿಗೆ ಸೂಚನೆ ನೀಡಿದರು.

ಬುಧವಾರ ಕಾಮಗಾರಿ ಪರಿಶೀಲನೆ ನಡೆಸಿದ ಅವರು, ಒಂದು ತಿಂಗಳೊಳಗೆ ಕನಿಷ್ಠ 100 ಶ್ವಾನಗಳಿಗೆ ಆಶ್ರಯ ಒದಗಿಸುವ ವ್ಯವಸ್ಥೆ ಮಾಡಬೇಕು. ಬಳಿಕ ಹಂತ ಹಂತವಾಗಿ ಆಶ್ರಯ ತಾಣದ ಸಾಮರ್ಥ್ಯ ವಿಸ್ತರಿಸಲು ಕ್ರಮ ಕೈಗೊಳ್ಳಬೇಕು. ಡಾಗ್ ಶೆಲ್ಟರ್ ಸಂಕೀರ್ಣದಲ್ಲೇ ಕಾರ್ಯನಿರ್ವಹಿಸುತ್ತಿರುವ ಪ್ರಾಣಿ ಸಂತಾನಹರಣ ಶಸ್ತ್ರಚಿಕಿತ್ಸೆ ಕೇಂದ್ರ ಮತ್ತು ಘನ ತ್ಯಾಜ್ಯ ನಿರ್ವಹಣೆ ಘಟಕ ಪರಿಶೀಲಿಸಿದ ಆಯುಕ್ತರು, ಘನ ತ್ಯಾಜ್ಯ ಘಟಕವನ್ನು ಪಕ್ಕದ ಸ್ಥಳಕ್ಕೆ ಸ್ಥಳಾಂತರಿಸಿ, ಆ ಜಾಗ ಎಬಿಸಿ ಕೇಂದ್ರದ ಸಾಮರ್ಥ್ಯ ಹೆಚ್ಚಿಸಲು ಬಳಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಬೀದಿ ನಾಯಿಗಳ ನಿಯಂತ್ರಣ ಮತ್ತು ಅವುಗಳ ಆರೈಕೆಗೆ ಸಮರ್ಪಕ ವ್ಯವಸ್ಥೆ ಅಗತ್ಯ. ಆಶ್ರಯ ತಾಣ ಮತ್ತು ಎಬಿಸಿ ಕೇಂದ್ರಗಳನ್ನು ಸಮರ್ಥವಾಗಿ ನಿರ್ವಹಿಸುವ ಮೂಲಕ ಸಾರ್ವಜನಿಕರಿಗೂ ಅನುಕೂಲವಾಗಲಿದೆ. ಪರಿಶೀಲನೆ ಬಳಿಕ ಆಯುಕ್ತರು ಮಾನವ ಹಾಗೂ ಪ್ರಾಣಿಗಳ ವಿದ್ಯುತ್ ಚಿತಾಗಾರ ವೀಕ್ಷಿಸಿದರು. ಪರಿಶೀಲನೆ ವೇಳೆ ಮುಖ್ಯ ಪಶು ವೈದ್ಯಾಧಿಕಾರಿ ಡಾ. ವೆಂಕಟೇಶ್ ಕೆ.ಎಂ., ಕಾರ್ಯಪಾಲಕ ಅಭಿಯಂತರರಾದ ಶಶಿಕುಮಾರ್ ಹಾಗೂ ನಾಗೇಶ್ ಉಪಸ್ಥಿತರಿದ್ದರು.

10 ದಿನಗಳಲ್ಲಿ ಕಾಮಗಾರಿ ಪೂರ್ಣಗೊಳಿಸಿ

ಬೆಂಗಳೂರು: ಪುಟ್ಟೇನಹಳ್ಳಿ ಕೆರೆ ಸಮೀಪದ ರಮಣಶ್ರೀ ಕ್ಯಾಲಿಫೋರ್ನಿಯಾ ಗಾರ್ಡನ್ಸ್ ಹಾಗೂ ಎಸ್ಟೀಮ್ ನಾರ್ತ್ ವುಡ್ ಅಪಾರ್ಟ್‌ಮೆಂಟ್ ಪ್ರದೇಶಗಳಲ್ಲಿ ಮಳೆಗಾಲದ ವೇಳೆ ಉಂಟಾಗುತ್ತಿರುವ ವಾಟರ್ ಲಾಗಿಂಗ್ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸುವ ನಿಟ್ಟಿನಲ್ಲಿ ಬಾಕಿ ಉಳಿದಿರುವ ಕೊಳಚೆ ನೀರು ತಿರುವು ಕಾಮಗಾರಿ 10 ದಿನಗಳೊಳಗೆ ಪೂರ್ಣಗೊಳಿಸುವಂತೆ ಬೆಂಗಳೂರು ಉತ್ತರ ನಗರ ಪಾಲಿಕೆ ಆಯುಕ್ತ ಪೊಮ್ಮಲ ಸುನೀಲ್ ಕುಮಾರ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಬುಧವಾರ ಸ್ಥಳ ಪರಿಶೀಲನೆ ನಡೆಸಿದ ಅವರು, ರಾಜಕಾಲುವೆಯಲ್ಲಿ ಹರಿಯುತ್ತಿದ್ದ ಕೊಳಚೆ ನೀರನ್ನು ತಿರುವು ಮಾಡುವ ಕಾಮಗಾರಿ ಈಗಾಗಲೇ ಶೇ.90ರಷ್ಟು ಪೂರ್ಣಗೊಂಡಿದ್ದು, ಉಳಿದ ಕಾಮಗಾರಿ ತ್ವರಿತವಾಗಿ ಮುಗಿಸಿ ಮಳೆಗಾಲದಲ್ಲಿ ನೀರು ನಿಲ್ಲದಂತೆ ಶಾಶ್ವತ ಕ್ರಮ ಕೈಗೊಳ್ಳಬೇಕು. ಹಿಂದೆ ಪುಟ್ಟೇನಹಳ್ಳಿ ಕೆರೆಗೆ ಸಂಪರ್ಕ ಹೊಂದಿದ್ದ ರಾಜಕಾಲುವೆಗೆ ಕೊಳಚೆ ನೀರು ಹರಿಯುತ್ತಿದ್ದ ಹಿನ್ನೆಲೆಯಲ್ಲಿ ಕಾಲುವೆ ಮುಚ್ಚಲಾಗಿತ್ತು. ಆದರೆ 2024ರ ಭಾರೀ ಮಳೆಯ ವೇಳೆ ಈ ಪ್ರದೇಶ ಸಂಪೂರ್ಣ ಜಲಾವೃತಗೊಂಡ ಬಳಿಕ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳಲು ವಿವಿಧ ಯೋಜನೆಗಳನ್ನು ಕೈಗೊಳ್ಳಲಾಗಿದೆ ಎಂದರು.

ಈ ಪ್ರದೇಶ ಅರಣ್ಯ ಇಲಾಖೆಯ ವ್ಯಾಪ್ತಿಗೆ ಸೇರಿರುವ ಕಾರಣ ವಿಷಯ ರಾಷ್ಟ್ರೀಯ ಹಸಿರು ನ್ಯಾಯಮಂಡಳಿವರೆಗೆ ತಲುಪಿದ್ದು, ತಾತ್ಕಾಲಿಕ ತಡೆ ಆದೇಶವು ಜಾರಿಯಾಗಿತ್ತು. ನಂತರ ಒಳಚರಂಡಿ ಪೈಪ್‌ಲೈನ್ ಕಾಮಗಾರಿ ಪೂರ್ಣಗೊಂಡ ಹಿನ್ನೆಲೆ ಅನುಮತಿ ದೊರೆತಿದ್ದು, ಪ್ರಸ್ತುತ ಕೊಳಚೆ ನೀರು ತಿರುವು ಕಾಮಗಾರಿ ಪ್ರಗತಿಯಲ್ಲಿದೆ ಎಂದರು. ಅರಣ್ಯ ಇಲಾಖೆ, ಜಲಮಂಡಳಿ ಅಧಿಕಾರಿಗಳು ಇದ್ದರು.

ಬೆಂಗಳೂರು ಚುನಾವಣೆ ಎದುರಿಸಲಾಗದೆ ಓಡಿ ಹೋಗುತ್ತಿರುವ ಕಾಂಗ್ರೆಸ್: ಆರ್.ಅಶೋಕ

ರೈತರ ಜಮೀನು ಕಬಳಿಕೆಗೆ ಮುಂದಾದ ಕಾಂಗ್ರೆಸ್ ಸರಕಾರ

ಬೆಂಗಳೂರು: ಸೋಲುವ ಭಯದಿಂದ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಚುನಾವಣೆಯನ್ನು ಕಾಂಗ್ರೆಸ್ ಸರಕಾರ ಪದೇ ಪದೆ ಮುಂದೂಡುತ್ತಿದ್ದು, ಇದು ಬೆಂಗಳೂರು ಜನತೆಗೆ ಮಾಡಿರುವ ದ್ರೋಹ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ ದೂರಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಹಿಂದೆ ಇದ್ದ 198 ವಾರ್ಡ್‌ಗಳ ಆಧಾರದ ಮೇಲೆ ಚುನಾವಣೆ ನಡೆಸಿದ್ದರೆ ಇಷ್ಟೊತ್ತಿಗೆ ಚುನಾವಣೆ ಮುಗಿದಿರುತ್ತಿತ್ತು. ಆದರೆ ಬೆಂಗಳೂರನ್ನು ಐದು ಭಾಗಗಳಾಗಿ ವಿಭಜಿಸಿದ ಬಳಿಕ ಕಾಂಗ್ರೆಸ್‌ನ ಆಂತರಿಕ ಸಮೀಕ್ಷೆಗಳಲ್ಲಿ ಐದು ಕಡೆಯೂ ಸೋಲು ಖಚಿತವಾಗಿದೆ ಎಂಬ ವರದಿ ಬಂದಿರುವುದರಿಂದ ಸರಕಾರ ಚುನಾವಣೆ ಉದ್ದೇಶಪೂರ್ವಕವಾಗಿ ಮುಂದೂಡುತ್ತಿದೆ. ಬೆಂಗಳೂರು ಉಸ್ತುವಾರಿ ಸಚಿವ ಡಿ.ಕೆ.ಶಿವಕುಮಾರ್‌ಗೆ ಸಿಎಂ ಅಧಿಕಾರ ಹಸ್ತಾಂತರ ಪೂರ್ಣಗೊಳ್ಳುವ ಮೊದಲು ಚುನಾವಣೆ ನಡೆಯಬಾರದು ಎಂಬ ಬಯಕೆಯಿದೆ. ಕಾಂಗ್ರೆಸ್‌ನ ಒಳಜಗಳದ ಪರಿಣಾಮವಾಗಿ ಇಂದು ಬೆಂಗಳೂರಿನ ಬೀದಿ ಬೀದಿಗಳಲ್ಲಿ ಕಸದ ರಾಶಿ ಬಿದ್ದಿದ್ದು, ಯಾವುದೇ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿಲ್ಲ. ಇದಕ್ಕೆ ನೇರ ಕಾರಣ ಕಾಂಗ್ರೆಸ್. ಕೋರ್ಟ್ ಮತ್ತೊಮ್ಮೆ ಕೊನೆಯ ಗಡುವು ನೀಡಿರುವ ಹಿನ್ನೆಲೆಯಲ್ಲಿ ಅದರೊಳಗೆ ಚುನಾವಣೆ ನಡೆಸಬೇಕು. ಬಿಜೆಪಿ ಚುನಾವಣೆಗೆ ಸಂಪೂರ್ಣ ಸಿದ್ಧವಾಗಿದೆ. ಕೂಡಲೇ ಚುನಾವಣೆ ಘೋಷಣೆ ಮಾಡಬೇಕು ಎಂದು ಆಗ್ರಹಿಸಿದರು.

ಕಾಂಗ್ರೆಸ್‌ನ ಆಂತರಿಕ ಸಮೀಕ್ಷೆಗಳಲ್ಲಿ ಸೋಲು ಖಚಿತವಾದ ಬಳಿಕ ವಿರೋಧ ಪಕ್ಷಗಳ ಮೇಲೆ ಆರೋಪ ಹೊರಿಸುವ ಕೆಲಸ ಮಾಡಲಾಗುತ್ತಿದೆ. ಕಳೆದ ಬಾರಿಯೇ ಬಿಜೆಪಿ ಚುನಾವಣಾ ಆಯೋಗಕ್ಕೆ ಅಧಿಕೃತ ಪತ್ರ ಬರೆದು ತಕ್ಷಣ ಚುನಾವಣೆ ನಡೆಸುವಂತೆ ಮನವಿ ಮಾಡಿತ್ತು. ಸಮೀಕ್ಷೆಯಲ್ಲಿ ಗೆಲ್ಲುತ್ತೇವೆ ಎನ್ನುವ ವಿಶ್ವಾಸ ಇದ್ದರೆ ಚುನಾವಣೆ ಏಕೆ ನಡೆಸುತ್ತಿಲ್ಲ? ಏನೇ ಸಮಸ್ಯೆ ಬಂದರೂ ಅದನ್ನು ವಿರೋಧ ಪಕ್ಷಗಳ ಮೇಲೆ ಹಾಕುವುದು ಕಾಂಗ್ರೆಸ್ನ ಚಾಳಿಯಾಗಿದೆ. ಈಗಲೂ ಅದೇ ರೀತಿಯಲ್ಲಿ ಚುನಾವಣೆ ಮುಂದೂಡುವ ಹೊಣೆಗಾರಿಕೆ ವಿರೋಧ ಪಕ್ಷಗಳ ಮೇಲೆ ಹಾಕಲು ಯತ್ನಿಸುತ್ತಿದ್ದಾರೆ ಎಂದು ಆರೋಪಿಸಿದರು.

ಎಸ್‌ಐಆರ್, ಸರ್ವೇ ಎಲ್ಲ ನೆಪ: ಎಸ್‌ಐಆರ್ ಹಾಗೂ ಸರ್ವೇ ನೆಪ ಹೇಳಿ ಚುನಾವಣೆ ಮುಂದೂಡುವುದು ಕೇವಲ ರಾಜಕೀಯ ತಂತ್ರ. ಚುನಾವಣೆ ನಡೆಸುವ ಮನಸ್ಸಿದ್ದರೆ ಯಾವುದೂ ದೊಡ್ಡ ಸಮಸ್ಯೆಯಲ್ಲ. ಮೊದಲೇ ನಿಗದಿಪಡಿಸಿದ ವೇಳಾಪಟ್ಟಿಯಂತೆ ಚುನಾವಣೆ ನಡೆಸಿದ್ದರೆ ಇಂತಹ ಪರಿಸ್ಥಿತಿ ಬರುತ್ತಿರಲಿಲ್ಲ. ಹಾಲಿನ ದರ ಏರಿಕೆ, ಆಲ್ಕೋಹಾಲ್ ತೆರಿಗೆ ಹೆಚ್ಚಳ, ವಿದ್ಯುತ್ ದರ ಏರಿಕೆ, ಮನೆ ತೆರಿಗೆ ಹೆಚ್ಚಳ, ಹೊಸ ಖಾತಾ ವ್ಯವಸ್ಥೆ ಸೇರಿದಂತೆ ಜನರ ಮೇಲೆ ನಿರಂತರ ಹೊರೆ ಹಾಕಿರುವುದರಿಂದ ಬೆಂಗಳೂರು ಜನರು ಕಾಂಗ್ರೆಸ್ ವಿರುದ್ಧ ತಿರುಗಿಬಿದ್ದಿದ್ದಾರೆ. ಇದೇ ಕಾರಣಕ್ಕೆ ಚುನಾವಣೆಯನ್ನು ಮುಂದೂಡಲಾಗುತ್ತಿದೆ ಎಂದು ಟೀಕಿಸಿದರು.



> ಬೆಂಗಳೂರು ಕಾರ್ಪೊರೇಷನ್ ಹಣ ತುಮಕೂರು ಅಥವಾ ರಾಮನಗರ ಜಿಲ್ಲೆಗಳ ಅಭಿವೃದ್ಧಿಗೆ ಬಳಸಲು ಸಾಧ್ಯವಿಲ್ಲ. ಹೀಗೆ ಬೆಂಗಳೂರಿನ ಹೆಸರನ್ನು ದುರುಪಯೋಗ ಮಾಡಿದರೆ ಬೆಂಗಳೂರು ಜನರೇ ಕಾಂಗ್ರೆಸ್‌ಗೆ ಶಾಪ ಹಾಕುತ್ತಾರೆ. ಅದೇ ಶಾಪದಿಂದ ಮುಂದಿನ ಜಿಬಿಎ ಚುನಾಣೆಯಲ್ಲಿ ಕಾಂಗ್ರೆಸ್ ಸೋಲಲಿದೆ.
>
> - ಆರ್.ಅಶೋಕ, ಪ್ರತಿಪಕ್ಷ ನಾಯಕ

ಬಿಡದಿಯ ರೈತರಿಗೆ ದ್ರೋಹ

ಬಿಡದಿಯಲ್ಲಿ ಭೂಸ್ವಾಧೀನ ಮಾಡಲು ಸರಕಾರ ಮುಂದಾಗಿರುವುದು ರೈತರಿಗೆ ಮಾಡುತ್ತಿರುವ ದ್ರೋಹ. ಅಲ್ಲಿ ತೆಂಗು, ಮಾವು, ರೇಷ್ಮೆ ಹಾಗೂ ಹಾಲು ಉತ್ಪಾದನೆ ಸಮೃದ್ಧವಾಗಿರುವ ಫಲವತ್ತಾದ ಕೃಷಿ ಭೂಮಿಯಿದೆ. ಅಂತಹ ಪ್ರದೇಶ ಒತ್ತುವರಿ ಮಾಡಿ ರೈತರನ್ನು ಬೀದಿಗೆ ತರುವ ಕೆಲಸ ನಡೆಯುತ್ತಿದೆ. ಸರಕಾರ ಆಯೋಜಿಸಿದ್ದ ಸಭೆಗಳಲ್ಲಿ ನಕಲಿ ರೈತರನ್ನು ಕರೆತಂದು ರೈತರ ಪರ ಎಂದು ತೋರಿಸಲಾಗುತ್ತಿದೆ. ಆದರೆ ನಿಜವಾದ ರೈತರು ಜಮೀನು ಕೊಡುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಬಿಜೆಪಿ ಆರಂಭದಿಂದಲೂ ಬಿಡದಿ ರೈತರ ಹೋರಾಟಕ್ಕೆ ಬೆಂಬಲ ನೀಡಿದ್ದು, ಮುಂದೆಯೂ ರೈತರ ಪರವಾಗಿ ನಿಲ್ಲಲಿದೆ. ಬೆಂಗಳೂರು ಸುತ್ತಮುತ್ತ ಈಗಾಗಲೇ ಸಾಕಷ್ಟು ಜಾಗ ಖಾಲಿಯಿದೆ. ಕೆಂಪೇಗೌಡ ಲೇಔಟ್, ಶಿವರಾಮ ಕಾರಂತ ಲೇಔಟ್ ಸೇರಿದಂತೆ ಲಕ್ಷಾಂತರ ಫ್ಲಾಟ್‌ಗು ಖಾಲಿ ಇರುವಾಗ ಹೊಸ ಲೇಔಟ್‌ಗಳ ಅವಶ್ಯಕತೆ ಏನು? ಬಿಡದಿಯಲ್ಲಿ ಸುಮಾರು 3,000 ಎಕರೆ ಸರಕಾರಿ ಜಾಗವಿದ್ದು, ಅದನ್ನು ಬಳಸದೆ ರೈತರ ಭೂಮಿಯತ್ತ ಸರಕಾರ ಕಣ್ಣು ಹಾಕಿದೆ. ಆರ್ಥಿಕವಾಗಿ ದಿವಾಳಿಯಾಗಿರುವುದರಿಂದ ಹೊಸ ಟೆಂಡರ್‌ಗಳ ಮೂಲಕ ಸಾವಿರಾರು ಕೋಟಿ ರು. ಹಣ ತಂದು ಅದರಲ್ಲಿ ಕಮಿಷನ್ ಪಡೆಯುವ ಉದ್ದೇಶ ದಿಂದಲೇ ಈ ಭೂ ಸ್ವಾಧೀನ ನಡೆಯುತ್ತಿದೆ. ಇದು ರೈತರ ಸಮಾಧಿಯ ಮೇಲೆ ಮಾಡುವ ಅಭಿವೃದ್ಧಿಯಾಗಿದೆ ಎಂದರು.

ಎಚ್‌ಸಿಜಿ ಕ್ಯಾನ್ಸರ್ ಆಸ್ಪತ್ರೆಗೆ ನಟ ಸುದೀಪ್ ಚಾಲನೆ

ಬೆಂಗಳೂರು: ಹೆಬ್ಬಾಳದಲ್ಲಿ ಸ್ಥಾಪಿಸಲಾಗಿರುವ ಕ್ಯಾನ್ಸರ್ ಚಿಕಿತ್ಸೆಗಾಗಿಯೇ ಮೀಸಲಾದ ಭಾರತದ ಅತಿದೊಡ್ಡ ಆಸ್ಪತ್ರೆಗಳ ಸಮೂಹವಾಗಿರುವ, ಹೆಲ್ತ್‌ಕೇರ್ ಗ್ಲೋಬಲ್ ಎಂಟರ್‌ಪ್ರೈಸಸ್.ಲಿ., ಬ್ಯಾಟರಾಯನಪುರದಲ್ಲಿ ತನ್ನ ನೂತನ ಸಮಗ್ರ ಕ್ಯಾನ್ಸರ್ ಆಸ್ಪತ್ರೆಯನ್ನು ನಟ ಸುದೀಪ್ ಉದ್ಘಾಟಿಸಿದರು.

ಈ ವೇಳೆ ನಟ ಸುದೀಪ್ ಮಾತನಾಡಿ, ಕ್ಯಾನ್ಸರ್ ಎಂಬುದು ಕೇವಲ ರೋಗಿಯನ್ನಷ್ಟೇ ಅಲ್ಲ, ಇಡೀ ಕುಟುಂಬವನ್ನೇ ತಲ್ಲಣಗೊಳಿಸುವ ಒಂದು ಕಠಿಣ ಪ್ರಯಾಣವಾಗಿದೆ. ಈ ನಿಟ್ಟಿನಲ್ಲಿ ಸಕಾಲಿಕ ರೋಗನಿರ್ಣಯ, ವ್ಯಾಪಕ ಜಾಗೃತಿ ಮತ್ತು ಸರಿಯಾದ ಸಮಯದಲ್ಲಿ ಸೂಕ್ತ ಚಿಕಿತ್ಸೆ ಲಭ್ಯವಾಗುವುದು ರೋಗಿಯ ಜೀವನದಲ್ಲಿ ನಿಜವಾದ ಬದಲಾವಣೆ ತರಬಲ್ಲದು. ಎಚ್‌ಸಿಜಿಯ ಈ ಹೆಬ್ಬಾಳದ ಹೊಸ ಆಸ್ಪತ್ರೆಯು ಅತ್ಯಾಧುನಿಕ ತಂತ್ರಜ್ಞಾನ ಮತ್ತು ಪರಿಣಿತ ವೈದ್ಯಕೀಯ ಆರೈಕೆಯನ್ನು ಜನರಿಗೆ ತಲುಪಿಸುವ ಮೂಲಕ ಈ ದಿಸೆಯಲ್ಲಿ ಒಂದು ಶಕ್ತಿಶಾಲಿ ಹೆಜ್ಜೆಯನ್ನಿಟ್ಟಿದೆ. ಬೆಂಗಳೂರು ಮತ್ತು ಕರ್ನಾಟಕದಾದ್ಯಂತ ಇರುವ ಕುಟುಂಬಗಳಿಗೆ ಇಂತಹ ವಿಶ್ವದರ್ಜೆಯ ಕ್ಯಾನ್ಸರ್ ಚಿಕಿತ್ಸೆ ಅತ್ಯಂತ ಸುಲಭವಾಗಿ ಸಿಗುತ್ತಿರುವುದು ನಿಜಕ್ಕೂ ಹೆಮ್ಮೆಯ ಹಾಗೂ ಸಂತೋಷದ ಸಂಗತಿಯಾಗಿದೆ ಎಂದರು.

ಈ ವೇಳೆ ಹೆಲ್ತ್‌ಕೇರ್ ಗ್ಲೋಬಲ್ ಎಂಟರ್‌ಪ್ರೈಸಸ್ ಲಿಮಿಟೆಡ್ ಸಂಸ್ಥಾಪಕ ಡಾ.ಬಿ.ಎಸ್.ಅಜಯಕುಮಾರ್, ಇಂದಿನ ದಿನಗಳಲ್ಲಿ ಕ್ಯಾನ್ಸರ್ ಚಿಕಿತ್ಸೆಯು ದತ್ತಾಂಶ ಆಧಾರಿತ ಹಾಗೂ ತಂತ್ರಜ್ಞಾನದ ಪ್ರಗತಿಯ ಕಡೆಗೆ ಮುಖ ಮಾಡಿದ್ದು, ದೀರ್ಘಕಾಲೀನ ಚಿಕಿತ್ಸಾ ಫಲಿತಾಂಶ ಸುಧಾರಿಸುವತ್ತ ಗಮನ ಹರಿಸಿದೆ. ನಮ್ಮ ಗುರಿ ಕೇವಲ ಕ್ಯಾನ್ಸರ್ ಮರುಕಳಿಸದಂತೆ ತಡೆಯುವುದು ಮಾತ್ರವಲ್ಲ, ವೈಯಕ್ತಿಕರಿಸಿದ ಹಾಗೂ ಬಹುಶಿಸ್ತೀಯ ಆರೈಕೆಯ ಮೂಲಕ ಅತ್ಯಂತ ಮುಂದುವರಿದ ಮತ್ತು ಮೆಟಾಸ್ಟಾಟಿಕ್ ಕ್ಯಾನ್ಸರ್‌ಗಳನ್ನು ಸಹ ಗುಣಪಡಿಸಬಹುದಾದ ಮಟ್ಟಿಗೆ ಯಶಸ್ವಿಯಾಗಿ ನಿರ್ವಹಿಸುವುದು ಎಂದರು.

ಸಮಾಚಾರ ಸಣ್ಣದಲ್ಲ

ಕಿರುತೆರೆ ಸಹ ನಿರ್ದೇಶಕ ಹೃದಯಾಘಾತಕ್ಕೆ ಬಲಿ



ಶಿವಮೊಗ್ಗ: ಕಿರುತೆರೆ ಸಹ ನಿರ್ದೇಶಕರಾಗಿದ್ದ ನಂದೀಶ್ ಜಿ.ಟಿ (37) ಅವರು ಬುಧವಾರ ಹೃದಯಾಘಾತದಿಂದ ವಿಧಿವಶರಾಗಿದ್ದಾರೆ. ತೀರ್ಥಹಳ್ಳಿ ತಾಲೂಕಿನ ಮಾಳೂರಿನಲ್ಲಿರುವ ತಮ್ಮ ನಿವಾಸದಲ್ಲಿದ್ದ ವೇಳೆಯೇ ನಂದೀಶ್ ಅವರಿಗೆ ತೀವ್ರ ಹೃದಯಾಘಾತ ಸಂಭವಿಸಿದ್ದು, ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ. ಚಿತ್ರಕಥೆ, ಸಂಭಾಷಣೆಯಲ್ಲಿ ಗುರುತಿಸಿಕೊಂಡಿದ್ದ ನಂದೀಶ್ ಅವರು ಕನ್ನಡ ಸಿನಿಮಾ ಹಾಗೂ ಧಾರಾವಾಹಿ ಲೋಕದಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದರು. ಹಲವಾರು ಕನ್ನಡ ಸಿನಿಮಾಗಳಿಗೆ ಹಾಗೂ ಜನಪ್ರಿಯ ಧಾರಾವಾಹಿಗಳಿಗೆ ಕಥೆ, ಚಿತ್ರಕಥೆ ಮತ್ತು ಚುರುಕಾದ ಸಂಭಾಷಣೆ ಬರೆಯುವ ಮೂಲಕ ಚಿತ್ರರಂಗದಲ್ಲಿ ಭರವಸೆಯ ಬರಹಗಾರನಾಗಿ ಗುರುತಿಸಿಕೊಂಡಿದ್ದರು.

ವಿಶ್ವವಾಣಿ ಕ್ಲಬ್ ಹೌಸ್
21.05.2026
ಸಂಜೆ: 06.55 ರಿಂದ 08.05 ರವರೆಗೆ
ಗುರುವಾರದ ಅತಿಥಿ

ಶ್ರೀ ಸತ್ಯೇಶ್ ಬೆಳ್ಳೂರು / ಶ್ರೀಮತಿ ಪಲ್ಲವಿ ಭಟ್
ವಿಷಯ
ಹದಿಬದೆಯ ಧರ್ಮ (ಭಾಗ 9)
vishwavani.news

ಸಾಲದ ಹಣ ಕೇಳಲು ಹೋದ ವ್ಯಕ್ತಿಯ ಮೇಲೆ ಹಲ್ಲೆ ಮಾಡಿದ ಆರೋಪ

ಎಂಎಲ್ಸಿ ವಿಶ್ವನಾಥ್ ವಿರುದ್ಧ ಪ್ರಕರಣ

ಮೈಸೂರು: ಸಾಲದ ಹಣ ವಾಪಸ್ ಕೇಳಲು ಹೋದ ವ್ಯಕ್ತಿ ಮೇಲೆ ಎಂಎಲ್‌ಸಿ ಎಚ್.ವಿಶ್ವನಾಥ್ ಹಲ್ಲೆ ಮಾಡಿದರು ಎಂಬ ಆರೋಪದ ಹಿನ್ನೆಲೆ ಮೈಸೂರಿನ ದೇವರಾಜ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನ್ಯಾಯಾಲಯದ ಆದೇಶದ ಮೇರೆಗೆ ಪ್ರಕರಣ ದಾಖಲಿಸಲಾಗಿದ್ದು, ಜಲದ ರ್ಶಿನಿ ಅತಿಥಿಗೃಹದಲ್ಲಿ ವಿಶ್ವನಾಥ್ ಅವರ ಬಳಿ ಸಾಲದ ಹಣ ಮರುಪಾವತಿ ಮಾಡು ವಂತೆ ಕೇಳಲು ಹೋದ ವೇಳೆ ಅವಾಚ್ಯ ಶಬ್ದಗಳಿಂದ ನಿಂದಿಸಿ ಹಲ್ಲೆ ನಡೆಸಿದ್ದಾ ರೆಂದು ಕಾಂಗ್ರೆಸ್ ಮುಖಂಡ ಕೋಟೆ ಹುಂಡಿ ಮಹದೇವು ಆರೋಪಿಸಿ ನ್ಯಾಯಾಲಯದ ಆದೇಶದಂತೆ ಪ್ರಕರಣ ದಾಖಲಿಸಿದ್ದಾರೆ.

2013ರಲ್ಲಿ ವಿಶ್ವನಾಥ್ ಅವರು ಎಂಪಿ ಆಗಿದ್ದಾಗ ಕೋಟೆಹುಂಡಿ ಮಹದೇವು ಅವರು ಎಂಟಿಬಿ ನಾಗರಾಜ್ ಮುಖಾಂತರ ವಿಶ್ವನಾಥ್ ಹಾಗೂ ಮಗ ಅಮಿತ್ ದೇವರಹಟ್ಟಿ ರವರಿಗೆ 55 ಲಕ್ಷ ರು.ನೀಡಿದ್ದಾರೆ. ಹಣ ಹಿಂದಿರುಗಿಸುವುದಾಗಿ ಸಾಲ ಪಡೆದ ವಿಶ್ವನಾಥ್ ಸತಾಯಿಸಿದ್ದಾರೆ. ಈ ಬಗ್ಗೆ ಫೆಬ್ರವರಿ 2026ರಲ್ಲಿ ವಿಶ್ವನಾಥ್ ರವರು ಜಲದರ್ಶಿನಿಯಲ್ಲಿ ಇರುವಾಗ ಕೋಟೆಹುಂಡಿ ಮಹದೇವು ಹಣ ಕೇಳಲು ಹೋದಾಗ ಅವಾಚ್ಯ ಪದಗಳಿಂ ದ ನಿಂದಿಸಿ ಕೈಯಲ್ಲಿ ತಲೆಗೆ ಹೊಡೆದಿ ದ್ದಾರೆ. ಈ ಬಗ್ಗೆ ಕೋಟೆಹುಂಡಿ ಮಹ ದೇವು ಅವರು ದೇವರಾಜ ಪೊಲೀಸ್ ಠಾಣೆಯಲ್ಲಿ ಎನ್‌ಸಿಆರ್ ದಾಖಲಿಸಿದ್ದು, ನಂತರ ನ್ಯಾಯಾಲಯದ ಮೊರೆಹೋಗಿ ಪ್ರಕರಣ ದಾಖಲಿಸುವಂತೆ ಆದೇಶ ತಂದಿದ್ದಾರೆ. ವಿಶ್ವನಾಥ್ ವಿರುದ್ಧ ಕಾನೂ ನು ಕ್ರಮ ಕೈಗೊಳ್ಳುವಂತೆ ಕೋರಿದ್ದಾರೆ.



ಎಚ್.ವಿಶ್ವನಾಥ್ ಹೇಳಿದ್ದೇನು?

ನಾನ್ಯಾಕೆ ಕೋಟೆ ಹುಂಡಿ ಮಹದೇವು ಬಳಿ ಹಣ ಸಾಲ ಪಡೆಯುತ್ತೇನೆ. ನಾನು ಯಾರ ಬಳಿಯೂ ಸಾಲ ಮಾಡಿಲ್ಲ. ನನ್ನ ವಿರುದ್ಧ ಸುಳ್ಳು ಆರೋಪ ಮಾಡಲಾಗಿದೆ. ನಾನು ರಾಜ್ಯ ಸರಕಾರದ ವಿರುದ್ಧ, ಸಿಎಂ ಸಿದ್ದರಾಮಯ್ಯ ವಿರುದ್ಧ ಟೀಕೆಗಳನ್ನು ಮಾಡುತ್ತಾ ಬಂದಿದ್ದೇನೆ. ಇದನ್ನು ಸಹಿಸಲಾರದೇ ಸಿದ್ದರಾಮಯ್ಯನ ಶಿಷ್ಯ ಕೋಟೆಹುಂಡಿ ಮಹದೇವು ಮೂಲಕ ನನ್ನ ವಿರುದ್ಧ ದೂರು ಕೊಡಿಸಿದ್ದಾರೆ. ಈ ಮುಖಾಂತರ ನನ್ನ ಧ್ವನಿ ಅಡಗಿಸಬಹುದು ಎಂದುಕೊಂಡಿದ್ದಾರೆ. ಆದರೆ ನಾನು ಯಾವುದೇ ತಪ್ಪು ಮಾಡಿಲ್ಲ, ನನ್ನ ಧ್ವನಿಯನ್ನು ಅಡಗಿಸಲು ಯಾರಿಂದಲೂ ಸಾಧ್ಯವಿಲ್ಲ. ರಾಜಕೀಯ ದುರುದ್ದೇ ಶದಿಂದ ನನ್ನ ವಿರುದ್ಧ ದೂರು ನೀಡಲಾ ಗಿದೆ. ಇದನ್ನು ನಾನು ಕಾನೂನಾತ್ಮಕವಾಗಿ ಎದುರಿಸುತ್ತೇನೆ ಎಂದು ಎಂಎಲ್‌ಸಿ ಎಚ್.ವಿಶ್ವನಾಥ್ ತಿಳಿಸಿದ್ದಾರೆ.

ದೂರುದಾರ ಹೇಳಿದ್ದೇನು?

ಒಂದು ಕಾಲದಲ್ಲಿ ಎಚ್ ವಿಶ್ವನಾಥ್ ಚುನಾವಣೆಗೆ ನಿಂತಾಗ ಡೆಪಾಸಿಟ್ ಕಟ್ಟಲು ಹಣ ಇರಲಿಲ್ಲ. ಅಂತಹ ಕಷ್ಟದ ಸಂದರ್ಭದಲ್ಲಿ ನಾನು ಡೆಪಾಸಿಟ್ ಕಟ್ಟಲು 50 ಸಾವಿರ ಹಣ ಕೊಟ್ಟಿದ್ದೆ. ಅವರು ಎಂಎಲ್‌ಎ, ಎಂಪಿ, ಎಂಎಲ್ಸಿ, ಮಂತ್ರಿ ಎಲ್ಲ ಆದರು. ಹಲವಾರು ಪಾರ್ಟಿಗಳಿಗೆ ಹೋದರು. ನಾನು ಕಾಂಗ್ರೆಸ್‌ನ ನಿಷ್ಠಾವಂತ ಕಾರ್ಯಕರ್ತನಾಗಿಯೇ ಇದ್ದೇನೆ. ನನಗೆ ಎಂಎಲ್‌ಸಿ ಎಚ್ ವಿಶ್ವನಾಥ್ ಅನ್ಯಾಯ ಮಾಡಿದ್ದಾರೆ. ನನ್ನ ಒಂದೂವರೆ ಎಕರೆ ಜಮೀನನ್ನು ಆಧಾರವಾಗಿಟ್ಟು ಕಡಿಮೆ ಬಡ್ಡಿಗೆ ಎಂಟಿಬಿ ನಾಗರಾಜು ಅವರಿಂದ ಎಚ್. ವಿಶ್ವನಾಥ್ ಅವರಿಗೆ 55 ಲಕ್ಷ ಹಣ ಕೊಡಿಸಿದ್ದೇನೆ. ಒಮ್ಮೆ 35 ಲಕ್ಷ, ಮತ್ತೊಮ್ಮೆ 20 ಲಕ್ಷ ಹಣವ ನ್ನು ವಿಶ್ವನಾಥ್ ಅವರು ಪಡೆದಿದ್ದಾರೆ. ಇದಕ್ಕೆ ಅವರ ಮಗನೇ ಸಾಕ್ಷಿಯಾಗಿದ್ದಾನೆ. ಆ ಬಳಿಕ ವಿಶ್ವನಾಥ್ ಬಡ್ಡಿ ಕಟ್ಟದ ಕಾರಣ ಸಾಲದ ಹಣ 1.49 ಕೋಟಿಗೆ ಹೆಚ್ಚಳವಾಗಿದೆ. ವಿಶ್ವನಾಥ್ ಚಾಮುಂಡೇ ಶ್ವರಿ ತಾಯಿ ಸನ್ನಿಧಿಯಲ್ಲಿ ಆಣೆ ಮಾಡಲಿ ಎಂದು ದೂರುದಾರ ಕೋಟೆಹುಂಡಿ ಮಹದೇವ್ ಹೇಳಿದ್ದಾರೆ.

ದುರಹಂಕಾರ ಬಿಟ್ಟು ಅಧಿಕಾರ ಮಾಡಲಿ ಡಿ.ಕೆ.ಶಿವಕುಮಾರ್‌ಗೆ ನಿಖಿಲ್ ತಿರುಗೇಟು

ಹಾಸನ : 'ದುಡ್ಡಿನ ಮದ ತಲೆಗೆ ಏರಿ ಜಾಸ್ತಿ ಮಾತನಾಡದೇ ತಲೆ ತಗ್ಗಿಸಿ ಜನರಿಗೆ ಗೌರವದಿಂದ ದುಡಿಯೋ ಕೆಲಸ ಮಾಡಲಿ' ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅವರಿಗೆ ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ತಿರು ಗೇಟು ನೀಡಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ತುಮಕೂರು ಸಮಾವೇಶದಲ್ಲಿ ಜೆಡಿಎಸ್ ಕೇವಲ 17 ಸ್ಥಾನ ಪಡೆದು ಕಡಿಮೆ ಸಂಖ್ಯೆಗೆ ಇಳಿದಿದೆ ಎಂದು ಡಿಸಿಎಂ ಮಾತನಾಡಿದ್ದಾರೆ. ಅವರು ನಮ್ಮ ಬಗ್ಗೆ ಚಿಂತೆ ಮಾಡುವುದು ಬೇಡ' ಎಂದು ಟಾಂಗ್ ನೀಡಿದರು.

ನಿಖಿಲ್ ಕುಮಾರಸ್ವಾಮಿ ಸ್ಟೇಟಸ್ ಬಗ್ಗೆ ಪ್ರಶ್ನೆ ಮಾಡಿದ್ದಾರೆ. ಅವರು ಒಂದು ಅರಿಯಲಿ, ಡಿಸಿಎಂ ಆಗಿರುವ ಸ್ಟೇಟಸ್ ನಾಡಿನ ಜನರ ಭಿಕ್ಷೆ. ಅದನ್ನು ಕಣ್ಣಿಗೆ ಒತ್ತಿಕೊಂಡು ದುರಹಂಕಾರ ಪಡೆಯದೇ ಅಧಿಕಾರ ಮಾಡಲಿ. ನಿಖಿಲ್ ಕುಮಾರಸ್ವಾಮಿ ಏನು ಎಂದು ಜನ ತೋರಿಸಿಕೊಡುತ್ತಾರೆ.

ಈ ಬಗ್ಗೆ ಮಿಸ್ಟರ್ ಶಿವಕುಮಾರ್ ಅವರು ತಲೆ ಕೆಡಿಸಿಕೊಳ್ಳೋದು ಬೇಡ. ಇಷ್ಟು ಲಘುವಾಗಿ ಮಾತನಾಡುವುದು ಬೇಡ' ಎಂದು ಕುಟುಕಿದ ನಿಖಿಲ್' ಮಾತೆತ್ತಿದರೆ ಅವರ ಸಹೋದರ, ಕೂಲಿ ಸಿಕ್ಕಿಲ್ಲ, ಕೂಲಿ ಸಿಕ್ಕಿಲ್ಲ ಅಂತ ಬೀದಿಯಲ್ಲಿ ಬಾಯಿ ಬಡಿದುಕೊಂಡು ಓಡಾಡುತ್ತಿದ್ದಾರೆ' ಎಂದು ಟೀಕಿಸಿದರು. 'ಸಿಎಂ, ಡಿಸಿಎಂ ಕುರ್ಚಿ ಕಿತ್ತಾಟ, ಬಡಿದಾಟ, ರಂಪಾಟ ಆಗಿ ಜನರು ನಗುವ ಪರಿಸ್ಥಿತಿ ಬಂದಿದೆ. ಡಿಕೆಶಿ ಅವರ ಸಹೋದರ ದುಡಿದಿದ್ದೀನಿ, ದುಡಿದಿದ್ದೀನಿ ಅಂತಾರಲ್ಲ, ದೆಹಲಿಗೆ ಹೋಗಿ ಕೂಲಿ ತಗೊಂಡು ಬರಲಿ. ಅವರು ಹತಾಷರಾಗಿ ಹೀಗೆ ಮಾತನಾಡುತ್ತಾ ಇದಾರೆ, ನಿಖಿಲ್ ಬಗ್ಗೆ ಚರ್ಚೆ ಬೇಡ, 2028ಕ್ಕೆ ಇದೇ ಡಿ.ಕೆ ಶಿವಕುಮಾರ್ ಮಾಜಿ ಆಗುತ್ತಾರೆ. ಯಾರಿಗೂ ಅಧಿಕಾರ ಶಾಶ್ವತ ಅಲ್ಲ. ಮಾತನಾಡುವ ಮುನ್ನ ಎಚ್ಚರಿಕೆ ಇರಲಿ ಎಂದು ಎಚ್ಚರಿಸಿದರು.

ರೈತರಲ್ಲ, ದಂಧೆಕೋರರು

ಬಿಡದಿ ಅಭಿವೃದ್ಧಿ ಪ್ರಾಜೆಕ್ಟ್ ವಿಚಾರವಾಗಿ ಕೇಳಿದ ಪ್ರಶ್ನೆಗೆ ಉತ್ತರಿಸಿದ ನಿಖಿಲ್ ಕುಮಾರಸ್ವಾಮಿ ಡಿಸಿಎಂ ಡಿಕೆಶಿ ವಿರುದ್ಧ ವಾಗ್ದಾಳಿ ನಡೆಸಿದರು. ಬಿಡದಿ ಬಳಿ ಜಿಬಿಐಟಿ ಪ್ರಾಜೆಕ್ಟ್ ಮಾಡಲು ಹೊರಟಿದ್ದಾರೆ. ಕುಮಾರಣ್ಣ, ದೇವೇಗೌಡರು ಸುದ್ದಿಗೋಷ್ಠಿ ಮಾಡಿದ ಮೇಲೆ ಒಳಗೆ ತಳಮಳ ಶುರುವಾಗಿದೆ. ಹಾಗಾಗಿ ಇವತ್ತು ರೈತ ಮುಖಂಡರು ಅಂತಾ ಕೆಲವರನ್ನು ಕರೆಸಿದ್ದಾರೆ. ಅವರು ರೈತರಾ? ಅವರು ರೈತರಲ್ಲ, ರಿಯಲ್ ಎಸ್ಟೇಟ್ ದಂಧೆಕೋರರು, ದಲ್ಲಾಳಿಗಳು ಎಂದು ದೂರಿದರು.

ಉಸಿರಾಟದ ಸಮಸ್ಯೆ: ಸಾಯಿ ಆಸ್ಪತ್ರೆಯಿಂದ ಉಚಿತ ಶಸ್ತ್ರಚಿಕಿತ್ಸೆ

ಚಿಕ್ಕಬಳ್ಳಾಪುರ: ಜನ್ಮಜಾತ ಹೃದಯ ಕಾಯಿಲೆಗೆ ಶಸ್ತ್ರ ಚಿಕಿತ್ಸೆ ಪಡೆದ ಬಳಿಕ ಗಂಭೀರ ಉಸಿರಾಟ ಸಮಸ್ಯೆಯಿಂದ ಜೀವನ್ಮರಣ ಹೋರಾಟ ನಡೆಸುತ್ತಿದ್ದ ಮೂರುವರೆ ವರ್ಷದ ಬಾಲಕಿಗೆ ಮುದ್ದೇನಹಳ್ಳಿಯ ಶ್ರೀ ಮಧುಸೂದನ ಸಾಯಿ ಆಸ್ಪತ್ರೆಯ ವೈದ್ಯರು ಹೊಸ ಬದುಕು ನೀಡಿದ್ದಾರೆ.

ಸುಮಾರು 30 ಲಕ್ಷ ರು. ಮೌಲ್ಯದ ಶಸ್ತ್ರಚಿಕಿತ್ಸೆಯನ್ನು ಸಂಪೂರ್ಣವಾಗಿ ಉಚಿತವಾಗಿ ನೆರವೇರಿಸಿದ್ದು, ಬಾಲಕಿ ಆರೋಗ್ಯದಲ್ಲಿ ಚೇತರಿಕೆ ಕಾಣುತ್ತಿದೆ. ಛತ್ತೀಸ್‌ಗಢ ಮೂಲದ ಬಾಲಕಿ ಶಿವಾಂಗಿ ಶರ್ಮಾ 2025ರಲ್ಲಿ ಹೃದಯ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದಳು. ಶಸ್ತ್ರ ಚಿಕಿತ್ಸೆ ನಂತರ ಉಂಟಾದ ತೊಂದರೆಗಳಿಂದಾಗಿ ಆಕೆಗೆ ದೀರ್ಘಕಾಲ ಉಸಿರಾಟದ ಟ್ಯೂಬ್ ಅಳವಡಿಸಬೇಕಾಯಿತು. ಇದರ ಪರಿಣಾಮವಾಗಿ ಸಬ್‌ಗ್ಲೋಟಿಕ್ ಸ್ಟೆನೋಸಿಸ್ (ಉಸಿರಾಟದ ನಾಳ ಕಿರಿದಾಗಿ ಬಹುತೇಕ ಮುಚ್ಚಿ ಹೋಗುವ ಸ್ಥಿತಿ) ಎಂಬ ಗಂಭೀರ ಸಮಸ್ಯೆ ಕಾಣಿಸಿಕೊಂಡು, ಉಸಿರಾಟದ ನಾಳ ಕಿರಿದಾಗಿ ಸಂಪೂರ್ಣ ಮುಚ್ಚಿಕೊಂಡಿತ್ತು. ಪರಿಣಾಮ, ಬಾಲಕಿಗೆ ಸಹಜವಾಗಿ ಉಸಿರಾಡುವುದೇ ಕಷ್ಟಕರವಾಗಿತ್ತು. ಉಸಿರಾಟದ ನಾಳವನ್ನು ಅತ್ಯಾಧುನಿಕ ತಂತ್ರಜ್ಞಾನ ಬಳಸಿ ಯಶಸ್ವಿಯಾಗಿ ಮರುನಿರ್ಮಿಸಿ, ಅಪರೂಪದ ಶಸ್ತ್ರ ಚಿಕಿತ್ಸೆ ಉಚಿತವಾಗಿ ನಡೆಸಿದ್ದಾರೆ. ಇದನ್ನು ವೈದ್ಯಕೀಯ ಕ್ಷೇತ್ರದಲ್ಲಿ ಮಹತ್ವದ ಸಾಧನೆ ಎಂದು ಪರಿಗಣಿಸಲಾಗಿದೆ.

ಚಿಕಿತ್ಸೆಗಾಗಿ ಛತ್ತೀಸ್‌ಗಢದ ಏಮ್ಸ್ ಸೇರಿದಂತೆ ಹಲವು ಆಸ್ಪತ್ರೆಗಳನ್ನು ಸಂಪರ್ಕಿಸಿದರೂ, ಪ್ರಕರಣದ ಜಟಿಲತೆ ಹಿನ್ನೆಲೆಯಲ್ಲಿ, ಶಸ್ತ್ರ ಚಿಕಿತ್ಸೆಗೆ ವೈದ್ಯರು ಹಿಂದೇಟು ಹಾಕಿದ್ದರು. ಅಲ್ಲದೇ ಆರ್ಥಿಕವಾಗಿ ದುರ್ಬಲ ಕುಟುಂಬವಾಗಿದ್ದರಿಂದ ದುಬಾರಿ ಚಿಕಿತ್ಸೆ ಭರಿಸುವುದೂ ಅವರಿಗೆ ಸಾಧ್ಯವಾಗಿರಲಿಲ್ಲ. ಕೊನೆಯ ಪ್ರಯತ್ನವಾಗಿ ಬಾಲಕಿಯನ್ನು ಮುದ್ದೇನಹಳ್ಳಿಯ ಶ್ರೀ ಮಧುಸೂದನ ಸಾಯಿ ವೈದ್ಯಕೀಯ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಗೆ ದಾಖಲಿಸಲಾಗಿತ್ತು.

ಕಾಂಗ್ರೆಸ್‌ಗೆ ಸೋಲಿನ ಭಯ: ಛಲವಾದಿ

ಬೆಂಗಳೂರು: ಗ್ರೇಟರ್ ಬೆಂಗಳೂರು (ಜಿಬಿಎ) ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಗೆಲ್ಲುವ ಭರವಸೆ ಇಲ್ಲದ ಕಾರಣ ಪದೇ ಪದೇ ಚುನಾವಣೆಯ ಮುಂದಕ್ಕೆ ಹಾಕುವ ನಾಟಕವಾಡುತ್ತಿದೆ ಎಂದು ವಿಧಾನ ಪರಿಷತ್ತಿನ ವಿರೋಧಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಟೀಕಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿ, ಜಿಬಿಎ ಚುನಾವಣೆಗೆ 2 ತಿಂಗಳು ಕಾಲಾವಕಾಶ ಸುಪ್ರೀಂಕೋರ್ಟ್ ನೀಡಿದೆ. ಮೂರು ತಿಂಗಳು ಕಾಲಾವಕಾಶ ಸರಕಾರ ಕೇಳಿತ್ತು. ಆದರೆ ಎರಡು ತಿಂಗಳು ಮಾತ್ರ ನೀಡಿದೆ. ಚುನಾವಣೆಯ ಬಗ್ಗೆ ಸಮೀಕ್ಷೆ ಮಾಡಿಸಿದ್ದಾರೆ. ಆದರೆ ಅವರಿಗೆ ಗೆಲುವಿನ ವರದಿ ಸಿಕ್ಕಿಲ್ಲ.ಆದ್ದರಿಂದಹೇಗಾದರೂಮಾಡಿಚುನಾವಣೆಮುಂದಕ್ಕೆಹಾಕಲುನೋಡಿದ್ದರು ಎಂದು ದೂರಿದರು. ಈಗಾಗಲೇ ಚುನಾವಣೆ ನಡೆಸಬೇಕು ಎಂದು ಸರ್ಕಾರಕ್ಕೆ ಸೂಚನೆ ಇತ್ತು. ಆದರೂ ಇವರು ಕೋರ್ಟ್ ಮೊರೆ ಹೋಗಿದ್ದರು. ಮತ್ತೆ ಮತ್ತೆ ಮನವಿಸಲ್ಲಿಸಿಮುಂದಕ್ಕೆಹಾಕಲುನೋಡಿದ್ದರು.ಸೋಲು-ಗೆಲುವುರಾಜಕೀಯದಲ್ಲಿ ಇದ್ದಿದ್ದೇ. ಒಂದು ಸಾರಿ ನಾವು ಗೆಲ್ಲಬಹುದು. ಇನ್ನೊಂದು ಬಾರಿ ಬೇರೆಯವರು ಗೆಲ್ಲಬಹುದು.ಆದರೆಯಾರೂವ್ಯವಸ್ಥೆಕೆಡಿಸುವಕೆಲಸಮಾಡಬಾರದು.ಆದ್ದರಿಂದ ಕೋರ್ಟ್‌ಆದೇಶಗೌರವಿಸಬೇಕು.ಇಲ್ಲದೇಹೋದರೆಮತ್ತಷ್ಟುಸೋಲುಕಾಂಗ್ರೆಸ್ಗೆ ಕಟ್ಟಿಟ್ಟ ಬುತ್ತಿ ಎಂದು ಹೇಳಿದರು.

ರಾಮನಗರವನ್ನು ಬೆಂಗಳೂರು ದಕ್ಷಿಣ ಮಾಡಿದರು. ಕೋಲಾರ ಮತ್ತು ಚಿಕ್ಕಬಳ್ಳಾಪುರವನ್ನೂ ಬೆಂಗಳೂರಿಗೆ ಸೇರಿಸುವ ಮಾತು ನಡೆಯುತ್ತಿದೆ. ಈಗ ತುಮಕೂರನ್ನು ಬೆಂಗಳೂರಿಗೆ ಸೇರಿಸಲು ಸರಕಾರ ಹುನ್ನಾರ ನಡೆಸಿದೆ. ನಾಡಪ್ರಭು ಕೆಂಪೇಗೌಡ ಅವರ ನಿರ್ಮಿಸಿದ ಬೆಂಗಳೂರನ್ನು ಐದು ತುಂಡು ಮಾಡಿದ್ದೀರಿ. ಈ ರೀತಿ ಎಲ್ಲವನ್ನೂ ಬದಲಾಯಿಸುವ ಬದಲು ಇಡೀ ಕರ್ನಾಟಕವನ್ನೇ ತೆಗೆದು ಬೆಂಗಳೂರು ಅಂತ ಮಾಡಿದರೆ ಒಳ್ಳೆಯದು. ಆಗ ಯಾವುದನ್ನೂ ಯಾವುದಕ್ಕೆ ಸೇರಿಸುವ ಪ್ರಮೇಯವೇ ಇರುವುದಿಲ್ಲ ಎಂದರು.

ಚುನಾವಣೆ ಮುಂದೂಡಿಕೆಗೆ ಕೋರ್ಟ್ ಮೊರೆ ಏಕೆ?

ಮೈಸೂರು: ನೆನ್ನೆಯಷ್ಟೇ ಸಾಧನಾ ಸಮಾವೇಶ ಮಾಡಿ ಸವಾಲು ಸ್ವೀಕರಿಸಲು ಸಿದ್ಧ ಎಂದು ಭಾಷಣ ಬಿಗಿದ ಸಿದ್ದರಾಮಯ್ಯ, ಈಗ ಉತ್ತರನ ಪೌರುಷ ಕೋರ್ಟ್ ಮುಂದೆ ಎಂಬಂತೆ ಜಿಬಿಎ ಚುನಾವಣೆ ಮುಂದೂಡಲು ಕೋರ್ಟ್ ಮೊರೆ ಹೋಗಿರುವುದೇಕೆ? ಎಂದು ಮಾಜಿ ಸಚಿವ ಸಿ.ಟಿ.ರವಿ ಪ್ರಶ್ನಿಸಿದರು.

ಜಿಬಿಎ ಚುನಾವಣೆ ಮುಂದೂಡಲು ಸುಪ್ರೀಂ ಕೋರ್ಟ್ ಮುಂದೆ ಹೋಗಿ ನಿಂತಿರುವುದೇಕೆ? ನಿಮಗೆ ನಿಜವಾಗಿಯೂ ಜನರ ಮೇಲೆ ವಿಶ್ವಾಸವಿದ್ದರೆ ಜಿಪಂ, ತಾಪಂ, ನಗರಸಭೆ, ಪುರಸಭೆ ಚುನಾವಣೆಗಳನ್ನು ನಡೆಸಿ ತೋರಿಸಿ. ಚುನಾವಣೆ ನಡೆಸಲು ಹಿಂಜರಿಯುತ್ತಿರುವುದನ್ನು ನೋಡಿದರೆ ನಿಮಗೆ ಸೋಲಿನ ಭೀತಿ ಕಾಡುತ್ತಿರುವುದು ಸ್ಪಷ್ಟ ಎಂದು ಟೀಕಿಸಿದರು. ಯುದ್ಧವನ್ನು ಭಾರತ ಬಯಸಿದ್ದಲ್ಲ, ಆದರೆ ಅದರ ಜಾಗತಿಕ ಪರಿಣಾಮ ನಮ್ಮ ಮೇಲಾಗಿದೆ. ಆರೋಗ್ಯ ಕಾಪಾಡಿಕೊಳ್ಳಲು ವೈದ್ಯರು ಪಥ್ಯ ಹೇಳುವಂತೆ, ದೇಶದ ಆರ್ಥಿಕ ಹಿತದೃಷ್ಟಿಯಿಂದ ದುಂದುವೆಚ್ಚ ಹಾಗೂ ಚಿನ್ನದ ಖರೀದಿ ಬೇಡ ಎಂದು ಮೋದಿ ಕರೆ ನೀಡಿದ್ದಾರೆ. ಇದರಿಂದ ವಿದೇಶಿ ವಿನಿಮಯದ ಕೊರತೆಯಾಗುವುದನ್ನು ತಡೆಯಬಹುದು. 1990-91 ರಲ್ಲಾದಂತೆ ಚಿನ್ನ ಅಡವಿಡುವ ಪರಿಸ್ಥಿತಿ ದೇಶಕ್ಕೆ ಬರಬಾರದು ಎಂದರು.

ಜಲ ಸಂಪನ್ಮೂಲ ಇಲಾಖೆ
ಕಾರ್ಯನಿರ್ವಾಹಕ ಅಭಿಯಂತರರ ಕಾರ್ಯಾಲಯ, ಪುನರವಸತಿ ವಿಭಾಗ, ನಂ. 4, ಕೃಮೇಯೋ, ಬೀಳಗಿ, ಕ್ಯಾಂಪ, ನವನಗರ, ಬಾಗಲಕೋಟೆ.
ಸಂಖ್ಯೆ : ಕೃ.ಮೇ.ಯೋ./ಕಾ.ನಿ.ಅ./ಪು.ವಿ.-4/ಯೋ.ವಿ.-2/ಟೆಂಡರ್-2/ 2026-27/155 ದಿನಾಂಕ : 20-05-2026

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿಸೂಚನೆಯಂತೆ ಅರ್ಹ ಗುತ್ತಿಗೆದಾರರಿಂದ ಇಂಡೆಂಟ್ ಸಂಖ್ಯೆ : 86, 72 & 81 ಒಟ್ಟು 03 ಕಾಮಗಾರಿಗಳ ಮೊತ್ತ ರೂ. 2,38,431=00, 22,02,335=00 & 60,31,861=00 ಗಳಿಗೆ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಇ-ಪ್ರೊಕ್ಯೂರ್‌ಮೆಂಟ್‌ದಲ್ಲಿ ಟೆಂಡರ್‌ನ್ನು ಸಲ್ಲಿಸುವ ಕೊನೆಯ ದಿನಾಂಕ : 06-06-2026 ರ ಸಂಜೆ 5.30 ಗಂಟೆವರೆಗೆ. ಟೆಂಡರ್ ಮಾಹಿತಿ, ನಿಬಂಧನೆ ಹಾಗೂ ವಿವರಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ : https://kppp.karnataka.gov.in ನಲ್ಲಿ ಈ ಕಚೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ.

ವಿಶೇಷ ಸೂಚನೆ : ಟೆಂಡರ್‌ನಲ್ಲಿ ಭಾಗವಹಿಸುವ ಗುತ್ತಿಗೆದಾರರು ಕಡ್ಡಾಯವಾಗಿ ನಿಗದಿಪಡಿಸಿದ ಟೆಂಡರ್ ಪೂರ್ವಭಾವಿ ಬಿಡ್ ಸಭೆಗೆ ಹಾಜರಾಗತಕ್ಕದ್ದು.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು, ಪುನರವಸತಿ ವಿಭಾಗ, ನಂ. 4, ಕೃಮೇಯೋ, ಬೀಳಗಿ, ಕ್ಯಾಂಪ, ನವನಗರ, ಬಾಗಲಕೋಟೆ.
ಡಿಐಪಿಆರ್/ಬಾಗಲಕೋಟೆ/60/ಮಣಿಪಾಲ್/2026-27

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರವರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಚಿತ್ರದುರ್ಗ.
ಸಂಖ್ಯೆ: ಕಾಇಂ:ಲೋವಿಚಿ:ಎಇ-1,3:ಟೆಂಡರ್-08:2026-27 ದಿನಾಂಕ:19.05.2026

ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ

ಲೋಕೋಪಯೋಗಿ ಇಲಾಖೆ ವಿಭಾಗ ಚಿತ್ರದುರ್ಗ ವಿಭಾಗ ವ್ಯಾಪ್ತಿಯಲ್ಲಿನ ಚಿತ್ರದುರ್ಗ ಮತ್ತು ಹೊಳಲ್ಕೆರೆ ತಾಲ್ಲೂಕುಗಳಿಗೆ ಸಂಬಂಧಿಸಿದಂತೆ, ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ರಾಜ್ಯಪಾಲರ ಪರವಾಗಿ ಕೆಟಿಪಿಪಿ-2000ರನ್ವಯ ಮತ್ತು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮದಂತೆ ಲೆಕ್ಕ ಶೀರ್ಷಿಕೆ: 4059-80-051-0-60-132 ಮುಖ್ಯಮಂತ್ರಿ ಮೂಲಸೌಕರ್ಯ ಬಂಡವಾಳ ವೆಚ್ಚ ಅಡಿ 14 ಕಾಮಗಾರಿಗಳಿಗೆ ಕನಿಷ್ಟ ಅಂದಾಜು ಮೊತ್ತ ರೂ. 50.00 ಲಕ್ಷ ಗರಿಷ್ಟ ಅಂದಾಜು ಮೊತ್ತ 200.00 ಲಕ್ಷ ಮತ್ತು 8443 ಠೇವಣಿ ವಂತಿಕೆ ಲೆಕ್ಕ ಶೀರ್ಷಿಕೆಯಡಿ 01 ಕಾಮಗಾರಿಗೆ ಕನಿಷ್ಟ ಮತ್ತು ಗರಿಷ್ಟ ಮೊತ್ತ ರೂ. 230.00 ಲಕ್ಷ ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಟೆಂಡರ್‌ದಾರರಿಂದ ಏಕ ಲಕೋಟೆ ಮತ್ತು ದ್ವಿ ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ರೂ. 200.00 ಲಕ್ಷಗಳ ವರೆಗಿನ ಕಾಮಗಾರಿಗಳಿಗೆ ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ: 26.05.2026 ಸಂಜೆ 4.00 ಗಂಟೆಯವರೆಗೆ, ಬಿಡ್‌ಗಳನ್ನು ತೆರೆಯುವ ದಿನಾಂಕ: 27.05.2026 ಸಂಜೆ 4.15 ಗಂಟೆಯವರೆಗೆ ಹಾಗೂ ರೂ. 200.00 ಲಕ್ಷಗಳ ಮೇಲ್ಪಟ್ಟ ಕಾಮಗಾರಿಗೆ ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ: 04.06.2026 ಸಂಜೆ 4.00 ಗಂಟೆಯವರೆಗೆ, ಬಿಡ್‌ಗಳನ್ನು ತೆರೆಯುವ ದಿನಾಂಕ: 05.06.2026 ಸಂಜೆ 4.15 ಗಂಟೆಯವರೆಗೆ ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯ ಕೆಲಸದ ವೇಳೆಯಲ್ಲಿ (ದೂರವಾಣಿ ಸಂಖ್ಯೆ: 08194-222446) ಅಥವಾ ವೆಬ್ ಸೈಟ್ https://kppp.karnataka.gov.in ನಲ್ಲಿ ಪಡೆಯಬಹುದು.

DIPR/CTA/KSMCA/106/2026-27
ಸಹಿ/- ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಚಿತ್ರದುರ್ಗ.

ಕೊಪ್ಪಳ ವಿಶ್ವವಿದ್ಯಾಲಯ, ಕೊಪ್ಪಳ
ಸರ್ಕಾರಿ ತಾಂತ್ರಿಕ ಮಹಾವಿದ್ಯಾಲಯದ ಆವರಣ, ತಳಕಲ್-583231, ಕೊಪ್ಪಳ ಜಿಲ್ಲೆ, ಕರ್ನಾಟಕ
E: re.koppaluniversity@gmail.com W: www.koppaluniversity.ac.in
M: +91 94486 87862
ಸಂಖ್ಯೆ: ಕೊವಿವಿ/ಪರೀಕ್ಷಾಂಗ ವಿಭಾಗ/ಟೆಂಡರ್/2026-27/24 ದಿನಾಂಕ: 20.05.2026

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಕೊಪ್ಪಳ ವಿಶ್ವವಿದ್ಯಾಲಯ, ಕೊಪ್ಪಳ ಪರೀಕ್ಷಾ ವಿಭಾಗಕ್ಕೆ ಬೇಕಾಗಿರುವ ಸಾಮಾಗ್ರಿಗಳು ಮತ್ತು ಅಂಕಪಟ್ಟಿ Template ಪಡೆಯುವ ನಿಮಿತ್ಯ ಅರ್ಹರಾದ ಟೆಂಡರ್‌ದಾರರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಕೆಲಸದ ಹೆಸರು : **ಕೊಪ್ಪಳ ವಿಶ್ವವಿದ್ಯಾಲಯದ ಪರೀಕ್ಷಾ ವಿಭಾಗಕ್ಕೆ ಬೇಕಾಗಿರುವ** ಅಂಕಪಟ್ಟಿ ಮುದ್ರಣ ಸಾಮಾಗ್ರಿಗಳು ಮತ್ತು ಅಂಕಪಟ್ಟಿ Template ಪಡೆಯುವ ಕುರಿತು, 1. ಅಂಕಪಟ್ಟಿ Template ಕೆಲಸದ ಅಂದಾಜು ಮೊತ್ತ (ರೂ. ಗಳಲ್ಲಿ) : **ರೂ. 84,00,000/-** ಇ.ಎಮ್.ಡಿ. (ರೂ. ಗಳಲ್ಲಿ) **ರೂ. 1,68,000/-** ಮತ್ತು 2. ಅಂಕಪಟ್ಟಿ ಮುದ್ರಣ ಸಾಮಾಗ್ರಿಗಳು ಅಂದಾಜು ಮೊತ್ತ (ರೂ. ಗಳಲ್ಲಿ) : **ರೂ. 28,50,000/-** ಇ.ಎಮ್.ಡಿ. (ರೂ. ಗಳಲ್ಲಿ) **ರೂ. 57,000/-** ಟೆಂಡರ್ ಪ್ರಕ್ರಿಯೆ ಶುಲ್ಕ: ಇ-ಪ್ರೊಕ್ಯೂರ್‌ಮೆಂಟ್ ನಿಯಮಾನುಸಾರ, ಕೆಲಸದ ಅವಧಿ: **02 ವರ್ಷ** ಟೆಂಡರ್‌ಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ ಸ್ವೀಕರಿಸಲಾಗುವುದು. https://kppp.karnataka.gov.in ಪ್ರಕಟಣೆಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಯನ್ನು **ದಿನಾಂಕ: 19.05.2026ರ 04:00 ಗಂಟೆಯವರೆಗೆ** ವಿಶ್ವವಿದ್ಯಾಲಯ ಜಾಲತಾಣದಲ್ಲಿ ಇತರೆ ಮಾಹಿಯನ್ನು ಈ ಕೆಳಕಂಡ ವಿಳಾಸದಿಂದ ಪಡೆಯಬಹುದು.

ವಿಳಾಸ: ಮಾನ್ಯ ಕುಲಸಚಿವರು, (ಮೌಲ್ಯಮಾಪನ) ದೂರವಾಣಿ ಸಂಖ್ಯೆ: 9986213615 ಕೊಪ್ಪಳ ವಿಶ್ವವಿದ್ಯಾಲಯ, ಸರಕಾರಿ ಇಂಜನಿಯರಿಂಗ್ ಕಾಲೇಜು, ತಳಕಲ್ 583 238
https://koppaluniversity.ac.in
ಸಹಿ/-ಕುಲಸಚಿವರು (ಮೌಲ್ಯಮಾಪನ) ಕೊಪ್ಪಳ ವಿಶ್ವವಿದ್ಯಾಲಯ, ಕೊಪ್ಪಳ
ವಾ.ಸಾ.ಸಂ/ಕೊಪ್ಪಳ/93/ದೇಶಪಾಂಡೆಪಬ್ಲಿಸಿಟಿ/2026-27

ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್
ದಿ ಫೇರ್ವೇ ಬಿಸಿನೆಸ್ ಪಾರ್ಕ್, ಮೊದಲ ಮಹಡಿ, #10/1, 11/2 & 12/2B ಆಫ್ ದೊಮ್ಮಲೂರು, ಕೋರಮಂಗಲ ಇನ್ನರ್ ರಿಂಗ್ ರಸ್ತೆ, ಇಜಿಎಲ್ ಬಿಸಿನೆಸ್ ಪಾರ್ಕ್ ಪಕ್ಕದಲ್ಲಿ, ಚಲ್ಲಘಟ್ಟ, ಬೆಂಗಳೂರು - 560071

ಅಸಾಧಾರಣ ಸಾಮಾನ್ಯ ಸಭೆ

1. ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್ನ ಅಸಾಧಾರಣ ಸಾಮಾನ್ಯ ಸಭೆ ("EGM") ಗುರುವಾರ, ಜೂನ್ 11, 2026 ರಂದು ವೀಡಿಯೊ ಕಾನ್ಫರೆನ್ಸ್ ಮೋಡ್ ಮೂಲಕ ನಡೆಸಲಾಗುವುದು ಎಂದು ಈ ಮೂಲಕ ತಿಳಿಸಲಾಗಿದೆ.
2. ಸಭೆಯ ನೋಟಿಸ್ನ ಎಲೆಕ್ಟ್ರಾನಿಕ್ ಪ್ರತಿಗಳನ್ನು ಬ್ಯಾಂಕ್/ ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟ್/ ಠೇವಣಿ ಪಾಲ್ಗೊಳ್ಳುವವರ ಬಳಿ ಇಮೇಲ್ ವಿಳಾಸಗಳನ್ನು ನೋಂದಾಯಿಸಿರುವ ಎಲ್ಲಾ ಷೇರುದಾರರಿಗೆ ಕಳುಹಿಸಲಾಗಿದೆ. ಇದಲ್ಲದೆ, ಈ ಸೂಚನೆಯನ್ನು ಬ್ಯಾಂಕಿನ ವೆಬ್ಸೈಟ್ www.jana.bank.in ಮತ್ತು ಸ್ಟಾಕ್ ಎಕ್ಸ್ಚೇಂಜ್ಗಳಾದ www.bseindia.com ಮತ್ತು www.nseindia.com ನಲ್ಲಿಯೂ ಲಭ್ಯವಾಗುವಂತೆ ಮಾಡಲಾಗುತ್ತದೆ.
3. ಬ್ಯಾಂಕ್ EGM ಸಮಯದಲ್ಲಿ ಷೇರುದಾರರಿಗೆ ಎಲೆಕ್ಟ್ರಾನಿಕ್ ವಿಧಾನಗಳ ಮೂಲಕ ಮತ ಚಲಾಯಿಸುವ ಸೌಲಭ್ಯವನ್ನು ಒದಗಿಸಿದೆ. EGM ಗೆ ಪೂರ್ವವಾಗಿ ರಿಮೋಟ್ ಇ-ವೋಟಿಂಗ್ ಮೂಲಕ ವ್ಯವಹಾರಗಳನ್ನು ನಡೆಸಬಹುದು ಮತ್ತು ರಿಮೋಟ್ ಇ-ವೋಟಿಂಗ್ ವೇಳಾಪಟ್ಟಿ ಈ ಕೆಳಗಿನಂತಿದೆ:

ಎಲೆಕ್ಟ್ರಾನಿಕ್ ವಿಧಾನಗಳ ಮೂಲಕ ರಿಮೋಟ್ ಇ- ಮತದಾನ ಪ್ರಾರಂಭದ ದಿನಾಂಕ ಮತ್ತು ಸಮಯ	ಸೋಮವಾರ, 08ನೇ ಜೂನ್ 2026 ಬೆಳಿಗ್ಗೆ 09:00 ಗಂಟೆಗೆ
ಎಲೆಕ್ಟ್ರಾನಿಕ್ ವಿಧಾನಗಳ ಮೂಲಕ ರಿಮೋಟ್ ಇ- ಮತದಾನ ಮುಕ್ತಾಯದ ದಿನಾಂಕ ಮತ್ತು ಸಮಯ	ಬುಧವಾರ, 10ನೇ ಜೂನ್ 2026 ಸಂಜೆ 05:00 ಗಂಟೆಗೆ

4. ಸಭೆಯ ಸೂಚನೆಯಲ್ಲಿ ನಿಗದಿಪಡಿಸಲಾದ ನಿರ್ಣಯಗಳ ಮೇಲೆ ಮತ ಚಲಾಯಿಸಲು ಅರ್ಹರಾಗಿರುವ ಷೇರುದಾರರನ್ನು ನಿರ್ಧರಿಸಲು ಕಟ್-ಆಫ್ ದಿನಾಂಕ ಜೂನ್ 5, 2026 ಆಗಿರುತ್ತದೆ. ಇದಲ್ಲದೆ, ಸದಸ್ಯರ ಮತದಾನದ ಹಕ್ಕುಗಳು ಕಟ್-ಆಫ್ ದಿನಾಂಕದಂದು ಬ್ಯಾಂಕಿನ ಪಾವತಿಸಿದ ಬಂಡವಾಳದಲ್ಲಿನ ಅವರ ಷೇರುಗಳ ಅನುಪಾತದಲ್ಲಿ ಇರುತ್ತವೆ. ಜೂನ್ 10, 2026 ರಂದು ಸಂಜೆ 5:00 ಗಂಟೆಯ ನಂತರ ರಿಮೋಟ್ ಇ-ವೋಟಿಂಗ್ ಮಾಡ್ಯೂಲ್ ಅನ್ನು ಮುಚ್ಚಲಾಗುತ್ತದೆ ಮತ್ತು ಯಾವುದೇ ನಿರ್ಣಯದ ಮೇಲೆ ಷೇರುದಾರರು ತಮ್ಮ ಮತವನ್ನು ಚಲಾಯಿಸಿ/ ದೃಢೀಕರಿಸಿದ ನಂತರ, ಅದನ್ನು ನಂತರ ಬದಲಾಯಿಸಲು ಅವರಿಗೆ ಅನುಮತಿಸಲಾಗುವುದಿಲ್ಲ ಎಂಬುದನ್ನು ಷೇರುದಾರರು ದಯವಿಟ್ಟು ಗಮನಿಸಬೇಕು.
5. EGM ಅನ್ನು ವೀಡಿಯೊ ಕಾನ್ಫರೆನ್ಸ್ ವಿಧಾನದ ಮೂಲಕ ನಡೆಸಲಾಗುತ್ತಿರುವುದರಿಂದ, ಪೇಪರ್ ಬ್ಯಾಲೆಟ್ ಮೂಲಕ ಮತದಾನ ಮಾಡಲು ಅವಕಾಶವಿರುವುದಿಲ್ಲ. ಆದಾಗ್ಯೂ, ಸಭೆಯ ನಿರ್ಣಯಗಳ ಮೇಲೆ ಇನ್ನೂ ಮತ ಚಲಾಯಿಸದ ಷೇರುದಾರರು ಸಭೆಯ ಕಾರ್ಯವೈಖರಿ ನಡೆಯುವ ಅವಧಿಯಲ್ಲಿ ಮತ್ತು ಸಭೆ ಮುಗಿದ ಅರ್ಧ ಗಂಟೆಯ ನಂತರ ಮತ ಚಲಾಯಿಸಲು ವ್ಯವಸ್ಥೆ ಮಾಡಲಾಗುವುದು. EGM ಗೆ ಪೂರ್ವವಾಗಿ ರಿಮೋಟ್ ಇ-ವೋಟಿಂಗ್ ಮೂಲಕ ಈಗಾಗಲೇ ಮತ ಚಲಾಯಿಸಿದ ಷೇರುದಾರರು ಸಹ EGM ಗೆ ಹಾಜರಾಗಬಹುದು, ಆದರೆ ಅವರಿಗೆ ಮರುಮತದಾನ ಮಾಡುವ ಹಕ್ಕು ಇರುವುದಿಲ್ಲ.
6. ನಿರ್ದೇಶಕರ ಮಂಡಳಿಯು, ಬೆಂಗಳೂರಿನ ಹನುಮಂತನಗರ, ಎಸ್.ಎಲ್. ಭೈರಪ್ಪ ರಸ್ತೆ, 7ನೇ ಮುಖ್ಯರಸ್ತೆ, 3ನೇ ಕ್ರಾಸ್, ವಾಗ್ದೇವಿ, 543/A, ವಿಳಾಸದಲ್ಲಿ ಕಚೇರಿ ಹೊಂದಿರುವ ಅಭ್ಯಾಸದಲ್ಲಿರುವ ಕಂಪನಿ ಕಾರ್ಯದರ್ಶಿಯಾದ ಶ್ರೀ ನಾಗೇಂದ್ರ ಡಿ ರಾವ್ (FCS 5553; COP 7731) ಅವರನ್ನು ಇ-ವೋಟಿಂಗ್ ಪ್ರಕ್ರಿಯೆಯನ್ನು ನ್ಯಾಯಸಮ್ಮತ ಹಾಗೂ ಪಾರದರ್ಶಕ ರೀತಿಯಲ್ಲಿ ಪರಿಶೀಲಿಸಲು ಸ್ಕ್ರೂಟಿನೈಸರ್ ಆಗಿ ನೇಮಿಸಿದೆ. ನಿರ್ಣಯಗಳ ಮೇಲಿನ ಮತದಾನದ ಫಲಿತಾಂಶಗಳನ್ನು ಬ್ಯಾಂಕಿನ ವಾರ್ಷಿಕ ಸಾಮಾನ್ಯ ಸಭೆ ಮುಗಿದ 48 ಗಂಟೆಗಳ ಒಳಗೆ ಘೋಷಿಸಲಾಗುತ್ತದೆ. ಘೋಷಿತ ಫಲಿತಾಂಶಗಳನ್ನು ಸ್ಕ್ರೂಟಿನೈಸರ್ ವರದಿಯೊಂದಿಗೆ, ಸ್ಟಾಕ್ ಎಕ್ಸ್ಚೇಂಜ್ ಕೇಂದ್ರಗಳಿಗೆ ವರದಿ ಮಾಡಲಾಗುತ್ತದೆ, ಅಂದರೆ, ನ್ಯಾಷನಲ್ ಸ್ಟಾಕ್ ಎಕ್ಸ್ಚೇಂಜ್ ಲಿಮಿಟೆಡ್ ("NSE") ಮತ್ತು BSE ಲಿಮಿಟೆಡ್ ("BSE") ಮತ್ತು ಬ್ಯಾಂಕಿನ ವೆಬ್ಸೈಟ್ ಮತ್ತು NSDL ವೆಬ್ಸೈಟ್ನಲ್ಲಿ ಲಭ್ಯವಾಗುವಂತೆ ಮಾಡಲಾಗುತ್ತದೆ.
7. ಸಭೆಯ ಕಾರ್ಯಕಲಾಪಗಳನ್ನು ಸುಗಮವಾಗಿ ನಡೆಸುವ ಉದ್ದೇಶದಿಂದ, ಸಭೆಯಲ್ಲಿ ವ್ಯವಹರಿಸಲಿರುವ ವಿಷಯಗಳಿಗೆ ಸಂಬಂಧಿಸಿದಂತೆ ಪ್ರಶ್ನೆಗಳನ್ನು ಕೇಳಲು ಅಥವಾ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಇಚ್ಛಿಸುವ ಸದಸ್ಯರು, ತಮ್ಮ ಹೆಸರು, ಡಿಮ್ಯಾಟ್ ಖಾತೆ ಸಂಖ್ಯೆ, ಇ-ಮೇಲ್ ಐಡಿ, ಮೊಬೈಲ್ ಸಂಖ್ಯೆ ಇತ್ಯಾದಿ ವಿವರಗಳನ್ನು ಉಲ್ಲೇಖಿಸಿ, ಸಭೆಗೆ ಕನಿಷ್ಠ ಏಳು ದಿನಗಳ ಪೂರ್ವದಲ್ಲಿ investor.grievance@jana.bank.in ಗೆ ಇ-ಮೇಲ್ ಕಳುಹಿಸುವ ಮೂಲಕ ತಮ್ಮ ಪ್ರಶ್ನೆಗಳು/ ಅಭಿಪ್ರಾಯಗಳನ್ನು ಮುಂಗಡವಾಗಿ ಸಲ್ಲಿಸಬಹುದು.
8. ಕಂಪನಿಗಳ ಕಾಯ್ದೆ, 2013 ರ ಸೆಕ್ಷನ್ 91 ರ ನಿಬಂಧನೆಗಳಿಗೆ ಅನುಸಾರವಾಗಿ, EGM ಉದ್ದೇಶಕ್ಕಾಗಿ ಸದಸ್ಯರ ನೋಂದಣಿಪುಸ್ತಕವು ಜೂನ್ 06, 2026 ರಿಂದ ಜೂನ್ 11, 2026 ರವರೆಗೆ (ಎರಡೂ ದಿನಗಳು ಸೇರಿದಂತೆ) ಮುಚ್ಚಿರುತ್ತದೆ.

ದಿನಾಂಕ: 20 ಮೇ 2026
ಸ್ಥಳ: ಬೆಂಗಳೂರು
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್ ಪರವಾಗಿ
ಲಕ್ಷ್ಮಿ ಆರ್ ಎನ್
ಕಂಪನಿ ಕಾರ್ಯದರ್ಶಿ ಮತ್ತು ಅನುಸರಣೆ ಅಧಿಕಾರಿ

ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಕಾನೀನಿನಿ, ಹಾರಂಗಿ ಪುನರ್ವಸತಿ ವಿಭಾಗ, ಕುಶಾಲನಗರ
ಸಂ:ಕಾಇ/ಹಾಪುವಿ/ಪಿಬಿಸಿ/ಟೆಂಡರ್ ಅಧಿಸೂಚನೆ ಸಂ: 03/2026-27/ ದಿ:20-5-2026.

ಸಂಕ್ಷಿಪ್ತ ಟೆಂಡರ್ ಪ್ರಕಟಣೆ
(ಅಲ್ಪಾವಧಿ- ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ ಇವರ ಪರವಾಗಿ ಈ ಕೆಳಗೆ ನಮೂದಿಸಿರುವ ಕೆಲಸಗಳಿಗೆ ಕರ್ನಾಟಕ ಸರ್ಕಾರದ ಲೋಕೋಪಯೋಗಿ ಇಲಾಖೆಯಲ್ಲಿ/ ಜಲಸಂಪನ್ಮೂಲ ಇಲಾಖೆಯಲ್ಲಿ/ ಕೇಂದ್ರ ಲೋಕೋಪಯೋಗಿ ಇಲಾಖೆಯಲ್ಲಿ/ ಇತರ ಸರ್ಕಾರದ ಅಧೀನ ಸಂಸ್ಥೆಗಳಲ್ಲಿ ಸೂಕ್ತ ದರ್ಜೆಯಲ್ಲಿ ನೊಂದಾಯಿಸಿ ನಂತರ ಕಾವೇರಿ ನೀರಾವರಿ ನಿಗಮದಲ್ಲಿ ಹೆಸರು ದಾಖಲಿಸಿ ನೋಂದಾವಣಿ ಚಾಲ್ತಿಯಲ್ಲಿರುವ ಅರ್ಹ 4ನೇ ದರ್ಜೆ ಹಾಗೂ ಮೇಲ್ಪಟ್ಟ ಗುತ್ತಿಗೆದಾರರಿಂದ ಶೇಕಡಾವಾರು ದರದ (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ) ಟೆಂಡರ್‌ಗಳನ್ನು ಕರೆಯಲಾಗಿದೆ. ಕೆಪಿಪಿ ಪೋರ್ಟಲ್ ನ ವೆಬ್ ಸೈಟ್ ವಿಳಾಸ http://kppp.karnataka.gov.in ಆಗಿರುತ್ತದೆ.

2026-27ನೇ ಸಾಲಿನಲ್ಲಿ ಈ ವಿಭಾಗ ವ್ಯಾಪ್ತಿಯಲ್ಲಿ ಬರುವ ಪಿರಿಯಾಪಟ್ಟಣ, ಅರಕಲಗೂಡು ಮತ್ತು ಕುಶಾಲನಗರ ತಾಲ್ಲೂಕು ಅಚ್ಚುಕಟ್ಟು ವ್ಯಾಪ್ತಿಗೆ ಸಂಬಂಧಿಸಿದಂತೆ 2026 ರ ಖಾರೀಫ್ ಬೆಳೆಗಳಿಗೆ ನಾಲೆಗಳಲ್ಲಿ ಹೂಳು ತೆಗೆಸುವ ಸಲುವಾಗಿ ಒಟ್ಟು 10 ಕಾಮಗಾರಿಗಳಿಗೆ ಅಲ್ಪಾವಧಿ ಟೆಂಡರ್ ಕರೆಯಲಾಗಿದ್ದು, ಪ್ರತಿ ಕಾಮಗಾರಿಯ ಅಂದಾಜು ಮೊತ್ತ ರೂ 1.00 ಲಕ್ಷಗಳಿಂದ 4.00 ಲಕ್ಷ ಒಳಗಿದ್ದು, ಕೆಪಿಪಿ ಪೋರ್ಟಲ್ ಮೂಲಕ ಮಾತ್ರ ಟೆಂಡರ್ ಕರೆಯಲಾಗಿದೆ.

ಟೆಂಡರ್ ಪ್ರಕ್ರಿಯೆಗಳ ದಿನಾಂಕಗಳು: ಟೆಂಡರ್‌ಗೆ ಸಂಬಂಧಿಸಿದಂತೆ ಆಕ್ಷೇಪಣೆ ಸಲ್ಲಿಸಲು ಅಥವಾ ಸ್ಪಷ್ಟೀಕರಣ ಪಡೆಯಲು ಕೊನೆಯ ದಿನಾಂಕ: 22-5-2026 (ಸಂಜೆ 4.00 ಗಂಟೆಯ ವರೆಗೆ), ಭರ್ತಿ ಮಾಡಿದ ಟೆಂಡರನ್ನು ಸಲ್ಲಿಸಲು ಕೊನೆಯ ದಿನಾಂಕ: 27-5-2026 (ಸಂಜೆ 4.00 ಗಂಟೆಯ ವರೆಗೆ), ಟೆಂಡರ್‌ಗಳ ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: 29-5-2026 (ಪೂರ್ವಾಹ್ನ 10.30 ಗಂಟೆ) ಕಾಮಗಾರಿ ಕಾಲಾವಧಿ 1 ತಿಂಗಳು. ಗುತ್ತಿಗೆದಾರರು ಹೆಚ್ಚಿನ ಮಾಹಿತಿಯನ್ನು ಕಛೇರಿ ವೇಳೆಯಲ್ಲಿ ಕೆಳಸಹಿದಾರರನ್ನು ಸಂಪರ್ಕಿಸಿ ಪಡೆಯಬಹುದಾಗಿರುತ್ತದೆ. ಕಾರಣಾಂತರಗಳಿಂದ ಯಾವುದೇ ಬದಲಾವಣೆಗಳಾದಲ್ಲಿ ಕೆಪಿಪಿ ಪೋರ್ಟಲ್ ನಲ್ಲಿ ಮಾತ್ರ ಪ್ರಕಟಿಸಲಾಗುವುದು. ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ.

ಕಾರ್ಯಪಾಲಕ ಇಂಜಿನಿಯರ್, ಹಾರಂಗಿ ಪುನರ್ವಸತಿ ವಿಭಾಗ, ಕುಶಾಲನಗರ.

ಆಗಸ್ಟ್ ಅಂತ್ಯದೊಳಗೆ ಜಿಬಿಎ ಚುನಾವಣೆ ನಡೆಸಿ: ಸುಪ್ರೀಂ

← ಮೊದಲಪುಟದಿಂದ

ಚುನಾವಣೆ ಮುಂದೂಡಿಕೆ ವಿರೋಧಿಸಿ ವಕೀಲ ರಂಗನಾಥ್ ಪರವಾಗಿ ಹಾಜರಾಗಿದ್ದ ಹಿರಿಯ ವಕೀಲ ಪರಮೇಶ್ವರ್, ನ್ಯಾಯಾಲಯವು ಹಲವು ಬಾರಿ ಕಾಲಾವಕಾಶ ನೀಡಿದ್ದು, ರಾಜ್ಯ ಸರಕಾರ ಚುನಾವಣೆ ನಡೆಸಲು ಮೀನಮೇಷ ಎಣಿಸುತ್ತಿದೆ. 15 ದಿನ ಹೆಚ್ಚುವರಿ ಕಾಲಾವಕಾಶ ನೀಡಬಹುದು. ಅದರ ಮೇಲೆ ಸಮಯ ನೀಡಕೂಡದು ಎಂದು ವಾದಿಸಿದರು. ರಾಜ್ಯ ಚುನಾವಣಾ ಆಯೋಗದ ಪರ ಹಿರಿಯ ವಕೀಲ ಕೆ.ಎನ್.ಫಣೀಂದ್ರ ಅವರು ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮುಖ್ಯ ಆಯುಕ್ತರು ಚುನಾವಣೆ ನಡೆಸಲು ಡಿಸೆಂಬರ್‌ವರೆಗೆ ಕಾಲಾವಕಾಶ ಕೋರಿದ್ದಾರೆ. ಮತ್ತೊಮ್ಮೆ ನ್ಯಾಯಾಲಯದ ಮುಂದೆ ಬರಲು ಅವಕಾಶ ನೀಡಬಾರದು ಎಂದು ಮನವಿ ಮಾಡಿದರು.

ಈ ನಡುವೆ, ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ್ ಶೆಟ್ಟಿ ಅವರು ಕನಿಷ್ಠ 15 ದಿನವಾದರೂ ಹೆಚ್ಚುವರಿಯಾಗಿ ನೀಡಬೇಕು ಎಂಬ ಮನವಿಯನ್ನು ನ್ಯಾಯಾಲಯ ತಿರಸ್ಕರಿಸಿತು. ಚುನಾವಣೆ ಮುಂದೂಡಿಕೆ ಸಂಬಂಧಿಸಿದ ಎಲ್ಲಾ ಅರ್ಜಿ ವಜಾಗೊಳಿಸಲಾಗಿದೆ ಎಂದು ಆದೇಶಿಸಿತು.

ಸಫಾರಿಗಳಲ್ಲಿ ತೆರೆದ ವಾಹನಕ್ಕೆ ಅವಕಾಶವಿಲ್ಲ:ಈಶ್ವರ್ ಖಂಡ್ರೆ

ಬೆಂಗಳೂರು: ರಾಜ್ಯದ ಐದು ಹುಲಿ ಸಂರಕ್ಷಿತ ಪ್ರದೇಶ ಹಾಗೂ ವನ್ಯಜೀವಿಧಾಮಗಳ ಸಫಾರಿಯಲ್ಲಿ ತೆರೆದ ವಾಹನದ ಬದಲಿಗೆ ಸುರಕ್ಷಿತ ಬಸ್ ಬಳಕೆ ಮಾಡುವಂತೆ ಅರಣ್ಯ ಸಚಿವ ಈಶ್ವರ ಖಂಡ್ರೆ ಸೂಚನೆ ನೀಡಿದ್ದಾರೆ.

ದುಬಾರೆ ಆನೆ ಶಿಬಿರದಲ್ಲಿ ಸೋಮವಾರ ಎರಡು ಸಾಕಾನೆಗಳ ಕಾಳಗದ ವೇಳೆ ಪ್ರವಾಸಿ ಮಹಿಳೆ ಮೃತಪಟ್ಟ ಆಘಾತಕಾರಿ ಘಟನೆ ಹಿನ್ನೆಲೆಯಲ್ಲಿ ಸಫಾರಿಗಳಲ್ಲಿ ಪ್ರವಾಸಿಗರ ಸುರಕ್ಷತೆಗೂ ಹೆಚ್ಚಿನ ಗಮನ ಹರಿಸುವಂತೆ ಮುಖ್ಯ ವನ್ಯಜೀವಿ ಪರಿಪಾಲಕರಿಗೆ ಸಚಿವರು ನಿರ್ದೇಶನ ನೀಡಿದ್ದಾರೆ.

ಬಂಡೀಪುರ, ನಾಗರಹೊಳೆ, ಕಾಳಿ, ಬಿಳಿಗಿರಿರಂಗನಬೆಟ್ಟ ಮತ್ತು ಭದ್ರಾ ಹುಲಿ ಸಂರಕ್ಷಿತ ಪ್ರದೇಶ ಹಾಗೂ ಮಲೆ ಮಹದೇಶ್ವರ ಬೆಟ್ಟ, ದಾಂಡೇಲಿ, ಕೆ.ಗುಡಿ ಸೇರಿದಂತೆ ರಾಜ್ಯದ ವಿವಿಧ ವನ್ಯಜೀವಿಧಾಮ ಮತ್ತು ಕಾನನಗಳಲ್ಲಿ ಸಫಾರಿ ನಡೆಯುತ್ತಿದ್ದು, ರಾಜ್ಯದ ಮೂಲೆ ಮೂಲೆಗಳಿಂದ ಅಷ್ಟೇ ಅಲ್ಲದೆ ದೇಶ ವಿದೇಶ ಗಳಿಂದಲೂ ಪ್ರವಾಸಿಗರು ಆಗಮಿಸುತ್ತಾರೆ. ಅದೃಷ್ಟವಶಾತ್ ಈವರೆಗೆ ಸಫಾರಿ ಪ್ರದೇಶಗಳಲ್ಲಿ ಆನೆ, ಹುಲಿ ಸೇರಿದಂತೆ ಯಾವುದೇ ವನ್ಯಮೃಗಗಳು ಸಫಾರಿ ವಾಹನಗಳ ಮೇಲೆ ದಾಳಿ ಮಾಡಿ ಜೀವಹಾನಿ ಮಾಡಿದ ಘಟನೆ ಗಳು ಸಂಭವಿಸಿಲ್ಲ, ಆದರೂ ಅನಾಹುತ ಸಂಭ ವಿಸುವ ಮೊದಲೇ ಎಚ್ಚೆತ್ತು ಕೊಳ್ಳುವ ಅಗತ್ಯ ವಿದೆ ಎಂದು ಸೂಚನೆಯಲ್ಲಿ ತಿಳಿಸಿದ್ದಾರೆ.

ಆಂಬ್ಯುಲೆನ್ಸ್ ಖಾತ್ರಿಗೂ ಸಚಿವ ಖಂಡ್ರೆ ಸೂಚನೆ

ಈಗಾಗಲೇ ಬಳಕೆಯಲ್ಲಿರುವ ತೆರೆದ ವಾಹನಗಳಿಗೆ ಕಬ್ಬಿಣದ ಸರಳುಗಳಿಂದ ಕೂಡಿದ ಜಾಲರಿ ಅಥವಾ ಒಡೆಯಲಾ ಗದ ಗಾಜು ಅಳವಡಿಸಿ ಬಳಸುವ ಬಗ್ಗೆ ಕ್ರಮವಹಿಸಲು, ಯಾವುದೇ ಪ್ರವಾಸಿ ಗರು ಅರಣ್ಯದೊಳಗೆ ಇಳಿಯಲು ಅವ ಕಾಶ ನೀಡದಂತೆ ಮತ್ತು ಪ್ರತಿ ಸಫಾರಿ ವಾಹನದಲ್ಲಿ ಪ್ರಥಮ ಚಿಕಿತ್ಸೆಯ ಕಿಟ್ ಹಾಗೂ ಸಫಾರಿ ಕೇಂದ್ರಗಳಿಗೆ ಸಮೀ ಪದಲ್ಲಿ ಆಂಬ್ಯುಲೆನ್ಸ್ ವಾಹನ ಇರು ವುದನ್ನು ಖಾತ್ರಿಪಡಿಸಿಕೊಳ್ಳುವಂತೆಯೂ ಸಚಿವ ಖಂಡ್ರೆ ಸೂಚಿಸಿದ್ದಾರೆ.

ಹುಬ್ಬಳ್ಳಿ ಖಾಸಗಿ ಹೋಟೆಲ್‌ನಲ್ಲಿ ಸಭೆ। ಯತ್ನಾಳ , ನಿರಾಣಿ, ಬೆಲ್ಲದ, ಕಡಾಡಿ ಭಾಗಿ

ಪಂಚಮಸಾಲಿ ಪೀಠಗಳ ನಡುವಿನ ಕಲಹ ಶಮನ ಯತ್ನ

ಹುಬ್ಬಳ್ಳಿ: ಇತ್ತೀಚೆಗೆ ನಡೆದ ಪಂಚಮಸಾಲಿ ಪೀಠಗಳ ವಿವಾದಗಳ ಕುರಿತು ಚರ್ಚಿಸಲು ಹುಬ್ಬಳ್ಳಿಯ ಖಾಸಗಿ ಹೋಟೆಲ್‌ವೊಂದರಲ್ಲಿ ಪಂಚಮಸಾಲಿ ಲಿಂಗಾಯತ ಸಮಾಜದ ಮುಖಂಡರ ಸಭೆಯು ಬುಧವಾರ ಮಧ್ಯಾಹ್ನ ಜರುಗಿತು. ಕೂಡಲಸಂಗಮ ಹಾಗೂ ಹರಿಹರ ಪಂಚಮಸಾಲಿ ಪೀಠದ ಲೆಕ್ಕಪತ್ರಗಳ ಬಗ್ಗೆ ಸಭೆಯಲ್ಲಿ ಗಂಭೀರ ಚರ್ಚೆ ನಡೆಸಲಾಯಿತು.

ಸಭೆ ಮುಕ್ತಾಯದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ವಿಜಯಪುರ ಶಾಸಕ ಬಸನಗೌಡ ಪಾಟೀಲ ಯತ್ನಾಳ, ಸಮಾಜಕ್ಕೆ ಧಕ್ಕೆಯಾಗುವಂತಹ ಅಹಿತಕರ ಘಟನೆಗಳು ನಡೆದಿವೆ. ಹಾಗಾಗಿಯೇ ನಮ್ಮ ಸಮಾಜದವರು ಒಗ್ಗೂಡಬೇಕು ಎಂಬ ದೃಷ್ಟಿಯಿಂದ ಸಭೆ ಮಾಡಿದ್ದೇವೆ. ಸ್ವಾಮೀಜಿಗಳು ಮತ್ತು ಮುಖಂಡರ ಮಧ್ಯೆ ಭಿನ್ನಾಭಿಪ್ರಾಯಗಳಿದ್ದವು. ಈಗ ಬಗೆಹರಿದಿವೆ. ಮುಂದೆ ಯಾವ ರೀತಿಯಲ್ಲಿ ಸಮಾಜ ಸಾಗಬೇಕು ಎಂಬುದರ ಕುರಿತು ಸಲಹೆಗಳನ್ನೂ ನೀಡಿದ್ದಾರೆ. ಕೂಡಲಸಂಗಮ ಹಾಗೂ ಹರಿಹರ ಪಂಚಮಸಾಲಿ ಪೀಠದಲ್ಲಿನ ಲೆಕ್ಕಪತ್ರದ ಬಗ್ಗೆ ಕೆಲವೊಂದು ಆರೋಪಗಳಿವೆ. ಎರಡೂ ಕಡೆಯ ಮುಖಂಡರನ್ನು ಕರೆಯಿಸಿ ಮಾತನಾಡಿದ್ದೇವೆ. ಶೇ.90ರಷ್ಟು ಸಮಸ್ಯೆಗಳು ಬಗೆಹರಿದಿವೆ ಎಂದರು.

ಹರಿಹರ ಮಾಜಿ ಶಾಸಕ ಶಿವಶಂಕರ ಮಾತನಾಡಿ, ಎರಡೂ ಪೀಠಗಳಲ್ಲಿ ಸಮಸ್ಯೆ ಇವೆ. ಸಮಾಜವನ್ನು ಒಟ್ಟಾಗಿ ತೆಗೆದುಕೊಂಡು ಹೋಗಲು ಸಭೆ ಮಾಡಲಾಗಿದೆ. ಬರುವ ದಿನಗಳಲ್ಲಿ ಎಲ್ಲವೂ ಸರಿಯಾಗುತ್ತದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ರಾಜ್ಯಸಭಾ ಸದಸ್ಯ ಈರಣ್ಣ ಕಡಾಡಿ, ವಿಧಾನಸಭೆ ಪ್ರತಿಪಕ್ಷ ಉಪನಾಯಕ ಅರವಿಂದ ಬೆಲ್ಲದ, ಮಾಜಿ ಸಚಿವ ಸಿ.ಸಿ.ಪಾಟೀಲ, ಪ್ರಮುಖರಾದ ಸೋಮಣ್ಣ ಬೇವಿನಮರದ, ಅರುಣಕುಮಾರ ಇತರರು ಸಭೆಯಲ್ಲಿದ್ದರು.



ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ನೇತೃತ್ವದಲ್ಲಿ ಪಂಚಮಸಾಲಿ ಮುಖಂಡರ ಸಭೆ ನಡೆಯಿತು.

ಪಂಚಮಸಾಲಿ ಪೀಠಗಳು ಎರಡೇ ಇರಲಿವೆ

ವಿಜಯಪುರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಮಾತನಾಡಿ, ರಾಜಕೀಯ ನಾಯಕರ ಹೊರತಾಗಿ ಸಮಿತಿ ರಚಿಸಿದ್ದೇವೆ. ಲೆಕ್ಕಪತ್ರದ ವಿಷಯದ ಕುರಿತು ಮುಂದಿನ ದಿನಗಳಲ್ಲಿ ಸಭೆ ಮಾಡಿ ಗೊಂದಲಗಳಿಗೆ ತಿಲಾಂಜಲಿ ಹಾಡಲಾಗುವುದು. ಪಂಚಮಸಾಲಿ ಪೀಠಗಳು ಎರಡೇ ಇರಲಿವೆ. ನಮ್ಮ ಮುಂದೆ ಮತ್ತೊಂದು ಪೀಠ ಸ್ಥಾಪನೆ ಮಾಡುವ ಬಗ್ಗೆ ಯಾವುದೇ ವಿಚಾರಗಳಿಲ್ಲ. ಇದ್ದ ಮಠಗಳನ್ನು ಸುಧಾರಣೆ ಮಾಡುವುದೇ ನಮ್ಮ ಗುರಿ ಎಂದು ಸ್ಪಷ್ಟಪಡಿಸಿದರು.

ಪಂಚಮಸಾಲಿ ಸಮಾಜದಿಂದ ಪಂಚಪೀಠ ಸ್ಥಾಪನೆ

ಮಾಜಿ ಸಚಿವ ಮುರುಗೇಶ ನಿರಾಣಿ ಮಾತನಾಡಿ, ಪಂಚಮಸಾಲಿ ಸಮಾಜಕ್ಕೆ ಒಳಿತಾಗಲಿ ಎನ್ನುವ ಉದ್ದೇಶದಿಂದ ಪೀಠಗಳನ್ನು ಮಾಡಲಾಗಿದೆ. ಪೀಠಗಳಲ್ಲಿ ಕೆಲ ಗೊಂದಲ, ಮನಸ್ತಾಪವಾಗಿದೆ. ಹೀಗಾಗಿ ನಾವು ಪಕ್ಷಾತೀತವಾಗಿ ಸೇರಿ ಸಭೆ ಮಾಡಿದ್ದೇವೆ. ಸತ್ಯಾಸತ್ಯತೆ ಅರಿತು ಸಮಸ್ಯೆ ಬಗೆಹರಿಸುತ್ತೇವೆ. ಈ ಬಗ್ಗೆ ಎರಡೂ ಪೀಠದವರು ಒಪ್ಪಿಗೆ ಸೂಚಿಸಿದ್ದಾರೆ. ಪಂಚಮಸಾಲಿ ಸಮಾಜದ ಪಂಚಪೀಠಗಳನ್ನು ಮಾಡುತ್ತೇವೆ. ಅದರಲ್ಲಿ ಒಂದು ಮಹಿಳಾ ಪೀಠವೂ ಇರಲಿದೆ. ಇದರ ಉದ್ದೇಶ ಒಬ್ಬರ ಮೇಲೆ ಒಬ್ಬರನ್ನು ಎತ್ತಿ ಕಟ್ಟುವುದಲ್ಲ. 80 ಲಕ್ಷ ಜನರಿಗೆ ಒಂದೇ ಪೀಠ ಇದ್ದರೆ ಎಲ್ಲರೂ ಒಂದೇ ಕಡೆ ಹೋಗಲು ಸಾಧ್ಯವಿಲ್ಲ. ಹೀಗಾಗಿ ಜನರಿಗೆ ಲಭ್ಯವಾಗುವಂತೆ ಐದು ಪೀಠಗಳನ್ನು ಮಾಡುತ್ತೇವೆ ಎಂದರು.

ಸಮಾಚಾರ ಸಣ್ಣದಲ್ಲ

ನದಿಯಲ್ಲಿ ಮುಳುಗಿ ವಿದ್ಯಾರ್ಥಿ ಸಾವು

ಮಂಗಳೂರು: ನದಿಯಲ್ಲಿ ಈಜಲು ಹೋದ ಎಂಜಿನಿಯರಿಂಗ್ ವಿದ್ಯಾರ್ಥಿ ಸಾವನ್ನಪ್ಪಿರುವ ಘಟನೆ ಬೆಳ್ತಂಗಡಿಯ ಪಜಿರಡ್ಕದ ಬಳಿ ನಡೆದಿದೆ. ಮೃತ ವಿದ್ಯಾರ್ಥಿಯನ್ನು ಬೆಳಗಾವಿ ಜಿಲ್ಲೆಯ ಗೋಕಾಕ್ ನಿವಾಸಿ ಶ್ರೀಪೂರ್ಣ (21) ಎಂದು ಗುರುತಿಸಲಾಗಿದೆ. ಉಜಿರೆಯ ಖಾಸಗಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ಅಂತಿಮ ವರ್ಷದಲ್ಲಿ ವ್ಯಾಸಂಗ ಮಾಡುತ್ತಿದ್ದ. ಏಳು ಜನ ಸ್ನೇಹಿತರ ತಂಡ ನೇತ್ರಾವತಿ ನದಿಗೆ ಮಂಗಳವಾರ ಸಂಜೆ 4 ಗಂಟೆ ಸುಮಾರಿಗೆ ಈಜಾಡಲು ತೆರಳಿತ್ತು. ಈ ವೇಳೆ ಯುವಕ ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾನೆ. ಮೃತದೇಹ ಪತ್ತೆಗೆ ಸ್ಥಳೀಯರು, ಅಗ್ನಿಶಾಮಕ ದಳ ಹಾಗೂ ಶೌರ್ಯ ವಿಪತ್ತು ಪಡೆ ಶೋಧ ನಡೆಸುತ್ತಿದೆ. ಬೆಳ್ತಂಗಡಿ ಪೊಲೀಸರು ಸ್ಥಳಕ್ಕೆ ಧಾವಿಸಿ ಪರಿಶೀಲನೆ ನಡೆಸಿದ್ದಾರೆ.

ಹೆಚ್ಚಿನ ಬಡ್ಡಿ ಆಮಿಷ: ಕೋಟಿ ರು. ವಂಚನೆ

ಮೈಸೂರು: ಅತಿ ಹೆಚ್ಚಿನ ಬಡ್ಡಿ ಆಸೆ ತೋರಿಸಿ ಸಾವಿರಾರು ಕೋಟಿ ರು.ವಂಚನೆ ಮಾಡಿರುವ ಪ್ರಕರಣ ಬೆಳಗಾವಿಯಲ್ಲಿ ಸದ್ದು ಮಾಡುತ್ತಿರುವ ಹೊತ್ತಿನಲ್ಲೇ ಮೈಸೂರಿನಲ್ಲಿ ಚಿನ್ನದ ಹೆಸರಿನಲ್ಲಿ ವ್ಯಕ್ತಿಯೊಬ್ಬ ನೂರಾರು ಜನರಿಗೆ ವಂಚಿಸಿರುವ ಪ್ರಕರಣವೊಂದು ಬೆಳಕಿಗೆ ಬಂದಿದೆ. ಚಿನ್ನ ಖರೀದಿ ವಿಚಾರದಲ್ಲಿ ಮೈಸೂರಿನ ಸೌಂದರ್ ರಾಜ್ ಅಲಿಯಾಸ್ ಚಿನ್ನತಂಬಿ ಎಂಬಾತ ನೂರಾರು ಜನರಿಗೆ ವಂಚಿಸಿದ್ದು, ಈಗ ಈತನ ವಿರುದ್ಧ ವಂಚನೆಒಳಗಾದ ಗ್ರಾಹಕರು ದೂರು ಸಲ್ಲಿಕೆ ಮಾಡುತ್ತಿದ್ದಾರೆ. ಚಿನ್ನಕ್ಕೆ ಹೆಚ್ಚಿನ ಬೆಲೆ ಕೊಡುವುದಾಗಿ ಗಿರವಿ ಇಟ್ಟುಕೊಂಡು ಮೋಸ ಮಾಡುತ್ತಿದ್ದ ಈತ, ಗ್ರಾಹಕರ ಮುಂದೆ ಕ್ಷಣಾರ್ಧದಲ್ಲಿ ಚಿನ್ನ ಕರಗಿಸುತ್ತಿದ್ದ. ಚಿನ್ನ ಕರಗಿಸಿದ ನಂತರ ನಿಮ್ಮದು ಅಪರಂಜಿ ಚಿನ್ನವಲ್ಲ ಎಂದು ವಂಚಿಸುತ್ತಿದ್ದ. ಕೊನೆಗೆ ಬಾಡಿಗಾರ್ಡ್‌ಗಳ ಮೂಲಕ ಹೆದರಿಸಿ ಕಡಿಮೆ ಹಣ ಕೊಟ್ಟು ಸೆಟಲ್ ಮಾಡುತ್ತಿದ್ದನು ಎನ್ನಲಾಗಿದೆ.

ರಾಜ್ಯದಲ್ಲಿ ಇನ್ನೊಂದು ವಾರ ಮಳೆ ಸಾಧ್ಯತೆ

ಬೆಂಗಳೂರು: ರಾಜ್ಯದಲ್ಲಿ ಕಳೆದ ಕೆಲದಿನಗಳಿಂದ ಮಳೆಯಾಗುತ್ತಿದ್ದು, ಇನ್ನೊಂದು ವಾರ ಇದೀ ರೀತಿ ಮಳೆ ಮುಂದುವರಿಯಲಿದ್ದು, ರಾಜ್ಯದ ಉತ್ತರ ಹಾಗೂ ದಕ್ಷಿಣ ಒಳನಾಡಿನ ಕೆಲವೆಡೆ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಅವಧಿಗೂ ಮುನ್ನ ಈ ಬಾರಿ ಮುಂಗಾರು ಆಗಮಿಸುವ ಮುನ್ಸೂಚನೆ ಇದ್ದು, ಈಗಾಗಲೇ ಅದಕ್ಕೆ ಪೂರಕವಾದ ಸನ್ನಿವೇಶಗಳು ವಾತಾವರಣದಲ್ಲಿ ಕಂಡುಬರುತ್ತಿವೆ. ಇದರಿಂದ ಪೂರ್ವ ಮುಂಗಾರು ಚೇತರಿಸಿಕೊಂಡಿದ್ದು, ರಾಜ್ಯದ ಹಲವೆಡೆ ಮಳೆಯಾಗಿದೆ. ಬಂಗಾಳ ಕೊಲ್ಲಿಯಲ್ಲಿ ಉಂಟಾಗಿದ್ದ ವಾಯುಭಾರ ಕುಸಿತ ಹಾಗೂ ಒಳನಾಡಿನಲ್ಲಿ ಉಂಟಾಗಿರುವ ಮೇಲ್ಮೆ ಸುಳಿಗಾಳಿಯಿಂದಾಗಿ ರಾಜ್ಯದ ದಕ್ಷಿಣ ಒಳನಾಡಿನ ಜಿಲ್ಲೆಗಳಲ್ಲಿ ಇಂದು ಮತ್ತು ನಾಳೆ ಯೆಲ್ಲೋ ಅಲರ್ಟ್ ನೀಡಲಾಗಿದೆ. ಉತ್ತರ ಒಳನಾಡಿನಲ್ಲಿ ಮಳೆ ಪ್ರಮಾಣ ಇನ್ನಷ್ಟು ಹೆಚ್ಚಾಗಲಿದ್ದು, ಮೇ 23 ರವರೆಗೂ ಯೆಲ್ಲೋ ಅಲರ್ಟ್ ನೀಡಲಾಗಿದೆ. ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ ಮಾಹಿತಿ ಪ್ರಕಾರ ರಾಜ್ಯದಲ್ಲಿ ಒಣ ಹವೆ ಮುಂದುವರಿಯಲಿದೆ. ಪೂರ್ವ ಮುಂಗಾರು ಮಳೆ ಹಿನ್ನೆಲೆ ಬಹಳಷ್ಟು ಕಡೆಗಳಲ್ಲಿ ಮಿಂಚು, ಗುಡುಗು, ಸಿಡಿಲು ಹಾಗೂ ಬಿರುಗಾಳಿ ಸಹಿತ ಮಳೆಯಾಗುವ ಸಾಧ್ಯತೆಗಳಿವೆ. ಈ ಬಾರಿ ಪೂರ್ವ ಮುಂಗಾರು ಮಳೆ ವಾಡಿಕೆಗಿಂತ ಕಡಿಮೆಯಾಗಿದೆ.

ನಾಡ ಸಮಸ್ಯೆಗೆ ಸಿಎಂ ಪರಿಹಾರ

- **ಸ್ಥಳ :** ಬೆಟ್ಟದಬೀಡು, ಮೈಸೂರು ಜಿಲ್ಲೆ
ಸಮಸ್ಯೆಯೇನು..? : ದುರಸ್ಥಿಹಂತ ತಲುಪಿದ ವಿದ್ಯುತ್ ಕಂಬ ಬದಲಾಯಿಸುವ ಬಗ್ಗೆ.
- **ಪರಿಹಾರ:** ಎಚ್.ಡಿ.ಕೋಟೆ ತಾಲೂಕಿನ ಬೆಟ್ಟದಬೀಡು ಗ್ರಾಮದ ನ್ಯಾಯಬೆಲೆ ಅಂಗಡಿ ಪಕ್ಕದಲ್ಲಿ ವಿದ್ಯುತ್ ಕಂಬ ದುರಸ್ಥಿಹಂತ ತಲುಪಿದ್ದು, ಹೊಸ ಕಂಬ ಅಳವಡಿಸುವಂತೆ ರಾಜು ಎಸ್. ಎನ್ನುವವರು ಎಕ್ಸ್‌ನಲ್ಲಿ ಈ ಬಗ್ಗೆ ಪೋಸ್ಟ್ ಮಾಡಿದ್ದರು. ಸ್ಥಳ ಪರಿಶೀಲನೆ ನಡೆಸಿದ ಅಧಿಕಾರಿಗಳು ಹೊಸ ವಿದ್ಯುತ್ ಕಂಬವನ್ನು ಅಳವಡಿಕೆ ಮಾಡಿಸಿದ್ದಾರೆ.

ದಿನ ವಿಶೇಷ

21 ಮೇ 2026 ಗುರುವಾರ

- » ಸೂರ್ಯೋದಯ : 5-46
- » ಸೂರ್ಯಾಸ್ತ : 6-59
- » ತಿಥಿ : ಪಂಚಮಿ
- » ನಕ್ಷತ್ರ : ಪುಷ್ಯ
- » ಸಂವತ್ಸರ : ಪರಾಭವ
- » ಅಯನ : ಉತ್ತರಾಯನ
- » ಋತು : ಗ್ರೀಷ್ಮ
- » ಮಾಸ : ಅಧಿಕ ಜ್ಯೇಷ್ಠ
- » ಪಕ್ಷ : ಶುಕ್ಲಪಕ್ಷ

ಚಿನ್ನದ ತಾಳಿ ಹಾಕಿಕೊಳ್ಳಬೇಡಿ ಎಂದರೆ ಹೇಗೆ? ಮೋದಿ ಹೇಳಿಕೆಗೆ ಡಿಸಿಎಂ ಡಿಕೆಶಿ ತಿರುಗೇಟು

ಬಿಜೆಪಿ ನಾಯಕರೇನು ನಿತ್ಯವೂ ಸಾರ್ವಜನಿಕ ಸಾರಿಗೆ ಬಳಸ್ತಾರಾ?

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಬಿಜೆಪಿ ನಾಯಕರು ಒಂದು ದಿನದ ಫೋಟೋ ಶೂಟ್ ಬಿಟ್ಟು ಪ್ರತಿನಿತ್ಯ ಮೆಟ್ರೋ, ಸಾರ್ವಜನಿಕ ಸಾರಿಗೆಯಲ್ಲಿ ಓಡಾಡುತ್ತಾರಾ? ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಪ್ರಶ್ನಿಸಿದರು.

- **ಗ್ಯಾರಂಟಿ ಯೋಜನೆಗಳು ಇತಿಹಾಸ ಸೃಷ್ಟಿಸಿವೆ, ಪಂಚ ಗ್ಯಾರಂಟಿಗೆ 1.34 ಲಕ್ಷ ಕೋಟಿ ರು. ವೆಚ್ಚ**
- **ರಾಜಣ್ಣ ಯಾಕೆ ಸಿಎಂ ಬದಲಾವಣೆ ಮಾಡಲು ಮುಂದಾಗಿದ್ದಾರೆ? ಡಿಸಿಎಂ ಡಿ.ಕೆ. ಶಿವಕುಮಾರ್**

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮಾಂಗಲ್ಯ ಎಂಬುದು ನಮ್ಮ ಧರ್ಮದ ಸಂಕೇತ. ಹೆಣ್ಣು-ಗಂಡು ಸೇರಿ ವಧು ವರರಾಗುತ್ತಾರೆ, ಅಕ್ಕಿ ಹಾಗೂ ಅರಿಶಿನ ಸೇರಿ ಮಂತ್ರಾಕ್ಷತೆಯಾಗುತ್ತದೆ. ಹಿಂದೂ ಧರ್ಮದಲ್ಲಿ ಈ ಹೆಣ್ಣು ಹಾಗೂ ಗಂಡಿನ ನಡುವೆ ಬಾಂಧವ್ಯ ಬೆಸೆಯುವುದು ಮಾಂಗಲ್ಯ. ಅದು ದೇವಾನು ದೇವತೆಗಳ ಕಾಲದಿಂದ ನಡೆದುಕೊಂಡು ಬಂದಿದೆ. ನಾವು ದೇವರಿಗೂ ಮಾಂಗಲ್ಯ ಹಾಕಿರುತ್ತೇವೆ. ಇಂತಹ ಪರಿಸ್ಥಿತಿಯಲ್ಲಿ ಮಾಂಗಲ್ಯವನ್ನು ಖರೀದಿ ಮಾಡಬೇಡ ಎಂದರೆ ಹೇಗೆ? ನೀವು ದುಡಿದ ಹಣದಲ್ಲಿ ನೀವು ಅದನ್ನು ಖರೀದಿ ಮಾಡಿರುತ್ತೀರಿ. ಮದುವೆಯಾಗುವಾಗಲೂ ಚಿನ್ನ ಖರೀದಿಸಬೇಡಿ, ಚಿನ್ನದ ತಾಳಿ ಬದಲು ಅರಿಶಿನ ಕೊಂಬು ಕಟ್ಟಿಕೊಳ್ಳಿ ಎಂದರೆ ಹೇಗೆ? ಎಂದು ಪ್ರಶ್ನಿಸಿದರು.

ನಿಮ್ಮ ಕೈಯಲ್ಲಿ ಬೆಲೆ ಏರಿಕೆ ತಡೆಯಲು ಆಗಲಿಲ್ಲ. ಅಡುಗೆ ಎಣ್ಣೆ, ಇಂಧನ ಕಡಿಮೆ ಬಳಸಿ ಎನ್ನುತ್ತಿದ್ದಾರೆ. ಇವರು ಒಂದೆರಡು ದಿನ ಸಾರ್ವಜನಿಕ ಸಾರಿಗೆ ಬಳಸುತ್ತಿದ್ದಾರೆ. ಸೋಮಣ್ಣ ಹಾಗೂ ಇತರೆ ಸಚಿವರು ಹಾಗೂ ಬಿಜೆಪಿ ನಾಯಕರು ದಿನನಿತ್ಯ ಸಾರ್ವಜನಿಕ ಸಾರಿಗೆಯಲ್ಲಿ ಓಡಾಡುತ್ತಾರಾ? ಅವರು ಓಡಾಡುವುದಾದರೆ ನಮ್ಮ ಅಭ್ಯಂತರವಿಲ್ಲ. ಅವರು ಪೆಟ್ರೋಲ್, ಡೀಸೆಲ್ ಉಳಿಸಲಿ, ಅಡುಗೆ ಎಣ್ಣೆ ಬಳಸಿದ ಆಹಾರ ತಿನ್ನುವುದೇ ಬೇಡ. ವಿದೇಶ ಪ್ರವಾಸ ಮಾಡಬೇಡ ಎಂದಿದ್ದಾರೆ. ಅವರು ವಿದೇಶ ಪ್ರವಾಸ ಹೋಗಿರುವುದನ್ನು ನಾನು ಪ್ರಶ್ನೆ ಮಾಡುವುದಿಲ್ಲ ಎಂದರು.

ರಾಜಣ್ಣ ಅವರು ಸಿಎಂ ಬದಲಾವಣೆ ಮಾಡಲು ಯಾಕೆ ಹೊರಟಿದ್ದಾರೆ? ಸಿಎಂ ಮುಂದುವರಿಯಲಿ ಎಂದು ಹೇಳುವುದರಲ್ಲಿ ತಪ್ಪೇನಿಲ್ಲ. ಪರಮೇಶ್ವರ ಅವರನ್ನು ಸಿಎಂ ಮಾಡಬೇಕು ಎನ್ನುವುದಾದರೆ ಸಿಎಂ ಅಧಿಕಾರದಿಂದ ಇಳಿಯಬೇಕು ಎಂಬುದು ಅವರ ಮಾತಿನ ಅರ್ಥವೇ? ಸಿಎಂ ಬದಲಾಗಬೇಕು ಎಂದು ನಾನು ಎಂದಾದರೂ ಹೇಳಿದ್ದೀನಾ? ನಾನು ಎಲ್ಲೂ ಹೇಳಿಲ್ಲವಲ್ಲಾ. ರಾಜಣ್ಣ ಅವರೇ ಸಿಎಂ ಬದಲಾವಣೆ ಮಾಡಲು ಮುಂದಾಗಿದ್ದಾರೆ. ನೀವು ಈ ಬಗ್ಗೆ ಅವರನ್ನೇ ಕೇಳಿ.

- ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ಪ್ರತಿ ಜಿಲ್ಲೆಯಲ್ಲಿ ಮೆಡಿಕಲ್ ಕಾಲೇಜು ಸ್ಥಾಪಿಸುವ ನಮ್ಮ ಉದ್ದೇಶವನ್ನು ಪೂರ್ಣಗೊಳಿಸಿದ್ದು, 2 ಜಿಲ್ಲೆ ಹೊರತಾಗಿ ಉಳಿದ ಎಲ್ಲಾ ಜಿಲ್ಲೆಗಳಲ್ಲಿ ಮೆಡಿಕಲ್ ಕಾಲೇಜು ಆರಂಭಿಸಿದ್ದೇವೆ. ಎಲ್ಲಾ ಸಮುದಾಯಗಳಿಗೆ ನ್ಯಾಯ ಒದಗಿಸಿದ್ದೇವೆ. ಕೋವಿಡ್ ಸಮಯದಲ್ಲಿ ಬಿಜೆಪಿ ಸರಕಾರ ಜನರಿಗೆ ಯಾವುದೇ ನೆರವು ನೀಡಲಿಲ್ಲ. ನಮ್ಮ ಸರಕಾರ ಚಾಮರಾಜನಗರ ಆಕ್ಸಿಜನ್ ದುರಂತ ಸಂತ್ರಸ್ತ ಕುಟುಂಬದವರಿಗೆ ಸರಕಾರಿ ಉದ್ಯೋಗ ನೀಡಿದ್ದೇವೆ ಎಂದು ತಿಳಿಸಿದರು.

ಬೆಂಗಳೂರು ನಗರವನ್ನು ವಿಶ್ವದರ್ಜೆಗೆ ಏರಿಸಲು ನಮ್ಮ ಸರಕಾರ ಭದ್ರ ಬುನಾದಿ ಹಾಕಿದೆ. ನಮ್ಮ ಕಾರ್ಯಕ್ರಮಗಳನ್ನು ವಿರೋಧ ಪಕ್ಷಗಳು ಒಪ್ಪಿದ್ದು, ವಿರೋಧ ಪಕ್ಷಗಳು ರಾಜಕೀಯವಾಗಿ ಟೀಕೆ ಮಾಡುವುದು ಸಹಜ. ಅವರು ನಮ್ಮನ್ನು ತಿದ್ದುವ ಕೆಲಸ ಮಾಡಿದರೆ ಮಾಡಲಿ. ಮೂರು ವರ್ಷಗಳಲ್ಲಿ ನಾವು ಮಾಡಿರುವ ಸಾಧನೆಗೆ ಅಧಿಕಾರಿಗಳು ಹಾಗೂ ರಾಜ್ಯದ ಜನರು ಸಹಕಾರ ನೀಡಿದ್ದಾರೆ. ವಿರೋಧ ಪಕ್ಷದವರು ಸಲಹೆ ನೀಡಿದ್ದು ಟೀಕೆ ಮಾಡಿದ್ದಾರೆ. ಮಾಧ್ಯಮಗಳು ನಮಗೆ ಮಾರ್ಗದರ್ಶನ ನೀಡಿದ್ದು ಎಲ್ಲರಿಗೂ ಅಭಿನಂದನೆ ಸಲ್ಲಿಸುತ್ತೇನೆ ಎಂದು ಹೇಳಿದರು.

ಗ್ಯಾರಂಟಿಗಳ ಮೆಚ್ಚಿ ಆಕ್ಸ್‌ಫರ್ಡ್ ವಿವಿ ಅಧ್ಯಯನ

ನಮ್ಮ ಸರಕಾರ ಮೂರು ವರ್ಷಗಳಲ್ಲಿ ಪಂಚ ಗ್ಯಾರಂಟಿ ಯೋಜನೆಗಳಿಗೆ 1.34 ಲಕ್ಷ ಕೋಟಿ ಹಣವನ್ನು ವೆಚ್ಚ ಮಾಡಿದ್ದು, ಆರನೇ ಗ್ಯಾರಂಟಿಯಾಗಿ ಭೂ ಗ್ಯಾರಂಟಿ ನೀಡಿದೆ. ಆ ಮೂಲಕ ಇಡೀ ದೇಶದಲ್ಲೇ ಇತಿಹಾಸ ಸೃಷ್ಟಿಸಿದೆ. ನಮ್ಮ ಸರಕಾರಕ್ಕೆ ಮೂರು ವರ್ಷ ತುಂಬಿದೆ. ಆಕ್ಸ್‌ಫರ್ಡ್ ವಿವಿಯವರು ನಮ್ಮ ಗ್ಯಾರಂಟಿ ಯೋಜನೆಗಳ ಬಗ್ಗೆ ಅಧ್ಯಯನ ಮಾಡಿದ್ದು, ಈ ಅಧ್ಯಯನದಲ್ಲಿ ನಮ್ಮ ಗ್ಯಾರಂಟಿ ಯೋಜನೆಗಳನ್ನು ಕತ್ತಲೆಯಲ್ಲಿ ಮೂಡಿದ ಬೆಳಕು ಎಂದು ಬಣ್ಣಿಸಿದ್ದಾರೆ. ನಮ್ಮ ಈ ಕಾರ್ಯಕ್ರಮ ದೇಶಕ್ಕೆ ಮಾದರಿ. ನಮ್ಮ ಯೋಜನೆಗಳನ್ನು ಟೀಕೆ ಮಾಡುತಿದ್ದ ಬಿಜೆಪಿ ಮಹಾರಾಷ್ಟ್ರ, ಮಧ್ಯಪ್ರದೇಶ ಹರಿಯಾಣ, ಬಿಹಾರ ಸೇರಿದಂತೆ ಇತರೆ ರಾಜ್ಯಗಳಲ್ಲಿ ನಮ್ಮ ಯೋಜನೆಗಳನ್ನು ನಕಲು ಮಾಡಿ ಜಾರಿಗೆ ತಂದಿದ್ದಾರೆ. ಚುನಾವಣೆ ಗೆಲ್ಲಲು ನಮ್ಮ ಮಾದರಿಯನ್ನು ಅನುಸರಿಸುತ್ತಿದ್ದಾರೆ. ತಮ್ಮದೇ ಆದ ಯೋಜನೆಗಳನ್ನು ಜಾರಿ ಮಾಡದೇ, ಕಾಂಗ್ರೆಸ್ ಕಾರ್ಯಕ್ರಮಗಳನ್ನು ಅನುಸರಿಸುತ್ತಿರುವುದಕ್ಕಾಗಿ ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ತಿಳಿಸಿದರು.





ಕರ್ನಾಟಕ ವಾಯುಮಾಲಿನ್ಯ ನಿಯಂತ್ರಣ ಮಂಡಳಿ ವತಿಯಿಂದ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ಆರು ಕೋಟಿ ರು. ಮೊತ್ತದ ಚೆಕ್ ಅನ್ನು ಮಂಡಳಿಯ ಅಧ್ಯಕ್ಷ ನರೇಂದ್ರ ಸ್ವಾಮಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಹಸ್ತಾಂತರಿಸಿದರು. ಈ ವೇಳೆ ಅರಣ್ಯ ಸಚಿವ ಈಶ್ವರ್ ಖಂಡ್ರೆ, ಕೆಎಸ್‌ಟಿಡಿಸಿ ಅಧ್ಯಕ್ಷ ಎಂ.ಶ್ರೀನಿವಾಸ್, ಸದಸ್ಯ ಕಾರ್ಯದರ್ಶಿ ಆರ್. ಗೋಕುಲ ಸೇರಿ ಹಲವರಿದ್ದರು.

ತುಮಕೂರಿಗೆ ಬೆಂಗಳೂರು ಉತ್ತರ ಹೆಸರೆಂಬ ಹೇಳಿಕೆಗೆ ಪರಂ ಸಮರ್ಥನೆ

ಬ್ರ್ಯಾಂಡ್ ಬೆಂಗಳೂರು ವಿಸ್ತರಣೆಗೆ ಹೆಸರು ಬದಲಾವಣೆ ಸಹಕಾರಿ

ತುಮಕೂರು: ಬಂಡವಾಳ ಹೂಡಿಕೆದಾರರಿಗೆ ತುಮಕೂರು ಎಲ್ಲಿದೆ ಎಂದು ಗುರುತಿಸುವುದು ಕಷ್ಟ. ಆದರೆ ಬೆಂಗಳೂರು ಉತ್ತರ ಎಂದರೆ ಸುಲಭವಾಗಿ ಅರ್ಥವಾಗುತ್ತದೆ. ಇದು ಬ್ರ್ಯಾಂಡ್ ಬೆಂಗಳೂರಿನ ವಿಸ್ತರಣೆಗೆ ಸಹಕಾರಿಯಾಗಲಿದೆ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ತಿಳಿಸಿದರು.

ನಗರದಲ್ಲಿ ತುಮಕೂರನ್ನು ಬೆಂಗಳೂರು ಉತ್ತರ ಎಂದು ಘೋಷಿಸುವಂತೆ ನೀಡಿದ್ದ ಹೇಳಿಕೆಗೆ ಸಮರ್ಥನೆ ನೀಡಿದ ಸಚಿವರು ಬೆಂಗಳೂರು ಅತಿ ಹೆಚ್ಚಿನ ಜನಸಂದಣಿ ಹೊಂದಿದ್ದು ಪರ್ಯಾಯವಾಗಿ ಮತ್ತೊಂದು ನಗರದ ಅವಶ್ಯಕತೆಯಿದೆ. ತುಮಕೂರು ಬೆಂಗಳೂರು ಸಮೀಪವಿರುವುದರಿಂದ ಬೃಹತ್ ಕೈಗಾರಿಕೆಗಳ ಸ್ಥಾಪನೆಗೆ ಅನುಕೂಲವಾಗಲಿದೆ. ಈ ದೃಷ್ಟಿಯಿಂದ ಬೆಂಗಳೂರು ಉತ್ತರ ಎಂದು ಘೋಷಿಸುವಂತೆ ಒತ್ತಾಯ ಮಾಡಿದ್ದೇನೆ ಹೊರೆತು ತುಮಕೂರು ಹೆಸರು ಬದಲಾಯಿಸಿ ಎಂದು ನಾನು ಹೇಳಿಲ್ಲ. ಅಮೆರಿಕದಲ್ಲಿಯೂ, ಇಂಗ್ಲೆಂಡಿನಲ್ಲಿಯೂ ಇರುವವರಿಗೆ ತುಮಕೂರು ಎಂದರೆ ಬೇಗ ಅರ್ಥವಾಗುವುದಿಲ್ಲ. ಬದಲಾಗಿ ಬೆಂ.ಉತ್ತರ ಎಂದರೆ ಅರ್ಥವಾಗುತ್ತದೆ. ತುಮಕೂರು ಹೆಸರು ಬದಲಾವಣೆ ಮಾಡಿ ಎಂದು ನಾನು ಎಲ್ಲಿ ಹೇಳಿದ್ದೇನೆ. ತುಮಕೂರು ಹೆಸರು ಬದಲಾವಣೆ ಆಗಲ್ಲ. ತುಮಕೂರಿನ ಒಂದು ಕಡ್ಡಿ ಸಹ ಅಲುಗಾಡುವುದಿಲ್ಲ. ವಿಸ್ತೀರ್ಣ ಸಹ ಬದಲಾವಣೆ ಆಗುವುದಿಲ್ಲ. ಈಗ ದೆಹಲಿಯಲ್ಲಿ ಎನ್‌ಸಿಆರ್ , ನೋಯ್ಡ ಎಂದಿದೆ. ಆಗ ಎಂದ ಮಾತ್ರಕ್ಕೆ ದೆಹಲಿ ಹೆಸರು ಬದಲಾಯಿಸಿಲ್ಲ. ಅದೇ ರೀತಿ ಇಲ್ಲಿಯೂ ಸಹ ತುಮಕೂರು ಹೆಸರು ಹಾಗೆ ಉಳಿಯುತ್ತದೆ. ತುಮಕೂರು ತಾಲೂಕು ಹಾಗೆ ಇರುತ್ತದೆ ಎಂದರು.

ಶಾಲಾರಂಭಕ್ಕೆ ಅಗತ್ಯವಿರುವ ಟೆಂಡರ್ ಪೂರ್ಣಗೊಳಿಸಿ 2 ವರ್ಷದಲ್ಲಿ ಇಡೀ ಪ್ರಕ್ರಿಯೆ ಮುಗಿಯಲಿ: ಸಿಎಂ

800 ಕೆಪಿಎಸ್ ಶಾಲೆ ಆರಂಭಿಸಲು ಕ್ರಮವಹಿಸಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಮುಂದಿನ 2 ವರ್ಷಗಳಲ್ಲಿ ರಾಜ್ಯದಲ್ಲಿ 800 ಕರ್ನಾಟಕ ಪಬ್ಲಿಕ್ ಸ್ಕೂಲ್ ತೆರೆಯುವ ಸಂಬಂಧ ಟೆಂಡರ್ ಪ್ರಕ್ರಿಯೆ ಶೀಘ್ರದಲ್ಲಿ ಆರಂಭಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದರು.

ಗೃಹ ಕಚೇರಿ ಕೃಷ್ಣಾದಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವರು ಹಾಗೂ ಅಧಿಕಾರಿಗಳೊಂದಿಗೆ ನಡೆದ ಸಭೆಯಲ್ಲಿ ಈ ಬಗ್ಗೆ ಸೂಚನೆ ನೀಡಿರುವ ಅವರು, ಜೂನ್ 1ರಿಂದ ಶಾಲೆಗಳು ಆರಂಭವಾಗುತ್ತಿದ್ದು, ಕೈಗೊಳ್ಳಬೇಕಾದ ಸಿದ್ದತೆಗಳ ಕುರಿತು ಕ್ರಮ ಕೈಗೊಳ್ಳಬೇಕು. ಎಲ್‌ಕೆಜಿಯಿಂದ 10ನೇ ತರಗತಿವರೆಗೆ ಕನ್ನಡ ಮತ್ತು ಆಂಗ್ಲ ಮಾಧ್ಯಮಗಳಲ್ಲಿ ಶಿಕ್ಷಣ ದೊರೆಯಲು ಕೆಪಿಎಸ್ ಶಾಲೆಗಳನ್ನು ಆರಂಭಿಸಲಾಗುತ್ತಿದೆ. ಎರಡು ವರ್ಷಗಳಲ್ಲಿ ಉದ್ದೇಶಿತ 800 ಶಾಲೆಗಳು ಪ್ರಾರಂಭವಾಗಲು ಟೆಂಡರ್ ಪ್ರಕ್ರಿಯೆ ಬೇಗ ನಡೆಸಬೇಕು ಎಂದು ಸೂಚಿಸಿದರು.

ಶಿವಮೊಗ್ಗದಲ್ಲಿ ಜೂನ್ 1ರಂದು ಕೆಪಿಎಸ್ ಶಾಲೆಗೆ ಚಾಲನೆ ನೀಡಲಾಗುವುದು. ಒಂದು ಕೆಪಿಎಸ್ ಶಾಲೆಯಲ್ಲಿ 1,200 ಮಕ್ಕಳಿಗೆ ಪ್ರವೇಶಾವಕಾಶ ಸಿಗಲಿದೆ. ಕೆಪಿಎಸ್ ಶಾಲೆಗಳಿಗೆ ಶಾಲಾ ಬಸ್ ವ್ಯವಸ್ಥೆ ಸೌಲಭ್ಯ ಯಾವ ರೀತಿಯಲ್ಲಿ ಕಲ್ಪಿಸಬಹುದು ಎಂಬ ಬಗ್ಗೆ ಕುರಿತು ಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ತಿಳಿಸಿದರು. ಸರಕಾರಿ ಶಾಲೆಗಳಲ್ಲಿ ಶಿಕ್ಷಕರ ಕೊರತೆ ಎದುರಿಸುತ್ತಿದ್ದು, ತಾತ್ಕಾಲಿಕವಾಗಿ ಅತಿಥಿ ಶಿಕ್ಷಕರನ್ನು ನಿಯೋಜಿಸಲಾಗಿದ್ದರೂ ಪರಿಪೂರ್ಣವಾಗಿಲ್ಲ. ಈ ನಿಟ್ಟಿನಲ್ಲಿ ಖಾಲಿಯಿರುವ 15 ಸಾವಿರ ಶಿಕ್ಷಕರ ಭರ್ತಿ ಸಂಬಂಧ ಕೂಡಲೇ ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಸಲ್ಲಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸಿಎಂ ಗೃಹ ಕಚೇರಿ ಕೃಷ್ಣಾದಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವ ಮಧುಬಂಗಾರಪ್ಪ ಅವರು ಇಲಾಖೆ ಅಧಿಕಾರಿಗಳೊಂದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಪತ್ರ ಸಲ್ಲಿಸಿದರು.

ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಉತ್ತಮ ಸಾಧನೆ: ಈ ಬಾರಿ ಎಸ್‌ಎಸ್‌ಎಲ್‌ಸಿಯಲ್ಲಿ ಶೇ.94.10ರಷ್ಟು ಫಲಿತಾಂಶ ದಾಖಲಾಗಿದ್ದು, ಕಳೆದ ವರ್ಷಕ್ಕಿಂತ ಶೇ.14.06 ಹೆಚ್ಚಾಗಿದೆ. ಪಿಯುಸಿಯಲ್ಲಿ ಈ ಬಾರಿ ಶೇ.86.48ರಷ್ಟು ಫಲಿತಾಂಶ ಬಂದಿದ್ದು, ಕಳೆದ ವರ್ಷಕ್ಕಿಂತ ಶೇ.13ರಷ್ಟು ಹೆಚ್ಚಳವಾಗಿದೆ. ಎಸ್‌ಎಸ್‌ಎಲ್‌ಸಿಯಲ್ಲಿ ಈ ವರ್ಷ ಶೇ.100ರಷ್ಟು ಫಲಿತಾಂಶ ಪಡೆದ ಶಾಲೆಗಳ ಸಂಖ್ಯೆ 2,393 ಇದ್ದು, ಕಳೆದ ವರ್ಷ 766 ಶಾಲೆಗಳು ಶೇ.100ರಷ್ಟು ಫಲಿತಾಂಶ ದಾಖಲಿಸಿದ್ದವು. ಈ ಬಾರಿ ಎಸ್‌ಎಸ್‌ಎಲ್‌ಸಿಯಲ್ಲಿ ಎಸ್‌ಸಿ ಮತ್ತು ಎಸ್‌ಟಿ ವಿದ್ಯಾರ್ಥಿಗಳ ಫಲಿತಾಂಶ ಶೇ.18ರಷ್ಟು ಹೆಚ್ಚಳವಾಗಿದೆ. ಅದೇ ರೀತಿ, ಎಲ್ಲ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಫಲಿತಾಂಶ ಗಣನೀಯವಾಗಿ ಸುಧಾರಣೆಯಾಗಿದೆ. ಕಲ್ಯಾಣ ಕರ್ನಾಟಕದಲ್ಲಿ ಹಿಂದಿನ ವರ್ಷಕ್ಕೆ ಹೋಲಿಸಿದರೆ ಶೇ.2ರಷ್ಟು ಹೆಚ್ಚಾಗಿದೆ. ಈ ಬಾರಿ ಯಾವುದೇ ವಿದ್ಯಾರ್ಥಿಗಳಿಗೆ ಗ್ರೇಸ್ ಅಂಕ ನೀಡಿಲ್ಲ, ಈ ಬಾರಿ ಎಸ್‌ಎಸ್‌ಎಲ್‌ಸಿ ಮೂರನೇ ಅಂತಿಮ ಪರೀಕ್ಷೆ ಇರುವುದಿಲ್ಲ. ಶಾಲಾ ಮಕ್ಕಳಿಗೆ ಉಚಿತ ಪಠ್ಯ ಪುಸ್ತಕಗಳೊಂದಿಗೆ ಉಚಿತ ನೋಟ್‌ಬುಕ್ ವಿತರಿಸುವ ಬೇಡಿಕೆ ಬಗ್ಗೆ ಪರಿಶೀಲನೆ ನಡೆಸಲಾಯಿತು ಎಂದು ಅಧಿಕಾರಿಗಳು ವಿವರಿಸಿದರು.

ಕಲಬುರಗಿ-ಬೆಂಗಳೂರು ರೈಲು ಪ್ರಯಾಣ, ಹೈರಾಣ | ಜನರಲ್ ಬೋಗಿಗಳಾದ ರಿಸರ್ವೇಷನ್ | ಹೆಚ್ಚಿನ ರೈಲುಗಳಿಗೆ ಆಗ್ರಹ

ಸುಖಕರ ಪ್ರಯಾಣ ಅಲ್ಲ, ಪ್ರತಿದಿನವೂ ನರಕ ದರ್ಶನ

ದೇವೇಂದ್ರ ಜಾಡಿ ಕಲಬುರಗಿ

ರಾಜಧಾನಿ ಬೆಂಗಳೂರು ಕಲಬುರಗಿ ನಡುವಿನ ರೈಲು ಪ್ರಯಾಣ ನರಕ ದರ್ಶನ ಆದಂತೆ. 10 ಗಂಟೆಗಳ ದೂರ ಪ್ರಯಾಣ ಮಾಡುವ ಸಾಮಾನ್ಯ ಬೋಗಿಯ ಪ್ರತಿ ಪ್ರಯಾಣಿಕರು ಹೈರಾಣ ಆಗುತ್ತಿದ್ದಾರೆ.

ಜನರಲ್ ಬೋಗಿಯಲ್ಲಿ ಕೂರಲು ಸ್ಥಳವಕಾಶ ವಿಲ್ಲದೇ ಅನಿವಾರ್ಯವಾಗಿ ಪ್ರಯಾಣಿಕರು ರಿಸರ್ವೇಷನ್ ಕಂಪಾರ್ಟ್‌ಮೆಂಟ್‌ಗಳಲ್ಲಿ ಪ್ರಯಾಣ ಮಾಡುತ್ತಿದ್ದಾರೆ. ತುಸು ಕೂರಲು ಸ್ಥಳವಿಲ್ಲದೇ ಗಂಟೆಗಂಟಲೇ ನಿಂತುಕೊಂಡೆ ಪ್ರಯಾಣಿಸುವ ಅನಿವಾರ್ಯತೆ ಎದುರಾಗಿದೆ. ರೈಲ್ವೆ ಇಲಾಖೆಗೆ ಪ್ರತಿ ಕೇಂದ್ರ ಬಜೆಟ್‌ನಲ್ಲಿ ಸಾವಿರಾರು ಕೋಟಿ ಅನುದಾನ ಹರಿದು ಬಂದರೂ, ಕಲ್ಯಾಣ ಕರ್ನಾಟಕ ಭಾಗದಲ್ಲಿ ಚಲಿಸುವ ರೈಲುಗಳನ್ನು ಮಾತ್ರ ಹೆಚ್ಚಳ ಮಾಡುತ್ತಿಲ್ಲ. ಸೂಕ್ತ ಸೌಲಭ್ಯಗಳಿಲ್ಲದೆ, ಪರದಾಡಿಕೊಂಡೆ ಜನ ಬೆಂಗಳೂರಿಗೆ ಪ್ರಯಾಣ ಮಾಡುತ್ತಿದ್ದಾರೆ. ನಿಲ್ದಾಣದಲ್ಲಿ ದಿನದ ಇಪ್ಪತ್ತನಾಲ್ಕು ಗಂಟೆಯೂ ಸಾರ್ವಜನಿಕರ ಹತಾಶೆಯ ಕೂಗು ಕೇಳಿಬರುತ್ತಿದ್ದರೂ, ಕೇಂದ್ರ ಸರಕಾರ, ಜನಪ್ರತಿನಿಧಿಗಳು ಕಣ್ಮುಚ್ಚಿಕುಳಿತಿರುವುದು ಜನರ ಆಕ್ರೋಶಕ್ಕೆ ಕಾರಣವಾಗಿದೆ.

ಶ್ರೀಮಂತರಿಗೆ ವಂದೇ ಭಾರತ್: ನಿತ್ಯವೂ ಕಲಬುರಗಿ ಮಾರ್ಗದ ಮೂಲಕ 10ಕ್ಕೂ ಹೆಚ್ಚು ರೈಲುಗಳು ಸಂಚರಿಸುತ್ತಿದ್ದರೂ ಸಾಮಾನ್ಯ ಜನರಿಗೆ ಅವುಗಳಿಂದ ಯಾವುದೇ ಪ್ರಯೋಜನವಾಗುತ್ತಿಲ್ಲ. ಬಹುನಿರೀಕ್ಷಿತ ವಂದೇ ಭಾರತ್ (22231) ರೈಲಿನ ದರ ಗಗನಕುಸುಮ ಆಗಿದ್ದು, ಬಡವರು ಮತ್ತು ಮಧ್ಯಮ ವರ್ಗದವರು ಇತ್ತ ಮುಖ ಮಾಡದ ಪರಿಸ್ಥಿತಿ ಇದೆ. ಇನ್ನುಳಿದ ಕರ್ನಾಟಕ ಎಕ್ಸ್‌ಪ್ರೆಸ್ (12628), ರಾಜಧಾನಿ (22692), ಕುರ್ಲಾ ಕೊಯಮತ್ತೂರು (11013) ಹಾಗೂ ಹುಸೇನ್ ಸಾಗರ್ (12702) ನಂತಹ ಪ್ರಮುಖ ರೈಲುಗಳು ನಿಲ್ದಾಣಕ್ಕೆ ಮಧ್ಯರಾತ್ರಿ ಬರುವುದರಿಂದ ವೃದ್ಧರು, ಮಹಿಳೆಯರು ಮತ್ತು ರೋಗಿಗಳಿಗೆ ತೀವ್ರ ತೊಂದರೆಯಾಗುತ್ತಿದೆ.



ರಿಸರ್ವೇಷನ್ ಬೋಗಿಗಳ ದಾರಿಗಳಲ್ಲಿ ಪ್ರಯಾಣಿಸುತ್ತಿರುವ ಜನರಲ್ ಟಿಕೆಟ್ ಪ್ರಯಾಣಿಕರು.

ಜನರಲ್ ಬೋಗಿಯಾದ ರಿಸರ್ವೇಶನ್ ಕಂಪಾರ್ಟ್‌ಮೆಂಟ್‌ಗಳು!: ಇದಲ್ಲದೇ, ನಿತ್ಯ ಜನಸಾಮಾನ್ಯರ ಆಸರೆಯಾಗಿರುವ ಸಿದ್ದೇಶ್ವರ ಉದ್ಯಾನ್ ಎಕ್ಸ್‌ಪ್ರೆಸ್ (11301), ಸೋಲಾಪುರ್-ಹಾಸನ್ ಎಕ್ಸ್‌ಪ್ರೆಸ್ (11311) ಮತ್ತು ಬಸವ ಎಕ್ಸ್‌ಪ್ರೆಸ್ (17308) ರೈಲುಗಳಲ್ಲಂತೂ ಅಮಾನವೀಯ ಸ್ಥಿತಿ ನಿರ್ಮಾಣವಾಗಿದೆ. ಕಾಯ್ದಿರಿಸಿದ ಟಿಕೆಟ್ ಪಡೆದ ಪ್ರಯಾಣಿಕರಿಗೂ ಸೀಟು ಸಿಗುತ್ತಿಲ್ಲ. ಅತಿಯಾದ ಜನದಟ್ಟಣೆಯಿಂದಾಗಿ ರಿಸರ್ವೇಶನ್ ಕಂಪಾರ್ಟ್‌ಮೆಂಟ್‌ಗಳೂ ಜನರಲ್ ಬೋಗಿಗಳಾಗಿ ಮಾರ್ಪಟ್ಟಿವೆ. ಒಳಗೆ ಓಡಾಡಲು ಜಾಗವಿಲ್ಲದೆ, ಮೂತ್ರ ಹಾಗೂ ಮಲ ವಿಸರ್ಜನೆಗೂ ಶೌಚಾಲಯಕ್ಕೆ ಹೋಗಲಾಗದಂತಹ ಸ್ಥಿತಿ ಇದೆ. ಕಲಬುರಗಿ, ಬೀದರ್, ಯಾದಗಿರಿ ಹಾಗೂ ರಾಯಚೂರು ಜಿಲ್ಲೆಯ ಜನರಿಗೆ ಬೆಂಗಳೂರು ಪ್ರಯಾಣ ನರಕ ದರ್ಶನ ಆಗುತ್ತಿದೆ.

ಅಶ್ವಿನಿ ವೈಷ್ಣವ್, ಸೋಮಣ್ಣಗೂ ಸಲ್ಲಿಸಿದ ಮನವಿ ವ್ಯರ್ಥ: ಇತ್ತೀಚೆಗಷ್ಟೇ ಬೆಂಗಳೂರು ಕಂಟೋನ್ಮೆಂಟ್‌ನಿಂದ ಕಲಬುರಗಿಗೆ ವಿಶೇಷ ರೈಲನ್ನು ಪ್ರಾರಂಭಿಸಲಾಗಿದೆಯಾದರೂ, ಅದು ವಾರಕ್ಕೊಮ್ಮೆ ಮಾತ್ರ ಸಂಚರಿಸುವುದರಿಂದ ದಿನನಿತ್ಯ ನರಳುತ್ತಿರುವ ಜನರಿಗೆ ಯಾವುದೇ ಪ್ರಯೋಜನವಾಗುತ್ತಿಲ್ಲ. ಈ ಕುರಿತು ಕಲ್ಯಾಣ ಕರ್ನಾಟಕದ ಜನಪ್ರತಿನಿಧಿಗಳು ಹಾಗೂ ಸಾರ್ವಜನಿಕರು ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರಿಗೂ ಮುಂಚಿತವಾಗಿ ಅನೇಕ ಬಾರಿ ಲಿಖಿತ ಮನವಿ ಸಲ್ಲಿಸಿದರೂ ಪ್ರಯೋಜ ಆಗಿಲ್ಲ. ತದನಂತರ ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಅವರಿಗೂ ಖುದ್ದಾಗಿ ಭೇಟಿಯಾಗಿ ಪರಿಸ್ಥಿತಿಯ ಗಂಭೀರತೆಯನ್ನು ಮನವರಿಕೆ ಮಾಡಿಕೊಡಲಾಗಿದ್ದರೂ ಯಾವುದೇ ಲಾಭವಾಗಿಲ್ಲ. ಇಬ್ಬರು ಸಚಿವರುಗಳಿದ್ದರೂ ಕಲ್ಯಾಣ ಕರ್ನಾಟಕದ ಜನರ ರೋದನೆ ಕೇಳುವವರೇ ಇಲ್ಲದಂತಾಗಿದೆ. ಈ ಭಾಗದ ಜನರ ಹಿತದೃಷ್ಟಿಯಿಂದ ಕಲಬುರಗಿ-ಬೆಂಗಳೂರು ನಡುವೆ ತಕ್ಷಣವೇ ಒಂದು ಪ್ರತ್ಯೇಕ ನಿತ್ಯ ಸಂಚರಿಸುವ ಸೂಪರ್‌ಫಾಸ್ಟ್ ರೈಲು ಆರಂಭಿಸಬೇಕಿದೆ.



ಅತೀ ಜನಸಂದಣಿ ರೈಲುಗಳು

- ಸಿದ್ದೇಶ್ವರ ಉದ್ಯಾನ್ ಎಕ್ಸ್‌ಪ್ರೆಸ್ (11301)
- ಸೋಲಾಪುರ್-ಹಾಸನ್ ಎಕ್ಸ್‌ಪ್ರೆಸ್ (11311)
- ಬಸವ ಎಕ್ಸ್‌ಪ್ರೆಸ್ (17308)

ಕಲಬುರಗಿ-ಬೆಂಗಳೂರು ನಡುವೆ ಮಾತ್ರ ದಿನನಿತ್ಯ ಓಡಾಡುವ ಪ್ರತ್ಯೇಕ ರೈಲು ಬಿಡುವಂತೆ ಕೇಂದ್ರ ಸಚಿವರಿಗೆ ಹತ್ತಾರು ಬಾರಿ ಮನವಿ ಮಾಡಿದರೂ ಪ್ರಯೋಜನವಾಗಿಲ್ಲ. ಕೌನ್ಸಿಲಿಂಗ್‌ಗೆ ಹೋಗುವ ವಿದ್ಯಾರ್ಥಿಗಳಿಗೆ ಟಿಕೆಟ್ ಸಿಗುತ್ತಿಲ್ಲ. ಬಡವರಿಗೆ ವಂದೇ ಭಾರತ್ ದುಬಾರಿಯಾಗಿದೆ. 2 ತಿಂಗಳ ಮುನ್ನ ಟಿಕೆಟ್ ಕಾಯ್ದಿರಿಸಿದರೂ ಸೀಟಿಲ್ಲದೇ, ವಲಸೆ ಹೋದ ಕಲ್ಯಾಣ ಕರ್ನಾಟಕದ ಜನ ಊರಿಗೆ ಮರಳಲು ನರಕಯಾತನೆ ಅನುಭವಿಸುತ್ತಿದ್ದಾರೆ. ತಕ್ಷಣ ಪ್ರತ್ಯೇಕ ರೈಲು ಬಿಡಿ.

- ಶರಣಬಸಪ್ಪಾ ಪಪ್ಪಾ, ಅಧ್ಯಕ್ಷ, ಕೆಕೆಸಿಸಿಐ

ನಾವು ಹಣ ಕೊಟ್ಟು ರಿಸರ್ವೇಶನ್ ಟಿಕೆಟ್ ಪಡೆದರೂ ನಮ್ಮ ಸೀಟಿನಲ್ಲಿ ನಮಗೆ ಕೂರಲು ಜಾಗ ಸಿಗುತ್ತಿಲ್ಲ. ಶೌಚಾಲಯದವರೆಗೂ ಜನ ತುಂಬಿರುತ್ತಾರೆ. ಕಲ್ಯಾಣ ಕರ್ನಾಟಕದ ಜನ ಎಂದರೆ ರೈಲ್ವೆ ಇಲಾಖೆಗೆ ಏಕಿಷ್ಟು ನಿರ್ಲಕ್ಷ್ಯ? ಸಚಿವ ವಿ. ಸೋಮಣ್ಣನವರೇ, ನಮಗೆ ವಾರಕ್ಕೊಮ್ಮೆ ಓಡುವ ರೈಲು ಬೇಡ, ದಿನನಿತ್ಯ ಸಂಚರಿಸುವ ಪ್ರತ್ಯೇಕ ಕಲಬುರಗಿ-ಬೆಂಗಳೂರು ಎಕ್ಸ್‌ಪ್ರೆಸ್ ರೈಲು ಬೇಕು.

- ಮುತ್ತಣ್ಣ ನಡಗೇರಿ, ಹೋರಾಟಗಾರ, ಕಲಬುರಗಿ

₹1000 ಕೋಟಿ ಕೊಟ್ರು ಯಾಕೀ ಅನ್ಯಾಯ?

ಕಲಬುರಗಿ ರೈಲ್ವೆ ನಿಲ್ದಾಣದಿಂದ ಪ್ರತಿವರ್ಷ ಸಾರ್ವಜನಿಕರ ಪ್ರಯಾಣ, ಗೂಡ್ಸ್ ವಾಹನ ಸಂಚಾರ ಹಾಗೂ ಇತರೆ ಮೂಲಗಳಿಂದ ಸೋಲಾಪುರ ರೈಲ್ವೆ ವಿಭಾಗಕ್ಕೆ ಬರೋಬ್ಬರಿ 1,000 ಕೋಟಿಗೂ ಅಧಿಕ ರುಪಾಯಿ ಭಾರಿ ಆದಾಯ ಹರಿದು ಹೋಗುತ್ತಿದೆ. ಇಷ್ಟೊಂದು ಬೃಹತ್ ಲಾಭ ತಂದುಕೊಡುತ್ತಿದ್ದರೂ ಕಲ್ಯಾಣ ಕರ್ನಾಟಕದ ಸಾರ್ವಜನಿಕರಿಗೆ ಸಿಗುತ್ತಿರುವ ಸೌಲಭ್ಯ ಮಾತ್ರ ಶೂನ್ಯ. ರಾಜಧಾನಿಗೆ ನಿತ್ಯ ಸಂಚರಿಸುವ ಒಂದೇ ಒಂದು ಪ್ರತ್ಯೇಕ ಎಕ್ಸ್‌ಪ್ರೆಸ್ ರೈಲು ಇಲ್ಲದಿರುವುದು ಈ ಭಾಗಕ್ಕೆ ಮಾಡುತ್ತಿರುವ ದ್ರೋಹವಾಗಿದೆ. ಕೇವಲ ವಾರದ ರೈಲು ನೀಡಿ ಕೈತೊಳೆದುಕೊಳ್ಳುತ್ತಿರುವ ರೈಲ್ವೆ ಇಲಾಖೆ, ಆದಾಯದ ಶೇಕಡಾ 10 ರಷ್ಟೂ ಸೌಲಭ್ಯ ನೀಡದಿರುವುದು ದುರಂತ.

ಸಂಪಾದಕೀಯ

ಬೀದಿಗಳನ್ನು ಸುರಕ್ಷಿತಗೊಳಿಸಿ

ಸಾರ್ವಜನಿಕ ಸ್ಥಳಗಳಿಂದ ಬೀದಿನಾಯಿಗಳ ಸ್ಥಳಾಂತರ, ಸಂತಾನ ಶಕ್ತಿಹರಣ ಕುರಿತು ತನ್ನ ಹಳೆಯ ತೀರ್ಪನ್ನು ಪ್ರಶ್ನಿಸಿ ಸಲ್ಲಿಸಲಾಗಿದ್ದ ಅರ್ಜಿಗಳನ್ನು ಸುಪ್ರೀಂ ಕೋರ್ಟ್ ವಜಾ ಮಾಡಿದ್ದು, ಆಕ್ರಮಣಕಾರಿ ಬೀದಿನಾಯಿಗಳ ಹತ್ಯೆಗೆ ಅವಕಾಶ ನೀಡಿದೆ. ರೇಬೀಸ್ ಪೀಡಿತ ಶ್ವಾನಗಳಿಗೆ ದಯಾಮರಣ ಕಲ್ಪಿಸಲು ಅವಕಾಶ ನೀಡಿದೆ. ಸಾರ್ವಜನಿಕ ಸ್ಥಳಗಳಾದ ಶಾಲೆ ಕಾಲೇಜು ಆವರಣ, ಬಸ್ ನಿಲ್ದಾಣ, ರೈಲು ನಿಲ್ದಾಣ, ಆಸ್ಪತ್ರೆ ಆವರಣಗಳನ್ನು ಶ್ವಾನಮುಕ್ತಗೊಳಿಸುವಂತೆ ಸಲಹೆ ನೀಡಿದೆ. ಬೀದಿನಾಯಿಗಳ ಸಂಖ್ಯೆ ಅಪಾಯಕಾರಿ ಪ್ರಮಾಣದಲ್ಲಿ ಹೆಚ್ಚುತ್ತಿದೆ. ನಾಯಿಕಡಿತ ಅಥವಾ ಜನರ ಮೇಲೆ ಆಕ್ರಮಣಕಾರಿ ದಾಳಿಯ ಘಟನೆಗಳು ಹೆಚ್ಚುತ್ತಿವೆ ಎಂದು ಕೋರ್ಟ್ ಗಮನಿಸಿದೆ. ಸಾರ್ವಜನಿಕ ಸುರಕ್ಷತೆಗೆ ಬೀದಿ ನಾಯಿಗಳ ಹಾವಳಿ ಹೆಚ್ಚಿರುವ ಪ್ರದೇಶಗಳಲ್ಲಿ ಪಶುವೈದ್ಯರ ಮೂಲಕ ಮೌಲ್ಯಮಾಪನ ಕೈಗೊಳ್ಳಬೇಕು. ರೋಗಪೀಡಿತ, ಆಕ್ರಮಣಕಾರಿ, ಅಪಾಯಕಾರಿ ಮನಸ್ಥಿತಿಯ ನಾಯಿಗಳನ್ನು ಗುರುತಿಸಬೇಕು. ಜನರಿಗೆ ಅಪಾಯ ಉಂಟುಮಾಡುವ ನಾಯಿಗಳಿಗೆ ದಯಾಮರಣ ಕಲ್ಪಿಸುವುದು ಸೇರಿದಂತೆ ಕಾನೂನು ಅನುಮತಿಸುವ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಸೂಚಿಸಿದೆ. ಇದು ಬಹು ಅಗತ್ಯವಾದ ಕ್ರಮವಾಗಿತ್ತು. ಬೀದಿ ನಾಯಿಗಳಿಂದ ದಾಳಿಗೆ ತುತ್ತಾದರೆ ಉಂಟಾಗುವ ಭೀಕರತೆಯನ್ನು ಹಾಗೆ ದಾಳಿಗೊಳಗಾದವರೇ ಬಲ್ಲರು. ಕರ್ನಾ ಟಕದಲ್ಲೂ ಇತರ ಕಡೆಗಳಲ್ಲೂ ಇಂಥ ಘಟನೆಗಳು ಸಾಕಷ್ಟು ಸಂಭವಿಸಿವೆ. ಅನೇಕ ಕಡೆಗಳಲ್ಲಿ ಬೀದಿ ನಾಯಿಗಳು ತೋಳಗಳ ಹಾಗೆ ಗುಂಪುಗೂಡಿ ಬೀದಿಯಲ್ಲಿ ಹೋಗುವ ಸಣ್ಣ ಮಕ್ಕಳ ಮೇಲೆ ಮುಗಿಬೀಳುತ್ತವೆ. ಅನೇಕ ಬಾರಿ ದೊಡ್ಡವರಿಗೂ ಹೆದರದೆ ಅವರ ಮೇಲೆ ಎಗರಿಬೀಳುವುದು ದೊಡ್ಡವರ ಮುಂದೆಯೇ ಮಕ್ಕಳನ್ನು ಕಚ್ಚಿ ಗಾಯಗೊಳಿಸುವುದು ಮಾಡುತ್ತವೆ. ಇದರಿಂದ ಉಂಟಾಗುವ ರೇಬಿಸ್ ಅಪಾಯವನ್ನು ನಿರ್ಲಕ್ಷಿಸು ಸಾಧ್ಯವೇ ಇಲ್ಲ. ಶ್ವಾನಪ್ರೇಮಿಗಳು ಎಂದು ಕರೆದುಕೊಳ್ಳುವ ಕೆಲವರು ಇಂಥ ನಾಯಿಗಳ ಪರ ಅಪಾಯಕಾರಿ ವಾದವನ್ನು ಮಂಡಿಸುತ್ತಾರೆ. ಎಲ್ಲ ಬೀದಿನಾಯಿಗಳೂ ಅಪಾಯಕಾರಿ ಅಲ್ಲ; ಆದರೆ ಎಲ್ಲ ಬೀದಿನಾಯಿಗಳೂ ನಿರಪಾಯಕಾರಿಯೂ ಅಲ್ಲ. ಯಾವುದು ಅಪಾಯಕಾರಿ ಎಂಬುದನ್ನು ಸ್ಥಳೀಯರು, ಆ ನಾಯಿಗಳಿಂದ ಹಲ್ಲೆಗೆ ಒಳಗಾದವರು ಬಲ್ಲರು. ಪಶುವೈದ್ಯರು, ಸ್ಥಳೀಯಾಡಳಿತ ಇಂಥ ಸ್ಥಳೀಯರಿಂದ ಮಾಹಿತಿ ಪಡೆದು ಆಕ್ರಮಣಕಾರಿ ನಾಯಿಗಳನ್ನು ಗುರುತಿಸಬೇಕು. ಅವುಗಳನ್ನು ಬೀದಿಗಳಿಂದ ತೆರವು ಮಾಡಬೇಕು. ಹಾಗೇ ಬಿಟ್ಟರೆ ಈ ನಾಯಿಗಳು ತಮ್ಮ ಮುಂದಿನ ಪೀಳಿಗೆಗೂ ಈ ಆಕ್ರಮಣಕಾರಿ ಗುಣವನ್ನು ದಾಟಿಸುತ್ತವೆ. ನಮ್ಮ ಬೀದಿಗಳನ್ನು ನಾವು ಸುರಕ್ಷಿತಗೊಳಿಸಬೇಕಿದೆ.

ಸೊಂಪಾದಕೀಯ

ಮೆಲೊಡಿಯಿಂದ ಗಡಿಬಿಡಿ

ಷೇರು ಮಾರುಕಟ್ಟೆಯಲ್ಲಿ ಜನರ ಮನಸ್ಥಿತಿ ಹೇಗಿರುತ್ತದೆ ಎಂದು ತೋರಿಸುವ ಘಟನೆ ನಿನ್ನೆ ನಡೆದಿದೆ. ಇಟಲಿಗೆ ಭೇಟಿ ನೀಡಿದ್ದ ನಮ್ಮ ಪ್ರಧಾನ ಮಂತ್ರಿ, ನರೇಂದ್ರ ಮೋದಿ ಅವರು ಇಟಲಿಯ ಪ್ರಧಾನ ಮಂತ್ರಿ ಜಾರ್ಜಿಯಾ ಮೆಲೋನಿ ಅವರಿಗೆ ಭಾರತದಿಂದ ಕೊಂಡೊಯ್ದ 'ಮೆಲೊಡಿ' ಟಾಫಿ ಚಾಲಕೇಟನ್ನು ಗಿಫ್ಟ್ ನೀಡಿದ್ದಾರೆ. ಮೆಲೋನಿ ಮತ್ತು ಮೋದಿ– ಸೇರಿದರೆ ಮೆಲೊಡಿ ಎಂಬುದು ಇದರ ಹಿಂದಿರುವ ಪದವಿನೋದ. ಈ ಮೆಲೊಡಿ ಪದವಿನೋದವನ್ನೂ ಈ ಹಿಂದೆ ಮೆಲೊನಿಯವರೇ ಟ್ವೀಟ್ ಮಾಡಿದ್ದರು. ಇದಾದದ್ದೇ ತಡ, ಷೇರು ಮಾರುಕಟ್ಟೆಯಲ್ಲಿ ಪಾರ್ಲೆ ಇಂಡಸ್ಟ್ರೀಸ್ ಸಂಸ್ಥೆಯ ಷೇರುಗಳ ಖರೀದಿ ಯದ್ವಾತದ್ವಾ ಏರಿತು. ಅದಕ್ಕನುಗುಣವಾಗಿ ಬೆಲೆಯೂ ಏರಿತು. ಯಾಕೆ ಎಂದು ಆ ಕಂಪನಿಯವರಿಗೂ ಅರ್ಥ ಆಗಿರಲಿಕ್ಕಿಲ್ಲ. ಅವರಿಗೂ ಗಡಿಬಿಡಿ ಆಗಿರಬಹುದು. ಆದದ್ದು ಇಷ್ಟೆ– ಜನ 'ಮೆಲೊಡಿ' ಚಾಕಲೇಟ್ ಯಾವ ಸಂಸ್ಥೆಯದ್ದು ಎಂದು ಸರ್ಚ್ ಮಾಡಿದ್ದಾರೆ. ಪಾರ್ಲೆ ಕಂಪನಿ ಎಂದು ಕಂಡುಬಂದಿದೆ. ಪ್ರಮಾದ ಏನೆಂದರೆ, ಮೆಲೊಡಿ ಉತ್ಪನ್ನ 'ಪಾರ್ಲೆ ಪ್ರಾಡಕ್ಟ್ಸ್' ಎಂಬ ಇನ್ನೊಂದು ಕಂಪನಿಯದ್ದು. ಅದು ಷೇರು ಮಾರುಕಟ್ಟೆಯಲ್ಲಿಲ್ಲ. ಜನ ಪಾರ್ಲೆ ಇಂಡಸ್ಟ್ರೀಸ್‌ನ್ನೇ ಮೆಲೊಡಿ ಉತ್ಪಾದಕ ಎಂದು ತಿಳಿದು ಅದಕ್ಕೆ ಮುಗಿಬಿದ್ದಿದ್ದಾರೆ. 'ಯಾರದೋ ಹೆಸರು, ಯಾರದೋ ಬಸಿರು' ಎಂಬ ಗಾದೆ ಬೇಡವೆಂದರೂ ಇಂಥ ಕಡೆ ನೆನಪಾಗದೇ ಇರದು. 'ಯಾರದೋ ದುಡ್ಡು, ಯಲ್ಲಮ್ಮನ ಜಾತ್ರೆ'ಯನ್ನೂ ನೆನಪಿಸಿಕೊಳ್ಳಬಹುದು. ಈಗ ನಿಮ್ಮ ಲಾಭದಲ್ಲಿ ನಮಗೂ ಪಾಲು ಕೊಡಿ ಎಂದು ಪಾರ್ಲೆ ಪ್ರಾಡಕ್ಟ್ಸ್ ಕಂಪನಿಯವರು ಪಾರ್ಲೆ ಇಂಡಸ್ಟ್ರೀಸ್ ಕಂಪನಿಗೆ ಡಿಮ್ಯಾಂಡ್ ಮಾಡಿದರೆ ಏನಾಗುತ್ತದೆ ಎಂದು ನೋಡಬೇಕು.

ಸಂಪಾದಕರ ಸದ್ಯಶೋಧನೆ

ಬದಲಾವಣೆ ಮತ್ತು ಆಯ್ಕೆ

'ನೀವು ಯಾವುದನ್ನು ಬದಲಾಯಿಸುತ್ತಿಲ್ಲವೋ, ಅದನ್ನು ನೀವು ಆರಿಸಿಕೊಳ್ಳುತ್ತಿದ್ದೀರಿ' (What you are not changing, you are choosing) ಎಂಬುದು ಜೀವನದ ಅತ್ಯಂತ ಕಟು ಹಾಗೂ ಪ್ರಭಾವಶಾಲಿ ಸತ್ಯಗಳಲ್ಲಿ ಒಂದು. ಮೇಲ್ನೋಟಕ್ಕೆ ಇದು ಕೇವಲ ಒಂದು ವಾಕ್ಯದಂತೆ ಕಂಡರೂ, ಇದರ ಆಳದಲ್ಲಿ ಜೀವನದ ಸಂಪೂರ್ಣ ಜವಾಬ್ದಾರಿಯ ಅರಿವಿದೆ. ಹಲವು ಬಾರಿ ನಾವು ನಮ್ಮ ಜೀವನದ ಸಮಸ್ಯೆಗಳಿಗೆ ಪರಿಸ್ಥಿತಿಗಳನ್ನು, ಇತರ ವ್ಯಕ್ತಿಗಳನ್ನು ಅಥವಾ ಅದೃಷ್ಟವನ್ನು ದೂರುತ್ತೇವೆ. ಆದರೆ ವಾಸ್ತವದಲ್ಲಿ, ನಮ್ಮ ಜೀವನದ ಪ್ರತಿ ಕ್ಷಣವೂ ನಮ್ಮ ನಿರ್ಧಾರಗಳ ಮೇಲೆ ನಿಂತಿರುತ್ತದೆ. ನಾವು ಒಂದು ವಿಷಯವನ್ನು ಬದಲಾಯಿಸಲು ಪ್ರಯತ್ನಿಸದೇ ಸುಮ್ಮನೆ ಕುಳಿತಿದ್ದೇವೆ ಎಂದರೆ, ನಾವು ಆ ಹಳೆಯ ಸ್ಥಿತಿಯನ್ನೇ ಮುಂದುವರಿಸಲು ಪರೋಕ್ಷವಾಗಿ ಒಪ್ಪಿಗೆ ನೀಡಿದ್ದೇವೆ ಎಂದರ್ಥ. ನಮ್ಮ ಯೋಚನಾ ಲಹರಿ ನಮ್ಮ ಜೀವನವನ್ನು ರೂಪಿಸುತ್ತದೆ. ಅನೇಕರು ಸದಾ ನಕಾರಾತ್ಮಕವಾಗಿ ಯೋಚಿಸುವ ಅಥವಾ ಸದಾ ದೂರು ನೀಡುವ ಅಭ್ಯಾಸವನ್ನು ಹೊಂದಿರುತ್ತಾರೆ. ಉದಾಹರಣೆಗೆ, ಒಬ್ಬ ವ್ಯಕ್ತಿಯು ತನ್ನ ಕೆಲಸದ ಬಗ್ಗೆ ಸದಾ ಅಸಮಾಧಾನ ವ್ಯಕ್ತಪಡಿಸುತ್ತಿರುತ್ತಾನೆ. 'ನನ್ನ ಬಾಸ್ ಸರಿಯಿಲ್ಲ,' 'ಪೇಮೆಂಟ್ ಸಾಲುತ್ತಿಲ್ಲ' ಎಂದು ವರ್ಷಗಟ್ಟಲೆ ದೂರುತ್ತಾನೆ. ಆದರೆ ಅವನು ಬೇರೆ ಕೆಲಸ ಹುಡುಕುವ ಅಥವಾ ಹೊಸ ಕೌಶಲಗಳನ್ನು ಕಲಿಯುವ ಪ್ರಯತ್ನ ಮಾಡುವುದಿಲ್ಲ. ಇಲ್ಲಿ ಅವನು ತನ್ನ ಕಷ್ಟದ ಪರಿಸ್ಥಿತಿಯನ್ನು ಬದಲಾಯಿಸುತ್ತಿಲ್ಲ, ಬದಲಾಗಿ ಅದೇ ಅಸಮಾಧಾನದ ಜೀವನವನ್ನು ಪ್ರತಿದಿನವೂ ಆರಿಸಿಕೊಳ್ಳುತ್ತಿದ್ದಾನೆ ಎಂದರ್ಥ. ಸಂಬಂಧಗಳು ಪ್ರೀತಿ ಮತ್ತು ಗೌರವದ ಮೇಲೆ ನಿಂತಿರುತ್ತವೆ. ಆದರೆ ಕೆಲವು ಸಂಬಂಧಗಳು ವಿಷಪೂರಿತವಾಗಿರುತ್ತವೆ. ಉದಾಹರಣೆಗೆ, ನಿಮ್ಮನ್ನು ನಿರಂತರವಾಗಿ ಅವಮಾನಿಸುವ ಅಥವಾ ನಿಮ್ಮ ಬೆಳವಣಿಗೆಯನ್ನು ತಡೆಯುವ ವ್ಯಕ್ತಿಯ ಜತೆ ನೀವು ಇರುತ್ತೀರಿ ಎಂದಿಟ್ಟುಕೊಳ್ಳಿ. ಆ ವ್ಯಕ್ತಿಯ ನಡವಳಿಕೆಯನ್ನು ಪ್ರಶ್ನಿಸದೇ ಅಥವಾ ಆ ಸಂಬಂಧದಿಂದ ಹೊರಬರಲು ಧೈರ್ಯ ಮಾಡದೇ ನೀವು ಅಲ್ಲೇ ಮುಂದುವರಿದರೆ, ನೀವು ನೋವನ್ನು ಅನುಭವಿಸಲು ಸಿದ್ಧರಿದ್ದೀರಿ ಎಂದು ಅರ್ಥ. ನೀವು ಬದಲಾವಣೆಯನ್ನು ಆರಿಸದಿದ್ದಾಗ, ನೀವು ಆ ನೋವನ್ನೇ ಆರಿಸಿಕೊಂಡಂತೆ. ನಮ್ಮ ದೇಹವು ನಾವು ನೀಡುವ ಆಹಾರ ಮತ್ತು ನೀಡುವ ವ್ಯಾಯಾಮದ ಪ್ರತಿಬಿಂಬ. ಉದಾಹರಣೆಗೆ, ಒಬ್ಬ ವ್ಯಕ್ತಿಗೆ ತಾನು ದಪ್ಪಗಾಗುತ್ತಿದ್ದೇನೆ ಅಥವಾ ಅನಾರೋಗ್ಯ ಕ್ಕೀಡಾಗುತ್ತಿದ್ದೇನೆ ಎಂಬ ಅರಿವಿರುತ್ತದೆ. ಪ್ರತಿದಿನ 'ನಾಳೆಯಿಂದ ವ್ಯಾಯಾಮ ಮಾಡುತ್ತೇನೆ' ಎನ್ನುತ್ತಾ ಜಂಕ್ ಫುಡ್ ತಿನ್ನುವುದನ್ನು ಮುಂದುವರಿಸುತ್ತಾನೆ. ಇಲ್ಲಿ ಅವನು ತನ್ನ ಅನಾರೋಗ್ಯಕರ ಜೀವನಶೈ ಲಿಯನ್ನು ಬದಲಾಯಿಸುತ್ತಿಲ್ಲ. ಅಂದರೆ, ಅವನು ಭವಿಷ್ಯದ ಅನಾರೋ ಗ್ಯವನ್ನು ಇಂದೇ ಆರಿಸಿಕೊಳ್ಳುತ್ತಿದ್ದಾನೆ. ನಮಗೆ ಬದಲಾವಣೆ ಬೇಕು ಎಂದರೆ ನಾವು ಕ್ರಿಯೆಯಲ್ಲಿ ತೊಡಗಬೇಕು. ಇಲ್ಲದಿದ್ದರೆ ನಾವು ನಮ್ಮ ಹಳೆಯ ಆಲಸ್ಯಕ್ಕೆ ಮತ ಹಾಕುತ್ತಿದ್ದೇವೆ ಎಂದೇ ಅರ್ಥ. ಬಡತನವು ಹುಟ್ಟಿನಿಂದ ಬರಬಹುದು, ಆದರೆ ಆರ್ಥಿಕ ಸಂಕಷ್ಟದಲ್ಲೇ ಮುಂದುವರಿಯುವುದು ನಮ್ಮ ನಿರ್ಧಾರಗಳ ಮೇಲೆ ಅವಲಂಬಿತವಾಗಿರುತ್ತದೆ. ಉದಾಹರಣೆಗೆ, ಸಾಲದ ಸುಳಿಯಲ್ಲಿ ಸಿಲುಕಿದ ವ್ಯಕ್ತಿಯೊಬ್ಬನು ತನ್ನ ಖರ್ಚುಗಳನ್ನು ಕಡಿಮೆ ಮಾಡದೇ ಅಥವಾ ಆದಾಯ ಹೆಚ್ಚಿಸಿಕೊಳ್ಳುವ ದಾರಿ ಹುಡುಕದೇ 'ನನ್ನ ಹಣೆಬರಹ ಇಷ್ಟೇ' ಎನ್ನುತ್ತಾನೆ. ವಾಸ್ತವದಲ್ಲಿ, ಅವನು ತನ್ನ ಹಳೆಯ ಆರ್ಥಿಕ ಶಿಸ್ತಿನ ಕೊರತೆಯನ್ನು ಬದಲಾಯಿಸಲು ಸಿದ್ಧನಿಲ್ಲ. ಇದರರ್ಥ ಅವನು ಸಾಲದ ಸುಳಿಯನ್ನೇ ತನ್ನ ಭವಿಷ್ಯವನ್ನಾಗಿ ಆರಿಸಿಕೊಂಡಿದ್ದಾನೆ ಎಂದು ಭಾವಿಸಬಹುದು. ಬದಲಾವಣೆಗೆ ಮುಖ್ಯ ಅಡ್ಡಿ 'ಭಯ'. ನಾವು ಹೊಸತನ್ನು ಪ್ರಯತ್ನಿಸಲು ಹೆದರುತ್ತೇವೆ. ಉದಾಹರಣೆಗೆ, ಒಬ್ಬ ಪ್ರತಿಭಾವಂತ ಬರಹಗಾರನಿಗೆ ಪುಸ್ತಕ ಬರೆಯುವ ಆಸೆ ಇರುತ್ತದೆ. ಆದರೆ 'ಜನ ಏನು ಅಂದುಕೊಳ್ಳುತ್ತಾರೋ?' ಅಥವಾ 'ನನ್ನ ಪುಸ್ತಕ ಸೋಲುತ್ತದೆಯೇ?' ಎಂಬ ಭಯದಿಂದ ಅವನು ಎಂದಿಗೂ ಬರೆಯಲು ಶುರು ಮಾಡುವುದಿಲ್ಲ. ಅವನು ತನ್ನ ಸಾಧಾರಣ ಜೀವನವನ್ನು ಬದಲಾಯಿಸಲು ಮುಂದಾಗುತ್ತಿಲ್ಲ. ಅಂದರೆ, ಅವನು ತನ್ನ ಪ್ರತಿಭೆಯ ಸಾವು ಮತ್ತು ಸಾಮಾನ್ಯ ಜೀವನವನ್ನೇ ಆರಿಸಿಕೊಂಡಿದ್ದಾನೆ. ಬದಲಾವಣೆ ಏಕೆ ಕಷ್ಟ? ನಮ್ಮ ಮಿದುಳು ಯಾವಾಗಲೂ ಪರಿಚಿತವಾದ ಹಾದಿಯಲ್ಲಿ ನಡೆಯಲು ಇಷ್ಟಪಡುತ್ತದೆ. ಹೊಸ ಹಾದಿ ಅನಿಶ್ಚಿತತೆಯಿಂದ ಕೂಡಿರುತ್ತದೆ. ಆದ್ದರಿಂದಲೇ ನಾವು ಎಷ್ಟೇ ಕಷ್ಟವಿದ್ದರೂ ಹಳೆಯ ನೋವಿನ ಪರಿಸ್ಥಿತಿಯಲ್ಲೇ ಇರಲು ಬಯಸುತ್ತೇವೆ. ಏಕೆಂದರೆ ಅದು ನಮಗೆ ಪರಿಚಿತ. ಬದಲಾ ಗುತ್ತೀರೋ ಅಥವಾ ಹಳೆಯದನ್ನೇ ಆರಿಸಿಕೊಳ್ಳುತ್ತೀರೋ? ಆಯ್ಕೆ ನಿಮ್ಮದು.

ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಪ್ರಧಾನಿ ಮಾತಾಡಲೇಬೇಕಾ?

ನೂರೆಂಟು ವಿಶ್ವ
ವಿಶ್ವೇಶ್ವರ ಭಟ್
vbhat@me.com

ಪ್ರಧಾನಿ ನರೇಂದ್ರ ಮೋದಿ ನಾರ್ವೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಅಲ್ಲಿನ ಪತ್ರಕರ್ತೆಯೊಬ್ಬಳು ಕೇಳಿದ ಪ್ರಶ್ನೆಗೆ, ಪ್ರಧಾನಿಯವರು ಉತ್ತರಿಸದೇ ಅವಳನ್ನು ನಿರ್ಲಕ್ಷಿಸಿದ ಘಟನೆ ಬಹಳ ಸುದ್ದಿ ಮಾಡುತ್ತಿದೆ. ಈ ನೆಪದಲ್ಲಿ, ಪ್ರಧಾನಿಯಾದಂದಿನಿಂದ ಅಂದರೆ ಕಳೆದ ಹದಿಮೂರು ವರ್ಷಗಳ ಅವಧಿಯಲ್ಲಿ ಮೋದಿಯವರು ಒಂದೇ ಒಂದು ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತಾಡದೇ ಇರುವುದು ಸಹ ಮುನ್ನಲೆಗೆ ಬಂದಿದೆ. ಈ ಹಿನ್ನೆಲೆಯಲ್ಲಿ ನಾರ್ವೆಯ ಅತಿ ಹೆಚ್ಚು ಪ್ರಸರಣದ ಪತ್ರಿಕೆಯೊಂದು ಮೋದಿಯವರನ್ನು 'ಅತಿ ಹಿಂದುಳಿದ ವ್ಯಕ್ತಿ' ಎನ್ನುವ ರೀತಿಯಲ್ಲಿ ಪುಂಗಿ ಊದುವ 'ಹಾವಾಡಿಗ' ಎಂಬ ರೀತಿಯಲ್ಲಿ ವ್ಯಂಗ್ಯಚಿತ್ರ ಬಿಡಿಸಿರುವುದು ಭಾರತದಲ್ಲಿ ತೀವ್ರ ಆಕ್ರೋಶ ಮತ್ತು ಬಿಸಿಬಿಸಿ ಚರ್ಚೆಗೆ ಕಾರಣವಾಗಿದೆ. ಪ್ರಧಾನಿಯಾದವರ ವಿರೋಧಿಗಳು ಮತ್ತು ಕಡು ಟೀಕಾಕಾರರು, ಇದನ್ನೇ ದೊಡ್ಡ ರಂಪ ಮಾಡುತ್ತಿದ್ದಾರೆ. 'ಅಂತಾರಾಷ್ಟ್ರೀಯ ವೇದಿಕೆಗಳಲ್ಲಿ ಪತ್ರಕರ್ತೆಯ ಪ್ರಶ್ನೆಗೆ ಉತ್ತರಿಸದ ಹೇಡಿ ಪ್ರಧಾನಿ', 'ಭಾರತದ ಮಾನ ಹರಾಜು ಹಾಕಿದ ಪ್ರಧಾನಿ' ಎಂಬ ಟೀಕೆಗಳೆಲ್ಲ ಕೇಳಿ ಬರುತ್ತಿವೆ. ಮೋದಿ ಯವರು ಪತ್ರಕರ್ತರ ಜತೆ ಅಂತರ ಕಾಪಾಡಿ ಕೊಂಡಿರುವುದು ಹೊಸ ವಿಷಯವೇನೂ ಅಲ್ಲ. ಹಾಗೆ ನೋಡಿದರೆ, ಅವರು ಪ್ರಧಾನಿಯಾಗುವ ಮುನ್ನ ಅಂದರೆ ಗುಜರಾತ್ ಮುಖ್ಯಮಂತ್ರಿಯಾಗಿರುವಾಗಲೇ ಆ ಅಂತರವನ್ನು ಕಾಪಾಡಿ ಕೊಂಡಿದ್ದರು. ಪ್ರಧಾನಿಯಾದ ಬಳಿಕ ಅದನ್ನು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ.

ಪ್ರಧಾನಿಯಾಗಿದ್ದ ಜವಾಹರಲಾಲ್ ನೆಹರು, ಇಂದಿರಾ ಗಾಂಧಿ, ರಾಜೀವ ಗಾಂಧಿ, ಅಟಲ್ ಬಿಹಾರಿ ವಾಜಪೇಯಿ, ನರಸಿಂಹರಾವ್, ಡಾ.ಮನಮೋಹನ ಸಿಂಗ್ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತಾಡುತ್ತಿದ್ದರು. ಪತ್ರಕರ್ತರ ಜತೆ ಬೆರೆಯುತ್ತಿದ್ದರು. ಆದರೆ ಈ ವಿಷಯದಲ್ಲಿ ಮೋದಿಯವರು ಸಂಪೂರ್ಣ ಭಿನ್ನ. ಅವರು ಪತ್ರಕರ್ತರಿಂದ ಗಾವುದ ದೂರ. ಪತ್ರಿಕಾಗೋಷ್ಠಿಯನ್ನಂತೂ ಅವರು ಕರೆದಿದ್ದೇ ಇಲ್ಲ. ಹಾಗಂತ ಅವರು ಮಾಧ್ಯಮಗಳಿಂದ ದೂರವಾಗಿದ್ದಾರೆ ಎಂದು ಭಾವಿಸಬೇಕಿಲ್ಲ. ಇಲ್ಲಿಯವರೆಗಿನ ಎಲ್ಲ ಪ್ರಧಾನಿಗಳಿಗಿಂತ ಭಿನ್ನವಾದ ಮಾದರಿಯನ್ನು ಅವರು ಅನುಸರಿಸುತ್ತಿದ್ದಾರೆ. ಹೀಗಾಗಿ ಮೋದಿಯವರ ನಡೆ ವಿವಾದಾತ್ಮಕವಾಗಿ ಕಾಣುತ್ತಿದೆ.

ಅಷ್ಟಕ್ಕೂ ಪ್ರಧಾನಿಯಾದವರು ಪತ್ರಿಕಾಗೋಷ್ಠಿಯನ್ನು ಕರೆಯಲೇಬೇಕಾ? ಕರೆಯದಿದ್ದರೆ ಅದು ಅಪರಾಧವಾ? ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪತ್ರಿಕಾಗೋಷ್ಠಿ ಎಂಬುದು ಒಂದು 'ಸಾಂಪ್ರದಾಯಿಕ ಶಿಷ್ಟಾಚಾರ'ವೇ (Convention) ಹೊರತು ಅದು ಸಂವಿಧಾನಬದ್ಧವಾದ 'ಕಾನೂನುಬದ್ಧ ನಿಯಮ'ವಲ್ಲ. ಪ್ರಧಾನಿಯಾದವರು ಇಂತಿಷ್ಟು ಬಾರಿ ಪತ್ರಿಕಾಗೋಷ್ಠಿ ನಡೆಸಬೇಕು ಅಥವಾ ಇಂಥದ್ದೇ ಮಾಧ್ಯಮದ ಮೂಲಕ ಜನರನ್ನು ಉದ್ದೇಶಿಸಿ ಮಾತನಾಡಬೇಕು ಎಂದು ಎಲ್ಲಿಯೂ ಬರೆದಿಲ್ಲ. ಪ್ರಧಾನಿಯಾದವರು ಜನರಿಗೆ ಉತ್ತರದಾಯಿಯಾಗಿರಬೇಕು (Accountable) ಎನ್ನುವುದು ಸಂವಿಧಾನದ ಆಶಯ. ಆದರೆ ಆ ಉತ್ತರದಾಯಿತ್ವವನ್ನು ಕೇವಲ ಪತ್ರಿಕಾಗೋಷ್ಠಿಯ ಮೂಲಕವೇ ಸಾಬೀತುಪಡಿಸಬೇಕಿಲ್ಲ.

ಸಂಸದೀಯ ಪ್ರಜಾಪ್ರಭುತ್ವದಲ್ಲಿ ಪ್ರಧಾನಿಯವರು ಮೊದಲು ಉತ್ತರಿಸಬೇಕಾದುದು ಸಂಸತ್ತಿಗೆ. ಸಂಸತ್ತಿನ ಅಧಿವೇಶನದಲ್ಲಿ ಪಾಲ್ಗೊಳ್ಳುವುದು, ಅಲ್ಲಿ ಕೇಳಲಾಗುವ ಪ್ರಶ್ನೆಗಳಿಗೆ ಉತ್ತರಿಸುವುದು ಮತ್ತು ಸರಕಾರದ ನೀತಿಗಳನ್ನು ಸದನದ ಮುಂದೆ ಮಂಡಿಸುವುದು ಕಾನೂನುಬದ್ಧ ಜವಾಬ್ದಾರಿ. ಪತ್ರಿಕಾಗೋಷ್ಠಿ ಎಂಬುದು ಸಂಸತ್ತಿನ ಹೊರಗಿನ ಒಂದು ವೇದಿಕೆಯಷ್ಟೇ. ಸಂಸತ್ತಿನಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವ ನಾಯಕನು ಪತ್ರಿಕಾಗೋಷ್ಠಿ ನಡೆಸದಿದ್ದರೂ ತಾಂತ್ರಿಕವಾಗಿ ತನ್ನ ಜವಾಬ್ದಾರಿಯನ್ನು ಪೂರೈಸಿದಂತೆಯೇ ಸರಿ. ಹಿಂದೆ ಪತ್ರಿಕೆಗಳು ಮತ್ತು ರೇಡಿಯೋ ಬಿಟ್ಟರೆ ಬೇರೆ ಸಂವಹನ ಮಾಧ್ಯಮಗಳಿರಲಿಲ್ಲ. ಆಗ ಪ್ರಧಾನಿಯಾದವರು ಪತ್ರಕರ್ತರನ್ನು ಕರೆದು (ಪತ್ರಿಕಾಗೋಷ್ಠಿ) ಮಾತನಾಡುವುದು ಅನಿವಾರ್ಯವಾಗಿತ್ತು. ಆದರೆ ಇಂದು ಪ್ರಧಾನಿಯವರ ಪ್ರತಿಯೊಂದು ಭಾಷಣವೂ ನೇರ ಪ್ರಸಾರವಾಗುತ್ತದೆ. ಪ್ರತಿ ನಿರ್ಧಾರವೂ ಕ್ಷಣಾರ್ಧದಲ್ಲಿ ಸಾಮಾಜಿಕ ಜಾಲತಾಣಗಳ ಮೂಲಕ, ಮೊಬೈಲ್ ಮೂಲಕ ಜನರಿಗೆ ತಲುಪುತ್ತದೆ.

ಹೀಗಿರುವಾಗ, ಪತ್ರಕರ್ತರ ಪ್ರಶ್ನೆಗಳ 'ಫಿಲ್ಟರ್' ಮೂಲಕವೇ ಸಂವಹನ ನಡೆಸಬೇಕು ಎಂಬುದು ಹಳೆಯ ಕಾಲದ ಸಂಪ್ರದಾಯವಾಗಿದೆಯೇ ಹೊರತು ಅನಿವಾರ್ಯತೆಯಲ್ಲ. ಪ್ರತಿಯೊಬ್ಬ ನಾಯಕನಿಗೂ ತನ್ನದೇ ಆದ ಕಾರ್ಯ ಶೈಲಿ ಇರುತ್ತದೆ. ಕೆಲವರು ಮಾಧ್ಯಮಗಳ ಮುಂದೆ ಹರಟಲು ಇಷ್ಟಪಡುತ್ತಾರೆ, ಇನ್ನು ಕೆಲವರು ತಮ್ಮದೇ ರೀತಿಯಲ್ಲಿ ಮಾತನಾಡಲು ಬಯಸುತ್ತಾರೆ. ಮೋದಿಯವರ ಶೈಲಿಯು 'ನೇರ ಸಂವಾದ' (Direct Engagement) ಮಾದರಿಯದ್ದು. ಅವರು ಪತ್ರಕರ್ತರ ಸಂಕೀರ್ಣ ಪ್ರಶ್ನೆಗಳಿಗಿಂತ ಜನರ ನೇರ ಅಭಿಪ್ರಾಯಗಳಿಗೆ (ಉದಾಹರಣೆಗೆ, ಟ್ವಿಟರ್, ಫೇಸ್ಬುಕ್, ಇನ್ಸ್ಟಾ, ಮನ್ ಕಿ ಬಾತ್ ಮೂಲಕ) ಹೆಚ್ಚು ಆದ್ಯತೆ ನೀಡುತ್ತಾರೆ. ಇದನ್ನು ಅವರ ವೈಯಕ್ತಿಕ ಶೈಲಿ ಎಂದು ಪರಿಗಣಿಸಬೇಕೇ ಹೊರತು ನಿಯಮದ ಉಲ್ಲಂಘನೆ ಎನ್ನಲಾಗದು.

ಈ ಸಾಮಾಜಿಕ ಜಾಲತಾಣಗಳ ಬಳಕೆ ಮತ್ತು ಫಾಲೋವರ್‌ಗಳ ಪಟ್ಟಿಯಲ್ಲಿ ಮೋದಿಯವರು ಜಾಗತಿಕ ನಾಯಕರ ಪೈಕಿ ಅಗ್ರಗಣ್ಯರಾಗಿದ್ದಾರೆ. ಪ್ರಧಾನಿ ಅಥವಾ ಸರಕಾರ, ಮಾಹಿತಿ ಹಕ್ಕು ಕಾಯ್ದೆ, ಸಂಸತ್ತಿನ ಚರ್ಚೆಗಳು ಮತ್ತು ಡಿಜಿಟಲ್ ಪ್ಲಾಟ್‌ಫಾರ್ಮ್‌ಗಳ ಮೂಲಕ ಮಾಹಿತಿ ನೀಡುತ್ತಿರುವಾಗ, ಪತ್ರಿಕಾಗೋಷ್ಠಿ ನಡೆಸದಿರುವುದು ಕೇವಲ ಒಂದು ಸಂಪ್ರದಾಯದ ಬದಲಾವಣೆ ಅಷ್ಟೆ. ಒಬ್ಬ ನಾಯಕ ತನ್ನ ಆಡಳಿತದ ಬಗ್ಗೆ ಜನರಿಗೆ ನಿರಂತರವಾಗಿ ಮಾಹಿತಿ ನೀಡುತ್ತಿದ್ದರೆ ಮತ್ತು ಅವರ ಸಮಸ್ಯೆಗಳಿಗೆ ಸ್ಪಂದಿಸುತ್ತಿದ್ದರೆ, ಅವರು ಯಾವ ಮಾಧ್ಯಮದ ಮೂಲಕ ಮಾತನಾಡುತ್ತಾರೆ ಎಂಬುದು ಗೌಣವಾಗುತ್ತದೆ. ಸಂವಹನ ತಂತ್ರಜ್ಞಾನ ಮತ್ತು ಸಾಮಾಜಿಕ ಮಾಧ್ಯಮಗಳ ಕ್ರಾಂತಿಯ ನಂತರ, ಒಬ್ಬ ನಾಯಕನ ಯಶಸ್ಸನ್ನು ಅಳೆಯುವ ಮಾನದಂಡಗಳು ಸಂಪೂರ್ಣವಾಗಿ ಬದಲಾಗಿವೆ.



ಹೀಗಿರುವಾಗ ಪ್ರಧಾನಿಯವರು ಪತ್ರಿಕಾಗೋಷ್ಠಿ ನಡೆಸುತ್ತಿಲ್ಲ ಎಂಬ ವಾದವು ಈ ಆಧುನಿಕ ಕಾಲಘಟ್ಟದಲ್ಲಿ ಅಪ್ರಸ್ತುತ. ನಾಯಕನೊಬ್ಬ ಪತ್ರಿಕಾಗೋಷ್ಠಿಯಲ್ಲಿ ಕುಳಿತು ಪತ್ರಕರ್ತರ ಪ್ರಶ್ನೆಗಳಿಗೆ ಉತ್ತರಿಸುವುದು ಸಂವಹನದ ಒಂದು ಸಾಂಪ್ರದಾಯಿಕ ವಿಧಾನ. ಆದರೆ, ಆತ ಆ ಗೋಷ್ಠಿಯ ಮೂಲಕ ಎಷ್ಟು ಜನರನ್ನು ತಲುಪುತ್ತಾನೆ ಎಂಬುದು ಪ್ರಶ್ನೆ. ಮೋದಿಯವರಂಥ ನಾಯಕರು ಪತ್ರಿಕಾಗೋಷ್ಠಿಗಿಂತ ಹೆಚ್ಚಾಗಿ 'ಮನ್ ಕಿ ಬಾತ್', ಸಾಮಾಜಿಕ ಜಾಲತಾಣಗಳು ಮತ್ತು ನೇರ ಸಾರ್ವಜನಿಕ ಸಭೆಗಳ ಮೂಲಕ ಜನರನ್ನು ತಲುಪುತ್ತಾರೆ. ಇಲ್ಲಿ ಪತ್ರಕರ್ತರು ಕೇಳುವ ಪ್ರಶ್ನೆಗಳಿಗಿಂತ, ನಾಯಕನು ಜನರಿಗೆ ನೀಡುವ ಸಂದೇಶ ಮತ್ತು ಅದು ಅವರ ಮೇಲೆ ಬೀರುವ ಪ್ರಭಾವ ಮುಖ್ಯವಾಗುತ್ತದೆ. ಪತ್ರಿಕಾಗೋಷ್ಠಿಯಲ್ಲಿ ಪತ್ರಕರ್ತರು ತಮ್ಮದೇ ಆದ ರಾಜಕೀಯ ಸಿದ್ಧಾಂತ ಅಥವಾ ಆಲೋಚನೆಗೆ ತಕ್ಕಂತೆ ಸುದ್ದಿಯನ್ನು ತಿರುಚುವ ಸಾಧ್ಯತೆ ಇರುತ್ತದೆ. ಆದರೆ ನೇರ ಸಂವಹನದಲ್ಲಿ ನಾಯಕನ ಮಾತುಗಳು ನೇರವಾಗಿ ಜನರಿಗೆ ತಲುಪುವುದರಿಂದ ಗೊಂದಲಗಳಿಗೆ ಅವಕಾಶವಿರುವುದಿಲ್ಲ. ಹೀಗಾಗಿ ಮೋದಿಯವರು ಪತ್ರಿಕಾಗೋಷ್ಠಿಯನ್ನು ಅನುಸರಿಸುತ್ತಿಲ್ಲ.

ಪತ್ರಿಕಾಗೋಷ್ಠಿಗಳು ವಿಷಯಾಧಾರಿತ ಚರ್ಚೆಗಳಿಗಿಂತ ಹೆಚ್ಚಾಗಿ 'ಗದ್ದಲ' ಅಥವಾ 'ವಿವಾದ'ಗಳ ಕೇಂದ್ರವಾಗುತ್ತಿವೆ. ಅನೇಕ ಬಾರಿ ಪತ್ರಕರ್ತರು ಸರಕಾರದ ವೈಫಲ್ಯಗಳನ್ನು ಎತ್ತಿ ತೋರಿಸುವ ಬದಲು ವೈಯಕ್ತಿಕ ಟೀಕೆ ಅಥವಾ ಹೆಡ್‌ಲೈನ್ ಮಾಡುವ ಉದ್ದೇಶದ ಪ್ರಶ್ನೆಗಳನ್ನೇ ಕೇಳುತ್ತಾರೆ, ಇಂಥ ವಾತಾವರಣದಲ್ಲಿ ರಚನಾತ್ಮಕ ಸಂವಹನ ಸಾಧ್ಯವಾಗುವುದಿಲ್ಲ ಎಂಬುದು ಮೋದಿಯವರ ನಿಲುವಾಗಿರಬಹುದು. ಪತ್ರಿಕಾಗೋಷ್ಠಿಯು ಪ್ರಜಾಪ್ರಭುತ್ವದ ಉತ್ತರದಾಯಿತ್ವದ (Accountability) ಒಂದು ಭಾಗವಾಗಿರಬಹುದು. ಆದರೆ, ಅದುವೇ ಏಕೈಕ ಮಾನದಂಡವಲ್ಲ ಎಂಬುದನ್ನು ಸಾಮಾಜಿಕ ಜಾಲತಾಣಗಳು ಪರಿಣಾಮಕಾರಿಯಾಗಿರುವ ಈ ದಿನಗಳಲ್ಲಿ ಒಪ್ಪಲೇಬೇಕಾದ ಮಾತು. ಈ ಅಂಶಗಳ ಮೇಲೆ ಆತನ ಸಂವಹನ ಶಕ್ತಿಯನ್ನು ಅಳೆಯಬೇಕೇ ಹೊರತು, ಕೇವಲ ಪತ್ರಕರ್ತರ ಮುಂದೆ ಕುಳಿತು ಮಾತನಾಡುವುದರಿಂದಲ್ಲ. ಅಂದು ಮಾಧ್ಯಮಗಳು ಜನರ ಮತ್ತು ಸರಕಾರದ ನಡುವೆ 'ಗೇಟ್ ಕೀಪರ್'ಗಳಂತೆ ಇದ್ದವು. ಪ್ರಧಾನಿ ಹೇಳಿದ್ದನ್ನು ಪತ್ರಕರ್ತರು ತಮ್ಮದೇ ದೃಷ್ಟಿಕೋನದಲ್ಲಿ ವ್ಯಾಖ್ಯಾನಿಸಿ ಜನರಿಗೆ ತಲುಪಿಸುತ್ತಿದ್ದರು. ಮೋದಿಯವರು ಈ ಮಧ್ಯವರ್ತಿಗಳ ವ್ಯವಸ್ಥೆಯನ್ನು ಪಕ್ಕಕ್ಕಿಟ್ಟು 'Direct- to- Consumer' ಮಾದರಿಯನ್ನು ಅಳವಡಿಸಿಕೊಂಡರು. ಸೋಶಿಯಲ್ ಮೀಡಿಯಾ, ನಮೋ ಆ್ಯಪ್ ಮತ್ತು 'ಮನ್ ಕಿ ಬಾತ್' ಮೂಲಕ ಅವರು ನೇರವಾಗಿ ಜನರನ್ನು ತಲುಪುತ್ತಿದ್ದಾರೆ. ಇಲ್ಲಿ ಪತ್ರಕರ್ತರ 'ಫಿಲ್ಟರ್' ಇರುವುದಿಲ್ಲ, ನಾಯಕ ತಾನು ಹೇಳಬೇಕೆಂದಿರುವುದನ್ನು ನೇರವಾಗಿ ಜನರಿಗೆ ತಲುಪಿಸಿದಾಗ ಅದರಲ್ಲಿ ತಪ್ಪು ಅರ್ಥಗಳಿಗೆ ಅವಕಾಶ ಕಡಿಮೆ ಇರುತ್ತದೆ. ಹೀಗಾಗಿ ಅವರು ಐವತ್ತು–ನೂರು ಪತ್ರಕರ್ತರಿರುವ ಪತ್ರಿಕಾಗೋಷ್ಠಿಗಿಂತ 'ಜನಕೇಂದ್ರಿತ ಸಂವಹನ'ಕ್ಕೆ ಹೆಚ್ಚು ಒತ್ತು ನೀಡುತ್ತಿದ್ದಾರೆ.

ಪತ್ರಿಕಾಗೋಷ್ಠಿಯನ್ನು ಕರೆಯದ ನಾಯಕರ ಪೈಕಿ ಮೋದಿಯವರೇ ಮೊದಲಿಗರಾ? ಹಾಗೇನೂ ಇಲ್ಲ. ರಾಜ್ಯದ ಮುಖ್ಯಮಂತ್ರಿಯಾಗಿದ್ದ ಬಿ.ಎಸ್.ಯಡಿಯೂರಪ್ಪ ಅವರು ದಿನದಲ್ಲಿ ಮೂರು–ನಾಲ್ಕು ಸಲ ಪತ್ರಕರ್ತರ ಜತೆ ಮಾತಾಡುತ್ತಿದ್ದರು. ತಮಿಳುನಾಡು ಮುಖ್ಯಮಂತ್ರಿ ಜಯಲಲಿತಾ ಐದು ವರ್ಷಗಳ ಅವಧಿಯಲ್ಲಿ ಒಮ್ಮೆ ಕೂಡ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತಾಡುತ್ತಿರಲಿಲ್ಲ. ತಾವು ಹೇಳಬೇಕಿರುವುದನ್ನು 'ಪತ್ರಿಕಾ ಪ್ರಕಟಣೆ'ಗಳ ಮೂಲಕ ತಿಳಿಸುತ್ತಿದ್ದರು. ಡಾ.ಮನಮೋಹನ ಸಿಂಗ್ ಅವರ ಪತ್ರಿಕಾಗೋಷ್ಠಿಯಲ್ಲಿ ಪ್ರಶ್ನೆ ಕೇಳುವ ಪತ್ರಕರ್ತರು, ಮೊದಲೇ ಪ್ರಶ್ನೆಗಳನ್ನು ಲಿಖಿತ ರೂಪದಲ್ಲಿ ಕೊಡಬೇಕಿತ್ತು. ಅದೇ ರೀತಿ ಜಾಗತಿಕ ನಾಯಕರಲ್ಲಿ, ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ವಾರದಲ್ಲಿ ಎರಡು ಸಲ ಪತ್ರಿಕಾಗೋಷ್ಠಿ ಕರೆದು ಮಾತಾಡಿದರೆ, ಚೀನಾದ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಪ್ರೆಸ್ ಮೀಟ್ ನಿಂದ ದೂರದೂರ. ಅವರನ್ನು ವಿಶ್ವದ 'ಸ್ಕ್ರಿಪ್ಟೆಡ್ ನಾಯಕ' ಎಂದೂ ಕರೆಯುವುದುಂಟು. ಚೀನಾದಲ್ಲಿ ನಡೆಯುವ ವಾರ್ಷಿಕ ರಾಜಕೀಯ ಸಭೆಗಳ ಸಂದರ್ಭದಲ್ಲಿ ಅಧ್ಯಕ್ಷರು ಪತ್ರಿಕಾಗೋಷ್ಠಿ ನಡೆಸುವ ಸಂಪ್ರದಾಯವಿತ್ತು. ಇಲ್ಲಿ ಕೇಳುವ ಪ್ರಶ್ನೆಗಳು ಮೊದಲೇ ನಿರ್ಧಾರವಾಗಿರುತ್ತಿತ್ತು. ಯಾವುದೇ ಅನಿರೀಕ್ಷಿತ ಅಥವಾ ಕಠಿಣ ಪ್ರಶ್ನೆಗಳಿಗೆ ಅಲ್ಲಿ ಆಸ್ಪದವೇ ಇರುತ್ತಿರಲಿಲ್ಲ, ಆದರೆ, ಇತ್ತೀಚಿನ ವರ್ಷಗಳಲ್ಲಿ ಆ ಸಂಪ್ರದಾಯಕ್ಕೂ ಕ್ಸಿ ಜಿನ್‌ಪಿಂಗ್ ಬ್ರೇಕ್ ಹಾಕಿದ್ದಾರೆ.

ಕ್ಸಿ ಜಿನ್‌ಪಿಂಗ್ ವಿದೇಶಿ ಪ್ರವಾಸ ಕೈಗೊಂಡಾಗಲೂ ಸಹ ತಮ್ಮ ಸಂವಹನ ಶೈಲಿಯನ್ನು ಬದಲಿಸುವುದಿಲ್ಲ. ಸಾಮಾನ್ಯವಾಗಿ ಎರಡು ದೇಶಗಳ ನಾಯಕರು ಭೇಟಿಯಾದಾಗ ಜಂಟಿ ಪತ್ರಿಕಾಗೋಷ್ಠಿ ನಡೆಸುವುದು ಶಿಷ್ಟಾಚಾರ. ಆದರೆ ಕ್ಸಿ ಜಿನ್‌ಪಿಂಗ್ ಅವರು ಕೇವಲ ಜಂಟಿ ಹೇಳಿಕೆಗಳನ್ನು (Joint Statements) ಓದಿ ನಿರ್ಗಮಿಸುತ್ತಾರೆ. ಪತ್ರಕರ್ತರಿಗೆ ಪ್ರಶ್ನೆ ಕೇಳಲು ಅವಕಾಶ ನೀಡದಂತೆ ಮೊದಲೇ ಷರತ್ತು ವಿಧಿಸುತ್ತಾರೆ. ತಮ್ಮ ಇಮೇಜ್‌ಗೆ ಧಕ್ಕೆ ತರುವ ಮಾನವ ಹಕ್ಕುಗಳ ಅಥವಾ ಆರ್ಥಿಕ ನೀತಿಗಳ ಕುರಿತಾದ ಪ್ರಶ್ನೆಗಳಿಂದ ದೂರವಿರುತ್ತಾರೆ. ಚೀನಾದ ಒಳಗೆ ಯಾವುದೇ ಸ್ವತಂತ್ರ ಪತ್ರಿಕೋದ್ಯಮಕ್ಕೆ ಅವಕಾಶವಿಲ್ಲ, ಪತ್ರಕರ್ತರು ಸರಕಾರದ ಆಶಯಕ್ಕೆ ವಿರುದ್ಧವಾಗಿ ಬರೆದರೆ ಕಠಿಣ ಶಿಕ್ಷೆ ಅನುಭವಿಸಬೇಕಾಗುತ್ತದೆ. ಇದರಿಂದಾಗಿ ಕ್ಸಿ ಅವರ ಬಗ್ಗೆ ಬರುವ ಪ್ರತಿಯೊಂದು ಸುದ್ದಿಯೂ ಸರಕಾರದ 'ಸೆನ್ಸಾರ್' ಪ್ರಕ್ರಿಯೆಗೆ ಒಳಪಟ್ಟು, ಅತ್ಯಂತ ನಾಜೂಕಾಗಿ ಸಿದ್ಧಪಡಿಸಿದ ಸ್ಕ್ರಿಪ್ಟ್‌ನಂತೆ ಹೊರಬರುತ್ತದೆ.

ಚೀನಾದಲ್ಲಿ ಮಾಧ್ಯಮಗಳು ಸರಕಾರದ ಕಣ್ಣು ಮತ್ತು ಕಿವಿಗಳಂತೆ ಕೆಲಸ ಮಾಡುತ್ತವೆ. 'ಕ್ಸಿನ್ಹುವಾ'ದಂಥ ಸರಕಾರಿ ಸುದ್ದಿ ಸಂಸ್ಥೆಗಳು ಅಧ್ಯಕ್ಷರ ಪ್ರತಿಯೊಂದು ನಡೆಯನ್ನು ವೈಭವೀಕರಿಸುತ್ತವೆ. ಕ್ಸಿ ಜಿನ್‌ಪಿಂಗ್ ಅವರ ವಿಚಾರಧಾರೆಗಳನ್ನು ಪ್ರಚಾರ ಮಾಡಲು ಚೀನಾ ಸರಕಾರವು 'ಸ್ವಂತ ಆ್ಯಪ್'ಗಳನ್ನು ಮತ್ತು ಡಿಜಿಟಲ್ ವೇದಿಕೆಗಳನ್ನು ಬಳಸಿಕೊಳ್ಳುತ್ತದೆ. 'ಗ್ರೇಟ್ ಫೈರ್‌ವಾಲ್' ಮೂಲಕ ಜಾಗತಿಕ ಇಂಟರ್ನೆಟ್‌ನಿಂದ ಚೀನಾವನ್ನು ಬೇರ್ಪಡಿಸಿರುವುದರಿಂದ, ಅಲ್ಲಿನ ಜನರಿಗೆ ಅಧ್ಯಕ್ಷರ ಬಗ್ಗೆ ಕೇವಲ ಸ್ಕ್ರಿಪ್ಟೆಡ್ ಮಾಹಿತಿ ಮಾತ್ರ ಸಿಗುತ್ತದೆ. ಸಾಮಾಜಿಕ ಜಾಲತಾಣಗಳಲ್ಲಿ ಕ್ಸಿ ಅವರ ಬಗ್ಗೆ ಬರುವ ಸಣ್ಣ ಟೀಕೆಯನ್ನೂ ತಕ್ಷಣವೇ ಅಳಿಸಿಹಾಕುವ ಅತ್ಯಾಧುನಿಕ ವ್ಯವಸ್ಥೆ ಅಲ್ಲಿ ಜಾರಿಯಲ್ಲಿದೆ. ಕ್ಸಿ ಜಿನ್‌ಪಿಂಗ್ ಮಾದರಿ ಸಂವಹನವು ಸಂಪೂರ್ಣವಾಗಿ ನಿಯಂತ್ರಿತವಾದದ್ದು. ಪತ್ರಿಕಾಗೋಷ್ಠಿಗಳಿಲ್ಲದ, ಪ್ರಶ್ನೆಗಳಿಲ್ಲದ ಈ ಮಾದರಿಯು ಚೀನಾದ ಕಮ್ಯುನಿಸ್ಟ್ ಪಕ್ಷದ ಅಧಿಕಾರವನ್ನು ಉಳಿಸಿಕೊಳ್ಳುವ ತಂತ್ರವಾಗಿದೆ. ಒಬ್ಬ ನಾಯಕ ತನ್ನ ಮಾತುಗಳನ್ನು ಎಷ್ಟು ಕಟ್ಟುನಿಟ್ಟಾಗಿ ಸ್ಕ್ರಿಪ್ಟ್ ಮಾಡುತ್ತಾನೋ, ಅಷ್ಟು ಆತ ಮುಕ್ತ ಸಂವಾದದಿಂದ ದೂರವಿರುತ್ತಾನೆ ಎಂಬುದಕ್ಕೆ ಕ್ಸಿ ಜಿನ್‌ಪಿಂಗ್ ಅವರೇ ಸಾಕ್ಷಿ.

ಇನ್ನು ಕಿಮ್ ಜೊಂಗ್ ಉನ್ ನೇತೃತ್ವದ ಉತ್ತರ ಕೊರಿಯಾದಲ್ಲಿ ಸ್ವತಂತ್ರ ಪತ್ರಿಕೋದ್ಯಮಕ್ಕೆ ಅವಕಾಶವೇ ಇಲ್ಲ. ಕಿಮ್ ಅವರು ಪತ್ರಕರ್ತರನ್ನು ಎದುರಿಸುವುದು ಅಥವಾ ಸಾರ್ವಜನಿಕವಾಗಿ ಪ್ರಶ್ನೆಗಳಿಗೆ ಉತ್ತರಿಸುವುದು ಅಸಾಧ್ಯದ ಮಾತು. 2019ರಲ್ಲಿ ಡೊನಾಲ್ಡ್ ಟ್ರಂಪ್ ಅವರೊಂದಿಗಿನ ಭೇಟಿಯ ಸಮಯದಲ್ಲಿ ಮೊದಲ ಬಾರಿಗೆ ವಿದೇಶಿ ಪತ್ರಕರ್ತರ ಪ್ರಶ್ನೆಯೊಂದಕ್ಕೆ ಅವರು ಉತ್ತರಿಸಿದ್ದು ದೊಡ್ಡ ಸುದ್ದಿಯಾಗಿತ್ತು. ಕಾರಣ ಕಿಮ್ ವಿದೇಶಿ ಮಾಧ್ಯಮಗಳೊಂದಿಗೆ ಮಾತನಾಡುವುದೇ ಇಲ್ಲ. ಅವರ ಭದ್ರತಾ ಪಡೆಯವರು ಪತ್ರಕರ್ತರನ್ನು ಹತ್ತಿರಕ್ಕೆ ಸುಳಿಯಲೂ ಬಿಡುವುದಿಲ್ಲ, ಅವರನ್ನು ಪ್ರಶ್ನಿಸುವ ಪತ್ರಕರ್ತ ಅಲ್ಲಿ ಬದುಕುಳಿಯಲು ಸಾಧ್ಯವಿಲ್ಲ.

ಸೌದಿ ಅರೇಬಿಯಾದ ಕ್ರೌನ್ ಪ್ರಿನ್ಸ್ ಮೊಹಮ್ಮದ್ ಬಿನ್ ಸಲ್ಮಾನ್ ಮುಕ್ತ ಪತ್ರಿಕಾಗೋಷ್ಠಿಗಳನ್ನು ಇಷ್ಟಪಡುವುದಿಲ್ಲ, ಅವರು ಅಂತಾರಾಷ್ಟ್ರೀಯ ಮಾಧ್ಯಮಗಳಿಗೆ (ಉದಾಹರಣೆಗೆ ಫಾಕ್ಸ್ ನ್ಯೂಸ್ ಅಥವಾ ಅಟ್ಲಾಂಟಿಕ್) ಅತ್ಯಂತ ಅಪರೂಪವಾಗಿ ಮತ್ತು ಮುಂಚಿತವಾಗಿ ನಿರ್ಧರಿಸಿದ ಪ್ರಶ್ನೆಗಳಿಗೆ ಉತ್ತರಿಸುತ್ತಾರೆ. ಯಾವ ಪ್ರಶ್ನೆಗಳನ್ನು ಕೇಳಬೇಕು ಎಂಬುದನ್ನು ಸಲ್ಮಾನ್ ನಿರ್ಧರಿಸುತ್ತಾರೆ. ಅದಕ್ಕೆ ಪತ್ರಕರ್ತ ಒಪ್ಪಿದರೆ ಮಾತ್ರ ಸಂದರ್ಶನ. ಇನ್ನು ಸೌದಿ ಅರೇಬಿಯಾದಲ್ಲಿ ಪತ್ರಿಕಾಗೋಷ್ಠಿ ಎಂಬ ಸಂಪ್ರದಾಯವೇ ಇಲ್ಲ. ಆ ದೇಶದಲ್ಲಿ ಸರಕಾರವನ್ನು ಟೀಕಿಸಿ ಪತ್ರಕರ್ತರು ಬಚಾವ್ ಆಗಲು ಸಾಧ್ಯವೇ ಇಲ್ಲ. ರಷ್ಯಾದ ಅಧ್ಯಕ್ಷ ಪುಟಿನ್ ಅವರು ವರ್ಷಕ್ಕೊಮ್ಮೆ ಪತ್ರಿಕಾಗೋಷ್ಠಿ ನಡೆಸುತ್ತಾರಾದರೂ, ಅಲ್ಲಿ ಕೇಳಲಾಗುವ ಪ್ರಶ್ನೆಗಳು ಮೊದಲೇ ನಿರ್ಧರಿತವಾಗಿರುತ್ತವೆ (Fixed). ಪತ್ರಕರ್ತರು ತಾವು ಕೇಳಬಯಸುವ ಪ್ರಶ್ನೆಗಳನ್ನು ಒಂದು ವಾರದ ಮೊದಲೇ ಸಲ್ಲಿಸಬೇಕು ಮತ್ತು ಆ ಪ್ರಶ್ನೆಯನ್ನು ಮಾತ್ರ ಕೇಳಬೇಕು. ನಿಗದಿತ ಪ್ರಶ್ನೆ ಹೊರತಾಗಿ ಬೇರೆ ಪ್ರಶ್ನೆಗಳನ್ನು ಕೇಳುವಂತಿಲ್ಲ, ಒಂದು ವೇಳೆ ಆಶುಪ್ರಶ್ನೆ ಕೇಳಿದರೆ, ಪತ್ರಿಕಾಗೋಷ್ಠಿಯಿಂದ ಆ ಪತ್ರಕರ್ತನನ್ನು ನಿರ್ದಾಕ್ಷಿಣ್ಯವಾಗಿ ಹೊರ ಹಾಕಲಾಗುತ್ತದೆ ಮತ್ತು ಅವನನ್ನು ಬ್ಲ್ಯಾಕ್ ಲಿಸ್ಟ್‌ಗೆ ಸೇರಿಸಲಾಗುತ್ತದೆ. ವಿಶೇಷವಾಗಿ ಉಕ್ರೇನ್ ಯುದ್ಧದ ನಂತರ, ಅವರು ಸ್ವತಂತ್ರ ಅಥವಾ ಪಾಶ್ಚಿಮಾತ್ಯ ಪತ್ರಕರ್ತರನ್ನು ಎದುರಿಸುವುದನ್ನು ಸಂಪೂರ್ಣವಾಗಿ ನಿಲ್ಲಿಸಿಬಿಟ್ಟಿದ್ದಾರೆ. ಎಲ್ ಸಾಲ್ವಡಾರ್ ಅಧ್ಯಕ್ಷ ನಯಿಬ್ ಬುಕೇಲೆ ಇತ್ತೀಚಿನ ದಿನಗಳಲ್ಲಿ 'ಸೋಶಿಯಲ್ ಮೀಡಿಯಾ ಅಧ್ಯಕ್ಷ' ಎಂದೇ ಖ್ಯಾತರಾಗಿದ್ದಾರೆ. ಪತ್ರಕರ್ತರನ್ನು ಅವರು ಭೇಟಿ ಮಾಡುವುದಿಲ್ಲ, ಪತ್ರಿಕಾಗೋಷ್ಠಿಗಳ ಬದಲಿಗೆ 'ಎಕ್ಸ್' (ಟ್ವಿಟರ್) ಮೂಲಕ ನೇರವಾಗಿ ಜನರನ್ನು ಉದ್ದೇಶಿಸಿ ಮಾತನಾಡುತ್ತಾರೆ.

ಈ ಹಿನ್ನೆಲೆಯಲ್ಲಿ ನೋಡಿದಾಗ ಮೋದಿ ಆಡಳಿತದ ಭಾರತದಲ್ಲಿ ಪತ್ರಿಕಾ ಸ್ವಾತಂತ್ರ್ಯ ಧಾರಾಳವಾಗಿದೆ. ಪ್ರಧಾನಿಯವರನ್ನು ಯಾರು ಬೇಕಾದರೂ ಹಿಗ್ಗಾಮುಗ್ಗಾ ಟೀಕಿಸಬಹುದು ಮತ್ತು ಏನು ಬೇಕಾದರೂ ಟೀಕಿಸಿ ಜೀರ್ಣಿಸಿಕೊಳ್ಳಬಹುದು. ಮೋದಿಯವರನ್ನು ದೇಶದ್ರೋಹಿ, ಭಯೋತ್ಪಾದಕ ಎಂದು ಕರೆಯುವಷ್ಟು ಅತಿಯಾದ ಸ್ವಾತಂತ್ರ್ಯ ನಮ್ಮ ದೇಶದಲ್ಲಿದೆ. ಯಾವುದಾದರೂ ಒಂದು ಮುಸ್ಲಿಂ ರಾಷ್ಟ್ರದಲ್ಲಿ, ವಿಶೇಷವಾಗಿ ಗಲ್ಫ್ ರಾಷ್ಟ್ರಗಳಲ್ಲಿ ಅಲ್ಲಿನ ಮುಖ್ಯಸ್ಥರನ್ನು ಟೀಕಿಸುವ ಒಂದು ಮಾಧ್ಯಮ ಸಂಸ್ಥೆ ಇದೆಯಾ?

ಈ ದಿನಗಳಲ್ಲಿ ಜಾಗತಿಕ ನಾಯಕರು ಮಾಧ್ಯಮಗಳ ಜತೆ ವ್ಯವಹರಿಸುವ ರೀತಿಯಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ. ಜಿಲ್ಲಾ ಮಟ್ಟದ ನಾಯಕರು ಸಹ ಈ ದಿನಗಳಲ್ಲಿ ಪತ್ರಿಕಾಗೋಷ್ಠಿ ಕರೆಯುವುದನ್ನು ನಿಲ್ಲಿಸಿಬಿಟ್ಟಿದ್ದಾರೆ. ತಾವು ಹೇಳಬೇಕಿರುವುದನ್ನು ತಮ್ಮ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳಲಾರಂಭಿಸಿದ್ದಾರೆ. ಅದನ್ನೇ ಮಾಧ್ಯಮಗಳು ವರದಿ ಮಾಡಲಾರಂಭಿಸಿವೆ. ಇದು ಬದಲಾದ ಕಾಲಮಾನದ ಕಟು ವಾಸ್ತವ. ಅಂತಾರಾಷ್ಟ್ರೀಯ ವೇದಿಕೆಗಳಲ್ಲಿ ಎದುರಿಗೆ ಸಿಕ್ಕ ಪತ್ರಕರ್ತ ಹಠಾತ್ ಕೇಳುವ ಪ್ರಶ್ನೆಗಳಿಗೆ ಉತ್ತರಿಸುವುದು ಶಿಷ್ಟಾಚಾರ. ಉತ್ತರಿಸದಿರುವುದು ಬುದ್ಧಿವಂತಿಕೆ. ಕಾರಣ ಯಾವ ನಾಯಕನೂ ವೃಥಾ ಸಮಸ್ಯೆಯನ್ನು ಆಹ್ವಾನಿಸಲು ಇಷ್ಟಪಡುವುದಿಲ್ಲ.

ಹೀಗಾಗಿ ಬದಲಾದ ಕಾಲಘಟ್ಟದಲ್ಲಿ, ಮೋದಿಯವರು ಪತ್ರಿಕಾಗೋಷ್ಠಿ ಕರೆಯದ ನಿರ್ಧಾರವನ್ನು ದೊಡ್ಡ 'ಲೋಪ' ಅಥವಾ 'ಅಪರಾಧ'ವಾಗಿ ನೋಡಬೇಕಿಲ್ಲ. ಹಾಗೆಂದು ಪತ್ರಿಕಾಗೋಷ್ಠಿಗೆ ಸಂಪೂರ್ಣ ನಿಷೇಧ ಹೇರುವುದು ಕೂಡ ಸರಿ ಅಲ್ಲ. ಅಷ್ಟಕ್ಕೂ ಮೋದಿಯವರು ಮಾಧ್ಯಮಗಳನ್ನು ಎದುರಿಸಲಾರದಷ್ಟು ಅಸಮರ್ಥರೇನೂ ಅಲ್ಲ.

400 ಸುದ್ದಿವಾಹಿನಿ ಇರೋ ಭಾರತದಲ್ಲಿ ಪ್ರೆಸ್ ಫ್ರೀಡಂ ಇಲ್ವಂತೆ!

ಮುಕ್ತಮಾಧ್ಯಮ
ಲೀನಾ ಜೋಶಿ
vveditoped@gmail.com

ಭಾರತ ಇಂದು ವಿಶ್ವದ ಅತಿ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರ. ಭಾಷೆ, ಧರ್ಮ, ಸಂಸ್ಕೃತಿ, ಜಾತಿ, ವಿವಿಧ ರಾಜಕೀಯ ಪಕ್ಷಗಳು – ಇಷ್ಟು ವೈವಿಧ್ಯತೆಯ ನಡುವೆಯೂ ಭಾರತ ಒಂದು ಪ್ರಬಲ ರಾಷ್ಟ್ರವಾಗಿ ನಿಂತಿರುವುದು ಆಶ್ಚರ್ಯಕರ! ಆದರೆ ಜಾಗತಿಕ ವೇದಿಕೆಯಲ್ಲಿ ಭಾರತದ ಚಿತ್ರಣವನ್ನು ನೋಡಿದಾಗ, ಹಲವಾರು ಬಾರಿ ಭಾರತವನ್ನು ಅತಿಯಾದ ನಕಾರಾತ್ಮಕ ದೃಷ್ಟಿಯಿಂದಲೇ ಪ್ರದರ್ಶಿಸಲಾಗುತ್ತದೆ. ಭಾರತದಲ್ಲಿ ಒಂದು ಅಪರಾಧ ನಡೆದರೆ, ಅದು ತಕ್ಷಣ ಜಾಗತಿಕ ಸುದ್ದಿಯಾಗುತ್ತದೆ. ಒಂದು ಘಟನೆ ಆಧಾರವಾಗಿ ಇಡೀ ದೇಶದ ಸಾಮಾಜಿಕ ವ್ಯವಸ್ಥೆಯನ್ನು ಪ್ರಶ್ನಿಸಲಾಗುತ್ತದೆ. ಆದರೆ ಇದೇ ರೀತಿಯ ಅಥವಾ ಅದಕ್ಕಿಂತ ದೊಡ್ಡ ಸಮಸ್ಯೆಗಳು ಪಾಶ್ಚಾತ್ಯ ರಾಷ್ಟ್ರಗಳಲ್ಲಿ ನಡೆದಾಗ, ಅವುಗಳನ್ನು 'ಪ್ರತ್ಯೇಕ ಘಟನೆ' ಎಂದು ಹೇಳಲಾಗುತ್ತದೆ. ಭಾರತದ ವಿಷಯದಲ್ಲಿ ಮಾತ್ರ ಪ್ರತಿಯೊಂದು ಸಮಸ್ಯೆಯನ್ನೂ ವ್ಯವಸ್ಥೆಯ ವೈಫಲ್ಯ ಎಂದು ತೋರಿಸುವ ಪ್ರವೃತ್ತಿ ಕಾಣಿಸುತ್ತದೆ.

ಇದರರ್ಥ ಭಾರತದಲ್ಲಿ ಸಮಸ್ಯೆಗಳಿಲ್ಲ ಎನ್ನುವುದಲ್ಲ. ಭಾರತದಲ್ಲಿ ಅಪರಾಧಗಳಿವೆ, ಸಾಮಾಜಿಕ ಸವಾಲುಗಳಿವೆ, ರಾಜಕೀಯ ಸಂಘರ್ಷಗಳಿವೆ. ಆದರೆ 140 ಕೋಟಿಗೂ ಹೆಚ್ಚು ಜನರ ದೇಶವನ್ನು ಒಂದೇ ಘಟನೆ ಆಧಾರವಾಗಿ ನಿರ್ಧರಿಸುವುದು ನ್ಯಾಯವಲ್ಲ. ವಿಶ್ವದ ಪ್ರತಿಯೊಂದು ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಸಮಸ್ಯೆಗಳು ಇರುತ್ತವೆ. ಆದರೆ ಭಾರತವನ್ನು ಹಲವಾರು ಬಾರಿ ಸಮತೋಲನವಿಲ್ಲದ ರೀತಿಯಲ್ಲಿ ಜಗತ್ತಿಗೆ ಪರಿಚಯಿಸಲಾಗುತ್ತದೆ.

ಅತ್ಯಂತ ದೊಡ್ಡ ವಿರೋಧಾಭಾಸವೇನೆಂದರೆ– ಭಾರತದಲ್ಲಿ ಮಾಧ್ಯಮ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ ಅಪಾರವಾಗಿದೆ. ದೇಶದಲ್ಲಿ ನೂರಾರು ಟಿವಿ ಚಾನೆಲ್‌ಗಳು, ಸಾವಿರಾರು ಪತ್ರಿಕೆಗಳು, ಲಕ್ಷಾಂತರ ಡಿಜಿಟಲ್ ವೇದಿಕೆಗಳು ಸರ್ಕಾರವನ್ನು ಪ್ರತಿದಿನ ಟೀಕಿಸುತ್ತಿವೆ. ಪ್ರಧಾನಮಂತ್ರಿಯಿಂದ ಹಿಡಿದು ಮುಖ್ಯಮಂತ್ರಿವರೆಗೆ ಯಾರನ್ನಾದರೂ ಓಪನ್ ಆಗಿ ಟೀಕಿಸುವ ಚರ್ಚೆಗಳು ಪ್ರತಿದಿನ ಪ್ರಸಾರವಾಗುತ್ತವೆ. ಸಾಮಾಜಿಕ ಜಾಲತಾಣಗಳಲ್ಲಿ ಸರ್ಕಾರದ ವಿರುದ್ಧ ತೀವ್ರ ಅಭಿಪ್ರಾಯಗಳು ನಿರಂತರವಾಗಿ ಹರಿದಾಡುತ್ತವೆ. ಆದರೆ ಜಾಗತಿಕ ವೇದಿಕೆಯಲ್ಲಿ ಭಾರತವನ್ನು ಅಭಿವ್ಯಕ್ತಿ ಸ್ವಾತಂತ್ರ್ಯ (freedom of speech) ಇಲ್ಲದ ದೇಶ ಎಂದು ಚಿತ್ರಿಸುವ ಪ್ರಯತ್ನಗಳು ನಡೆಯುತ್ತವೆ. ಮಾತಿನ ಸ್ವಾತಂತ್ರ್ಯ ಇಲ್ಲದ ದೇಶದಲ್ಲಿ ಇಷ್ಟು ಮುಕ್ತ ಚರ್ಚೆಗಳು ಸಾಧ್ಯವೇ? ಚೀನಾದಲ್ಲಿ ಮಾಧ್ಯಮ ವ್ಯವಸ್ಥೆ ಸರ್ಕಾರದ ನಿಯಂತ್ರಣದಲ್ಲಿದೆ. ಸರ್ಕಾರವನ್ನು ಸಾರ್ವಜನಿಕವಾಗಿ ಟೀಕಿಸುವ ಅವಕಾಶಗಳು ಬಹಳ ಸೀಮಿತ. ಅನೇಕ ಜಾಗತಿಕ ಸಾಮಾಜಿಕ ಜಾಲತಾಣಗಳೇ ಅಲ್ಲಿ ನಿರ್ಬಂಧಿತವಾಗಿವೆ. ಆದರೂ ಜಾಗತಿಕ ಮಾಧ್ಯಮದಲ್ಲಿ ಭಾರತಕ್ಕಿಂತ ಚೀನಾವನ್ನು ಸುಸ್ಥಿರ ವ್ಯವಸ್ಥೆ ಎಂದು ಹಲವಾರು ಬಾರಿ ಬಿಂಬಿಸಲಾಗುತ್ತದೆ.

ಇದು ಕೇವಲ ರಾಜಕೀಯವಲ್ಲ; ಇದು ಜಾಗತಿಕ ಕಥನದ ಪ್ರಶ್ನೆ. ಯಾರಿಗೆ ತಮ್ಮ ಕಥೆಯನ್ನು ಜಗತ್ತಿಗೆ ತಲುಪಿಸುವ ಶಕ್ತಿ ಇದೆಯೋ, ಅವರ ಚಿತ್ರಣವೇ ಹೆಚ್ಚು ಪ್ರಭಾವ ಬೀರುತ್ತದೆ. ಪಾಶ್ಚಾತ್ಯ ಮಾಧ್ಯಮ ಸಂಸ್ಥೆಗಳು ದಶಕಗಳಿಂದ ಜಾಗತಿಕ ಮನೋಭಾವವನ್ನು ರೂಪಿಸುತ್ತಿವೆ. ಪರಿಣಾಮವಾಗಿ ಅಭಿವೃದ್ಧಿಶೀಲ ರಾಷ್ಟ್ರಗಳ ಬಗ್ಗೆ ಹಲವಾರು ಬಾರಿ ಏಕಪಕ್ಷೀಯ ದೃಷ್ಟಿಕೋನ ನಿರ್ಮಾಣವಾಗುತ್ತದೆ. ಭಾರತದಲ್ಲಿ ಅಲ್ಪಸಂಖ್ಯಾತರಿಗೆ ಧಾರ್ಮಿಕ ಸ್ವಾತಂತ್ರ್ಯ ಇಲ್ಲ ಎಂದು ಪುಂಗಿ ಊದುವವರು ಹೇರಳ. ಆದರೆ ಇದೇ ಭಾರತದಲ್ಲಿ ಮಸೀದಿಗಳು, ಚರ್ಚುಗಳು, ಗುರುದ್ವಾರಗಳು, ದೇವಾಲಯಗಳು ಒಂದೇ ನಗರದಲ್ಲಿ ಸಹಜವಾಗಿ ಕಾರ್ಯ ನಿರ್ವಹಿಸುತ್ತವೆ. ಅಲ್ಪಸಂಖ್ಯಾತ ಸಮುದಾಯದ ಜನರು ರಾಜಕೀಯ, ಸಿನಿಮಾ, ಕ್ರೀಡೆ, ನ್ಯಾಯಾಂಗ, ಉದ್ಯಮ– ಪ್ರತಿಯೊಂದು ಕ್ಷೇತ್ರದಲ್ಲೂ ಪ್ರಮುಖ ಸ್ಥಾನದಲ್ಲಿದ್ದಾರೆ. ಭಾರತದಲ್ಲಿ ಸಮಸ್ಯೆಗಳಿಲ್ಲ ಎಂದು ಹೇಳುವುದು ತಪ್ಪು; ಆದರೆ ಭಾರತದಲ್ಲಿ ಸ್ವಾತಂತ್ರ್ಯವೇ ಇಲ್ಲ ಎನ್ನುವುದೂ ವಾಸ್ತವಿಕತೆಯಿಂದ ಬಹು ದೂರ. ಇಂದಿನ ಜಗತ್ತಿನಲ್ಲಿ ದೃಷ್ಟಿಕೋನವೇ ದೊಡ್ಡ ಶಕ್ತಿ. ಜಗತ್ತು ಒಂದು ದೇಶವನ್ನು ಹೇಗೆ ನೋಡುತ್ತದೆ ಎಂಬುದೇ ಅದರ ರಾಜತಾಂತ್ರಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಪ್ರಭಾವವನ್ನು ನಿರ್ಧರಿಸುತ್ತದೆ. ಆದ್ದರಿಂದ ಭಾರತ ತನ್ನದೇ ಜಾಗತಿಕ ಮಾಧ್ಯಮ ಧ್ವನಿಯನ್ನು ನಿರ್ಮಿಸಬೇಕಾದ ಅಗತ್ಯ ಈಗ ಹೆಚ್ಚಾಗಿದೆ.

ಭಾರತದ ಕಥೆಯನ್ನು ಭಾರತವೇ ಹೇಳಬೇಕು. ಭಾರತದ ಯಶಸ್ಸು, ಅದರ ಸವಾಲುಗಳು, ಅದರ ಪ್ರಜಾಪ್ರಭುತ್ವದ ಶಕ್ತಿ – ಇವೆಲ್ಲವನ್ನು ಸಮತೋಲನದಿಂದ ಜಗತ್ತಿಗೆ ತಲುಪಿಸುವ ಜಾಗತಿಕ ಭಾರತೀಯ ಮಾಧ್ಯಮ ವ್ಯವಸ್ಥೆ ನಿರ್ಮಾಣವಾಗಬೇಕಿದೆ. ಇಲ್ಲವಾದರೆ, ಭಾರತದ ಬಗ್ಗೆ ಇತರರು ಬರೆಯುವ ಕಥೆಯೇ ಜಗತ್ತಿನ ಸತ್ಯವಾಗಿ ಉಳಿಯುತ್ತದೆ. ಜಗತ್ತು ಇಂದು ಕೇವಲ ಗಡಿಗಳಿಂದ ನಿಯಂತ್ರಿತವಾಗುತ್ತಿಲ್ಲ. ಜನರ ಮನಸ್ಸು, ಅಭಿಪ್ರಾಯ ಮತ್ತು ನಂಬಿಕೆಗಳನ್ನು ಯಾರು ರೂಪಿಸುತ್ತಾರೋ, ನಿಜವಾದ ಶಕ್ತಿ ಅವರ ಕೈಯಲ್ಲಿದೆ. ಈ ಶಕ್ತಿಯನ್ನು ಅತ್ಯಂತ ಪರಿಣಾಮಕಾರಿಯಾಗಿ ಬಳಸುತ್ತಿರುವುದು ಅಂತರರಾಷ್ಟ್ರೀಯ ಮಾಧ್ಯಮ ಸಂಸ್ಥೆಗಳು. ಭಾರತ ಇಂದು ವಿಶ್ವದ ಪ್ರಮುಖ ಆರ್ಥಿಕ ಮತ್ತು ರಾಜತಾಂತ್ರಿಕ ಶಕ್ತಿಗಳಲ್ಲಿ ಒಂದಾಗಿ ಬೆಳೆಯುತ್ತಿದ್ದರೂ, ಜಾಗತಿಕ ಕಥನ (Global Narrative) ನಿರ್ಮಾಣದಲ್ಲಿ ಇನ್ನೂ ದುರ್ಬಲವಾಗಿದೆ. ವಿಶ್ವದ ಜನರು ಭಾರತದ ಬಗ್ಗೆ ಏನು ಯೋಚಿಸಬೇಕು ಎಂಬುದನ್ನು ಭಾರತದ ಹೊರಗಿನ ಮಾಧ್ಯಮವೇ ನಿರ್ಧರಿಸುತ್ತದೆ. ಇದೇ ಭಾರತದ ದೊಡ್ಡ ಕೊರತೆ. ಇಂದಿನ ಜಗತ್ತಿನಲ್ಲಿ ಶಕ್ತಿ ಅಂದರೆ ಕೇವಲ ಸೇನೆ, ಆರ್ಥಿಕತೆ ಅಥವಾ ತಂತ್ರಜ್ಞಾನವಲ್ಲ; ಜನರು ಏನು ನಂಬಬೇಕು ಎಂಬುದನ್ನು ನಿರ್ಧರಿಸುವ ಸಾಮರ್ಥ್ಯವೂ ದೊಡ್ಡ ಶಕ್ತಿ. ಅದನ್ನು ಇಂದಿನ ಅಂತರರಾಷ್ಟ್ರೀಯ ಮಾಧ್ಯಮ ಸಂಸ್ಥೆಗಳು ಹೊಂದಿವೆ.

ಬಿಬಿಸಿ, ಅಲ್ ಜಝೀರಾ, ಸಿಎನ್‌ಎನ್ ಮುಂತಾದ ಸಂಸ್ಥೆಗಳು ಕೇವಲ ಸುದ್ದಿಯನ್ನು ಪ್ರಸಾರ ಮಾಡುವುದಿಲ್ಲ; ಅವು ಜಾಗತಿಕ ಅಭಿಪ್ರಾಯವನ್ನು ರೂಪಿಸುತ್ತವೆ. ಯಾವ ವಿಷಯವನ್ನು ಮಾನವ ಹಕ್ಕುಗಳ ಸಮಸ್ಯೆ ಎಂದು ತೋರಿಸಬೇಕು, ಯಾವ ದೇಶವನ್ನು ಆಕ್ರಮಣಕಾರಿ ಎಂದು ಚಿತ್ರಿಸಬೇಕು, ಯಾವ ಸರ್ಕಾರವನ್ನು ಪ್ರಜಾಪ್ರಭುತ್ವದ ರಕ್ಷಕ ಎಂದು ಬಿಂಬಿಸಬೇಕು– ಇವೆಲ್ಲವೂ ಮಾಧ್ಯಮದ ಪ್ರಭಾವದಿಂದ ರೂಪುಗೊಳ್ಳುತ್ತದೆ. ಅಮೆರಿಕ ಮಧ್ಯಪ್ರಾಚ್ಯದಲ್ಲಿ ನಡೆಸಿದ ಯುದ್ಧಗಳ ಸಮಯದಲ್ಲಿ ಪಾಶ್ಚಾತ್ಯ ಮಾಧ್ಯಮ ನೀಡಿದ ವರದಿಗಳನ್ನು ಗಮನಿಸಿದರೆ, ಜಗತ್ತಿನ ಅನೇಕ ಜನರು ಆ ಯುದ್ಧಗಳನ್ನು ಭದ್ರತಾ ಕ್ರಮ ಎಂದು ಸ್ವೀಕರಿಸಿದರು, ಬೆಂಬಲಿಸಿದರು. ಅದೇ ವೇಳೆ ಅಲ್ ಜಝೀರಾ ಅರಬ್ ಜಗತ್ತಿನ ನೋವು, ಸಾವು ಮತ್ತು ಮಾನವೀಯ ದುರಂತವನ್ನು ಹೆಚ್ಚು ಪ್ರಾಮುಖ್ಯತೆಯಿಂದ ತೋರಿಸಿತು. ಒಂದೇ ಘಟನೆಯನ್ನು ಎರಡು ವಿಭಿನ್ನ ಮಾಧ್ಯಮಗಳು ಎರಡು ವಿಭಿನ್ನ ಸತ್ಯಗಳಾಗಿ ಜಗತ್ತಿಗೆ ತೋರಿಸಿವೆ.

ಬಿಬಿಸಿ ಭಾರತ ಕುರಿತ ವರದಿಗಳಲ್ಲಿ ಹಲವಾರು ಬಾರಿ ವಿವಾದಕ್ಕೀಡಾಗಿದೆ. ಭಾರತದ ಸಾಮಾಜಿಕ ಸಮಸ್ಯೆಗಳು, ಧಾರ್ಮಿಕ ವಿಷಯಗಳು ಅಥವಾ ರಾಜಕೀಯ ವಿಷಯಗಳನ್ನು ಜಾಗತಿಕ ಮಟ್ಟದಲ್ಲಿ ತೀವ್ರವಾಗಿ ತೋರಿಸುವ ಮೂಲಕ, ವಿಶ್ವದ ಹಲವಾರು ಜನರು ಭಾರತದ ಬಗ್ಗೆ ಒಂದು ನಿರ್ದಿಷ್ಟ ಅಭಿಪ್ರಾಯವನ್ನು ರೂಪಿಸಿಕೊಳ್ಳುತ್ತಾರೆ. ಒಂದು ದೇಶದ ಬಗ್ಗೆ ಹೊರಗಿನ ಜನರ ಮನಸ್ಸಿನಲ್ಲಿ ಮೂಡುವ ಚಿತ್ರಣವನ್ನು ಮಾಧ್ಯಮವೇ ಬಹುಮಟ್ಟಿಗೆ ನಿರ್ಧರಿಸುತ್ತದೆ. ಇದೇ ಪ್ರಭಾವವನ್ನು ಭಾರತದ ಮೇಲೂ ಕಾಣಬಹುದು. ಭಾರತದಲ್ಲಿ ಒಂದು ನಕಾರಾತ್ಮಕ ಘಟನೆ ನಡೆದರೆ ಅದು ಜಾಗತಿಕ ಶೀರ್ಷಿಕೆ ಆಗುತ್ತದೆ. ಆದರೆ ಭಾರತದ ಯಶಸ್ಸುಗಳು– ಡಿಜಿಟಲ್ ಕ್ರಾಂತಿ, ಬಡತನ ನಿವಾರಣೆ, ಬೃಹತ್ ಪ್ರಜಾಪ್ರಭುತ್ವ ವ್ಯವಸ್ಥೆ, ಸ್ಟಾರ್ಟಪ್ ಬೆಳವಣಿಗೆ, ಬಾಹ್ಯಾಕಾಶ ಸಾಧನೆಗಳು– ಇವುಗಳಿಗೆ ಅಷ್ಟೇ ಮಟ್ಟದ ಜಾಗತಿಕ ಪ್ರಚಾರ ಸಿಗುವುದಿಲ್ಲ.

ಇತ್ತೀಚೆಗೆ ನಾರ್ವೆಯಲ್ಲಿ ನಡೆದ ಘಟನೆಯು ಮತ್ತೊಮ್ಮೆ ಈ ವಾಸ್ತವವನ್ನು ನೆನಪಿಸಿತು. ವಿದೇಶಿ ಪತ್ರಕರ್ತರು ಭಾರತದ ಬಗ್ಗೆ ಪ್ರಶ್ನೆ ಮಾಡುವ ರೀತಿಯಲ್ಲೇ ಹಲವಾರು ಬಾರಿ ಪೂರ್ವನಿರ್ಧರಿತ ದೃಷ್ಟಿಕೋನ ಗೋಚರಿಸುತ್ತದೆ. ಭಾರತದ ಜಟಿಲ ವಾಸ್ತವಿಕತೆಯನ್ನು ಅರ್ಥ ಮಾಡಿಕೊಳ್ಳುವುದಕ್ಕಿಂತ, ಪೂರ್ವಗ್ರಹದ ಆಧಾರದ ಮೇಲೆ ಪ್ರಶ್ನೆ ಕೇಳುವ ಪ್ರವೃತ್ತಿ ಕಂಡುಬರುತ್ತದೆ. ಕಾರಣ ಒಂದೇ– ಭಾರತದ ಪರವಾಗಿ ಸಮತೋಲನದ ಜಾಗತಿಕ ಧ್ವನಿ ಇನ್ನೂ ಬಲವಾಗಿಲ್ಲ. ಚೀನಾ ಈ ವಿಷಯವನ್ನು ಬಹಳ ಹಿಂದೆಯೇ ಅರ್ಥಮಾಡಿಕೊಂಡಿತ್ತು. ಅದಕ್ಕಾಗಿ ಅದು ಜಾಗತಿಕ ಮಾಧ್ಯಮ, ಡಿಜಿಟಲ್ ಪ್ರಚಾರ ಮತ್ತು ಅಂತರರಾಷ್ಟ್ರೀಯ ಮಾಹಿತಿ ಜಾಲಗಳಲ್ಲಿ ದೊಡ್ಡ ಮಟ್ಟದ ಹೂಡಿಕೆ ಮಾಡಿತು. ಪಾಶ್ಚಾತ್ಯ ರಾಷ್ಟ್ರಗಳು ದಶಕಗಳಿಂದ ತಮ್ಮ ಕಥನವನ್ನು ಜಗತ್ತಿಗೆ ತಲುಪಿಸುತ್ತಿವೆ. ಆದರೆ ಭಾರತ ಇನ್ನೂ ತನ್ನ ಬಗ್ಗೆ ಇತರರು ಹೇಳುವ ಕಥೆಯನ್ನು ಕೇಳುತ್ತಲೇ ಇದೆ. ಭಾರತಕ್ಕೆ ಈಗ ಅಗತ್ಯವಿರುವುದು ಜಾಗತಿಕ ಮಟ್ಟದಲ್ಲಿ ಕಾರ್ಯನಿರ್ವಹಿಸುವ ಸ್ವತಂತ್ರ ಮತ್ತು ವೃತ್ತಿಪರ ಅಂತರರಾಷ್ಟ್ರೀಯ ಮಾಧ್ಯಮ ವ್ಯವಸ್ಥೆ. ವಿಶ್ವದ ವಿವಿಧ ಭಾಗಗಳಲ್ಲಿ ಅತ್ಯುತ್ತಮ ಭಾರತೀಯ ಹಾಗೂ ಅಂತರರಾಷ್ಟ್ರೀಯ ಪತ್ರಕರ್ತರನ್ನು ನೇಮಿಸಿ, ಭಾರತದ ನಿಜವಾದ ಧ್ವನಿಯನ್ನು ಜಗತ್ತಿಗೆ ತಲುಪಿಸಬೇಕು. ಇದು ಸರ್ಕಾರದ ಪ್ರಚಾರ ಯಂತ್ರವಾಗಬಾರದು; ಸತ್ಯವನ್ನು ಭಾರತದ ದೃಷ್ಟಿಕೋನದಿಂದ ಸಮತೋಲನವಾಗಿ ಜಗತ್ತಿಗೆ ಪರಿಚಯಿಸುವ ವೇದಿಕೆಯಾಗಬೇಕು.

ಇಂದು ಯುದ್ಧಗಳು ಕೇವಲ ಗಡಿಗಳಲ್ಲಿ ನಡೆಯುವುದಿಲ್ಲ. ಅವು ಕ್ಯಾಮೆರಾ ಮುಂದೆ, ಸುದ್ದಿಯ ಶೀರ್ಷಿಕೆಗಳಲ್ಲಿ ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ನಡೆಯುತ್ತಿವೆ. ಜಗತ್ತಿನ ಮನಸ್ಸನ್ನು ಗೆಲ್ಲುವ ರಾಷ್ಟ್ರವೇ ಭವಿಷ್ಯವನ್ನು ರೂಪಿಸುತ್ತದೆ.

ಚೀನಾ ತನ್ನ ಜಾಗತಿಕ ಪ್ರಭಾವಕ್ಕಾಗಿ ದೊಡ್ಡ ಮಟ್ಟದಲ್ಲಿ ರಾಜ್ಯ ಬೆಂಬಲಿತ ಮಾಧ್ಯಮ ವ್ಯವಸ್ಥೆಯನ್ನು ನಿರ್ಮಿಸಿದೆ. ಪಾಶ್ಚಾತ್ಯ ರಾಷ್ಟ್ರಗಳು ದಶಕಗಳ ಹಿಂದೆಯೇ ಜಾಗತಿಕ ಮಾಧ್ಯಮ ಜಾಲಗಳನ್ನು ನಿರ್ಮಿಸಿಕೊಂಡಿವೆ. ಆದರೆ ಭಾರತ ಇನ್ನೂ ಸ್ಥಳೀಯ ಮಾಧ್ಯಮ ಚರ್ಚೆಗಳಲ್ಲೇ ಸೀಮಿತವಾಗಿದೆ. ಭಾರತಕ್ಕೆ ಈಗ ಅಗತ್ಯವಿರುವುದು ಒಂದು ಬಲಿಷ್ಠ ಜಾಗತಿಕ ಭಾರತೀಯ ಮಾಧ್ಯಮ ಜಾಲ. ವಿಶ್ವದ ಪ್ರಮುಖ ನಗರಗಳಲ್ಲಿ ಭಾರತದ ಪರವಾಗಿ ನಿಂತು ಕೆಲಸ ಮಾಡುವ ಅತ್ಯುತ್ತಮ ಪತ್ರಕರ್ತರು, ವಿಶ್ಲೇಷಕರು, ಸಂಶೋಧಕರು ಮತ್ತು ಮಾಧ್ಯಮ ತಜ್ಞರನ್ನು ನೇಮಿಸಬೇಕು. ಅವರು ಕೇವಲ ಸರ್ಕಾರದ ಪರವಾಗಿ ಮಾತಾಡುವವರಾಗಬಾರದು; ಭಾರತದ ವಾಸ್ತವಿಕತೆಯನ್ನು ಸಮತೋಲನದಿಂದ, ವೃತ್ತಿಪರ ರೀತಿಯಲ್ಲಿ ಜಗತ್ತಿಗೆ ತಲುಪಿಸುವವರಾಗಿರಬೇಕು.

ಉದಾಹರಣೆಗೆ, ಭಾರತದಲ್ಲಿ ವಿಜ್ಞಾನ, ಸ್ಟಾರ್ಟಪ್, ಬಡತನ ನಿವಾರಣೆ, ಡಿಜಿಟಲ್ ಕ್ರಾಂತಿ, ಮಹಿಳಾ ನಾಯಕತ್ವ, ಗ್ರಾಮೀಣ ಅಭಿವೃದ್ಧಿ ಮತ್ತು ಪ್ರಜಾಪ್ರಭುತ್ವದ ಯಶಸ್ಸುಗಳ ಬಗ್ಗೆ ಜಗತ್ತಿಗೆ ಎಷ್ಟು ಮಾಹಿತಿ ತಲುಪುತ್ತಿದೆ? ಬಹಳ ಕಡಿಮೆ. ಆದರೆ ಯಾವುದೇ ವಿವಾದಾತ್ಮಕ ಘಟನೆ ನಡೆದರೆ, ಅದು ಜಾಗತಿಕ ಶೀರ್ಷಿಕೆ ಆಗುತ್ತದೆ. ಇದೇ ಕಥನದ ಯುದ್ಧ. ಇಂದು ಮಾಹಿತಿ ಯುಗದಲ್ಲಿ ಜನಾಭಿಪ್ರಾಯವೇ ಶಕ್ತಿ. ಜನರ ಮನಸ್ಸಿನಲ್ಲಿ ಯಾವ ಚಿತ್ರಣ ನಿರ್ಮಾಣವಾಗುತ್ತದೆ ಎಂಬುದೇ ಶಕ್ತಿ. ಜಗತ್ತಿನ ಜನರು ಭಾರತದ ಬಗ್ಗೆ ಏನು ಯೋಚಿಸಬೇಕು ಎಂಬುದನ್ನು ಭಾರತವೇ ನಿರ್ಧರಿಸಬೇಕು. ಇಲ್ಲವಾದರೆ, ಇತರ ರಾಷ್ಟ್ರಗಳ ಮಾಧ್ಯಮವೇ ಭಾರತದ ಕಥೆಯನ್ನು ತಮ್ಮ ದೃಷ್ಟಿಕೋನದಿಂದ ಬರೆಯುತ್ತವೆ.

ಭಾರತಕ್ಕೆ ಈಗ ಬೇಕಾಗಿರುವುದು ಕೇವಲ ಆರ್ಥಿಕ ಶಕ್ತಿ ಅಲ್ಲ; ಜಾಗತಿಕ ಕಥನವನ್ನು ರೂಪಿಸುವ ಮಾಧ್ಯಮ ಶಕ್ತಿ. ಭಾರತ ತನ್ನ ಧ್ವನಿಯನ್ನು ಜಗತ್ತಿಗೆ ತಲುಪಿಸದಿದ್ದರೆ, ಇತರರ ಧ್ವನಿಯೇ ಭಾರತದ ಗುರುತಾಗಿ ಉಳಿಯುತ್ತದೆ. ಭಾರತ ತನ್ನ ಕಥೆಯನ್ನು ತಾನೇ ಹೇಳದಿದ್ದರೆ, ಇತರರು ಬರೆದ ಕಥೆಯೇ ಭಾರತದ ಇತಿಹಾಸವಾಗಿ ಉಳಿಯುತ್ತದೆ.

ಭಟ್ಟರ್ ಸ್ಕಾಚ್

- **ಸತೀಶ ಪತ್ತಾರ, ಬೆಳಗಾವಿ**
ಭಟ್ರೇ, ಅಂತಾರಾಷ್ಟ್ರೀಯ ವಿಮಾನದ ಒಳಗಡೆ ಸೊಳ್ಳೆಗಳು ಯಾಕೆ ಇರುವುದಿಲ್ಲ?
- **ಯಾಕಂದ್ರೆ, ಅವುಗಳ ಹತ್ತಿರ 'ಪಾಸ್‌ಪೋರ್ಟ್' ಇರಲ್ಲ!**

- **ಸಂತೋಷ ಬಾವಿಕಟ್ಟೆ, ಬಳ್ಳಾರಿ**
ಭಟ್ರೇ, ಗಂಡನಿಗೂ, ಹೆಂಡತಿಗೂ ಇರುವ ಹೋಲಿಕೆ ಏನು?
- ನನ್ನನ್ನು ಯಾವುದಕ್ಕೂ ಹೋಲಿಸಬೇಡಿ ಅಂತ ಗಂಡ ದುಂಬಾಲು ಬೀಳ್ತಾನಲ್ಲ?

- **ಕಿರಣ್ ನಾಜಗಾರ, ಕಾರವಾರ**
ಭಟ್ರೇ, ಯಾವ 'ಕೀ' ಹಾಕಿದರೂ ಬಾಗಿಲು ತೆರೆಯುವುದಿಲ್ಲವಲ್ಲ ?
- **'ಮಂಕಿ' (Mon'key') ಹಾಕಿ ಟ್ರೈ ಮಾಡಿ!**

- **ಶಾಂತಾರಾಮ ನಾಯಕ, ಶಿರಸಿ**
ಭಟ್ರೇ, ಬ್ರೇಕ್ ಫೇಲ್ ಆದಾಗ ಗಾಡಿಯನ್ನು ನಿಲ್ಲಿಸುವುದು ಹೇಗೆ?
- **ಯಾವುದಾದರೂ ದೊಡ್ಡ ಮರ ಅಥವಾ ಗೋಡೆಗೆ ಗುದ್ದಿದರೆ ಗಾಡಿ ಆರಾಮವಾಗಿ ನಿಲ್ಲುತ್ತೆ!**

- **ವೆಂಕಟೇಶ ಭಟ್, ಸಂಜಯನಗರ**
ಭಟ್ರೇ, ಸೋಮವಾರಕ್ಕೂ, ಭಾನುವಾರಕ್ಕೂ ಇರುವ ದೊಡ್ಡ ಶತ್ರುತ್ವ ಏನು?
- **ಭಾನುವಾರ ಮಜಾ ಮಾಡಿದವರಿಗೆಲ್ಲ ಸೋಮವಾರ 'ಸಜಾ' ಕೊಟ್ಟ ಹಾಗೆ ಕಾಣುತ್ತೆ!**

- **ವಿನಾಯಕ ಕಾಮತ, ಹುಬ್ಬಳ್ಳಿ**
ಭಟ್ರೇ, ಕ್ರಿಕೆಟ್‌ನಲ್ಲಿ ಔಟ್ ಆದ ಬ್ಯಾಟ್ಸ್‌ಮನ್ ಯಾಕೆ ಪೆವಿಲಿಯನ್‌ಗೆ ಹೋಗ್ತಾನೆ?
- **ಅಲ್ಲಿ ಕುಳಿತುಕೊಳ್ಳಲು ಜಾಗ ಇರುತ್ತೆ, ಮೈದಾನದಲ್ಲಿ ನಿಂತು ಸುಸ್ತಾಗಿರುತ್ತಾನಲ್ಲ!**

- **ಸ್ವಾಮಿ ಗೌಡ, ಪಿರಿಯಾಪಟ್ಟಣ**
ಭಟ್ರೇ, ಅತಿ ಹೆಚ್ಚು ಸುಳ್ಳು ಹೇಳುವ ವ್ಯಕ್ತಿ ಯಾರು?
- **'ಇನ್ನೈದು ನಿಮಿಷದಲ್ಲಿ ಅಲ್ಲಿರ್ತೀನಿ' ಅಂತ ಹೇಳುವ ಗೆಳೆಯ!**

- **ಚಿದಾನಂದ ಹೆಗ್ಗದ್ದೆ, ಶಿವಮೊಗ್ಗ**
ಭಟ್ರೇ, ಜೇಬುಗಳಿಲ್ಲದ ಬಟ್ಟೆ ಹಾಕಿಕೊಂಡರೆ ಏನಾಗುತ್ತೆ?
- **ಕಳ್ಳರಿಗೂ ಬೇಸರ ಆಗುತ್ತೆ, ನಮಗೂ ಖರ್ಚು ಮಾಡೋಕೆ ಆಗಲ್ಲ!**

- **ಕೆ.ಕೆ.ಜೇಮ್ಸ್, ಮೈಸೂರು**
ಭಟ್ರೇ, ಜನ ಯಾಕೆ ವಿಮಾನ ನಿಲ್ದಾಣಕ್ಕೆ ಹೋಗುವಾಗ ಅಷ್ಟೊಂದು ಫೋಟೋ ತೆಗಿತಾರೆ?
- **ಅದನ್ನು ಸೋಷಿಯಲ್ ಮೀಡಿಯಾದಲ್ಲಿ ಅಪ್‌ಲೋಡ್ ಮಾಡಿ ಸ್ನೇಹಿತರ ಹೊಟ್ಟೆ ಉರಿಸಬೇಡವಾ?!**

- **ರಮೇಶ ಗೌಡ, ಮಳವಳ್ಳಿ**
ಭಟ್ರೇ, ಕೂದಲಿಗೂ, ಬುದ್ಧಿವಂತಿಕೆಗೂ ಏನಾದರೂ ಸಂಬಂಧ ಇದೆಯಾ?
- **ಇದ್ದಿದ್ದರೆ ನನಗೇ ಜ್ಞಾನಪೀಠ ಕೊಡಬೇಕು ಅಂತ ಆರ್.ಜಿ.ಹಳ್ಳಿ ನಾಗರಾಜ ಧರಣಿ ಕೂತ್ಕೊತಾ ಇದ್ದ!**

ಗೆಜ್ಜೆ ಬಿಚ್ಚುವ ಸಮಯ, ಒಳಕೋಣೆಯಲಿ ಮೌನ

ಪತ್ತನಾಜೆ ಎಂಬುದು ತುಳುನಾಡ ಮಂದಿಗೆ ಗೆಜ್ಜೆ ಬಿಚ್ಚಿಟ್ಟು ಮನೆ ಸೇರಿಕೊಳ್ಳುವ ಸಮಯ. ಅಲ್ಲಿಂದಾಚೆ ಮಳೆಗಾಲ. ಅದು ಬಹಿರಂಗದ ಪ್ರದರ್ಶನ ಕೈಬಿಟ್ಟು ಅಂತರಂಗದ ಮಾತು ಕೇಳಿಸಿಕೊಳ್ಳುವ ಕಾಲದ ಮುನ್ನುಡಿ. ಹೊರಕೋಣೆ ಒಳಕೋಣೆಗಳ ಭಿನ್ನತೆಯನ್ನು ಮನಗಾಣುವ ಸಮಯ. ಯತಿಗಳ ಚಾತುರ್ಮಾಸಕ್ಕೂ ಇದೇ ಹಿನ್ನೆಲೆ.



ಕಾಡುದಾರಿ

ಹರೀಶ್ ಕೇರ
vveditoped@gmail.com

ಇನ್ನು ನಾಲ್ಕು ದಿನ ಹೋದರೆ ಕರಾವಳಿಯ ಯಕ್ಷಗಾನ ಮೇಳಗಳ ಚೌಕಿಮನೆಗಳು, ವೇದಿಕೆಗಳು ಮೌನವಾಗುತ್ತವೆ. ವರ್ಷವಿಡೀ ವೇದಿಕೆಯ ಮೇಲೆ ದೇವಾಸುರರಾಗಿ ಕುಣಿದು ಅಬ್ಬರಿಸಿ ನಟಿಸಿದ ಕಲಾವಿದರು ಗೆಜ್ಜೆ ಬಿಚ್ಚಿಡುವ ಸಮಯ. ಆ ದಿನದ ಹೆಸರು ಪತ್ತನಾಜೆ. ಅಂದರೆ ತುಳು ಭಾಷೆಯಲ್ಲಿ 'ಬೇಸ' ತಿಂಗಳ ಹತ್ತನೇ ದಿನ. ಅಂದಿನಿಂದ ಮಳೆ ತನ್ನ ಗೆಜ್ಜೆ ಕಟ್ಟಿಕೊಂಡು ಗುಡುಗು ಸಿಡಿಲುಗಳೊಂದಿಗೆ ಅಬ್ಬರಿಸಲು ಶುರು ಮಾಡುತ್ತದೆ. ಇನ್ನು ನಾಲ್ಕು ತಿಂಗಳ ಕಾಲ ಹೊರಾಂಗಣದಲ್ಲಿ ಆಟವಿಲ್ಲ, ನಾಟಕವಿಲ್ಲ, ಯಕ್ಷಗಾನವಿಲ್ಲ. ಜಾತ್ರೆ, ಕೋಲ, ತಂಬಿಲ, ನೇಮ ಮೊದಲಾದ ಆಚರಣೆಗಳಿಗೂ ಬಿಡುವು. ದೈವಾರಾಧಕರೂ ಗೆಜ್ಜೆ ಬಿಚ್ಚಿ, ಸುರಿಯ, ಮೊಗವಾಡ, ದೀಟಿಗೆ ಇತ್ಯಾದಿಗಳು ಮಣೆಮಂಚ ಸೇರಿಕೊಳ್ಳುತ್ತವೆ. ಈಗಾಗಲೇ ಕೇರಳದಲ್ಲಿ ಮುಂಗಾರು ತನ್ನ ಮೊದಲ ಹೆಜ್ಜೆಯ ನರ್ತನ ತೊಡಗಿದೆ. ಇನ್ನು ಆರೆಂಟು ದಿನಗಳಲ್ಲಿ ಅದು ಕರಾವಳಿಯುದ್ದಕ್ಕೂ ತನ್ನ ಆಲಾಪದ ಸೆರಗನ್ನು ಬೀಸುತ್ತದೆ. ಪಂಜೆಯವರ ಕವನ ಸೂಚಿಸುವಂತೆ ಹೊರಗೆ ತೆಂಕಣ ಗಾಳಿಯಾಟ ನಡೆದಿದ್ದರೆ ಒಳಕೋಣೆಯಲ್ಲಿ ಮೌನದ ಅಂಕಣ ಗಾಳಿಯಾಟ.

ಪತ್ತನಾಜೆ, ಅದು ಗೌಜಿ ಗಮ್ಮತ್ತು ನಿಲ್ಲಿಸಿ ಮೌನಕ್ಕೆ, ಸದ್ದಿಲ್ಲದ ದುಡಿಮೆಗೆ ಜಾರುವ ಸಮಯ. ಪತ್ತನಾಜೆಯು ಮಳೆಯ ಆರಂಭದ ಬೀಜ. ಮಳೆ ಬೀಳಲಾರಂಭಿಸಿದ ಒಂದು ವಾರದಲ್ಲಿ ಹೊಲಗದ್ದೆಗಳು ಮೆತ್ತಗಾಗಿ ಉಳುವಾ ಯೋಗಿಯ ಆಹ್ವಾನಿಸಲು ಮುಂದಾಗುತ್ತವೆ. ಹಿಂದೆಲ್ಲಾ ಯಕ್ಷಗಾನ ಕಲಾವಿದರು ಬೇಸಿಗೆಯಲ್ಲಿ ಕಲೆಯ ಮಡಿಲಿನಲ್ಲಿಯೂ, ಮಳೆಗಾಲದಲ್ಲಿ ಹೊಲದ ಮಡಿಲಲ್ಲಿಯೂ ಇರಬೇಕಿತ್ತು. ಕಲೆ ಹೊಟ್ಟೆ ತುಂಬಿಸುತ್ತಿರಲಿಲ್ಲ. ಇಂದು ತುಸು ಜನಪ್ರಿಯರಾದ ಕಲಾವಿದರಿಗೆ ಮಳೆಗಾಲದಲ್ಲಿಯೂ ಯಕ್ಷಗಾನ ಪ್ರದರ್ಶನಗಳು ಸಿಗುತ್ತವೆ. ನಗರಗಳಲ್ಲಿ ಹಾಲ್‌ಗಳಲ್ಲಿ ಮಳೆಯಿಂದ ರಕ್ಷಣೆ ಪಡೆದು ಆಡುಗರೂ ನೋಡುಗರೂ ಸೇರುತ್ತಾರೆ. ಇಷ್ಟಕ್ಕೇ ಪತ್ತನಾಜೆಗೆ ಇಂದು ಬೆಲೆಯಿಲ್ಲ ಎನ್ನುವಂತಿಲ್ಲ. ಅದು ಕರಾವಳಿಯ, ಮಲೆನಾಡಿನ ಜನತೆಯ ಬದುಕಿನ ಭಾಗ. ಬಿಸಿಲು ಮಣಿದು ಮಳೆ ದಿಬ್ಬಣ ಹೊರಡುವ ಸಮಯ ಎಂದರೆ ಎಲ್ಲ ಸಮಾರಂಭಗಳೂ ಮುಗಿದು ನೆಲದ ಕಾಯಕಕ್ಕೆ ಇಳಿಯಲೇಬೇಕು. ಇಲ್ಲವಾದರೆ ಮುಂದಿನ ಬೇಸಿಗೆ ದುರ್ಭರ. ದೈವಾರಾಧನೆಗೆ ಫುಲ್ ಸ್ಟಾಪ್, ಅದರಲ್ಲಿ ರಾಜಿಯಿಲ್ಲ. ಪತ್ತನಾಜೆ ಎಂಬುದೊಂದು ಸಂಕ್ರಮಣ ಸಮಯ. ಅದು ಹೊರಗಿನ ಮತ್ತು ಒಳಗಿನ ಬದಲಾವಣೆಯ ಒಂದು ಸೂಚಿ, ಒಂದು ಮಧ್ಯಬಿಂದು.

ಗೆಜ್ಜೆ ಬಿಚ್ಚುವುದಕ್ಕೊಂದು ದಿನ ಎಂಬುದೇ ಎಷ್ಟೊಂದು ಸೊಗಸಾಗಿದೆ ಅಲ್ಲವೇ. ಹಾಗೇ ಗೆಜ್ಜೆ ಕಟ್ಟುವುದಕ್ಕೂ ಒಂದು ದಿನವಿದೆ. ಮಳೆಯೆಲ್ಲಾ ನಿಂತು ಹಗಲುಗಳು ಹೊಳವಾದ ಕಾರ್ತಿಕ ಮಾಸದ ಒಂದು ದಿನ, ಸಾಮಾನ್ಯವಾಗಿ ದೀಪಾವಳಿ ಹಬ್ಬದ ಬಳಿಕ, ಈ ಗೆಜ್ಜೆ ಕಟ್ಟುವ ದಿನ. ಆದರೆ ಪತ್ತನಾಜೆ ಒಂದು ಭಾವುಕ ದಿನ. ಅಲ್ಲಿಂದ ನಾಲ್ಕು ತಿಂಗಳು ಗೆಜ್ಜೆಯ ಸಹವಾಸವೇ ಇಲ್ಲವಲ್ಲ. ಗೆಜ್ಜೆ ಎಷ್ಟು ಪವಿತ್ರ, ಪೂಜನೀಯ ಎಂಬುದು ಕಲಾವಿದರಿಗೆ ಗೊತ್ತು. ಅದನ್ನು ಕಟ್ಟದೇ ಮೈಮೇಲೆ ಕಲೆಯ ಆವೇಶವೇ ಬರುವಂತಿಲ್ಲ. ಭರತನಾಟ್ಯದ ಮಧುರ ಘಲ್ ಘಲ್, ಭೂತಕೋಲದ ಗಗ್ಗರದ ಘೋಷ, ಯಕ್ಷಗಾನದ ಚೆಂಡೆಮದ್ದಲೆಗಳ ನಿನದದ ನಡುವೆ ತುಸುವೇ ಕೇಳಿದಂತಾಗುವ ಈ ಗೆಜ್ಜೆ ದನಿ ತಾತ್ಕಾಲಿಕವಾಗಿ ಮೌನವಾಗುವ ಕ್ಷಣ, ಮನುಷ್ಯ ಒಳಮುಖಿಯಾಗುವ ಸಮಯಕ್ಕೆ ಮುನ್ನುಡಿಯೂ ಹೌದು. ಕಾಲುಗಳು ಸದಾ ಕುಣಿಯುತ್ತಿರಲು ಸಾಧ್ಯವಿಲ್ಲ. ಮನುಷ್ಯ ಸದಾ ನಟಿಸಲು ಸಾಧ್ಯವಿಲ್ಲ. ದೇಹಕ್ಕೂ ಅಂತರಂಗಕ್ಕೂ ವಿರಾಮ ಬೇಕು. ಮನುಷ್ಯನಿಗೂ ಅಂತಿಮವಾಗಿ ಗೆಜ್ಜೆ ಬಿಚ್ಚುವ ದಿನವೊಂದಿದೆ ಅಲ್ಲವೇ. ಗೆಜ್ಜೆ ಬಿಚ್ಚಿಟ್ಟ ಮಾತ್ರಕ್ಕೆ ಎಲ್ಲ ಕಲೆಗಳೂ ಮೌನವಾಗುತ್ತವೆ ಎಂದೇನಿಲ್ಲ. ಮಳೆಯಲ್ಲಿ ಮುಳುಗಿಹೋಗಿರುವ ಮಲೆನಾಡಿನ ಒಂಟಿ ಮನೆಗಳ ಮುಂದೆ ಆಟಿಕಳೆಂಜ, ಸೋಣದ ಜೋಗಿ, ಸಿದ್ದವೇಷಗಳೆಲ್ಲ ಪ್ರತ್ಯಕ್ಷವಾಗುತ್ತವೆ. ಇವೆಲ್ಲ ಜನಪದ ಕಲಾಪ್ರಕಾರಗಳು. ಹೆಚ್ಚಾಗಿ, ಒಂದು ಕಾಲದಲ್ಲಿ ದನಿಗಳ ಹೊಲ- ಮನೆಗಳಿಗೆ ಪ್ರವೇಶ ಇದ್ದಿರದ, ಹೀಗಾಗಿ ಉಳುಮೆಯ ಕಾಯಕಕ್ಕೂ ಸಾಧ್ಯತೆ ಇಲ್ಲದ, ಸ್ವಂತ ಜಾಗವನ್ನೂ ಹೊಂದಿರದ ಸಮುದಾಯದವರು ಧರಿಸಿ ಬರುವ ವೇಷಗಳು ಇವು. ಸಣ್ಣ ದುಡಿ, ತೆಂಬರೆಗಳ ನಾದದೊಂದಿಗೆ ಅಂಗಳದ ತುದಿಯಲ್ಲಿ ಕಾಣಿಸಿಕೊಳ್ಳುವ ಇವರಿಗೆ ಮಳೆಗಾಲದ ನಾಲ್ಕು ತಿಂಗಳು ಇದೇ ದುಡಿಮೆಯ ಮೂಲ. ಇವರ ಗೆಜ್ಜೆಗಳು ಎಂದಿಗೂ ಮೌನವಾಗವು. ಯಾಕೆಂದರೆ ಅದು ಅವರ ತುತ್ತಿನೊಂದಿಗೆ ಜೋಡಿಸಿಕೊಂಡಿದೆ. ಚಿಕ್ಕಮೇಳ ಎಂಬುದೂ ಹೀಗೇ ನಾಲ್ಕಾರು ಯಕ್ಷಗಾನ ಕಲಾವಿದರು ಸೇರಿಕೊಂಡು ಮನೆಮನೆಗೆ ಹೋಗಿ ಹತ್ತಿಪ್ಪತ್ತು ನಿಮಿಷದ ಯಕ್ಷಗಾನ ತುಣುಕುಗಳನ್ನು ಪ್ರದರ್ಶಿಸಿ ಮಾಡುವ ಸಂಪಾದನೆ. ಇವರು ಬೇಸಿಗೆಯಲ್ಲಿ ಮತ್ತೆ ಯಕ್ಷಗಾನ ಮೇಳಗಳಿಗೆ ಸೇರಿಕೊಳ್ಳುತ್ತಾರೆ. ಹೀಗೆ ಕಳಚಿಟ್ಟರೂ ಗೆಜ್ಜೆ ಇವರನ್ನು ಬಿಡದು.

ಗೆಜ್ಜೆ ಬಿಚ್ಚಿಟ್ಟು ಮೌನವಾಗಿ ಕೂತಿರುವ ಸಮಯವನ್ನೇ ಸನ್ಯಾಸಾಶ್ರಮ, ಮಠಗಳಲ್ಲಿ 'ಚಾತುರ್ಮಾಸ' ಎಂದು ಕರೆಯುತ್ತಾರೆ. ಯತಿಗಳು ಮಲೆನಾಡಿನ ನಾಲ್ಕು ತಿಂಗಳು ಎಲ್ಲ ಸುತ್ತಾಟ, ಪ್ರವಚನ ಇತ್ಯಾದಿ ಪಕ್ಕಕ್ಕಿಟ್ಟು ಧ್ಯಾನ, ಅಧ್ಯಯನ, ಮೌನಗಳಲ್ಲಿ ಹೊತ್ತು ಕಳೆಯಬೇಕು ಎಂಬುದಿದರ ನಿಯಮ. ತುಂಬಿಕೊಂಡವರಿಗೂ ಮತ್ತೆ ಬರಿದಾಗುವ, ಮತ್ತೆ ತುಂಬಿಕೊಳ್ಳುವ ಅವಕಾಶ. ಜ್ಞಾನಕ್ಕೆ ಸಾಣೆ ಕೊಡುವ, ಯೋಗಕ್ಕೆ ಹೊಳಪು ನೀಡುವ, ಕರ್ಮಕ್ಕೆ ವಿರಾಮ ನೀಡುವ ಈ ಕಾಲ. ನಡೆದಾಡಿದರೆ ಕ್ರಿಮಿಕೀಟಗಳು ಕಾಲಿಗೆ ಸಿಕ್ಕಿ ಸಾಯಬಹುದು ಎಂಬಂಥ ಜೈನಯತಿಗಳ ಅಹಿಂಸೆಯ ವ್ರತ ಈ ಕಾಲದಲ್ಲಿ ತಾರಕ. ಯಾಕೆಂದರೆ ಮಳೆಗಾಲ ಎಲ್ಲ ಜೀವಜಾಲಕ್ಕೆ ಹುಟ್ಟಿನ, ಮರುಹುಟ್ಟಿನ ಸಮಯ. ಮನಸ್ಸಿಗೂ ಬೇಕಲ್ಲ ಮರುಹುಟ್ಟು.

ವರ್ಷದಲ್ಲಿ ಮೂರು ಕಾಲವಲ್ಲ. ಎರಡೇ ಕಾಲ. ಒಂದು ಬಹಿರಂಗದ, ಇನ್ನೊಂದು ಅಂತರಂಗದ ಕಾಲ. 'ಎರಡು ಕೋಣೆಗಳ ನೀಂ ಮಾಡು ಮನದಾಲಯದಿ, ಹೊರಕೋಣೆಯಲಿ ಲೋಗರಾಟಗಳನಾಡು, ವಿರಮಿಸೊಬ್ಬನೆ ಮೌನದೊಳಮನೆಯ ಶಾಂತಿಯಲಿ, ವರಯೋಗ ಸೂತ್ರವಿದು' ಎಂದು ಮಂಕುತಿಮ್ಮನಿಗೆ ಡಿವಿಜಿ ಹೇಳುತ್ತಾರೆ. ಆ ಮಾತೂ ಇದನ್ನೇ ಧ್ವನಿಸೀತು. ಮನದಲ್ಲಿ ಎರಡು ಕೋಣೆಗಳ ಮಾಡಿದಂತೆ, ನಮ್ಮ ಸಮಯದಲ್ಲೂ ಎರಡು ವಿಭಾಗ ಮಾಡಲೇಬೇಕು. ಗೆಜ್ಜೆ ಕಟ್ಟಿಕೊಂಡು ಕುಣಿಯುವ, ಲೋಕದ ಮುಂದಿನ ಪ್ರದರ್ಶನದ, ಕಾಯಕದ, ಡ್ಯೂಟಿಯ, ದೇಹದಂಡನೆಯ, ಸೊಗಸಾಗಿ ಕಾಣಿಸುವ, ಪ್ರವಾಸ ಮಾಡುವ, ಮಾಡಿದ್ದನ್ನು ಫೋಟೋ ತೆಗೆದು ಸೋಶಿಯಲ್ ಮೀಡಿಯಾದಲ್ಲಿ ಹಾಕಿ 'ನಾನು ಎಷ್ಟು ಚೆನ್ನಾಗಿದ್ದೇನೆ ನೋಡು' ಎಂದು ಕಾಣಿಸುವ ಕಾಲವೊಂದು.

ಗೆಜ್ಜೆ ಬಿಚ್ಚಿಡುವ, ಸದ್ದಿಲ್ಲದೆ ನಡೆಯುವ, ಹೆಜ್ಜೆಗೆ ಲಜ್ಜೆಯನ್ನೂ ಸಂಯಮವನ್ನೂ ಕಲಿಸುವ, ಮಾತು ಮಾತು ಮಥಿಸಿ ನಾದದ ನವನೀತ ಮಾತ್ರ ಹೊಮ್ಮುವ, ಅಂಗಳಕ್ಕೆ ಬಂದು ಮಳೆನೀರಿನಲ್ಲಿ ಮೈತೊಳೆಯುವ ಹಕ್ಕಿಗಳ ಪುಕ್ಕದ ಸದ್ದನ್ನು ಆಲಿಸುವ, ದೂರದ ಮಲೆಯ ತುದಿಯಿಂದ ಇದೀಗ ಇಳಿದು ಬರುತ್ತಿರುವ ಕಾಳಮೇಘದ ಸದ್ದನ್ನು ಕೇಳಿಸಿಕೊಳ್ಳುವ, ಮೇಲಿನ ಗುಡ್ಡದಲ್ಲೆಲ್ಲೋ ಬಿದ್ದ ಮಳೆಗೆ ಮನೆ ಪಕ್ಕದ ಹೊಳೆ ಇನ್ನು ಕೆಲವೇ ಹೊತ್ತಿನಲ್ಲಿ ಉಬ್ಬರಿಸಿಕೊಳ್ಳಲಿದೆ ಎಂಬುದನ್ನು ಮನಗಾಣುವ, ಮಳೆ ನಿಂತ ಬಳಿಕ ಎಲೆಗಳು ತಟಪಟನೆ ನೆಲಕ್ಕೆ ಉದುರಿಸುವ ಹನಿಗಳನ್ನು ಕಾಣುವ, ತೇಲಿಬಿಟ್ಟ ಕಾಗದದ ದೋಣಿಯನ್ನು ದೃಷ್ಟಿ ಮರೆಯಾಗುವವರೆಗೆ ಹಿಂಬಾಲಿಸುವ ಕಾಲವಿನ್ನೊಂದು. ಅಲ್ಲಿ ಪ್ರದರ್ಶನವಿಲ್ಲ, ದರ್ಶನವಿದೆ. ಕುಣಿತವಿಲ್ಲ, ಮಣಿತವಿದೆ.

ಮೌನವಾಗಿ ಬದುಕನ್ನು ಸಾಕ್ಷಿಯಂತೆ ನೋಡುವ ಪರಿಪಾಠ ನಮ್ಮಲ್ಲಿರುವಂತೆ ಜಪಾನೀಯರಲ್ಲಿ, ಬೌದ್ಧರಲ್ಲೂ ಇದೆ. 'ಸೈಜಾಕು' ಎಂಬುದೊಂದು ಝೆನ್ ಬೌದ್ಧಧರ್ಮದಲ್ಲಿ ಬೇರೂರಿರುವ ಪರಿಕಲ್ಪನೆ. ಇದರ ಅಕ್ಷರಶಃ ಅರ್ಥ ಆಳವಾದ ನಿಶ್ಚಲತೆ. ಇದು ಮೌನವನ್ನು ಮೀರಿದ್ದು. ಗಾಢವಾದ ಆಂತರಿಕ ಏಕಾಂತ ಮತ್ತು ಮಾನಸಿಕ ಸ್ಪಷ್ಟತೆಯ ಸ್ಥಿತಿ. 'ಮೊಕುಸಾಟ್ಸು' ಎಂಬುದು ಧ್ಯಾನದಂತಹ ಅಭ್ಯಾಸ. ಮೌನವಾಗಿ ಕುಳಿತುಕೊಳ್ಳುವುದು, ಆಲೋಚನೆಗಳಿಗೆ ಅಂಟಿಕೊಳ್ಳದೆ ಅವುಗಳನ್ನು ಗಮನಿಸುವುದು, ನಿಶ್ಶಬ್ದದ ನೆಲೆಯಲ್ಲಿ ಶಾಂತಿಯನ್ನು ಕಂಡುಕೊಳ್ಳುವುದು. ಜಪಾನಿನಲ್ಲಿ ಬಡಬಡನೆ ಮಾತಾಡುವುದು ಅಸಭ್ಯ. ಅದನ್ನು ಅಪಕ್ವತೆ ಎಂದು ಗ್ರಹಿಸಲಾಗುತ್ತದೆ. 'ಚಿನ್ಮೋಕು' ಎಂದರೆ ಸಂಯಮದ ಶಕ್ತಿ. ಮನಸ್ಸಿಗೆ ಬಂದದ್ದನ್ನು ಮಾತಾಡದೆ, ಆಲೋಚನೆಗಳನ್ನು ಎಚ್ಚರಿಕೆಯಿಂದ ನೇರ್ಪುಗೊಳಿಸಿ ನಿಧಾನವಾಗಿ ಉಚ್ಚರಿಸುವುದು ಘನತೆ ಗೌರವದ ನಡೆ. 'ಮಾ' ಎಂಬುದು ಆಡುವ ಮಾತುಗಳಲ್ಲಿ ಪದಗಳ ನಡುವಿನ ಅರ್ಥಪೂರ್ಣ ವಿರಾಮ. ಆಡಿದ ಮಾತುಗಳಂತೆಯೇ ಅವುಗಳ ನಡುವಿನ ಮೌನಕ್ಕೂ ಅರ್ಥವಿದೆ ಎಂಬುದನ್ನು ಹೇಳುವ ಒಂದು ಕಲ್ಪನೆ. ಜಪಾನಿನಲ್ಲಿ ಸಾವಿರಾರು ವರ್ಷಗಳ ಝೆನ್ ಪದ್ಧತಿ ಬೇರೂರಿದ್ದು ಸುಮ್ಮನೇ ಅಲ್ಲ. ಅಲ್ಲಿ ಅದು ಬೆಳೆಯಲು ಬೇಕಾದ ಏಕಾಂತ, ಕಾಡು, ಮೌನ, ವಿರಾಮ, ಮಳೆ ಎಲ್ಲವೂ ಇದ್ದಂತೆ ತೋರುತ್ತದೆ.

ಕಾಲಿಗೆ ಕಟ್ಟಿದ ಗೆಜ್ಜೆಯನ್ನು ಬಿಚ್ಚಿಡಬಹುದು. ಆದರೆ ಮನಸ್ಸಿಗೆ ಕಟ್ಟಿದ ಗೆಜ್ಜೆಯನ್ನು ಕಳಚಿಡುವುದು ಹೇಗೆ. ವಯಸ್ಸಾಗುತ್ತಿರುವ ಹೀರೋಯಿನ್ ಮೇಕಪ್ ಇಲ್ಲದೆ ಹೊರಗೆ ಕಾಲಿಡದಂತೆ, ಮನಸ್ಸು ಕೂಡ ಮೇಕಪ್ ಇಲ್ಲದೆ ಹೊರಗೆ ಕಾಣಿಸಿಕೊಳ್ಳಲು ಹಿಂಜರಿಯುವುದು. ನಗರವಾಸಿಗಂತೂ ಗೆಜ್ಜೆ ಬಿಚ್ಚಿಡುವ ಆ ಭಾಗ್ಯವೇ ಇಲ್ಲ. ಅವನು ಸದಾಕಾಲ ಕಾರಿನ ಬೈಕಿನ ಆಕ್ಸಿಲರೇಟರ್ ವೃದ್ಧಿಸುತ್ತಲೇ ಇರಬೇಕು. ದಾರಿಗಿಂತ ಗಮ್ಯ ಮುಖ್ಯವೆಂಬ ಧಾವಂತದಲ್ಲೇ ಇರುವ ಆತನಿಗೆ ಎದುರಿಗೆ ಬರುವ ಎಲ್ಲ ವಾಹನ ಸವಾರರ ಮೇಲೆ ಅಸಹನೆ. ಸಣ್ಣ ಕೈಸನ್ನೆಯೂ ಕೆರಳಿಸಿ ಕೊಲೆಯವರೆಗೂ ಕೊಂಡೊಯ್ಯುವ ಕೇಡು. ಒಂದು ಕ್ಷಣ ನಿಧಾನಿಸುತ್ತೇನೆ, ಒಂದೇ ಒಂದು ಹೆಜ್ಜೆ ಹಿಂದಿಡುತ್ತೇನೆ, ಅದೊಂದು ಶಬ್ದ ಆಡದೆ ಸುಮ್ಮನಿರುತ್ತೇನೆ ಎಂದುಕೊಂಡರೆ ಯಾವ ತಾಪತ್ರಯವೂ ಇರದು.

ಯೋಚಿಸುತ್ತ ಹೋದಂತೆಲ್ಲ ಪತ್ತನಾಜೆಯ ಅಂತರಾರ್ಥಗಳು ಇನ್ನಷ್ಟು ಗಾಢವಾಗುತ್ತಿವೆ. ಮಳೆಯ ಮುಂದೆ ಎಲ್ಲ ಪ್ರದರ್ಶನ ಕಲೆಗಳೂ ಸಪ್ಪೆಯೆಂದೂ ಹೊಳೆಯುತ್ತಿದೆ. ಕತ್ತಲಿನ ರಾತ್ರಿಯಲ್ಲಿ ಸಿಡಿಲು ಮಿಂಚು ಗುಡುಗಿನ ಸಮೇತ ನೆಲಕ್ಕಪ್ಪಳಿಸುವ, ಅದರ ಜೊತೆ ಮರಗಳ ನೆತ್ತಿಯನ್ನು ಹಿಡಿದು ಮನಬಂದಂತೆ ಎಳೆದಾಡುವ ಗಾಳಿಯೂ ಸೇರಿಕೊಂಡ ಮಳೆಯನ್ನು ಗಮನಿಸಿದ್ದರೆ ಮೇಲಿನ ಮಾತು ನಿಮಗರ್ಥವಾಗುತ್ತದೆ. ಅದು ಕುವೆಂಪು ಹೇಳಿದಂತೆ 'ಕದ್ದಿಂಗಳು, ಕಗ್ಗತ್ತಲು, ಕಾರ್ಗಾಲದ ರಾತ್ರಿ, ಸಿಡಿಲ್ಮಿಂಚಿಗೆ ನಡುಗುತ್ತಿದೆ ಪರ್ವತ ವನಧಾತ್ರಿ.' ಅದರ ಮುಂದೆ ಎಲ್ಲ ರಕ್ಕಸರಾರ್ಭಟವೂ ಮಕ್ಕಳಾಟ. ಏಕಕಾಲಕ್ಕೆ ಭೂದೇವತೆಗೆ ದೇವತಾಸ್ತನ್ಯವಾಗಿಯೂ ವಜ್ರಘಾತವಾಗಿಯೂ ಕಾಣಿಸಿಕೊಳ್ಳಬಲ್ಲ ಮಳೆಯ ಪ್ರದರ್ಶನವೇ ನಿಜದರ್ಶನ. ಅದರ ಮುಂದೆ ನಾವು ಗೆಜ್ಜೆ ಕಟ್ಟಿ ತೋರುವ ನಾಟ್ಯವೆಲ್ಲ ಕ್ಷುಲ್ಲಕ. ಅದಕ್ಕೇ ಬಂದಿರಬೇಕು ಬಿಚ್ಚಿಡುವ ಸಂಪ್ರದಾಯ.

ಪತ್ತನಾಜೆಯ ನಂತರದ ನಾಲ್ಕು ತಿಂಗಳು ಕಾಯುವ ಕಾಲವೂ ಹೌದು. ಕಾಯುವಿಕೆಗಿಂತನ್ಯ ತಪವು ಇಲ್ಲ. ನಾಲ್ಕು ತಿಂಗಳು ಸುಮ್ಮನಿದ್ದರೂ ಬದುಕಿನ ಬಂಡಿ ನಡೆಯಬೇಕಲ್ಲ. ಭೂತನರ್ತಕನಿಗೆ ಅಣಿ ಕಟ್ಟಿದ ದಿನದ ಸಂಭಾವನೆ, ಯಕ್ಷಗಾನ ಕಲಾವಿದನಿಗೆ ವೇಷ ಹಾಕಿದ ರಾತ್ರಿಯ ಗೌರವಧನ. ಅಂತರ್ಮಥನದ ಕಾಲ ಹಸಿವಿನ ಕಾಲವಾಗಿಬಿಟ್ಟರೆ ಕತೆಯೇನು? ಹೀಗಾಗಿ ಎಲ್ಲ ಪಾರಲೌಕಿಕವನ್ನೂ ಕೊಂಚ ಬದಿಗಿಟ್ಟು, ಲೌಕಿಕದತ್ತ ಮಾತ್ರ ಗಮನ ಹರಿಸಿದರೆ, ಹತ್ತಾರು ಪರ್ಯಾಯ ದುಡಿಮೆಯ ದಾರಿಗಳು ತೆರೆದುಕೊಂಡಿರುವುದು ಕಾಣಿಸುತ್ತದೆ. ಸುಮ್ಮನಿರುವ ಆಧ್ಯಾತ್ಮ ಎಂಬುದು ದುಡ್ಡುಳ್ಳವರ ಸ್ವತ್ತು ಎನ್ನದೇ ನಿರ್ವಾಹವಿಲ್ಲ. ಕಲೆಗಾರನಿಗೆ ಸುಮ್ಮನಿರುವ ಮನಸಿರಬಹುದು, ಸ್ವಾತಂತ್ರ್ಯವಿಲ್ಲ. ಅವನು ಪ್ರದರ್ಶಿಸಿಯೇ ಬದುಕು ಚಂದಗೊಳಿಸಿಕೊಳ್ಳಬೇಕಾದ ಮನುಷ್ಯ. ಹೀಗಾಗಿ ಬಿಚ್ಚಿಟ್ಟ ಗೆಜ್ಜೆಯೂ ಮತ್ತೆ ಅಂಟಿಕೊಳ್ಳುತ್ತದೆ. ಬಿಟ್ಟರೂ ಬಿಡದ ಮಾಯೆಯ ಹಾಗೆ, ಸಂಸಾರದ ಹಾಗೆ.

ಓದುಗರ ಓಣಿ
ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಅಭಿವೃದ್ಧಿಗೆ ಹಣ ಬಳಸಿ

ಇತ್ತೀಚೆಗೆ ನಡೆದ ಹಲವು ರಾಜ್ಯಗಳ ಚುನಾವಣೆಗಳಲ್ಲಿ ಗೆಲವು ಸಾಧಿಸಿದ ಪಕ್ಷಗಳು ಆಶ್ವಾಸನೆ ಕೊಟ್ಟಂತೆ ಮಹಿಳೆಯರಿಗೆ ಉಚಿತ ಪ್ರಯಾಣ, ತಿಂಗಳಿಗಿಷ್ಟು ಹಣ, ಉಚಿತ ವಿದ್ಯುತ್ ಮುಂತಾದವುಗಳನ್ನು ಜಾರಿಗೆ ತಂದಿವೆ. ಈ ಉಚಿತಭಾಗ್ಯಗಳಿಂದ ಕರ್ನಾಟಕವೂ ಸೇರಿದಂತೆ ಸೊರಗುತ್ತಿರುವ ರಾಜ್ಯಗಳಿಂದ ಉಳಿದ ರಾಜ್ಯಗಳು ಪಾಠ ಕಲಿಯಬೇಕಿತ್ತು. ಆದರೆ, ಅವು ಇನ್ನೂ ಹೆಚ್ಚು ಮಾಡುತ್ತಾ ಸಾಗಿವೆಯೇ ಹೊರತು ನಿಲ್ಲಿಸಿಲ್ಲ. ಹೀಗೇ ಆದರೆ ಅಭಿವೃದ್ಧಿ ಕಾರ್ಯಗಳಿಗೆ ಹಣ ಎಲ್ಲಿಂದ ದೊರಕುತ್ತದೆ? ಬಿಟ್ಟಿ ಭಾಗ್ಯಗಳ ವಿರುದ್ಧ ಇದ್ದ ಬಿಜೆಪಿ ಕೂಡಾ ಪಶ್ಚಿಮ ಬಂಗಾಳದಲ್ಲಿ ಉಚಿತ ಭಾಗ್ಯಗಳನ್ನು ಜಾರಿಗೆ ತರುತ್ತಿರುವುದು ಗಮನಾರ್ಹ. ರಾಜ್ಯಗಳು ತಮ್ಮ ಖಜಾನೆ ತುಂಬಿಸಿಕೊಳ್ಳಲು ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲಾ ದರ ಹೆಚ್ಚಳ ಮಾಡುತ್ತಾ ಸಾಗುತ್ತವೆ. ಆಗ ನಲುಗುವವರು ಜನರೇ ಹೊರತು ರಾಜಕಾರಣಿಗಳಲ್ಲ. ಇಂತಹ ಯೋಜನೆಗಳು ಹೆಳವನಿಗೆ ಊರುಗೋಲಿನಂತೆ ಇರಬೇಕೇ ಹೊರತು ಎಲ್ಲರಿಗೂ ಅಲ್ಲ. ಇಂತಹವುಗಳ ಘೋಷಣೆಗೂ ಮುನ್ನ ಪಕ್ಷಗಳು ನೂರು ಬಾರಿ ಚಿಂತಿಸಬೇಕಿದೆ. ಬಿಟ್ಟಿ ಕೊಟ್ಟರೆ ಮಾತ್ರ ಜನ ಮತ ಹಾಕುತ್ತಾರೆ ಇಲ್ಲವಾದರೆ ಇಲ್ಲ ಎಂಬ ಭಯ ಕಾಡುವುದೇ ಇಂತಹವುಗಳಿಗೆ ಕಾರಣ. ಜನರಿಗೆ ವಾಸ್ತವಾಂಶ ತಿಳಿಸಿ ಏರಿಸಿದ ಬೆಲೆಗಳನ್ನು ಇಳಿಸಿ ಬಿಟ್ಟಿ ಭಾಗ್ಯಗಳನ್ನು ನಿಲ್ಲಿಸುವುದು ಸೂಕ್ತ.

- ಪತ್ತಂಗಿ ಎಸ್. ಮುರಳಿ, ಬೆಂಗಳೂರು

ವನ್ಯ ಜೀವಿಗಳ ಜತೆ ಆಟ ಬೇಡ!

ದುಬಾರೆ ಆನೆ ಶಿಬಿರದ ಸಾಕಾನೆಗಳಿಗೆ ಮಾವುತರು ಕಾವೇರಿ ನದಿಯಲ್ಲಿ ಸ್ನಾನ ಮಾಡಿಸುತ್ತಿದ್ದ ವೇಳೆ, ಬೇರೊಂದು ಆನೆ ದಾಳಿಯ ವೇಳೆ ಆಕಸ್ಮಿಕವಾಗಿ ಕೆಳಗೆ ಸಿಲುಕಿದ ಪ್ರವಾಸಿ ಮಹಿಳೆಯೊಬ್ಬರು ಮೃತಪಟ್ಟಿದ್ದು, ನಿಜಕ್ಕೂ ವಿಷಾದಕರ ಸಂಗತಿ. ಈ ಘಟನೆ ನೋಡಲು ಆಕಸ್ಮಿಕ ಎನಿಸಿದರೂ ಪರೋಕ್ಷವಾಗಿ ಮಾನವನ ಅತಿಯಾದ ಹಸ್ತ ಕ್ಷೇಪ ಎಂದರೂ ತಪ್ಪಾಗಲಾರದು. ಇತ್ತೀಚಿನ ದಿನಗಳಲ್ಲಿ ಪ್ರಕೃತಿ ಮತ್ತು ವನ್ಯಜೀವಿಗಳ ಮೇಲೆ ಮಾನವನ ಹಸ್ತಕ್ಷೇಪ ಮಿತಿಮೀರುತ್ತಿದೆ. ವನ್ಯಜೀವಿಗಳ ಹೆಸರಿನಲ್ಲಿ ದಿನಂಪ್ರತಿ ಲಕ್ಷ ಲಕ್ಷ ಆದಾಯ ಗಳಿಸುವ ಸರಕಾರ, ದಿನನಿತ್ಯ ಸಾವಿರಾರು ಸಂಖ್ಯೆಯ ಪ್ರವಾಸಿಗರು ಆಗಮಿಸುವ ಸ್ಥಳದಲ್ಲಿ ತುರ್ತಾಗಿ ಸ್ಪಂದಿಸಲು ಯಾವುದೇ ರೀತಿಯ ವ್ಯವಸ್ಥೆ ಇಲ್ಲದಿರುವುದು, ಅವ್ಯವಸ್ಥೆಗೆ ಹಿಡಿದ ಕೈಗನ್ನಡಿ. ಇದರಲ್ಲಿ ಸರಕಾರದ ಅವೈಜ್ಞಾನಿಕ ನಿಯಮಗಳೋ ಅಥವಾ ಅರಣ್ಯ ಇಲಾಖೆಯ ನಿರ್ಲಕ್ಷವೋ ಅಥವಾ ಪ್ರವಾಸಿಗರ ಮೊಬೈಲ್ ಹುಚ್ಚಿನ ವ್ಯಾಮೋಹವೋ ಒಟ್ಟಿನಲ್ಲಿ ಒಂದು ಜೀವವಂತೂ ಬಲಿಯಾಗಿದೆ. ಸಾರ್ವಜನಿಕ ಸ್ಥಳಗಳಲ್ಲಿ ಸರಕಾರದ ನಿಯಮಗಳು ಎಷ್ಟಿರುತ್ತದೆಯೋ, ಪ್ರವಾಸಿಗರೂ ಕೂಡ ಅವುಗಳನ್ನು ಪಾಲಿಸುವ ಮೂಲಕ ಜವಾಬ್ದಾರಿ ಮೆರೆಯಬೇಕಾಗಿದೆ.

- ಮುರುಗೇಶ ಡಿ., ದಾವಣಗೆರೆ

ರಸ್ತೆ ಅಪಘಾತ: ಬೇಕು ಕ್ರಮ

ರಾಜ್ಯದಲ್ಲಿ ಕಳೆದ ಮೂರು ತಿಂಗಳ ಅವಧಿಯಲ್ಲಿ 11,265 ರಸ್ತೆ ಅಪಘಾತಗಳು ಸಂಭವಿಸಿ, 2,917 ಮಂದಿ ಮೃತಪಟ್ಟಿರುವುದು ಆತಂಕಕಾರಿ. ಅಂದರೆ, ಸರಾಸರಿ ಪ್ರತಿ ದಿನ 32 ಜನರು ರಸ್ತೆ ಅಪಘಾತದಲ್ಲಿ ಜೀವ ಕಳೆದುಕೊಂಡಿದ್ದಾರೆ. ಅದರಲ್ಲಿ 30 ವರ್ಷ ವಯಸ್ಸಿನ ಒಳಗಿನವರೇ ಹೆಚ್ಚು ಎಂಬುದು ದುರಂತದ ಸಂಗತಿ, ದೇಶದ ರಸ್ತೆ ಅಪಘಾತಗಳಲ್ಲಿ ರಾಜ್ಯ 4ನೇ ಸ್ಥಾನದಲ್ಲಿದೆ. ರಸ್ತೆ ಅಪಘಾತಗಳಿಗೆ ಮುಖ್ಯ ಕಾರಣ, ಅತಿಯಾದ ವೇಗದ ಚಾಲನೆ, ರಸ್ತೆ ಸಂಚಾರ ನಿಯಮಗಳ ಉಲ್ಲಂಘನೆ, ವಾಹನ ಓಡಿಸುವಾಗ ಮೊಬೈಲ್ ಬಳಕೆ, ಹೆಲ್ಮೆಟ್ ಧರಿಸದೇ ವಾಹನ ಓಡಿಸುವುದು, ಕೆಲವರು ಶೋಕಿಗಾಗಿ ವೇಗವಾಗಿ ವಾಹನ ಓಡಿಸುವುದು, ಅಪ್ರಾಪ್ತ ವಯಸ್ಸಿನವರು ಪರವಾನಗಿ ಇಲ್ಲದೆ ವಾಹನ ಓಡಿಸುವುದು, ಕುಡಿದು ವಾಹನ ಓಡಿಸುವುದು, ವೀಲಿಂಗ್ ಮಾಡುವುದು, ಇವೆಲ್ಲವೂ ಸ್ವಯಂ ಕೃತ್ಯದಿಂದ ಪ್ರಾಣ ಕಳೆದುಕೊಂಡರೇ, ಮತ್ತೊಂದು ಕಡೆ ಗುಂಡಿ ಬಿದ್ದ ರಸ್ತೆಗಳು, ಕಿತ್ತು ಹೋಗಿರುವ ಡಾಂಬರು, ಕಾಣದ ರಸ್ತೆಗಳು, ರಾತ್ರಿ ವೇಳೆ ಸಮರ್ಪಕವಾದ ಬೀದಿ ದೀಪಗಳು ಇಲ್ಲದೆ ಇರುವುದು, ಭೂಗತ ಕೇಬಲ್‌ಗಳನ್ನು ಅಳವಡಿಸುವಾಗ ತೆಗೆದಿರುವ ಗುಂಡಿಗಳನ್ನು ಅರ್ಧಂಬರ್ಧ ಮುಚ್ಚಿರುವುದು, ಮಳೆ ಬಂದಾಗ ರಸ್ತೆ ಯಾವುದು ಗುಂಡಿ ಯಾವುದು ಎಂದು ತಿಳಿಯದೇ ಗುಂಡಿಗಳಿಗೆ ಬಿದ್ದು ಪ್ರಾಣ ಕಳೆದುಕೊಂಡವರು ಇದ್ದಾರೆ. ರಸ್ತೆ ಅಪಘಾತಗಳು ಕಡಿಮೆ ಆಗಲು ಮುಖ್ಯವಾಗಿ ನಮ್ಮ ಸಂಚಾರ ಪೊಲೀಸ್ ಇಲಾಖೆ ಕಟ್ಟುನಿಟ್ಟಿನ ಕಾನೂನು ಕ್ರಮ ಕೈಗೊಳ್ಳಬೇಕು.

- ಬೂಕನಕೆರೆ ವಿಜೇಂದ್ರ, ಮೈಸೂರು

ಗ್ಯಾರಂಟಿ: ಮನೆಯ ಮೇಲ್ಛಾವಣಿ ಮಾರಿ ಹಬ್ಬದ ಊಟ ಮಾಡಿದಂತೆ!

ಗ್ಯಾರಂಟಿ ಯೋಜನೆಗಳು ಅಥವಾ ಕಲ್ಯಾಣ ಕಾರ್ಯಕ್ರಮಗಳು ಮೂಲಭೂತವಾಗಿ ಕೆಟ್ಟದ್ದಲ್ಲ. ವಾಸ್ತವವಾಗಿ, ಸಮಾಜದ ಕಟ್ಟಕಡೆಯ ವ್ಯಕ್ತಿಯನ್ನು ಮುಖ್ಯವಾಹಿನಿಗೆ ತರಲು ಇವು ಪೂರಕವಾಗಿರುತ್ತವೆ. ಆದರೆ, ಇಂತಹ ಯೋಜನೆಗಳ ಯಶಸ್ಸು ಅವುಗಳನ್ನು ಜಾರಿಗೆ ತರುವ 'ದೂರದೃಷ್ಟಿ' ಮತ್ತು 'ವೈಜ್ಞಾನಿಕ ಯೋಜನೆ'ಯ ಮೇಲೆ ಅವಲಂಬಿತವಾಗಿರುತ್ತದೆ. ದೂರದೃಷ್ಟಿಯಿಲ್ಲದ ಆರ್ಥಿಕ ನೀತಿಗಳು ಮುಂದಿನ ಪೀಳಿಗೆಯ ಪಾಲಿಗೆ ಶಾಪ.

ಗಂಟಾಘೋಷ

ಗುರುರಾಜ್ ಗಂಟಿಹೊಳೆ
vveditoped@gmail.com

ಒಂದು ಕಾಲದಲ್ಲಿ ಇಡೀ ದೇಶದ ಆರ್ಥಿಕ ಎಂಜಿನ್ ಆಗಿ, ಜಾಗತಿಕ ಐಟಿ-ಬಿಟಿ ರಾಜಧಾನಿಯಾಗಿ ಹಾಗೂ ಮೂಲಸೌಕರ್ಯದ ಹಬ್ ಆಗಿ ಮುನ್ನುಗ್ಗುತ್ತಿದ್ದ ಕರ್ನಾಟಕವನ್ನು ಇಂದು ಕಾಂಗ್ರೆಸ್ ಸರಕಾರ ಸಂಪೂರ್ಣವಾಗಿ ಹಳ್ಳ ಹಿಡಿಸಿದೆ. ಸುಭದ್ರವಾಗಿದ್ದ ರಾಜ್ಯದ ಬೊಕ್ಕಸವನ್ನು ಹೇಗೆ ಬರಿದು ಮಾಡಿವೆ ಎಂಬುದನ್ನು ಇಂದು ದೇಶದ ಅತ್ಯುನ್ನತ ಸಾಂವಿಧಾನಿಕ ಸಂಸ್ಥೆಯಾದ ಕಂಟ್ರೋಲರ್ ಅಂಡ್ ಆಡಿಟರ್ ಜನರಲ್ (CAG) ತನ್ನ ವರದಿಯಲ್ಲಿ ಬೆತ್ತಲೆಗೊಳಿಸಿದೆ. ಕೇವಲ ರಾಜಕೀಯ ಉಳಿವಿಗಾಗಿ ಅಭಿವೃದ್ಧಿ ವೆಚ್ಚಕ್ಕೆ ಕತ್ತರಿ ಹಾಕಿ, ಕಲ್ಯಾಣ ನಿಧಿಯನ್ನೇ ಲೂಟಿ ಮಾಡುತ್ತಿರುವ ಈ ಬೇಜವಾಬ್ದಾರಿ ಆಡಳಿತದಿಂದಾಗಿ, ದೇಶಕ್ಕೇ ಮಾದರಿಯಾಗಿದ್ದ ಕರ್ನಾಟಕ ಇಂದು ಆರ್ಥಿಕ ದಿವಾಳಿತನದ ಭೀಕರ ಪ್ರಪಾತಕ್ಕೆ ಬಂದು ನಿಂತಿದೆ ಎಂದು ಆರ್ಥಿಕ ತಜ್ಞರು ಮತ್ತು ಸ್ವತಂತ್ರ ಹಣಕಾಸು ವಿಶ್ಲೇಷಣಾ ಸಂಸ್ಥೆಗಳು ತೀವ್ರ ಕಳವಳ ವ್ಯಕ್ತಪಡಿಸಿವೆ.

ಈ ಅಸಮರ್ಪಕ ಹಣಕಾಸು ನಿರ್ವಹಣೆಯಿಂದಾಗಿ ರಾಜ್ಯದ ಬಂಡವಾಳ ಮತ್ತು ಮೂಲಸೌಕರ್ಯ ವೆಚ್ಚದಲ್ಲಿ 2023-24ರಲ್ಲಿ ಬರೋಬ್ಬರಿ ₹5,229 ಕೋಟಿಯಷ್ಟು ಭಾರಿ ಕಡಿತ ಉಂಟಾಗಿದೆ ಮತ್ತು ರಾಜ್ಯದ ವಿತ್ತೀಯ ಕೊರತೆ ತೀವ್ರವಾಗಿ ಹೆಚ್ಚಾಗಿದೆ. ಈ ಬಗ್ಗೆ ಕಠಿಣ ಎಚ್ಚರಿಕೆ ನೀಡಿರುವ ಸಿಎಜಿ, ಅಭಿವೃದ್ಧಿ ಕೆಲಸಗಳನ್ನು ಬಲಿಕೊಟ್ಟು, ಕೇವಲ ಅವೈಜ್ಞಾನಿಕ ಉಚಿತ ಕೊಡುಗೆಗಳಿಗಾಗಿ ನಿರಂತರವಾಗಿ ಸಾಲ ಮಾಡುತ್ತಿರುವುದು ರಾಜ್ಯದ ಆರ್ಥಿಕತೆಯ ಮೇಲೆ ಅತ್ಯಂತ ಕೆಟ್ಟ ಪರಿಣಾಮ ಬೀರಲಿದ್ದು, ಭವಿಷ್ಯದ ಪ್ರಗತಿಯನ್ನು ಸಂಪೂರ್ಣವಾಗಿ ಕುಂಠಿತಗೊಳಿಸಲಿದೆ ಎಂದು ಸ್ಪಷ್ಟವಾಗಿ ಹೇಳಿದೆ.

2022-23ರ ಬಿಜೆಪಿ ಆಡಳಿತದ ಅವಧಿಯಲ್ಲಿ ಕರ್ನಾಟಕವು ರಾಜಸ್ವ ಹೆಚ್ಚುವರಿ (Revenue Surplus) ಬಜೆಟ್ ಮಂಡಿಸಿತ್ತು ಮತ್ತು ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ (GSDP) ಸಾಲದ ಅನುಪಾತವನ್ನು ಶೇ.23.9ರಷ್ಟು ಕಟ್ಟುನಿಟ್ಟಾದ ಮಿತಿಯಲ್ಲಿತ್ತು. ಆದರೆ ಇಂದು? ಆ ಶಿಸ್ತು ಸಂಪೂರ್ಣವಾಗಿ ಗಾಳಿಯಲ್ಲಿ ತೂರಿಹೋಗಿದೆ. ಕರ್ನಾಟಕದ ವಾರ್ಷಿಕ ಸಾಲದ ಪ್ರಮಾಣವು ಇತಿಹಾಸದಲ್ಲೇ ಮೊದಲ ಬಾರಿಗೆ ₹1.32 ಲಕ್ಷ ಕೋಟಿ ದಾಟುವ ಅಂದಾಜಿದೆ. ರಾಜ್ಯದ ಒಟ್ಟು ಹೊಣೆಗಾರಿಕೆಯು ಬರೋಬ್ಬರಿ ₹8.24 ಲಕ್ಷ ಕೋಟಿ ತಲುಪುತ್ತಿರುವುದು ಕೇವಲ ಅಂಕಿ-ಅಂಶವಲ್ಲ; ಇದು ಪ್ರತಿ ಕನ್ನಡಿಗನ ತಲೆಯ ಮೇಲೆ ಹೊರಿಸುತ್ತಿರುವ ಬೆಟ್ಟದಷ್ಟು ಸಾಲದ ಹೊರೆ.

ಬಡ್ಡಿಯ ಬಲೆ: ಅಭಿವೃದ್ಧಿಯ ಹಣ ಲೇವಾದೇವಿದಾರರ ಪಾಲು

ಪ್ರಜಾಪ್ರಭುತ್ವದ ಆಡಳಿತದಲ್ಲಿ ಸಾಲ ಮಾಡುವುದು ಒಂದು ಸಾಮಾನ್ಯ ಪ್ರಕ್ರಿಯೆ. ಆದರೆ, ಆ ಸಾಲವು 'ಬಂಡವಾಳ ಹೂಡಿಕೆ' ಆಗಿದೆಯೇ ಅಥವಾ 'ದುಂದುವೆಚ್ಚ' ಆಗಿದೆಯೇ ಎಂಬುದು ರಾಜ್ಯದ ಭವಿಷ್ಯವನ್ನು ನಿರ್ಧರಿಸುತ್ತದೆ. ಇಂದಿನ ಕಾಂಗ್ರೆಸ್ ಸರಕಾರದ ಸಾಲದ ಸ್ವರೂಪವೇ ಭಿನ್ನವಾಗಿದೆ. ಇವರು ಮಾಡುತ್ತಿರುವ ಸಾಲವು ಯಾವುದೇ ಹೊಸ ಆಸ್ತಿಯನ್ನು ಸೃಷ್ಟಿಸುತ್ತಿಲ್ಲ. ಬದಲಿಗೆ, ಕೇವಲ ಚುನಾವಣೆಗಾಗಿ ನೀಡಿದ 'ಅವೈಜ್ಞಾನಿಕ ಗ್ಯಾರಂಟಿ'ಗಳ ಹೊಟ್ಟೆ ತುಂಬಿಸಲು ಮತ್ತು ಅನುತ್ಪಾದಕ ವೆಚ್ಚಗಳಿಗಾಗಿ ಪ್ರತಿ ತಿಂಗಳು ಸಾವಿರಾರು ಕೋಟಿ ಸಾಲ ಮಾಡಲಾಗುತ್ತಿದೆ.

ಈ ಹಾದಿತಪ್ಪಿದ ಆರ್ಥಿಕ ನೀತಿಯ ಅತಿ ದೊಡ್ಡ ಅಪಾಯವಿರುವುದು ಏರುತ್ತಿರುವ ಬಡ್ಡಿ ಪಾವತಿಯಲ್ಲಿ. ಅಂಕಿ-ಅಂಶಗಳು ಸುಳ್ಳು ಹೇಳುವುದಿಲ್ಲ. 2024-25ರ ವೇಳೆಗೆ ಬಡ್ಡಿ ಪಾವತಿ ಬರೋಬ್ಬರಿ ₹36,122 ಕೋಟಿಗೆ ಜಿಗಿದಿದೆ. ಬರುವ ಆರ್ಥಿಕ ವರ್ಷದಲ್ಲಿ ಇದು ₹45,600 ಕೋಟಿ ತಲುಪಲಿದೆ.

ಕೇವಲ ಎರಡು ವರ್ಷಗಳಲ್ಲಿ ಬಡ್ಡಿ ಪಾವತಿಯಲ್ಲಿ ಸುಮಾರು ₹8,000 ಕೋಟಿಗಳಷ್ಟು ಭಾರಿ ಏರಿಕೆ ಕಂಡುಬರುತ್ತಿರುವುದು ಆತಂಕಕಾರಿ ಸಂಗತಿ. ಇದರ ಅರ್ಥವೇನೆಂದರೆ, ಜನಸಾಮಾನ್ಯರಿಗೆ ಇದು ಕೇವಲ ಸಂಖ್ಯೆಯಾಗಿ ಕಾಣಬಹುದು, ಆದರೆ ಇದರ ಆರ್ಥಿಕ ಪರಿಣಾಮ ಘೋರವಾಗಿದೆ. ಈ ಬಡ್ಡಿಯು ಯಾವುದೇ ರಸ್ತೆ ನಿರ್ಮಾಣಕ್ಕೆ ಹೋಗುವುದಿಲ್ಲ, ಯಾವುದೇ ಶಾಲೆಯ ದುರಸ್ತಿಗೆ ಹೋಗುವುದಿಲ್ಲ ಅಥವಾ ಯಾವುದೇ ರೈತನ ಪಂಪ್‌ಸೆಟ್‌ಗೆ ಉಚಿತ ವಿದ್ಯುತ್ ನೀಡಲು ಬಳಕೆಯಾಗುವುದಿಲ್ಲ. ಬದಲಿಗೆ, ಆ ಹಣವು ಈ ಸರಕಾರ ಮಾಡಿದ ಅವಿವೇಕದ ಸಾಲದ ಬಡ್ಡಿಯನ್ನು ತೀರಿಸಲು ಹೋಗುತ್ತಿದೆ.

ಕಾಂಗ್ರೆಸ್ ಸರಕಾರವು ತನ್ನ ಸಾಲದ ಹೊರೆಯ ಕುರಿತಾದ ಟೀಕೆಗಳಿಂದ ತಪ್ಪಿಸಿಕೊಳ್ಳಲು ಯಾವಾಗಲೂ ಕೇಂದ್ರ ಸರಕಾರದ ಸಾಲದ ಅಂಕಿ-ಅಂಶಗಳನ್ನು ಗುರಾಣಿಯಾಗಿ ಬಳಸುತ್ತದೆ. ಆದರೆ, ಈ ಎರಡೂ ಸಾಲಗಳ ನಡುವಿನ ವ್ಯತ್ಯಾಸವನ್ನು ಅರ್ಥಮಾಡಿಕೊಳ್ಳಲು ಒಂದು ಸಾಧಾರಣ ಕುಟುಂಬದ ಉದಾಹರಣೆಯನ್ನು ಗಮನಿಸಿದರೆ ಸತ್ಯಾಂಶ ನಿಮಗೇ ತಿಳಿಯುತ್ತದೆ.

ಒಂದು ಕುಟುಂಬದ ಉದಾಹರಣೆಯನ್ನು ತೆಗೆದುಕೊಳ್ಳೋಣ:

ಒಬ್ಬ ಮನೆಯ ಯಜಮಾನ ಸಾಲ ಮಾಡುತ್ತಾನೆ ಎಂದು ಭಾವಿಸೋಣ. ಆ ಹಣದಿಂದ ಅವನು ಬೆಲೆಬಾಳುವ ಕಾರು ಖರೀದಿಸುತ್ತಾನೆ, ಮನೆಯವರಿಗೆಲ್ಲಾ ದುಬಾರಿ ಬಟ್ಟೆಗಳನ್ನು ಕೊಡಿಸುತ್ತಾನೆ ಮತ್ತು ಪ್ರತಿ ದಿನ ಹೊರಗಡೆ ಹೋಟೆಲ್‌ನಲ್ಲಿ ಊಟ ಮಾಡುತ್ತಾನೆ. ಮನೆಯವರೆಲ್ಲಾ ಸದ್ಯಕ್ಕೆ ತುಂಬಾ ಖುಷಿಯಾಗಿರುತ್ತಾರೆ. ಹೊರಗಿನವರಿಗೆ ಈ ಕುಟುಂಬ ಬಹಳ ಶ್ರೀಮಂತವಾಗಿದೆ ಎಂದು ಅನಿಸುತ್ತದೆ. ಆದರೆ, ಈ ಖರ್ಚುಗಳು ಯಾವುದೇ ಹೊಸ ಆದಾಯವನ್ನು ತರುವುದಿಲ್ಲ, ಸಾಲದ ಕಂತು ಮತ್ತು ಬಡ್ಡಿ ಪ್ರತಿ ತಿಂಗಳು ಹೆಚ್ಚುತ್ತಲೇ ಹೋಗುತ್ತದೆ.

ಕೆಲವೇ ದಿನಗಳಲ್ಲಿ ಸಾಲ ತೀರಿಸಲು ಮನೆಯಲ್ಲಿರುವ ಒಡವೆ ಅಥವಾ ಜಮೀನು ಮಾರಬೇಕಾಗುತ್ತದೆ. ಇದು ಆರ್ಥಿಕ ಆತ್ಮಹತ್ಯೆಯ ಹಾದಿ. ಇದನ್ನೇ ನಾವು ಅವೈಜ್ಞಾನಿಕ ಉಚಿತ ಕೊಡುಗೆಗಳಿಗಾಗಿ ಮಾಡುವ ಸಾಲ ಎನ್ನುತ್ತೇವೆ.

ಇನ್ನೊಬ್ಬ ಯಜಮಾನ ಸಾಲ ಮಾಡುತ್ತಾನೆ. ಆ ಹಣದಿಂದ ಅವನು ಒಂದು ಸಣ್ಣ ಕಾರ್ಖಾನೆ ಸ್ಥಾಪಿಸುತ್ತಾನೆ ಅಥವಾ ತನ್ನ ಜಮೀನಿನಲ್ಲಿ ಆಧುನಿಕ ನೀರಾವರಿ ಪಂಪ್‌ಸೆಟ್ ಹಾಕಿಸುತ್ತಾನೆ ಅಥವಾ ತನ್ನ ಮಗನ/ಮಗಳ ಉನ್ನತ ಶಿಕ್ಷಣಕ್ಕಾಗಿ ಹೂಡಿಕೆ ಮಾಡುತ್ತಾನೆ. ಈ ಸಾಲದಿಂದ ತಕ್ಷಣಕ್ಕೆ ಐಷಾರಾಮಿ ಜೀವನ ಸಿಗದಿರಬಹುದು. ಆದರೆ, ಕಾರ್ಖಾನೆಯಿಂದ ಉತ್ಪಾದನೆ ಶುರುವಾದಾಗ ಅಥವಾ ಜಮೀನಿನಲ್ಲಿ ಬೆಳೆ ಬಂದಾಗ ಆ ಆದಾಯದಿಂದ ಸಾಲವನ್ನೂ ತೀರಿಸಬಹುದು ಮತ್ತು ಕುಟುಂಬದ ಆಸ್ತಿಯೂ ಹೆಚ್ಚಾಗುತ್ತದೆ ಜತೆಗೆ ಕುಟುಂಬದ ಭವಿಷ್ಯ ಸುಭದ್ರವಾಗುತ್ತದೆ.

ಈ ಸಾಲವು ಭವಿಷ್ಯದಲ್ಲಿ ಕುಟುಂಬವನ್ನು ಮತ್ತಷ್ಟು ಶ್ರೀಮಂತಗೊಳಿಸುತ್ತದೆ. ಇದನ್ನು ಬಂಡವಾಳ ಹೂಡಿಕೆ ಎನ್ನುತ್ತೇವೆ. ಕೇಂದ್ರ ಸರಕಾರವು ಸಾಲ ಮಾಡುವುದು ರಾಷ್ಟ್ರೀಯ ಹೆದ್ದಾರಿಗಳು, ರೈಲ್ವೆ ಕಾರಿಡಾರ್‌ಗಳು ಮತ್ತು ಕೈಗಾರಿಕಾ ವಲಯಗಳ ನಿರ್ಮಾಣಕ್ಕಾಗಿ. ಇವು ದೇಶದ ಜಿಡಿಪಿಯನ್ನು ಹೆಚ್ಚಿಸುತ್ತವೆ.

ಮುಂದಿನ ಪೀಳಿಗೆಯ ಪಾಲಿಗೆ ಶಾಪ

ಈ ಸರಕಾರದ ದೂರದೃಷ್ಟಿಯಿಲ್ಲದ ಆರ್ಥಿಕ ನೀತಿಗಳು ಮುಂದಿನ ಪೀಳಿಗೆಯ ಪಾಲಿಗೆ ಒಂದು ದೊಡ್ಡ ಶಾಪವಾಗಿ ಪರಿಣಮಿಸಿವೆ. ಕೇವಲ ಐದು ವರ್ಷಗಳ ಅಧಿಕಾರಕ್ಕಾಗಿ ಮತ್ತು ತಾತ್ಕಾಲಿಕ ಮತಬ್ಯಾಂಕ್ ರಾಜಕಾರಣಕ್ಕಾಗಿ ಕಾಂಗ್ರೆಸ್ ಸರಕಾರವು ಕರ್ನಾಟಕದ ಮುಂದಿನ ಐವತ್ತು ವರ್ಷಗಳ ಭವಿಷ್ಯವನ್ನು ಅಡವಿಟ್ಟಿದೆ. ಇಂದು ಕರ್ನಾಟಕದಲ್ಲಿ ಪ್ರತಿಯೊಬ್ಬರ ಮೇಲೆ ಸರಿಸುಮಾರು ₹1.20 ಲಕ್ಷಕ್ಕೂ ಅಧಿಕ ಸಾಲದ ಹೊರೆ ಇದೆ.

ಇಂದು ಹಂಚುತ್ತಿರುವ ಹಣವು ವಾಸ್ತವವಾಗಿ ನಮ್ಮ ಮಕ್ಕಳು ಹಾಗೂ ಯುವಜನತೆಯ ನಾಳಿನ ಹಕ್ಕುಗಳನ್ನು ಕಸಿದುಕೊಂಡು ಮಾಡುತ್ತಿರುವ ದುಂದುವೆಚ್ಚವಾಗಿದೆ. ಬಜೆಟ್‌ನ ಬಹುಪಾಲು ಹಣ ಬಡ್ಡಿ ಪಾವತಿಗೇ ವ್ಯಯವಾಗುತ್ತಿರುವುದರಿಂದ, ಮುಂದಿನ ದಶಕಗಳಲ್ಲಿ ಹೊಸ ಶಾಲೆಗಳ ನಿರ್ಮಾಣ, ಆಸ್ಪತ್ರೆಗಳ ಆಧುನೀಕರಣ ಅಥವಾ ಬೃಹತ್ ನೀರಾವರಿ ಯೋಜನೆಗಳಿಗೆ ಹಣವೇ ಇಲ್ಲದಂತಾಗುತ್ತದೆ. ನಮ್ಮ ಮಕ್ಕಳು ತಮ್ಮ ದುಡಿಮೆಯ ಬಹುಭಾಗವನ್ನು ನಾವು ಇಂದು ಮಾಡಿದ ಸಾಲದ ಬಡ್ಡಿ ಕಟ್ಟಲೇ ವ್ಯಯಿಸಬೇಕಾದ ಅನಿವಾರ್ಯತೆಯನ್ನು ಈ ಸರಕಾರ ಸೃಷ್ಟಿಸಿದೆ.

ಸಂಕಷ್ಟದ ಸಮಯದಲ್ಲಿ ಅಸಹಾಯಕತೆ

ಯಾವುದೇ ರಾಜ್ಯದ ಆರ್ಥಿಕ ಸದೃಢತೆಯ ನಿಜವಾದ ಪರೀಕ್ಷೆಯಾಗುವುದು ತುರ್ತು ಪರಿಸ್ಥಿತಿಗಳಲ್ಲಿ. ಆದರೆ, ಕಾಂಗ್ರೆಸ್ ಸರಕಾರದ ಬೇಜವಾಬ್ದಾರಿಯುತ ಸಾಲದ ನೀತಿಯಿಂದಾಗಿ ಕರ್ನಾಟಕ ಇಂದು ತನ್ನ 'ಆರ್ಥಿಕ ವಿಮಾ' ಶಕ್ತಿಯನ್ನೇ ಕಳೆದುಕೊಂಡಿದೆ. ರಾಜ್ಯಕ್ಕೆ ಅನಿವಾರ್ಯವಾಗಿ ಬರಗಾಲ ಅಥವಾ ಪ್ರವಾಹದಂತಹ ನೈಸರ್ಗಿಕ ವಿಕೋಪಗಳು ಎದುರಾದಾಗ, ಸಂತ್ರಸ್ತರಿಗೆ ತಕ್ಷಣದ ಪರಿಹಾರ ನೀಡಲು ಅಥವಾ ಪುನರ್‌ನಿರ್ಮಾಣ ಕಾರ್ಯ ಕೈಗೊಳ್ಳಲು ರಾಜ್ಯದ ಬೊಕ್ಕಸದಲ್ಲಿ ಹಣವೇ ಇರುವುದಿಲ್ಲ. ಈಗಾಗಲೇ ಸಾಲದ ಮಿತಿಯನ್ನು ಮೀರಿ ಸಾಲ ಮಾಡಿರುವುದರಿಂದ, ಅಂತಹ ಸಂಕಷ್ಟದ ಸಮಯದಲ್ಲಿ ತುರ್ತಾಗಿ ಹೊಸದಾಗಿ ಸಾಲ ಮಾಡುವ ಶಕ್ತಿಯನ್ನು ರಾಜ್ಯ ಕಳೆದುಕೊಳ್ಳಲಿದೆ.

ಬರ ಅಥವಾ ಪ್ರವಾಹ ಬಂದಾಗ ಜನರ ಕಣ್ಣೀರು ಒರೆಸಲು ಹಣವಿಲ್ಲದೆ ಸರಕಾರ ಕೈಚೆಲ್ಲಿ ಕೂರುವ ಪರಿಸ್ಥಿತಿ ನಿರ್ಮಾಣವಾಗಲಿದೆ. ಕೇವಲ ಅವೈಜ್ಞಾನಿಕ ಗ್ಯಾರಂಟಿ ಯೋಜನೆಗಳಿಗೆ ಹಣ ಹೊಂದಿಸಲು ಸಾಲದ ಗರಿಷ್ಠ ಮಿತಿಯನ್ನು ಬಳಸಿಕೊಳ್ಳುತ್ತಿರುವುದರಿಂದ, ತುರ್ತು ಸಂದರ್ಭಗಳಲ್ಲಿ ಹಣಕಾಸು ಸಂಸ್ಥೆಗಳು ಅಥವಾ ಮಾರುಕಟ್ಟೆಯಿಂದ ಸಾಲ ಪಡೆಯಲು ಕಾನೂನಾತ್ಮಕವಾಗಿ ಮತ್ತು ಆರ್ಥಿಕವಾಗಿ ಸಾಧ್ಯವಾಗದಂತಾಗುವ ಸಮಯ ದೂರವಿಲ್ಲ. .

ಕೇರಳ ಆರ್ಥಿಕ ಸಂಕಷ್ಟದ ಎಚ್ಚರಿಕೆ

ಕರ್ನಾಟಕದ ಪ್ರಸ್ತುತ ಕಾಂಗ್ರೆಸ್ ಸರಕಾರವು ತುಳಿಯುತ್ತಿರುವ ಹಾದಿಯು ಎಷ್ಟು ಅಪಾಯಕಾರಿ ಎಂಬುದನ್ನು ತಿಳಿಯಲು ನಾವು ನೆರೆಯ ಕೇರಳ ರಾಜ್ಯದ ಇಂದಿನ ಸ್ಥಿತಿಯನ್ನು ಗಮನಿಸಬೇಕಿದೆ. ರಾಜಸ್ವ ಹೆಚ್ಚುವರಿ ಹೊಂದಿದ್ದ ಕರ್ನಾಟಕವನ್ನು ಕಾಂಗ್ರೆಸ್ ಇಂದು ಕೇರಳದ ಮಾದರಿಯತ್ತ ಕೊಂಡೊಯ್ಯುತ್ತಿದೆ. ಇತ್ತೀಚೆಗೆ ಕೇರಳ ಸರಕಾರವು ತನ್ನ ದೈನಂದಿನ ಆಡಳಿತಾತ್ಮಕ ವೆಚ್ಚಗಳನ್ನು ಭರಿಸಲು ಹಣವಿಲ್ಲದೆ, ತನ್ನ ಸಾಲದ ಮಿತಿಯನ್ನು ಮೀರಿ ಹೆಚ್ಚುವರಿ ಸಾಲ ಮಾಡಲು ಅನುಮತಿ ನೀಡಬೇಕೆಂದು ಕೋರಿ ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು. ಇದು ಆರ್ಥಿಕ ಸ್ವಾವಲಂಬನೆಯಲ್ಲ, ಬದಲಿಗೆ ಆರ್ಥಿಕ ದಿವಾಳಿತನದ ಪರಮಾವಧಿ.

ಕೇರಳಕ್ಕೆ ನ್ಯಾಯಾಲಯವು ಕೂಡ ಈ ಹಂತದಲ್ಲಿ ಮಧ್ಯಪ್ರವೇಶಿಸಿ, ಹಣಕಾಸಿನ ನಿರ್ವಹಣೆಯು ಸರಕಾರದ ಜವಾಬ್ದಾರಿಯಾಗಿದ್ದು, ಮಿತಿಮೀರಿ ಸಾಲ ಮಾಡುವುದು ದೇಶದ ಒಟ್ಟಾರೆ ಆರ್ಥಿಕತೆಗೆ ಮಾರಕ ಎಂದು ಎಚ್ಚರಿಸಬೇಕಾಯಿತು. ಇಂದು ಕರ್ನಾಟಕ ಸರಕಾರವು ಅನುಸರಿಸುತ್ತಿರುವ ಅದೇ ಅಪ್ರಾಯೋಗಿಕ ಅವೈಜ್ಞಾನಿಕ ಗ್ಯಾರಂಟಿ ಮಾದರಿ ಮತ್ತು ಸಾಲದ ಹಪಾಹಪಿ ನಾಳೆ ನಮ್ಮನ್ನೂ ಕೇರಳದಂತೆ ನ್ಯಾಯಾಲಯದ ಮುಂದೆ ಕೈಚಾಚಿ ನಿಲ್ಲುವಂತೆ ಮಾಡುವುದರಲ್ಲಿ ಸಂಶಯವಿಲ್ಲ.

ಗ್ಯಾರಂಟಿ ತಪ್ಪಲ್ಲ, ಆದರೆ?

ಗ್ಯಾರಂಟಿ ಯೋಜನೆಗಳು ಅಥವಾ ಕಲ್ಯಾಣ ಕಾರ್ಯಕ್ರಮಗಳು ಮೂಲಭೂತವಾಗಿ ಕೆಟ್ಟದ್ದಲ್ಲ. ವಾಸ್ತವವಾಗಿ, ಸಮಾಜದ ಕಟ್ಟಕಡೆಯ ವ್ಯಕ್ತಿಯನ್ನು ಮುಖ್ಯವಾಹಿನಿಗೆ ತರಲು ಇವು ಪೂರಕವಾಗಿರುತ್ತವೆ. ಆದರೆ, ಇಂತಹ ಯೋಜನೆಗಳ ಯಶಸ್ಸು ಅವುಗಳನ್ನು ಜಾರಿಗೆ ತರುವ 'ದೂರದೃಷ್ಟಿ' ಮತ್ತು 'ವೈಜ್ಞಾನಿಕ ಯೋಜನೆ'ಯ ಮೇಲೆ ಅವಲಂಬಿತವಾಗಿರುತ್ತದೆಯೇ ಹೊರತು, ಕೇವಲ ಮತ ಗಳಿಸುವ ತಂತ್ರದ ಮೇಲಲ್ಲ. ಒಂದು ಜವಾಬ್ದಾರಿಯುತ ಸರಕಾರವು ಮೊದಲು ತನ್ನ ಆದಾಯದ ಮೂಲಗಳನ್ನು ಕ್ರೋಢೀಕರಿಸಿಕೊಂಡು, ಅಭಿವೃದ್ಧಿ ಕಾಮಗಾರಿಗಳಿಗೆ ಧಕ್ಕೆಯಾಗದಂತೆ ಈ ಯೋಜನೆಗಳನ್ನು ರೂಪಿಸಬೇಕು. ಅರ್ಹ ಫಲಾನುಭವಿಗಳನ್ನು ಗುರುತಿಸಿ ಶೇ.100ರಷ್ಟು ಪಾರದರ್ಶಕತೆಯಿಂದ ಯೋಜನೆ ತಲುಪಿಸಿದರೆ ಅದು ಸಾರ್ಥಕವಾಗುತ್ತದೆ.

ಆದರೆ, ಯಾವುದೇ ಆರ್ಥಿಕ ತಯಾರಿ ನಡೆಸದೆ, ಕೇವಲ ಚುನಾವಣಾ ಲಾಭಕ್ಕಾಗಿ ಘೋಷಿಸಿ ಜಾರಿಗೆ ತಂದರೆ, ಅದು ರಾಜ್ಯದ ಬೊಕ್ಕಸಕ್ಕೆ ಹೊರೆಯಾಗಿ ಇಡೀ ಆರ್ಥಿಕ ವ್ಯವಸ್ಥೆಯನ್ನೇ ಕುಸಿಯುವಂತೆ ಮಾಡುತ್ತದೆ.

ಕಾಂಗ್ರೆಸ್ ಸರಕಾರವು ಮೂರು ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಅದ್ದೂರಿಯಾಗಿ ಹಮ್ಮಿಕೊಂಡಿರುವ ಸಾಧನಾ ಸಮಾವೇಶವು ವಾಸ್ತವದಲ್ಲಿ ರಾಜ್ಯದ ಪಾಲಿಗೆ ಒಂದು ಬೃಹತ್ ಸಾಲದ ಸಮಾವೇಶವಾಗಿದೆ ಎಂದು ಜನ ಆರೋಪಿಸುತ್ತಿದ್ದಾರೆ; ಈ ಸರಕಾರವು ಹತಕ್ಕೆ ಬಿದ್ದಂತೆ ಜಾರಿಗೆ ತಂದಿರುವ ಅವೈಜ್ಞಾನಿಕ ಗ್ಯಾರಂಟಿ ಯೋಜನೆಗಳು ರಾಜ್ಯದ ಬಂಡವಾಳ ವೆಚ್ಚವನ್ನೇ ಪೂರ್ತಿಯಾಗಿ ನುಂಗಿ ಹಾಕುತ್ತಿದ್ದು,

ಮೂಲಸೌಕರ್ಯಗಳಿಗೆ ಹೋಗಬೇಕಾದ ಹಣವನ್ನು ಅವೈಜ್ಞಾನಿಕ ಉಚಿತ ಕೊಡುಗೆಗಳಿಗೆ ವರ್ಗಾಯಿಸುವುದು ಮನೆಯ ಮೇಲ್ಛಾವಣಿಯನ್ನು ಮಾರಿ ಹಬ್ಬದ ಊಟ ಮಾಡಿದಂತೆ ಆಗಿದೆ! ಈ ಸರಕಾರಕ್ಕೆ ಇನ್ನೂ ಎರಡು ವರ್ಷಗಳ ಅಧಿಕಾರಾವಧಿ ಬಾಕಿ ಉಳಿದಿದ್ದು, ಈಗಲಾದರೂ ಎಚ್ಚೆತ್ತುಕೊಂಡು ತನ್ನ ತಪ್ಪುಗಳನ್ನು ತಿದ್ದಿಕೊಳ್ಳದಿದ್ದರೆ ಮತ್ತು ಹಳಿ ತಪ್ಪಿರುವ ಆರ್ಥಿಕತೆಯನ್ನು ಚೇತರಿಸಿಕೊಳ್ಳುವಂತೆ ಮಾಡದಿದ್ದರೆ ಮುಂದಿನ ದಿನಗಳಲ್ಲಿ ಕರ್ನಾಟಕದ ಭವಿಷ್ಯ ನಿಜಕ್ಕೂ ತೀವ್ರ ಸಂಕಷ್ಟಕ್ಕೆ ಸಿಲುಕಲಿದೆ.

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:11, Issue:125

ಸಮಾಚಾರ ಸಣ್ಣದಲ್ಲ

ಟಿವಿಕೆ-ಎಡಿಎಂಕೆ ಸಖ್ಯ ಸಿಪಿಎಂ ಆಕ್ರೋಶ

ತಿರುವರೂರು: ಎಐಎಡಿಎಂಕೆಯ ಬಂಡಾಯ ಶಾಸಕರನ್ನೇನಾದರೂ ಸಚಿವ ಸಂಪುಟಕ್ಕೆ ಸೇರಿಸಿ ಕೊಂಡಿದ್ದೇ ಆದರೆ, ಜೋಸೆಫ್ ವಿಜಯ್ ನೇತೃತ್ವದ ಟಿವಿಕೆ ಸರಕಾರಕ್ಕೆ ನೀಡಿರುವ ನಮ್ಮ ಪಕ್ಷದ ಬೆಂಬಲವನ್ನು ವಾಪಸ್ ತೆಗೆದುಕೊಳ್ಳಲಾಗುವುದು ಎಂದು ಸಿಪಿಎಂ ರಾಜ್ಯ ಕಾರ್ಯದರ್ಶಿ ಪಿ.ಷಣ್ಮುಗಂ ಎಚ್ಚರಿಕೆ ಸಂದೇಶ ರವಾನಿಸಿದ್ದಾರೆ. ತಿರುತುರೈಪೂಂಡಿಯಲ್ಲಿ ಪಕ್ಷದ ಜಿಲ್ಲಾ ಮಟ್ಟದ ಸಭೆ ಬಳಿಕ ಸುದ್ದಿಗಾರರ ಜತೆ ಮಾತನಾಡಿ, ಮತ್ತೊಮ್ಮೆ ಚುನಾವಣೆ ಎದುರಾಗುವುದು ಮತ್ತು ರಾಷ್ಟ್ರಪತಿ ಆಡಳಿತ ಹೇರಿಕೆಯಾಗುವುದನ್ನು ತಪ್ಪಿಸಲೆಂದೇ ಟಿವಿಕೆ ಸರಕಾರಕ್ಕೆ ಸಿಪಿಎಂ ಪಕ್ಷ ಬಾಹ್ಯ ಬೆಂಬಲ ನೀಡಿದೆ. ಎಐಎಡಿಎಂಕೆ ಅಥವಾ ಅದರ ಬಂಡಾಯ ಶಾಸಕರನ್ನು ಸಂಪುಟಕ್ಕೆ ಸೇರಿಸಿಕೊಳ್ಳುವುದು ಜನರ ಆದೇಶಕ್ಕೆ ವಿರುದ್ಧ. ಹೀಗಾಗಿ ಟಿವಿಕೆ ಇಂತಹ ತಪ್ಪು ನಿರ್ಧಾರ ತೆಗೆದುಕೊಳ್ಳುವುದಿಲ್ಲ ಎಂಬುದು ನಮ್ಮ ನಂಬಿಕೆಯಾಗಿದೆ ಎಂದು ಷಣ್ಮುಗಂ ಹೇಳಿದರು.

ಬಾಂಗ್ಲಾ: ಭಾರತೀಯ ಅಧಿಕಾರಿ ಸಾವು

ಢಾಕಾ: ಬಾಂಗ್ಲಾದೇಶದ ಚಟ್ಟೋಗ್ರಾಮ್ ನಗರದ ಖುಲ್ಶಿ ಪ್ರದೇಶದಲ್ಲಿರುವ ಭಾರತದ ಸಹಾಯಕ ಹೈಕಮಿಷನ್ ಕಚೇರಿಯಲ್ಲಿ ಭಾರತೀಯ ಅಧಿಕಾರಿ ನರೇಂದ್ರ ಧಾರ್(35) ಶಂಕಾಸ್ಪದ ರೀತಿಯಲ್ಲಿ ಸಾವನ್ನಪ್ಪಿದ್ದಾರೆ. ಅಸಹಜ ಸಾವು ಪ್ರಕರಣ ದಾಖಲಿಸಿಕೊಂಡಿರುವ ಸ್ಥಳೀಯ ಪೊಲೀಸರು ತನಿಖೆ ಆರಂಭಿಸಿದ್ದಾರೆ. ಹರಿಯಾಣ ಮೂಲದ ಧಾರ್, ಭಾರತೀಯ ಸಹಾಯಕ ಹೈಕಮಿಷನ್ ಕಚೇರಿಯಲ್ಲಿ ಪ್ರೋಟೋಕಾಲ್ ಅಧಿಕಾರಿಯಾಗಿದ್ದರು. ಮಂಗಳವಾರ ಬೆಳಗ್ಗೆ ಧಾರ್ ಕೊಠಡಿಯಿಂದ ಯಾವುದೇ ಪ್ರತಿಕ್ರಿಯೆ ಬಾರದ ಹಿನ್ನೆಲೆ ಹೈಕಮಿಷನ್ ಅಧಿಕಾರಿಗಳು ಪೊಲೀಸರಿಗೆ ಮಾಹಿತಿ ನೀಡಿದರು. ನಂತರ ಪರಿಶೀಲಿಸಿದಾಗ ಕಚೇರಿಯಲ್ಲಿ ಮೃತದೇಹ ಪತ್ತೆಯಾಗಿದೆ. ಕಚೇರಿ ಆವರಣದಿಂದ ಮೃತದೇಹವನ್ನು ಆಸ್ಪತ್ರೆಗೆ ರವಾನಿಸಿ ಮರಣೋತ್ತರ ಪರೀಕ್ಷೆಗೆ ಒಳಪಡಿಸಲಾಗಿದೆ. ಸಾವಿಗೆ ನಿಖರ ಕಾರಣವೇನು ಎನ್ನುವುದು ಮರಣೋತ್ತರ ಪರೀಕ್ಷೆ ವರದಿಯಿಂದ ತಿಳಿದು ಬರಬೇಕಿದೆ. ಹೈಕಮಿಷನ್ ಅಧಿಕಾರಿಗಳು ಮೃತ ಅಧಿಕಾರಿಯ ಕುಟುಂಬದ ಜತೆ ಸಂಪರ್ಕದಲ್ಲಿದ್ದಾರೆ.

ಭಾರತದ ಜಿಡಿಪಿ ಶೇ.6.4: ವಿಶ್ವಸಂಸ್ಥೆ

ವಿಶ್ವಸಂಸ್ಥೆ: ಭಾರತದ ಒಟ್ಟಾರೆ ಆಂತರಿಕ ಉತ್ಪನ್ನದ (ಜಿಡಿಪಿ) ಪ್ರಗತಿಯ ಪ್ರಮಾಣವನ್ನು ವಿಶ್ವಸಂಸ್ಥೆ ಇತ್ತೀಚೆಗೆ ತಗ್ಗಿಸಿ ವರದಿ ಪ್ರಕಟಿಸಿದೆ. 2026ರಲ್ಲಿ ಭಾರತದ ಒಟ್ಟಾರೆ ಜಿಡಿಪಿ ಪ್ರಗತಿ ಶೇ.6.6ರಷ್ಟಿರಲಿದೆ ಎಂದು ಈ ಮೊದಲು ಅಂದಾಜು ಮಾಡಲಾಗಿತ್ತು. ಆದರೆ, ಇತ್ತೀಚೆಗಿನ ಪಶ್ಚಿಮ ಏಷ್ಯಾ ಬಿಕ್ಕಟ್ಟಿನ ಪರಿಣಾಮ ಭಾರತದ ಆರ್ಥಿಕ ವ್ಯವಸ್ಥೆಯ ಮೇಲೆಯೂ ದೊಡ್ಡ ಮಟ್ಟದಲ್ಲಾಗಿದೆ. ಹಾಗಾಗಿ, 2026ನೇ ವರ್ಷದಲ್ಲಿ ಭಾರತದ 'ಜಿಡಿಪಿ' ಪ್ರಗತಿ ಹೆಚ್ಚೆಂದರೆ ಶೇ.6.4ರಷ್ಟಿರಲಿದೆ ಎಂದು ವಿಶ್ವಸಂಸ್ಥೆಯ ಆರ್ಥಿಕ ಮತ್ತು ಸಾಮಾಜಿಕ ವ್ಯವಹಾರಗಳ ಇಲಾಖೆಯು ತನ್ನ ಅಂದಾಜನ್ನು ಪರಿಷ್ಕರಿಸಿ ಹೊಸ ಅಂಕಿ ಅಂಶವನ್ನು ಬುಧವಾರ ಪ್ರಕಟಿಸಿದೆ.

ದೇಶ ಪ್ರತಿಷ್ಠೆ ಹೆಚ್ಚಳಕ್ಕೆ ಮೋದಿ ಶ್ರಮ: ಶರದ್

ಮುಂಬೈ: ಪ್ರಧಾನಿ ನರೇಂದ್ರ ಮೋದಿ ವಿದೇಶಗಳ ಪ್ರವಾಸಕ್ಕೆ ಕಾಂಗ್ರೆಸ್ ಸೇರಿದಂತೆ ಪ್ರತಿಪಕ್ಷಗಳು ಟೀಕೆ ಮಾಡುತ್ತಿದ್ದರೆ, ಮಹಾರಾಷ್ಟ್ರದ ಪ್ರಮುಖ ರಾಜಕೀಯ ನಾಯಕ, ಶಿವಸೇನೆ ಪಕ್ಷದ ಮುಖಂಡ ಶರದ್ ಪವಾರ್, ಪ್ರಧಾನಿ ಮೋದಿ ಅವರನ್ನು ಬೆಂಬಲಿಸಿ ಮಾತನಾಡಿದ್ದಾರೆ.

ಪ್ರಧಾನಿ ಮೋದಿ ಜಾಗತಿಕ ಮಟ್ಟದಲ್ಲಿ ದೇಶದ ಪ್ರತಿಷ್ಠೆಯನ್ನು ಹೆಚ್ಚು ಮಾಡುವತ್ತ ಕೆಲಸ ಮಾಡುತ್ತಿದ್ದಾರೆ. ಪ್ರಧಾನಿ ಮೋದಿ ಜತೆ ರಾಜಕೀಯವಾಗಿ ಭಿನ್ನಾಭಿಪ್ರಾಯ ಇದೆ. ಆದರೆ ಅವರು ವಿದೇಶ ಸಂಚಾರದಲ್ಲಿ ದೇಶದ ಘನತೆ ಎತ್ತಿ ಹಿಡಿಯಲು ಶ್ರಮಿಸುತ್ತಿರುವಾಗ ಅದನ್ನು ಗುರುತಿಸುವುದು ಮುಖ್ಯ. ದೇಶದ ಗೌರವ ಕಾಪಾಡುವ ವಿಷಯದಲ್ಲಿ ರಾಜಕೀಯ, ಭಿನ್ನಾಭಿಪ್ರಾಯ ಅಡ್ಡ ಬರಬಾರದು ಎಂದು ಪವಾರ್ ಅಭಿಪ್ರಾಯಪಟ್ಟಿದ್ದಾರೆ.

ಇರಾನ್ ನೌಕೆ ಅಮೆರಿಕ ವಶ

ವಾಷಿಂಗ್ಟನ್: ಹಿಂದೂ ಮಹಾಸಾಗರದಲ್ಲಿ ಸಾಗುತ್ತಿದ್ದ ಇರಾನ್‌ಗೆ ಸೇರಿದ ಕಚ್ಚಾತೈಲ ನೌಕೆಯನ್ನು ಅಮೆರಿಕ ನೌಕಾಪಡೆ ತನ್ನ ವಶಕ್ಕೆ ತೆಗೆದುಕೊಂಡಿದೆ. ಇರಾನ್ ಧ್ವಜವಿದ್ದ ಸ್ಕೈವೇವ್ ಹಡಗನ್ನು ಮಂಗಳವಾರ ರಾತ್ರಿ ವಶಕ್ಕೆ ಪಡೆದು ಅದರಲ್ಲಿದ್ದ ಸಿಬ್ಬಂದಿಗಳನ್ನು ವಶಕ್ಕೆ ತೆಗೆದುಕೊಳ್ಳಲಾಗಿದೆ. ಈ ಹಡಗು ಸಮುದ್ರ ಮಧ್ಯದಲ್ಲೇ ಬೇರೊಂದು ಹಡಗಿಗೆ ಕಚ್ಚಾತೈಲ ವರ್ಗಾಯಿಸಲು ಯತ್ನಿಸಿತ್ತು ಎಂದು ಅಮೆರಿಕದ 3ಅಧಿಕಾರಿಗಳ ಹೇಳಿದ್ದಾರೆ.

{ ರಾಹುಲ್ ಗಾಂಧಿ } ಪ್ರತಿಪಕ್ಷ ನಾಯಕ

ದೇಶ ಆರ್ಥಿಕವಾಗಿ ಸಂಕಷ್ಟದಲ್ಲಿದೆ. ಇಂಧನ ದ್ರವ್ಯಗಳ ಕೊರತೆ ಎದುರಾಗಿದೆ. ದೊಡ್ಡ ಹೊಡೆತ ಬೀಳುವ ಭೀತಿಯಲ್ಲಿ ದೇಶವಿದ್ದರೆ, ಪ್ರಧಾನಿ ಮೋದಿ ಮಾತ್ರ ನಿರಾಳವಾಗಿ ವಿದೇಶ ಪ್ರವಾಸ ಮಾಡುತ್ತಾ, ಇಟಲಿಯಲ್ಲಿ 'ಚಾಕೊಲೇಟ್' ಹಂಚುತ್ತಿದ್ದಾರೆ. ಇದು ರಂಗಮಂಚದ ನಾಟಕದಂತಿದೆ. ಇದಕ್ಕೆ ಬಿಜೆಪಿಯವರು ಚಪ್ಪಾಳೆ ತಟ್ಟುತ್ತಿದ್ದಾರೆ. ಇದನ್ನೆಲ್ಲಾ ನಾಯಕತ್ವ ಎನ್ನಲಾದೀತೆ?

ಸೆಪ್ಟೆಂಬರ್‌ನಲ್ಲಿ ದೆಹಲಿಯಲ್ಲಿ 'ಬ್ರಿಕ್ಸ್' ನಾಯಕರ ಶೃಂಗಸಭೆ | ರಷ್ಯಾ ಅಧ್ಯಕ್ಷ ಪುಟಿನ್, ಬ್ರೆಜಿಲ್ ಅಧ್ಯಕ್ಷ ಲುಲಾ ಡಿಸಿಲ್ವ ಭಾಗಿ

7 ವರ್ಷ ಬಳಿಕ ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಭಾರತಕ್ಕೆ ಭೇಟಿ

ದೆಹಲಿ: ಭಾರತ-ಚೀನಾ ಸಂಬಂಧ ವೃದ್ಧಿಯ ಹೊಸ ಅಧ್ಯಾಯದ ಆರಂಭಕ್ಕೆ ಸೆಪ್ಟೆಂಬರ್ ತಿಂಗಳು ಸಾಕ್ಷಿಯಾಗುವ ನಿರೀಕ್ಷೆ ಇದೆ.

2020ರಿಂದಲೂ ಗಡಿ ವಿವಾದ, ಸೈನಿಕರ ಮಧ್ಯೆ ಉದ್ವಿಗ್ನತೆ, ಅರುಣಾಚಲ ಪ್ರಶ್ನೆ, ರಾಜತಾಂತ್ರಿಕ ಒತ್ತಡ ಮೊದಲಾದ ಕಾರಣಗಳಿಂದಾಗಿ ಉಭಯ ದೇಶಗಳ ಸಂಬಂಧ ಹದಗೆಟ್ಟಿತ್ತು. ಇತ್ತೀಚೆಗೆ ಪ್ರಧಾನಿ ನರೇಂದ್ರ ಮೋದಿ ಅವರ ಚೀನಾ ಭೇಟಿ ಬಳಿಕ ಸಂಬಂಧ ಸುಧಾರಿಸಲಾರಂಭಿಸಿದೆ. ಇದೆಲ್ಲದರ ಮಧ್ಯೆಯೇ ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ 7 ವರ್ಷಗಳ ಬಳಿಕ ಭಾರತ ಪ್ರವಾಸ ಹಮ್ಮಿಕೊಳ್ಳಲಿರುವುದು ಭಾರೀ ನಿರೀಕ್ಷೆಗಳನ್ನು ಹುಟ್ಟು ಹಾಕಿದೆ. 'ಬ್ರಿಕ್ಸ್' ಒಕ್ಕೂಟದ ಸದಸ್ಯ ದೇಶಗಳ ನಾಯಕರ ಶೃಂಗಸಭೆ ದೆಹಲಿಯಲ್ಲಿ ಸೆ.12 ಮತ್ತು 13ರಂದು ನಡೆಯಲಿದೆ. ಈ ಶೃಂಗಸಭೆಯಲ್ಲಿ ಭಾಗಿಯಾಗಲು ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಭಾರತಕ್ಕೆ ಭೇಟಿ ನೀಡುವುದು ಖಚಿತವಾಗಿದೆ. ಬ್ರಿಕ್ಸ್ ಶೃಂಗದಲ್ಲಿ ಭಾಗಿಯಾಗಲು ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಕೂಡ ಭಾರತಕ್ಕೆ ಸೆಪ್ಟೆಂಬರ್‌ನಲ್ಲಿ ಭೇಟಿ ನೀಡಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಆಗಸ್ಟ್ 31 ಮತ್ತು ಸೆಪ್ಟೆಂಬರ್ 1ರಂದು ಕಿರ್ಗಿಸ್ತಾನ್‌ನ ಬಿಷ್ಕೆಕ್‌ನಲ್ಲಿ ನಡೆಯಲಿರುವ 'ಶಾಂಘೈ ಸಹಕಾರ ಸಂಸ್ಥೆ'(ಎಸ್‌ಸಿಒ) ಶೃಂಗಸಭೆಯಲ್ಲಿ ಪುಟಿನ್ ಭಾಗವಹಿಸಲಿದ್ದಾರೆ. ಆ ಬಳಿಕ ಪುಟಿನ್ ಭಾರತ ಪ್ರವಾಸ ಹಮ್ಮಿಕೊಳ್ಳಲಿದ್ದಾರೆ. ಪ್ರಧಾನಿ ಮೋದಿ ಅವರೂ 'ಎಸ್‌ಸಿಒ' ಶೃಂಗಸಭೆಗಾಗಿ ಬಿಷ್ಕೆಕ್‌ಗೆ ತೆರಳುವ ನಿರೀಕ್ಷೆ ಇದೆ. ಅಂದರೆ, ಸೆಪ್ಟೆಂಬರ್ ಭಾರತ, ಚೀನಾ ಮತ್ತು ರಷ್ಯಾ ನಾಯಕರಿಗೆ ಬಹಳ ಮಹತ್ವದ ಮಾಸವಾಗಲಿದೆ.

7 ವರ್ಷ ಹಿಂದೆ: ಕ್ಸಿ ಜಿನ್‌ಪಿಂಗ್ ಭಾರತಕ್ಕೆ ಸೆಪ್ಟೆಂಬರ್‌ನಲ್ಲಿ ಭೇಟಿ ನೀಡಿದರೆ 7 ವರ್ಷಗಳ ಬಳಿಕದ ಭಾರತ ಪ್ರವಾಸ ಎನಿಸಿಕೊಳ್ಳಲಿದೆ. ಅವರು ಈ ಮೊದಲು 2019ರ ಅಕ್ಟೋಬರ್‌ನಲ್ಲಿ ಭಾರತಕ್ಕೆ ಬಂದು ತಮಿಳುನಾಡಿನ ಮಹಾಬಲಿಪುರಂ(ಮಾಮಲ್ಲಪುರಂ)ನಲ್ಲಿ ನಡೆದ 2ನೇ ಅನೌಪಚಾರಿಕ ಭಾರತ-ಚೀನಾ ಶೃಂಗಸಭೆಯಲ್ಲಿ ಭಾಗಿಯಾಗಿದ್ದರು. ಪ್ರಧಾನಿ ಮೋದಿ ಅವರೊಂದಿಗೆ ವ್ಯಾಪಾರ, ಬಂಡವಾಳ ಹೂಡಿಕೆ ಮತ್ತು ಗಡಿ ಸಮಸ್ಯೆಗಳನ್ನು ಮಾತುಕತೆ ಮೂಲಕ ಪರಿಹರಿಸುವುದಕ್ಕೆ ಆಗ ಎರಡೂ ದೇಶಗಳು ಒತ್ತು ನೀಡಿದ್ದವು. ಆದರೆ, ಜಿನ್‌ಪಿಂಗ್ ಭಾರತಕ್ಕೆ ಬಂದು ಹೋದ 7 ತಿಂಗಳಲ್ಲೇ ಸಂಬಂಧ ಹದಗೆಡುವ ಘಟನೆ ಗಡಿ ಭಾಗದಲ್ಲಿ ಜರುಗಿತು. 2020ರ ಏಪ್ರಿಲ್-ಮೇ ತಿಂಗಳಲ್ಲಿ ಗಡಿ ವಿವಾದ-ತಿಕ್ಕಾಟ ಶುರುವಾಗಿ, 2020ರ ಜೂನ್‌ನಲ್ಲಿ ಗಾಲ್ವಾನ್‌ನಲ್ಲಿನ ಘರ್ಷಣೆಯಲ್ಲಿ ಎರಡೂ ದೇಶಗಳ ಹಲವು ಸೈನಿಕರು ಸಾವನ್ನಪ್ಪಿದರು. ಇದು ಭಾರತ-ಚೀನಾ ಸಂಬಂಧಕ್ಕೆ ದೊಡ್ಡ ಪೆಟ್ಟು ನೀಡಿತು. ಗಡಿಯಲ್ಲಿ ಉದ್ವಿಗ್ನತೆ ಹೆಚ್ಚಿತು. ಪರಿಣಾಮವಾಗಿ ಭಾರತ ಸರಕಾರ ಚೀನಿ ಮೊಬೈಲ್ ಅಪ್ಲಿಕೇಶನ್‌ಗಳನ್ನು ನಿಷೇಧಿಸಿತು. ಭಾರತದಲ್ಲಿದ್ದ ಚೀನಾ ಕಂಪನಿಗಳ ಮೇಲಿನ ನಿಯಂತ್ರಣ ಬಿಗಿಗೊಳಿಸಿತು, ಗಡಿಯಲ್ಲಿ ಸೇನಾಪಡೆ ನಿಯೋಜನೆ ಹೆಚ್ಚಿಸಿತು.

2024ರ ಅಕ್ಟೋಬರ್‌ನಲ್ಲಿ ರಷ್ಯಾದ ಕಜಾನ್‌ನಲ್ಲಿ ಬ್ರಿಕ್ಸ್ ಶೃಂಗಸಭೆಗೆ ಪ್ರಧಾನಿ ಮೋದಿ ತೆರಳಿದ್ದರು. ಅಲ್ಲಿ ಕ್ಸಿ ಜಿನ್‌ಪಿಂಗ್‌ಗೆ ಮುಖಾಮುಖಿಯಾದರು. ದ್ವಿಪಕ್ಷೀಯ ಸಭೆ ನಡೆಸಿ ಗಡಿ ವಿವಾದಕ್ಕೆ ಶಾಂತಿಯುತ ಪರಿಹಾರಕ್ಕೆ ಇಬ್ಬರೂ ನಾಯಕರು ಸಮ್ಮತಿಸಿದರು. ಪೂರ್ವ ಲಡಾಖ್‌ನಲ್ಲಿ ನಿಯೋಜಿಸಲಾಗಿದ್ದ ಹೆಚ್ಚುವರಿ ಸೇನಾಪಡೆಯ ತುಕಡಿಗಳನ್ನು ಹಿಂತೆಗೆದುಕೊಳ್ಳಲಾಯಿತು.

ಮಾತುಕತೆ ನಿರೀಕ್ಷೆ

- ವಾಸ್ತವ ಗಡಿ ನಿಯಂತ್ರಣ ರೇಖೆ(ಎಲ್‌ಎಸಿ) ಬಳಿ ಸ್ಥಿರತೆ ಕಾಯ್ದುಕೊಳ್ಳುವ ಬಗ್ಗೆ ನೇತ ಮಾತುಕತೆ ನಡೆಯುವ ನಿರೀಕ್ಷೆ ಇದೆ.
- ಉಭಯ ದೇಶಗಳ ನಡುವೆ ಇರುವ ವ್ಯಾಪಾರದ(ಆಮದು-ರಫ್ತು) ಅಂತರ ತಗ್ಗಿಸುವ ಬಗ್ಗೆ ಭಾರತ ಪ್ರಸ್ತಾಪ ಮಾಡಲಿದೆ.
- ಉಭಯ ದೇಶಗಳಲ್ಲಿ ನೇರ ಬಂಡವಾಳ ಹೂಡಿಕೆಗೆ ಅವಕಾಶ ಸುಗಮಗೊಳಿಸುವ ಬಗೆಗೂ ಚರ್ಚೆಯಾಗಲಿದೆ.
- 'ದಕ್ಷಿಣ ಭೂಗೋಳ' ಪರಿಕಲ್ಪನೆ ಇನ್ನಷ್ಟು ಬಲಿಷ್ಠಗೊಳಿಸುವ ಬಗೆಗೂ ಎರಡೂ ದೇಶಗಳ ನಾಯಕರು ಚರ್ಚಿಸುವ ನಿರೀಕ್ಷೆ.
- ಅದಾಗಲೇ ಪುನಾರಂಭಗೊಂಡ ನೇರ ವಿಮಾನಯಾನ ಪ್ರಮಾಣವನ್ನು ಇನ್ನಷ್ಟು ವಿಸ್ತರಿಸುವ ಬಗೆಗೂ ಚರ್ಚೆಯಾಗಲಿದೆ.

ಬ್ರಿಕ್ಸ್ ಈಗ ವಿಸ್ತಾರ

ಅಮೆರಿಕ ಪ್ರಾಬಲ್ಯವನ್ನು ತಗ್ಗಿಸಲೆಂದೇ 'ಬ್ರೆಜಿಲ್, ರಷ್ಯಾ, ಇಂಡಿಯ, ಚೀನಾ, ದಕ್ಷಿಣ ಆಫ್ರಿಕಾ'(ಬಿಆರ್‌ಐಸಿಎಸ್) ದೇಶಗಳು ಒಟ್ಟಾಗಿ ಆರಂಭಿಸಿದ 'ಬ್ರಿಕ್ಸ್' ಒಕ್ಕೂಟದ ಈ ವರ್ಷದ ಶೃಂಗಸಭೆ ಭಾರತದ ಅಧ್ಯಕ್ಷತೆಯಲ್ಲಿ ದೆಹಲಿಯಲ್ಲಿ ಸೆಪ್ಟೆಂಬರ್‌ನಲ್ಲಿ ನಡೆಯಲಿದೆ. ಈಗ ಈ ಒಕ್ಕೂಟ ವಿಸ್ತಾರಗೊಂಡಿದ್ದು, ಹೊಸದಾಗಿ 6 ರಾಷ್ಟ್ರಗಳ ಸೇರ್ಪಡೆಯಾಗಿದೆ. ಈಜಿಪ್ಟ್, ಇಥಿಯೋಪಿಯ, ಇರಾನ್, ಸೌದಿ ಅರೇಬಿಯ, ಯುನೈಟೆಡ್ ಅರಬ್ ಎಮಿರೇಟ್ಸ್ ಮತ್ತು ಇಂಡೊನೇಷ್ಯಾ 'ಬ್ರಿಕ್ಸ್' ಸದಸ್ಯತ್ವ ಪಡೆದಿವೆ.

ಶೀಘ್ರವೇ ಮೋದಿ-ಟ್ರಂಪ್ ಭೇಟಿ

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಪ್ರಧಾನಿ ನರೇಂದ್ರ ಮೋದಿ ಸದ್ಯದಲ್ಲೇ ಭೇಟಿ ಆಗಲಿದ್ದಾರೆ. ಫ್ರಾನ್ಸ್‌ನಲ್ಲಿ ಜೂನ್ 15 ರಿಂದ 17ರವರೆಗೆ ನಡೆಯಲಿರುವ 'ಜಿ-7' ಶೃಂಗಸಭೆಯಲ್ಲಿ ಟ್ರಂಪ್-ಮೋದಿ ದ್ವಿಪಕ್ಷೀಯ ಮಾತುಕತೆಯೂ ನಡೆಯುವ ಸಾಧ್ಯತೆ ಇದೆ.

ಜಿ-7 ಶೃಂಗದ ಆತಿಥ್ಯ ವಹಿಸಿಕೊಂಡಿರುವ ಫ್ರಾನ್ಸ್ ಸರಕಾರ ಪ್ರಧಾನಿ ಮೋದಿ ಶೃಂಗಸಭೆಯಲ್ಲಿ ಭಾಗವಹಿಸುವುದನ್ನು ಖಚಿತಪಡಿಸಿದೆ. ಡೊನಾಲ್ಡ್ ಟ್ರಂಪ್ ಕೂಡಾ ಬರಲು ಒಪ್ಪಿದ್ದಾರೆ ಎಂದು ಅಮೆರಿಕದ ಆಕ್ಸಿಯೋಸ್ ಮಾಧ್ಯಮ ಸಂಸ್ಥೆ ವರದಿ ಪ್ರಕಟಿಸಿದೆ. ಹಾಗಾಗಿ ಜೂನ್ 3ನೇ ವಾರದಲ್ಲಿ ಮೋದಿ-ಟ್ರಂಪ್ ಮುಖಾಮುಖಿ ನಿರೀಕ್ಷಿತ. ಒಂದೂವರೆ ವರ್ಷದ ನಂತರ ಮೋದಿ-ಟ್ರಂಪ್ ಭೇಟಿಯಾಗ' ಲಿದ್ದಾರೆ. ಇತ್ತೀಚೆಗೆ ವಿದೇಶಾಂಗ ಸಚಿವ ಎಸ್.ಜೈಶಂಕರ್ ಅವರು ಫ್ರಾನ್ಸ್‌ನ ವಿದೇಶಾಂಗ ಸಚಿವ ಜೀನ್-ನೋಯೆಲ್ ಬ್ಯಾರಟ್ ಅವರನ್ನು ಭೇಟಿಯಾಗಿ, ಜಿ-7 ಶೃಂಗಸಭೆಯ ಕಾರ್ಯಸೂಚಿ, ಅದರಲ್ಲಿ ಭಾರತದ ಪಾತ್ರದ ಬಗ್ಗೆ ಚರ್ಚಿಸಿದರು. ಜಿ-7 ಶೃಂಗದಲ್ಲಿ ಭಾರತ ಕೇವಲ ಆಹ್ವಾನಿತ ಅತಿಥಿಯಂತಲ್ಲ, ಸಕ್ರಿಯವಾಗಿ ಚರ್ಚೆಗಳಲ್ಲಿ ಪಾಲ್ಗೊಳ್ಳುವ ಉದ್ದೇಶ ಹೊಂದಿದೆ ಎಂಬುದನ್ನು ತೋರಿಸುತ್ತದೆ. ಮೋದಿ-ಟ್ರಂಪ್ ನಡುವೆ ದ್ವಿಪಕ್ಷೀಯ ಸಭೆಯಾದರೆ, ಈವರೆಗೂ ಅಂತಿಮಗೊಳ್ಳದೇ ಬಾಕಿಯಾಗಿರುವ ಭಾರತ-ಅಮೆರಿಕ ಮುಕ್ತ ವ್ಯಾಪಾರ ಒಪ್ಪಂದದ ಬಗ್ಗೆ ಪ್ರಮುಖವಾಗಿ ಚರ್ಚೆಯಾಗುವ ಸಾಧ್ಯತೆ ಇದೆ. ಅದಲ್ಲದೇ, ಸುಂಕ, ವ್ಯಾಪಾರ ವಹಿವಾಟ ಹೆಚ್ಚಳಕ್ಕಿರುವ ಅವಕಾಶಗಳು, ರಕ್ಷಣಾ ಸಹಕಾರ, ತಂತ್ರಜ್ಞಾನ ಹಂಚಿಕೆ, ಇಂಡೋ- ಪೆಸಿ ಫಿಕ್ ಪ್ರದೇಶದ ಕಾರ್ಯತಂತ್ರ ಮತ್ತು ಇಂಧನ ಭದ್ರತೆ ಪ್ರಮುಖ ಚರ್ಚಾ ವಿಷಯವಾಗಲಿವೆ ಎಂದು ರಾಜತಾಂತ್ರಿಕ ವಲಯ ಅಂದಾಜು ಮಾಡಿದೆ.

ವಿಜಯ್ ನಟಿಸಿದ ತಮಿಳು ಚಿತ್ರ 'ಜಿಒಎಟಿ' (ಗ್ರೇಟೆಸ್ಟ್ ಆಫ್ ಆಲ್ ಟೈಮ್-ಗೋಟ್) ನಿರ್ದೇಶಕ ವೆಂಕಟಪ್ರಭು, ತಮಿಳುನಾಡು ಮುಖ್ಯಮಂತ್ರಿ ಸಿ.ಜೋಸೆಫ್ ವಿಜಯ್ ಅವರಿಗೆ 'ಟಿಎನ್07 ಸಿಎಂ2026' ಎಂಬ ದೊಡ್ಡ ಫಲಕವನ್ನು ಉಡುಗೊರೆಯಾಗಿ ನೀಡಿದ್ದಾರೆ. 'ಗೋಟ್' ಚಿತ್ರದಲ್ಲಿ ವಿಜಯ್ ಚಲಾಯಿಸುವ ಕಾರಿನ ನಂಬರ್ ಕೂಡಾ 'ಟಿಎನ್07 ಸಿಎಂ2026' ಆಗಿತ್ತು ಎಂಬುದು ಗಮನಾರ್ಹ. 'ಇತಿಹಾಸ ನಿರ್ಮಾಣವಾಗಿದೆ. ಊಹಿಸಿದ್ದು ಈಗ ವಾಸ್ತವವಾಗಿದೆ. ಅದಕ್ಕೆ ಖುಷಿ ಎರಡೂ ಆಗುತ್ತಿದೆ' ಎಂದು ವೆಂಕಟಪ್ರಭು ಹೇಳಿದ್ದಾರೆ.

ವಾಟ್ಸಾಪ್‌ನಲ್ಲೂ ಇಪಿಎಫ್‌ಒ ಮಾಹಿತಿ ಲಭ್ಯ

ದೆಹಲಿ: ನೌಕರರ ಭವಿಷ್ಯ ನಿಧಿ ಸಂಸ್ಥೆ(ಇಪಿಎಫ್‌ಒ) ಸದಸ್ಯರ ಅನುಕೂಲಕ್ಕಾಗಿ ವಾಟ್ಸಾಪ್ ಚಾಟ್‌ಬಾಟ್ ಮತ್ತು ಯುಪಿಐ ಎಂಬ 2 ಹೊಸ ಸೇವಾ ಸೌಲಭ್ಯಗಳನ್ನು ಶೀಘ್ರವೇ ಪರಿಚಯಿಸಲಿದೆ. 'ಇಪಿಎಫ್‌ಒ' ವಾಟ್ಸಾಪ್ ಚಾಟ್‌ಬಾಟ್ ತಂತ್ರಾಂಶ ಅಳವಡಿಸಿಕೊಳ್ಳಲಿರುವುದರಿಂದ 'ಪಿಎಫ್'(ಭವಿಷ್ಯ ನಿಧಿಯ) ಖಾತೆದಾರರು ಕೆಲವು ಪ್ರಾಥಮಿಕ ಹಂತದ ಸೇವೆಗಳನ್ನು ತಾವು ಇರುವಲ್ಲಿಯೇ ಪಡೆಯಬಹುದಾಗಿದೆ. ವಾಟ್ಸಾಪ್ ಚಾಟ್‌ಬೋಟ್ ಬಳಸಿ ಕೊಂಡು ತಮ್ಮ ಖಾತೆಯ ವಹಿವಾಟಿನ ವಿವರಗಳನ್ನು, ಬಾಕಿ ಮೊತ್ತ ಎಷ್ಟಿದೆ ಎಂಬುದನ್ನೂ ತಿಳಿದುಕೊಳ್ಳಬಹುದು. ಚಾಟ್ ಬೋಟ್ ಬಳಸುವ ಮೊದಲು ಅದು ಗ್ರೀನ್ ಟಿಕ್ ಹೊಂದಿದೆಯೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ಹಣಕ್ಕಾಗಿ ಕ್ಲೇಮ್ ಅರ್ಜಿ ಸಲ್ಲಿಸಿದ್ದರೆ ಅದು ಈಗ ಯಾವ ಹಂತದಲ್ಲಿದೆ ಎಂಬುದನ್ನೂ ತಿಳಿಯಬಹುದು. ಬಹುನಿರೀಕ್ಷಿತ 'ಯುಪಿಐ' ಸೌಲಭ್ಯವನ್ನು ಕೂಡ 'ಇಪಿಎಫ್‌ಒ' ಅಳವಡಿಸಿಕೊಳ್ಳಲಿರುವುದರಿಂದ ಪಿಎಫ್ ಸದಸ್ಯರು ತಮ್ಮ ಖಾತೆಯಲ್ಲಿನ ಹಣವನ್ನು 'ಯುಪಿಐ' ಆಪ್ ಮೂಲಕ ತಮ್ಮ ಬ್ಯಾಂಕ್‌ನ ಉಳಿತಾಯ ಖಾತೆಗೆ ವರ್ಗಾಯಿಸಿಕೊಳ್ಳಬಹುದು. ಪಿಎಫ್ ಹಣಕ್ಕಾಗಿ ಕ್ಲೇಮ್ ಅರ್ಜಿ ಸಲ್ಲಿಸಬೇಕಾದ ಅಗತ್ಯವಿಲ್ಲ. ಈಗ ಸ್ವಯಂಚಾಲಿತವಾಗಿಯೆ ಪಿಎಫ್ ಖಾತೆ ಸೆಟಲ್‌ಮೆಂಟ್ ಸೌಲಭ್ಯವಿದೆ. ಅಲ್ಲದೇ ಸೆಟಲ್‌ಮೆಂಟ್ ಮೊತ್ತವನ್ನು 5 ಲಕ್ಷ ರು.ವರೆಗೆ ಹೆಚ್ಚಿಸಲಾಗಿದೆ. ಹಣ ವರ್ಗಾಯಿಸಿಕೊಳ್ಳುವ ಮುನ್ನ ಯುಪಿಐ ಪಿನ್ ನಮೂದಿಸಬೇಕು.

ಕೇಂದ್ರ ಸರಕಾರಕ್ಕೆ ಪ.ಬಂಗಾಳದಿಂದ 120 ಎಕರೆ ಹಸ್ತಾಂತರ
ಅಂತಾರಾಷ್ಟ್ರೀಯ ಗಡಿಗೆ ತಾಗಿಕೊಂಡ ಪ್ರದೇಶ ಕೇಂದ್ರದ ವಶ

ಚಿಕನ್‌ನೆಕ್ ಇನ್ನು ಪೂರ್ಣ ಸುರಕ್ಷಿತ

ಕೋಲ್ಕತ್ತ: ದೇಶದ ಭದ್ರತೆ ವಿಚಾರದಲ್ಲಿ ಬಲು ಸೂಕ್ಷ್ಮ ಪ್ರದೇಶ ಎನಿಸಿಕೊಂಡಿರುವ 'ಸಿಲಿಗುರಿ ಕಾರಿಡಾರ್'(ಚಿಕನ್‌ನೆಕ್) ಭೂಪ್ರದೇಶದ ಬಗ್ಗೆ ಪಶ್ಚಿಮ ಬಂಗಾಳದ ನೂತನ ಬಿಜೆಪಿ ಸರಕಾರ ಮಹತ್ವದ ನಿರ್ಧಾರ ಕೈಗೊಂಡಿದೆ. ಮುಖ್ಯಮಂತ್ರಿ ಸುವೇಂದು ಅಧಿಕಾರಿ ನೇತೃತ್ವದ ಸಚಿವ ಸಂಪುಟ, ಸಿಲಿಗುರಿ ಕಾರಿಡಾರ್ ಪ್ರದೇಶದಲ್ಲಿರುವ 120 ಎಕರೆ ಭೂಮಿಯನ್ನು ಕೇಂದ್ರ ಸರಕಾರಕ್ಕೆ ತಕ್ಷಣದಿಂದಲೇ ಜಾರಿಗೆ ಬರುವಂತೆ ವರ್ಗಾಯಿಸಿದೆ.

ಮುಖ್ಯಮಂತ್ರಿ ಸುವೇಂದು ಅವರು ಈ ನಿರ್ಧಾರವನ್ನು ಮಂಗಳವಾರ ಘೋಷಿಸಿದಾಗ ಸಭೆಯಲ್ಲಿ ಗಡಿ ಭದ್ರತಾ ಪಡೆಯ(ಬಿಎಸ್‌ಎಫ್) ಹಿರಿಯ ಅಧಿಕಾರಿಗಳೂ ಉಪಸ್ಥಿತರಿದ್ದರು. ಈಶಾನ್ಯದ ರಾಜ್ಯಗಳನ್ನು ಭಾರತದ ಪ್ರಧಾನ ಭಾಗದೊಂದಿಗೆ ಸಂಪರ್ಕಗೊಳಿಸುವ ಮಾರ್ಗದಲ್ಲಿ ಸಿಲಿಗುರಿ ಕಾರಿಡಾರ್ (ಚಿಕನ್ ನೆಕ್) ಬಹಳ ಪ್ರಮುಖವಾದ ಭೂಪ್ರದೇಶವಾಗಿದೆ. ನೆರೆಯ ನೇಪಾಳ, ಭೂತಾನ್, ಬಾಂಗ್ಲಾದೇಶ ಮತ್ತು ಚೀನಾ ದೇಶಗಳ ಗಡಿಗಳಿಗೂ ಈ ಭೂಪ್ರದೇಶ ತಾಗಿಕೊಂಡಂತೆ ಇದೆ. ಅಂತಾ ರಾಷ್ಟ್ರೀಯ ಗಡಿಗಳಿಗೆ ಹತ್ತಿರದಲ್ಲಿರುವುದರಿಂದ ದೇಶದ ಅತ್ಯಂತ ನಾಜೂಕಿನ ಕಾರ್ಯತಂತ್ರ ನಿರ್ಣಾಯಕ ಪ್ರದೇಶವೆನಿಸಿಕೊಂಡಿದೆ. ಈ ಭೂ ಪ್ರದೇಶ ಈವರೆಗೂ ಪಶ್ಚಿಮ ಬಂಗಾಳ ರಾಜ್ಯದ ಭೂಪ್ರದೇಶದಲ್ಲಿತ್ತು. ಹಾಗಾಗಿ ಪೂರ್ಣ ನಿಯಂತ್ರಣ, ಭದ್ರತೆ ಎಂಬುದು ಸವಾಲಿನದಾಗಿತ್ತು. ಈಗ ಈ ಭಾಗದ 120 ಎಕರೆ ಭೂಮಿ ಕೇಂದ್ರ ಸರಕಾರದ ಸುಪರ್ದಿಗೆ ಬಂದಿರುವುದರಿಂದ ಸಿಲಿಗುರಿ ಕಾರಿಡಾರ್‌ನ ಉದ್ದಕ್ಕೂ ಗಡಿ ಬೇಲಿ ನಿರ್ಮಿಸಿ ಭದ್ರತೆ ಹೆಚ್ಚಿಸಲು ಮತ್ತು ಮೂಲಸೌಕರ್ಯ ಅಭಿವೃದ್ಧಿಪಡಿಸಲು ಬಹಳ ಅನುಕೂಲಕಾರಿಯಾಗಿದೆ.



ಸಿಲಿಗುರಿ ಕಾರಿಡಾರ್ ಬಹಳ ಕಿರಿದಾಗಿದೆ. ಆದರೆ, ಈಶಾನ್ಯ ರಾಜ್ಯಗಳನ್ನು ದೇಶದ ಪ್ರಧಾನ ಭೂಭಾಗಕ್ಕೆ ಸಂಪರ್ಕಿಸುವ ಪ್ರಮುಖ ಮಾರ್ಗವಾಗಿದೆ. ಇದರ ಅಗಲ ಕೇವಲ 20-22 ಕಿ.ಮೀ. ಮಾತ್ರವೇ ಇದೆ ಎಂಬುದು ಇಲ್ಲಿನ ಸಮಸ್ಯೆಯನ್ನು ಎತ್ತಿತೋರುತ್ತದೆ. ಈ 120 ಎಕರೆ ಪ್ರದೇಶವನ್ನು ಸೇನಾಪಡೆಗಳಿಗೆ ಅಗತ್ಯವಾದ ಮೂಲಸೌಕರ್ಯ ನಿರ್ಮಾಣ, ರಸ್ತೆಗಳ ಅಗಲೀಕರಣ, ಭದ್ರತೆ ಹೆಚ್ಚಿಸಲು ಬಳಸಲಾಗುತ್ತದೆ ಎಂದು ಬಿಎಸ್‌ಎಫ್ ಮೂಲಗಳು ತಿಳಿಸಿವೆ.

ಭಾರತ ರತ್ನ ಪುರಸ್ಕೃತ ವಿಜ್ಞಾನಿ ಪ್ರೊ.ಎಂ.ಎಸ್.ಸ್ವಾಮಿನಾಥನ್ ಪುತ್ರಿಗೆ ಗೌರವ

ಡಾ.ಸೌಮ್ಯಗೆ ರಾಯಲ್ ಸೊಸೈಟಿ ಫೆಲೋಶಿಪ್

ಲಂಡನ್: ಭಾರತೀಯ ವಿಜ್ಞಾನಿ ಡಾ. ಸೌಮ್ಯ ಸ್ವಾಮಿನಾಥನ್ ವಿಶ್ವದ ಅತಿ ಪ್ರತಿಷ್ಠಿತ ವೈಜ್ಞಾನಿಕ ಗೌರವ 'ರಾಯಲ್ ಸೊಸೈಟಿ ಫೆಲೋ' (ಎಫ್‌ಆರ್‌ಎಸ್) ಆಗಿ ಆಯ್ಕೆಯಾಗಿದ್ದಾರೆ.

ಇದಕ್ಕೂ ಮುನ್ನ ಅವರು 'ವಿಶ್ವ ಆರೋಗ್ಯ ಸಂಸ್ಥೆ'ಯ (ಡಬ್ಲ್ಯುಎಚ್‌ಒ) ಮಾಜಿ ಮುಖ್ಯ ವಿಜ್ಞಾನಿಯಾಗಿ ಸೇವೆ ಸಲ್ಲಿಸಿದ್ದರು. ಅದಕ್ಕೆ ಮುನ್ನ 2015-17ರ ಅವಧಿಯಲ್ಲಿ ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ (ಐಸಿಎಂಆರ್) ಮಹಾನಿರ್ದೇಶಕರಾಗಿದ್ದರು. ಅಲ್ಲದೇ ಭಾರತ ಸರಕಾರದ ಆರೋಗ್ಯ ಸಂಶೋಧನಾ ಇಲಾಖೆ ಕಾರ್ಯದರ್ಶಿಯಾಗಿದ್ದರು ಎಂಬುದು ಗಮನಾರ್ಹ. ರಾಯಲ್ ಸೊಸೈಟಿಯ 365 ವರ್ಷಗಳ ಇತಿಹಾಸದಲ್ಲಿಯೇ ಫೆಲೋಶಿಪ್ ಪಡೆದ ಭಾರತದ 2ನೇ ಮಹಿಳಾ ವಿಜ್ಞಾನಿ ಎನಿಸಿಕೊಂಡಿದ್ದಾರೆ ಡಾ.ಸೌಮ್ಯ ಸ್ವಾಮಿನಾಥನ್. ಮೊದಲನೆಯವರು 2019ರಲ್ಲಿ ಆಯ್ಕೆಯಾಗಿದ್ದ ಲಸಿಕೆ ಶಾಸ್ತ್ರಜ್ಞೆ ಪ್ರೊ. ಗಗನ್‌ದೀಪ್ ಕಾಂಗ್.

ಅಪ್ಪ-ಮಗಳು ಅಪ್ರತಿಮ: ಇದಕ್ಕಿಂತ ವಿಶೇಷ ಸಂಗತಿ ಏನೆಂದರೆ, ಭಾರತ ರತ್ನ ಪ್ರಶಸ್ತಿ ಪುರಸ್ಕೃತ ಪ್ರಸಿದ್ಧ ಕೃಷಿ ವಿಜ್ಞಾನಿ ಪ್ರೊ. ಎಂ.ಎಸ್. ಸ್ವಾಮಿನಾಥನ್ ಅವರೂ 'ಎಫ್‌ಆರ್‌ಎಸ್' ಆಗಿ ಆಯ್ಕೆಯಾಗಿದ್ದರು. ಆ ಮೂಲಕ ತಂದೆ-ಮಗಳು ಇಬ್ಬರಿಗೂ 'ಲಂಡನ್ ರಾಯಲ್ ಸೊಸೈಟಿ' ಫೆಲೋಶಿಪ್ ಪಡೆದಂತಾಗಿದೆ. ಡಾ. ಸೌಮ್ಯ ಸ್ವಾಮಿನಾಥನ್ ಅವರು ಕಳೆದ ಮೂರು ದಶಕಗಳಲ್ಲಿ ಕ್ಷಯರೋಗ (ಟಿಬಿ) ಮತ್ತು ಎಚ್‌ಐವಿ(ಎಯ್ಡ್ಸ್) ಕುರಿತು ನಡೆಸಿರುವ ವೈದ್ಯಕೀಯ ಸಂಶೋಧನೆಗಳು ಹಾಗೂ ಕರೋನಾ ಸಾಂಕ್ರಾಮಿಕ ಸಮಯದಲ್ಲಿ ಜಾಗತಿಕ ಆರೋಗ್ಯ ನೀತಿಗಳನ್ನು ರೂಪಿಸುವಲ್ಲಿ ವಹಿಸಿದ ನಾಯಕತ್ವದ ಮಹತ್ವವನ್ನು ಗುರುತಿಸಿ ರಾಯಲ್ ಫೆಲೋಶಿಪ್ ನೀಡಲಾಗಿದೆ.

ರಾಯಲ್ ಸೊಸೈಟಿ: 1660ರಲ್ಲಿ ಸ್ಥಾಪನೆಯಾಗಿರುವ 'ಲಂಡನ್ ರಾಯಲ್ ಸೊಸೈಟಿ' ವಿಶ್ವದ ಅತಿಹಳೆಯ-ಅತ್ಯಂತ ಗೌರವಾನ್ವಿತ ವೈಜ್ಞಾನಿಕ ಅಕಾಡೆಮಿ. ತಮ್ಮ ಕ್ಷೇತ್ರಗಳಿಗೆ ಅಸಾಧಾರಣ ಕೊಡುಗೆ ನೀಡಿದ ವಿಜ್ಞಾನಿಗಳಿಗೆ ಫೆಲೋಶಿಪ್ ನೀಡುತ್ತದೆ. ಸರ್ ಐಸಾಕ್ ನ್ಯೂಟನ್, ಆಲ್ಬರ್ಟ್ ಐನ್‌ಸ್ಟೈನ್ ಮತ್ತು ಚಾರ್ಲ್ಸ್ ಡಾರ್ವಿನ್ ಅವರಂತಹ ವಿಶ್ವವಿಖ್ಯಾತ ವಿಜ್ಞಾನಿಗಳು ಇದರ ಸದಸ್ಯರಾಗಿದ್ದರು ಎಂಬುದು ಇದರ ಮಹತ್ವವನ್ನು ಸಾರುತ್ತದೆ.

ನ್ಯಾ.ವರ್ಮಾ: ಸಂಸತ್ ಸಮಿತಿ ವರದಿ ಸಲ್ಲಿಕೆ

ದೆಹಲಿ: ದೆಹಲಿ ಮತ್ತು ಅಲಹಾಬಾದ್ ಹೈಕೋರ್ಟ್ ನ್ಯಾಯಮೂರ್ತಿಯಾಗಿದ್ದ ಯಶವಂತ್ ವರ್ಮಾ ವಿರುದ್ಧದ ಭ್ರಷ್ಟಾಚಾರ ಆರೋಪದ ತನಿಖೆ ನಡೆಸುತ್ತಿರುವ ಸಂಸತ್ತಿನ ವಿಚಾರಣಾ ಸಮಿತಿ ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರಿಗೆ ವರದಿ ಸಲ್ಲಿಸಿದೆ. ಮುಂದಿನ ಮುಂಗಾರು ಅಧಿವೇಶನದಲ್ಲಿ ಈ ವರದಿಯನ್ನು ಲೋಕಸಭೆ-ರಾಜ್ಯಸಭೆಯಲ್ಲಿ ಮಂಡಿಸಲಾಗುವುದು. ದೆಹಲಿ ಹೈಕೋರ್ಟ್ ನ್ಯಾಯಮೂರ್ತಿಯಾಗಿದ್ದಾಗ ಯಶವಂತ್ ವರ್ಮಾ ಅವರ ಸರಕಾರಿ ನಿವಾಸದಲ್ಲಿ 2025ರ ಮಾ.14ರ ರಾತ್ರಿ ಬೆಂಕಿ ಅವಘಡವಾಗಿದ್ದು, ಅಗ್ನಿಶಾಮಕ ಸಿಬ್ಬಂದಿಗೆ ಕಾರ್‌ಷೆಡ್‌ನಲ್ಲಿ ಮರದ ಪೆಟ್ಟಿಗೆಯಲ್ಲಿ ಅರೆಸುಟ್ಟ 500 ರು. ನೋಟುಗಳು ಕಂಡುಬಂದಿದ್ದವು. ಈ ಪ್ರಕರಣ ದೇಶದ್ಯಾಂತ ಸಂಚಲನ ಸೃಷ್ಟಿಸಿತ್ತು. ಬಳಿಕ ಅಲಹಾಬಾದ್ ಹೈಕೋರ್ಟ್‌ಗೆ ನ್ಯಾ.ವರ್ಮಾರನ್ನು ವರ್ಗಾವಣೆ ಮಾಡಲಾಗಿತ್ತು. ಆದರೆ, ಹುದ್ದೆ ನೀಡಿರಲಿಲ್ಲ. ಆಗ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿಯಾಗಿದ್ದ ಸಂಜೀವ್ ಖನ್ನಾ ಅವರು ತನಿಖೆಗೆ ಆಂತರಿಕ ಸಮಿತಿ ರಚಿಸಿದ್ದರು. 2025ರ ಜುಲೈನಲ್ಲಿ 200ಕ್ಕೂ ಹೆಚ್ಚು ಸಂಸದರು ನ್ಯಾ.ವರ್ಮಾರನ್ನು ಪದಚ್ಯುತಗೊಳಿಸುವ ಪ್ರಸ್ತಾವನೆಗೆ ಸಹಿ ಹಾಕಿ ಲೋಕಸಭೆ ಸ್ಪೀಕರ್‌ಗೆ ಸಲ್ಲಿಸಿದ್ದರು. ಆ ಬಳಿಕ ಸ್ಪೀಕರ್ ಓಂ ಬಿರ್ಲಾ ಅವರು ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿ ಅರವಿಂದ್ ಕುಮಾರ್, ಬಾಂಬೆ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಚಂದ್ರಶೇಖರ್, ಕರ್ನಾಟಕದ ಹಿರಿಯ ನ್ಯಾಯವಾದಿ ಬಿ.ವಿ.ಆಚಾರ್ಯ ಅವರನ್ನು ಒಳಗೊಂಡ ಸಂಸತ್ ವಿಚಾರಣಾ ಸಮಿತಿ ರಚಿಸಿದ್ದರು. ಆ ನಂತರದ ಬೆಳವಣಿಗೆಯಲ್ಲಿ ನ್ಯಾ.ಯಶವಂತ್ ವರ್ಮಾ ಅಲಹಾಬಾದ್ ಹೈಕೋರ್ಟ್ ನ್ಯಾಯಮೂರ್ತಿ ಹುದ್ದೆಗೆ ಇತ್ತೀಚೆಗೆ ರಾಜೀನಾಮೆ ನೀಡಿದ್ದಾರೆ. ಹಾಗಾಗಿ, ಸಂಸತ್ತಿನ ಮೂಲಕ ಪದಚ್ಯುತಗೊಳಿಸುವ ಕಾರ್ಯವಿಧಾನಕ್ಕೆ ಪ್ರಾಮುಖ್ಯತೆ ಇಲ್ಲವಾಗುತ್ತದೆ ಎನ್ನಲಾಗಿದೆ.



ಸುಪ್ರೀಂಕೋರ್ಟ್ ನ್ಯಾ.ಅರವಿಂದ್ ಕುಮಾರ್, ಬಾಂಬೆ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಚಂದ್ರಶೇಖರ್, ಕರ್ನಾಟಕದ ಹಿರಿಯ ನ್ಯಾಯವಾದಿ ಬಿ.ವಿ.ಆಚಾರ್ಯ ಅವರ ಸಂಸತ್ ವಿಚಾರಣಾ ಸಮಿತಿಯು ಸ್ಪೀಕರ್ ಓಂ ಬಿರ್ಲಾ ಅವರಿಗೆ ವರದಿ ಸಲ್ಲಿಸಿದೆ.

ಪ್ರಧಾನಿ ಮೋದಿ ಭೇಟಿ: ಈಸ್ಟೋನಿಯಾ ಆಹ್ವಾನ

ಟೆಲ್ಲಿನ್: ಪ್ರಸ್ತುತ ಯೂರೋಪ್ ಪ್ರವಾಸದಲ್ಲಿರುವ ಭಾರತದ ಪ್ರಧಾನಿ ನರೇಂದ್ರ ಮೋದಿ ಅವರು ಒಮ್ಮೆ ನಮ್ಮ ದೇಶ 'ಈಸ್ಟೋನಿಯಾ'ಕ್ಕೆ ಭೇಟಿ ನೀಡಬೇಕು ಎಂದು ಮನವಿ ಮಾಡುವೆ. ಅವರ ಭೇಟಿಯಿಂದ ನಮಗೆಲ್ಲಾ ಬಹಳ ಸಂತೋಷವಾಗುತ್ತದೆ ಎಂದು ಉತ್ತರ ಯೂರೋಪ್ ಭಾಗದ ದ್ವೀಪಸಮೂಹಗಳ ದೇಶ 'ಈಸ್ಟೋನಿಯಾ'ದ ವಿದೇಶಾಂಗ ಸಚಿವ ಮಾರ್ಗಸ್ ಸಹ್ಕ್ನಾ ಹೇಳಿದ್ದಾರೆ. ಭಾರತ 140 ಕೋಟಿ ಜನರ ದೇಶ. ಫಿನ್ಲೆಂಡ್ ಸಮೀಪದ ಈಸ್ಟೋನಿಯಾದ ಜನಸಂಖ್ಯೆ ಕೇವಲ 13 ಲಕ್ಷ. ಹಾಗಿದ್ದೂ ಭಾರತ ನಮಗೆ ಬಹಳ ಮುಖ್ಯ ಪಾಲುದಾರ ದೇಶ. ನಮ್ಮ ಅಧ್ಯಕ್ಷ ಅಲಾರ್ ಕ್ಯಾರಿಸ್ ಅವರು ಫೆಬ್ರವರಿಯಲ್ಲಿ 'ಎ.ಐ ಶೃಂಗಸಭೆ'ಗಾಗಿ ಭಾರತಕ್ಕೆ ಭೇಟಿ ನೀಡಿದ್ದರು. ಪ್ರಧಾನಿ ಮೋದಿ ಮತ್ತು ಉನ್ನತ ಮಟ್ಟದ ನಿಯೋಗ ನಮ್ಮಲ್ಲಿಗೆ ಬರಬೇಕು ಎಂದು ಬಯಸುವೆ ಎಂದು ಮಾರ್ಗಸ್ ಹೇಳಿದ್ದಾರೆ.



ಭಾರತ-ನಾರ್ಡಿಕ್ ಒಕ್ಕೂಟದ ಒಪ್ಪಂದ

ಓಸ್ಲೋ: ನಾರ್ವೆ, ಡೆನ್ಮಾರ್ಕ್, ಐಸ್‌ಲ್ಯಾಂಡ್, ಸ್ವೀಡನ್. ಫಿನ್ಲೆಂಡ್ ಒಳಗೊಂಡ 'ನಾರ್ಡಿಕ್' ಒಕ್ಕೂಟ ದೇಶಗಳ ಜತೆಗೆ ಭಾರತ ಮಹತ್ವದ ಒಪ್ಪಂದ ಮಾಡಿಕೊಂಡಿದೆ.

ಮುಖ್ಯವಾಗಿ ಸ್ವಚ್ಛ-ಹಸಿರು ಪರಿವರ್ತನೆ, ವ್ಯಾಪಾರ, ಬಂಡವಾಳ ಹೂಡಿಕೆ, ಸಾಗರ ಆರ್ಥಿಕತೆ ಕ್ಷೇತ್ರಗಳಲ್ಲಿ ಭಾರತ ಮತ್ತು 'ನಾರ್ಡಿಕ್' ದೇಶಗಳ ನಡುವೆ ಪರಸ್ಪರ ಸಹಕಾರ ಹಾಗೂ ನಾವೀನ್ಯ ಕಾರ್ಯತಂತ್ರ ಪಾಲುದಾರಿಕೆಗೆ ಒಪ್ಪಂದ ಮಾಡಿಕೊಳ್ಳಲಾಗಿದೆ. ಸದ್ಯ 5 ರಾಷ್ಟ್ರಗಳ ದೀರ್ಘ ಪ್ರವಾಸದಲ್ಲಿರುವ ಪ್ರಧಾನಿ ಮೋದಿ, 3ನೇ ನಾರ್ಡಿಕ್ ಶೃಂಗಸಭೆಯಲ್ಲಿ ಮಂಗಳವಾರ ಭಾಗಿಯಾಗಿದ್ದರು. ಭಾರತ-ನಾರ್ಡಿಕ್ ಒಕ್ಕೂಟದ ಒಪ್ಪಂದವನ್ನು 'ಇದು ಉಭಯತ್ರರಲ್ಲಿ ಸುವರ್ಣ ಯುಗಕ್ಕೆ ನಾಂದಿ ಹಾಡಲಿದೆ' ಎಂದು ಮೋದಿ ಬಣ್ಣಿಸಿದರು. ಒಂದೆಡೆ ವಿಶ್ವದ ಕೆಲವು ದೇಶಗಳು ಯುದ್ಧದಲ್ಲಿ ಮಗ್ನವಾಗಿವೆ. ಮತ್ತೊಂದೆಡೆ ಭಾರತ-ನಾರ್ಡಿಕ್ ಒಕ್ಕೂಟ ದೇಶಗಳು ಒಟ್ಟಾಗಿ ಕೆಲಸ ಮಾಡಲು, ಪರಸ್ಪರರಿಗೆ ಸಹಕಾರ ನೀಡಲು ಸಮ್ಮತಿಸಿವೆ. ಇದು ಜಾಗತಿಕ ವ್ಯವಸ್ಥೆಯನ್ನು ಬಲಪಡಿಸಲು ಸಹಕಾರಿಯಾಗಲಿದೆ ಎಂದು ಹೇಳಿದರು. ಕಳೆದೊಂದು ದಶಕದಲ್ಲಿ ಭಾರತದಲ್ಲಿ ನಾರ್ಡಿಕ್ ದೇಶಗಳ ಬಂಡವಾಳ ತೊಡಗಿಸುವ ಪ್ರಮಾಣ ದುಪ್ಪಟ್ಟಾಗಿದೆ. ವ್ಯಾಪಾರ ವಹಿವಾಟೂ ಹೆಚ್ಚುತ್ತಿದೆ. ಈ ಬೆಳವಣಿಗೆಯು ಉಭಯ ದೇಶಗಳ ಆರ್ಥಿಕ ಪ್ರಗತಿಗೆ ಸಹಕಾರಿಯಾಗಿದೆ ಎಂದರು.



ನಾರ್ಡಿಕ್ ಶೃಂಗಸಭೆಯಲ್ಲಿ ಮೋದಿ ಜತೆ 5 ದೇಶಗಳ ಪ್ರಮುಖರು.

ಸಿಎಂ ಸತೀಶನ್ ಬಳಿ 35 ಖಾತೆ, ಚೆನ್ನಿತ್ತಲ ಗೃಹ, ಪಿಕೆಕೆಗೆ ವಾಣಿಜ್ಯ

ತಿರುವನಂತಪುರಂ: ಮುಖ್ಯಮಂತ್ರಿ, ಕಾಂಗ್ರೆಸ್ ನಾಯಕ ವಿ.ಡಿ.ಸತೀಶನ್ ನೇತೃತ್ವದ 'ಯುನೈಟೆಡ್ ಡೆಮಾಕ್ರೆಟಿಕ್ ಫ್ರಂಟ್'(ಯುಡಿಎಫ್) ಸರಕಾರದ ಸಚಿವರುಗಳಿಗೆ ಖಾತೆಗಳ ಹಂಚಿಕೆ ಪ್ರಕ್ರಿಯೆ ಬುಧವಾರ ನಡೆಸಲಾಗಿದೆ ಎಂದು ಕೇರಳ ಲೋಕಭವನ ಅಧಿಕೃತ ಪ್ರಕಟಣೆಯಲ್ಲಿ ತಿಳಿಸಿದೆ.

ಮುಖ್ಯಮಂತ್ರಿ ಸತೀಶನ್ ಅವರ ಬಳಿ ಹಣಕಾಸು, ಕಾನೂನು, ಸಾಮಾನ್ಯ ಆಡಳಿತ, ಬಂದರು ಸೇರಿದಂತೆ ಒಟ್ಟು 35 ಇಲಾಖೆಗಳಿಗೆ ಸಂಬಂಧಿಸಿದ ಖಾತೆಗಳಿವೆ. ಹಿರಿಯ ಕಾಂಗ್ರೆಸ್ ನಾಯಕ ರಮೇಶ್ ಚೆನ್ನಿತ್ತಲ ಅವರ ಕೋರಿಕೆಯಂತೆಯೇ ಗೃಹ, ವಿಜಿಲೆನ್ಸ್ ಸೇರಿದಂತೆ 4 ಖಾತೆಗಳನ್ನು ವಹಿಸಿಕೊಡಲಾಗಿದೆ. ಒಕ್ಕೂಟದ ಮತ್ತೊಂದು ಪ್ರಮುಖ ಪಕ್ಷ 'ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್'(ಐಯುಎಂಎಲ್) ನಾಯಕ ಪಿ.ಕೆ.ಕುನ್ಹಾಲಿಕುಟ್ಟಿ ಅವರಿಗೆ ವಾಣಿಜ್ಯ ಮತ್ತು ಕೈಗಾರಿಕೆ, ಮಾಹಿತಿ ತಂತ್ರಜ್ಞಾನ, ಆರ್ಟಿಫಿಷಿಯಲ್ ಇಂಟೆಲಿಜೆನ್ಸಿ(ಎಐ), ನವೋದ್ಯಮ, ಗಣಿಗಾರಿಕೆ ಮತ್ತು ಭೂಗರ್ಭಶಾಸ್ತ್ರ ಇಲಾಖೆ, ಕೈಮಗ್ಗ ಮತ್ತು ಜವಳಿ ಉದ್ಯಮ ಖಾತೆಗಳನ್ನು ವಹಿಸಿಕೊಡಲಾಗಿದೆ. ಕೆಪಿಸಿಸಿ ಅಧ್ಯಕ್ಷ ಸನ್ನಿ ಜೋಸೆಫ್‌ಗೆ ವಿದ್ಯುತ್, ಪರಿಸರ, ಸಂಸದೀಯ ವ್ಯವಹಾರ ಖಾತೆಗಳು, ಮತ್ತೊಬ್ಬ ಹಿರಿಯ ಕಾಂಗ್ರೆಸ್ ನಾಯಕ ಕೆ.ಮುರಳೀಧರನ್‌ಗೆ ಆರೋಗ್ಯ, ದೇವಸ್ವಂಗಳು, ಆಹಾರ ಸುರಕ್ಷತೆ ಮತ್ತು ವೈದ್ಯಕೀಯ ಶಿಕ್ಷಣ ಖಾತೆಗಳನ್ನು ವಹಿಸಲಾಗಿದೆ. ರೋಜಿ ಎಂ.ಜಾನ್‌ಗೆ ಉನ್ನತ ಶಿಕ್ಷಣ, ಅನಿಲ್ ಕುಮಾರ್‌ಗೆ ಭೂಮಿ-ಕಂದಾಯ, ಶಾಮಸುಧೀನ್‌ಗೆ ಸಾರ್ವಜನಿಕ ಶಿಕ್ಷಣ ಖಾತೆ, ಆರ್‌ಎಸ್‌ಪಿ ಏಕಮೇವ ಶಾಸಕ ಶಿಬುಬೇಬಿ ಜಾನ್‌ಗೆ ಅರಣ್ಯ, ವನ್ಯಜೀವಿ ಸಂರಕ್ಷಣೆ, ಕೌಶಲಾಭಿವೃದ್ಧಿ, ಮೋನ್ಸ್ ಜೋಸೆಫ್‌ಗೆ ನೀರಾವರಿ, ಅಂತರ್ಜಲ, ನೀರು ಪೂರೈಕೆ-ಒಳಚರಂಡಿ, ವಸತಿ ಖಾತೆ ನೀಡಲಾಗಿದೆ.

ಸಮಾಚಾರ ಸಣ್ಣದಲ್ಲ

ಕೇರಳ: ಹಾಲಿನ ದರ 4 ರು. ಹೆಚ್ಚಳ

ತಿರುವನಂತಪುರಂ: ಕಾಂಗ್ರೆಸ್ ನೇತೃತ್ವದ ಯುಡಿಎಫ್ ಸರಕಾರವು ಕೇರಳದಲ್ಲಿ ಅಧಿಕಾರಕ್ಕೇರಿದ ಬೆನ್ನಲ್ಲೇ ಅಲ್ಲಿನ ಸಹಕಾರಿ ಹಾಲು ಮಾರುಕಟ್ಟೆ ಒಕ್ಕೂಟ (ಮಿಲ್ಮಾ) ಜೂನ್ 1ರಿಂದ ಜಾರಿಗೆ ಬರುವಂತೆ ಪ್ರತಿ ಲೀಟರ್ ಹಾಲಿನ ದರ 4 ರು. ಹೆಚ್ಚಳ ಮಾಡುವುದಾಗಿ ಬುಧವಾರ ಘೋಷಿಸಿದೆ.

ಇದರ ಬಹುಪಾಲು, 3.75 ರು. ನೇರವಾಗಿ ಡೈರಿ ರೈತರಿಗೆ ಸಿಗಲಿದೆ ಎಂದು ಮಿಲ್ಮಾ ಅಧ್ಯಕ್ಷ ಕೆ.ಎಸ್. ಮಣಿ ಅವರು ಹೇಳಿದ್ದಾರೆ. ಇತ್ತೀಚಿನ ವಿಧಾನಸಭಾ ಚುನಾವಣೆಗಳಿಂದಾಗಿ ಮಂಡಳಿಯು ಹಾಲಿನ ದರ ಪರಿಷ್ಕರಣೆಯನ್ನು ಮುಂದೂಡಿ, ಹೊಸ ಸರಕಾರ ಅಧಿಕಾರ ವಹಿಸಿಕೊಳ್ಳುವವರೆಗೆ ಕಾದಿತ್ತು. ಬೇಸಿಗೆಯಲ್ಲಿ ಹಾಲು ಉತ್ಪಾದನೆಯಲ್ಲಿ ತೀವ್ರ ಕುಸಿತದ ಜೊತೆಗೆ, ಹೈನುಗಾರಿಕೆ ರೈತರು, ಗಗನಕ್ಕೇರುತ್ತಿರುವ ಜಾನುವಾರು ಮೇವು ಮತ್ತು ಕಾರ್ಮಿಕ ವೆಚ್ಚಗಳಿಂದ ತೀವ್ರ ಸಂಕಷ್ಟವನ್ನು ಎದುರಿಸುತ್ತಿದ್ದಾರೆ ಎಂದು ಕೇರಳ ರಾಜ್ಯದ ಬಹುತೇಕ ಹಾಲು ಒಕ್ಕೂಟಗಳು ಒತ್ತಿ ಹೇಳಿವೆ.

ನನ್ನ ನಡೆ ಶಿಕ್ಷಣದೆಡೆ ಅಭಿಯಾನ ಇಂದು

ಬೆಂಗಳೂರು: ಸಮಾಜ ಸೇವೆಯಲ್ಲಿ ತನ್ನದೇ ಛಾಪು ಮೂಡಿಸಿರುವ ಸ್ಪರ್ಶ ಸಂಸ್ಥೆಯಿಂದ ಗುರುವಾರ (ಮೇ 21) ಬೆಳಗ್ಗೆ 11 ಗಂಟೆಗೆ ಇಲ್ಲಿನ ಕಾರ್ಮಿಕ ಇಲಾಖೆ ಕಚೇರಿಯಲ್ಲಿ ನನ್ನ ನಡೆ ಶಿಕ್ಷಣದೆಡೆಗೆ ಅಭಿಯಾನಕ್ಕೆ ಚಾಲನೆ ಸಿಗಲಿದೆ. ಕಲಾಜಾಥಾ-2026 ಎಂಬ ಕಾರ್ಯಕ್ರಮವನ್ನು ಆಯೋಜನೆ ಮಾಡಲಾಗಿದ್ದು, ಶಿಕ್ಷಣದ ಮಹತ್ವ ಹಾಗೂ ಮಕ್ಕಳನ್ನು ಅಂಗನವಾಡಿಗೆ ಸೇರಿಸುವ ಕುರಿತು ಜಾಗೃತಿ ಅಭಿಯಾನ ನಡೆಯಲಿದೆ. ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಕಾರ್ಯದರ್ಶಿ ಇಂದಿರಮ್ಮ.ಜಿ ಅಭಿಯಾನ ಉದ್ಘಾಟಿಸಲಿದ್ದು, ಕಾರ್ಮಿಕ ಇಲಾಖೆ ಅಧಿಕಾರಿಗಳಾದ ಡಾ.ವೈ.ಕೆ.ದಿನೇಶ್ ಕುಮಾರ್, ಡಾ.ಎಸ್.ಬಿ. ರವಿಕುಮಾರ್ ಉಪಸ್ಥಿತರಿರಲಿದ್ದಾರೆ. ವಕೀಲರು ಮತ್ತು ಮಕ್ಕಳ ಹಕ್ಕುಗಳ ಆಯೋಗದ ಮಾಜಿ ಸದಸ್ಯೆ, ವಕೀಲೆ ಎಸ್.ಮಂಜು, ಡಿಡಬ್ಲ್ಯೂಸಿಡಿ ಉಪ ನಿರ್ದೇಶಕಿ ಸುಮಂಗಲಾ ಮಾಲಾಪುರ, ಬೆಂಗಳೂರು ಉತ್ತರ-2 ಬಿಇಒ ಲತಾಮಣಿ, ಸ್ಪರ್ಶ ಮ್ಯಾನೇಜಿಂಗ್ ಟ್ರಸ್ಟಿ ಗೋಪಿನಾಥ್.ಆರ್, ಪ್ರಾಜೆಕ್ಟ್ ಹೆಡ್ ಡಾ.ನೀಲಿಮಾ ಅಭಿಯಾನ ಉದ್ಘಾಟನೆಯಲ್ಲಿ ಪಾಲ್ಗೊಳ್ಳಲಿದ್ದಾರೆ

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ಮೇ 23ರಂದು ರಾಜ್ಯಕ್ಕೆ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬೀನ್ | ಖಾಸಗಿ ರೆಸಾರ್ಟ್‌ನಲ್ಲಿ ಮಹತ್ವದ ಸಭೆ

ಬಿಜೆಪಿ ಪಕ್ಷದೊಳಗಿನ ಗೊಂದಲಕ್ಕೆ ಬ್ರೇಕ್?

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಮುಂಬರುವ 2028ರ ವಿಧಾನಸಭೆ ಚುನಾವಣೆಗೆ ಸಿದ್ಧತೆ ಹಾಗೂ ರಾಜ್ಯಗಳಲ್ಲಿ ಪಕ್ಷದಲ್ಲಿ ಅಮೂಲಾಗ್ರ ಬದಲಾವಣೆ ಕುರಿತು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬೀನ್ ಹಾಗೂ ಕೇಂದ್ರ ಸಚಿವ ಭೂಪೇಂದ್ರ ಯಾದವ್ ನೇತೃತ್ವದ ಬಿಜೆಪಿ ನಿಯೋಗ ಮೇ 23ರಂದು ರಾಜ್ಯಕ್ಕೆ ಭೇಟಿ ನೀಡುತ್ತಿದ್ದು ಪಕ್ಷದೊಳಗಿನ ಗೊಂದಲಗಳು ಬಗೆಹರಿಯುವ ಸಂಭವವಿದೆ.

ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ನಂತರ ನಿತಿನ್ ನಬೀನ್ ಅವರು ಮೊದಲ ಬಾರಿಗೆ ಮೇ23ರಂದು ಬೆಂಗಳೂರಿಗೆ ಆಗಮಿಸುತ್ತಿದ್ದಾರೆ. ಯಲಹಂಕ ಸಮೀಪದ ಖಾಸಗಿ ರೆಸಾರ್ಟ್‌ನಲ್ಲಿ ಪಕ್ಷದ ಕೋರ್ ಕಮಿಟಿ ಸಭೆ ನಡೆಸಲಿದ್ದು, ಅಲ್ಲದೆ ರಾಜ್ಯ ಸರಕಾರದ ವಿರುದ್ಧ ಹೋರಾಟ ನಡೆಸುವ ಬಗ್ಗೆಯೂ ರಾಜ್ಯ ನಾಯಕರಿಗೆ ಸಲಹೆ ನೀಡಲಿದ್ದಾರೆ ಎನ್ನಲಿದ್ದಾರೆ. ಇದರ ಜೊತೆಗೆ ಕೇಂದ್ರ ಅರಣ್ಯ ಮತ್ತು ಪರಿಸರ ಸಚಿವ ಹಾಗೂ ಬಿಜೆಪಿಯ ಚುನಾವಣಾ ತಂತ್ರಗಾರಿಕೆಗೆ ಹೆಸರುವಾಸಿಯಾಗಿರುವ ಭೂಪೇಂದ್ರ ಯಾದವ್ ಹಾಗೂ ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ತರುಣ್ ಚುಗ್ ಮೇ 25ರಂದು ಬೆಂಗಳೂರಿಗೆ ಆಗಮಿಸಲಿದ್ದು, ಪಕ್ಷದ ಪ್ರಮುಖ ನಾಯಕರನ್ನು ಭೇಟಿಯಾಗಲಿದ್ದಾರೆ. ಇದಾದ ನಂತರ ನರೇಂದ್ರ ಮೋದಿ ಪ್ರಧಾನಮಂತ್ರಿಗಳಾಗಿ 12 ವರ್ಷ ಪೂರೈಸುತ್ತಿರುವ ಹಿನ್ನೆಲೆ ರಾಜ್ಯ ಬಿಜೆಪಿ ಘಟಕ ವಿಶೇಷ ಕಾರ್ಯಕ್ರಮ ಹಮ್ಮಿಕೊಂಡಿದೆ.

ಪಕ್ಷ ಹಮ್ಮಿಕೊಂಡಿರುವ ವಿಶೇಷ ಕಾರ್ಯಕ್ರಮ ಹಿನ್ನೆಲೆ ಪೂರ್ವಭಾವಿ ಸಿದ್ಧತೆ ಪರಿಶೀಲಿಸಲು ಬುಧವಾರ ಬೆಂಗಳೂರಿಗೆ ಆಗಮಿಸಿದ ಪಕ್ಷದ ರಾಷ್ಟ್ರೀಯ ಜಂಟಿ ಸಂಘಟನಾ ಕಾರ್ಯದರ್ಶಿ ಶಿವಪ್ರಕಾಶ್ ರನ್ನುವಿಮಾನ ನಿಲ್ದಾಣದಲ್ಲಿ ಬಿ.ವೈ.ವಿಜಯೇಂದ್ರ ಸ್ವಾಗತಿಸಿದರು. ಸಂಸದ ಗೋವಿಂದ ಕಾರಜೋಳ, ಮಾಜಿ ಸಚಿವರಾದ ಪಿ.ರಾಜೀವ್, ಬಿ.ಸಿ.ಪಾಟೀಲ್ ಉಪಸ್ಥಿತರಿದ್ದರು.

ಕೋರ್ ಕಮಿಟಿ ಬದಲಾವಣೆ ?

ರಾಜ್ಯ ಬಿಜೆಪಿಯ ನಿರ್ಣಾಯಕ ಸಮಿತಿಯಾದ ಕೋರ್ ಕಮಿಟಿ ಶೀಘ್ರದಲ್ಲೆ ಪುನಾರಚನೆಗೊಳ್ಳಲಿದ್ದು, ಹಾಲಿ ಇರುವ ಇಬ್ಬರು ಪ್ರಮುಖ ಸದಸ್ಯರನ್ನು ಕೈಬಿಟ್ಟು ಹೊಸ ಮುಖಗಳಿಗೆ ಮನ್ನಣೆ ನೀಡುವ ಸಾಧ್ಯತೆ ಇದೆ ಎನ್ನಲಾಗಿದೆ. ಪುನಾರಚನೆಗೊಳ್ಳಲಿರುವ ಕೋರ್ ಕಮಿಟಿ ಸೇರಲು ಬಿಜೆಪಿಯ ಹಿರಿಯ ನಾಯಕರು ಭಾರೀ ಕಸರತ್ತು ನಡೆಸುತ್ತಿದ್ದಾರೆ. ಸಂಸದ ಜಗದೀಶ್ ಶೆಟ್ಟರ್, ಕೇಂದ್ರ ಸಚಿವರಾದ ವಿ.ಸೋಮಣ್ಣ ಹಾಗೂ ಶೋಭಾ ಕರಂದ್ಲಾಜೆ ಅವರು ಸಮಿತಿಯ ಸದಸ್ಯರಾಗಲು ತೀವ್ರ ಉತ್ಸುಕತೆ ಹೊಂದಿದ್ದಾರೆ. ಇದರೊಂದಿಗೆ ಶಾಸಕ ಹಾಗೂ ರಾಜ್ಯ ಪ್ರಧಾನ ಕಾರ್ಯದರ್ಶಿ ವಿ.ಸುನೀಲ್ ಕುಮಾರ್ ಹೆಸರೂ ಕೇಳಿ ಬರುತ್ತಿದೆ.

ನಿರ್ಧಾರವಾಗಲಿದೆಯೇ ಹೊಸ ಅಧ್ಯಕ್ಷರು?

ಹಾಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವಧಿ ಮುಂದುವರಿಸಬೇಕೇ? ಇಲ್ಲವೇ ಈ ಹುದ್ದೆ ಬೇರೆಯವರಿಗೆ ನೀಡಬೇಕೇ? ಪ್ರಧಾನ ಕಾರ್ಯದರ್ಶಿಗಳು, ಕಾರ್ಯದರ್ಶಿಗಳು, ಪದಾಧಿಕಾರಿಗಳ ನೇಮಕಾತಿ, ಪಕ್ಷ ಸಂಘಟನೆ ಸೇರಿದಂತೆ ಪ್ರಚಲಿತ ವಿದ್ಯಮಾನಗಳ ಬಗ್ಗೆ ನಿಯೋಗ ಅಭಿಪ್ರಾಯ ಸಂಗ್ರಹಿಸಲಿದೆ. ಬಿಜೆಪಿಯಲ್ಲಿ ಒಂದು ಗುಂಪು ರಾಜ್ಯಾಧ್ಯಕ್ಷ ವಿಜಯೇಂದ್ರ ಅವರನ್ನು 2028ರ ವಿಧಾನಸಭೆ ಚುನಾವಣೆವರೆಗೂ ಮುಂದುವರೆಸಲಿ ಎಂಬ ನಿರ್ಧಾರಕ್ಕೆ ಬಂದಿದ್ದರೆ ಮತ್ತೊಂದು ಗುಂಪು ಪಕ್ಷದ ಹಿರಿಯರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೇ ಸಂಘಟನೆಗೆ ಒತ್ತು ನೀಡದಿರುವ ಕಾರಣ ಆರ್‌ಎಸ್‌ಎಸ್ ಮತ್ತು ಬಿಜೆಪಿ ನಡುವೆ ಸಮನ್ವಯ ಸಾಧಿಸುವ ಹಿಂದುಳಿದ ವರ್ಗದ ಯುವ ನಾಯಕನಿಗೆ ಜವಾಬ್ದಾರಿ ನೀಡಬೇಕೆಂಬ ಅಭಿಪ್ರಾಯವೂ ಇದೆ. ಯಡಿಯೂರಪ್ಪ ಅಭಿಮಾನೋತ್ಸವ ನಡೆಸಿ ಬಿಜೆಪಿ ತನ್ನ ಇರುವಿಕೆ ತೋರಿಸಿಕೊಂಡಿದೆ. ಇದೇ ವೇಳೆ ಯಡಿಯೂರಪ್ಪ ಅವರ 50 ವರ್ಷದ ರಾಜಕೀಯ ಜೀವನದ ಕಾರ್ಯಕ್ರಮದಲ್ಲಿ ರಾಜ್ಯದ ಮಠಾಧಿಪತಿಗಳು ಒಂದೇ ವೇದಿಕೆಗೆ ಬರಲು ಬಿಎಸ್‌ವೈ ಅವರೇ ಕಾರಣ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಶ್ಲಾಘಿಸಿದ್ದರು. ಇದು ಪರೋಕ್ಷವಾಗಿ ವಿಜಯೇಂದ್ರ ಅವರಿಗೆ ನೈತಿಕವಾಗಿ ದೊಡ್ಡ ಶಕ್ತಿ ತುಂಬಿದೆ ಎನ್ನಲಾಗಿದೆ.

ದೇಶದ ವಿವಿಧ ಕಡೆ ತೀವ್ರ ಬಿಸಿಲಿನ ಕಾವು

ದೆಹಲಿ: ಭಾರತದ ಬಹುತೇಕ ಭಾಗಗಳು ತೀವ್ರತರದ ಉಷ್ಣಗಾಳಿ ಹಾಗೂ ಬಿಸಿಲಿಗೆ ತತ್ತರಿಸಿ ಹೋಗಿವೆ. ದೇಶದ ಪ್ರಮುಖ ನಗರಗಳಲ್ಲಿ ತಾಪಮಾನವು ಸಾಮಾನ್ಯಕ್ಕಿಂತ ಅತ್ಯಂತ ಹೆಚ್ಚಾಗಿದೆ. ದೆಹಲಿಯಲ್ಲಿ 42ರಿಂದ 44 ಡಿಗ್ರಿ ಸೆಲ್ಸಿಯಸ್ ದಾಖಲಾಗಿದ್ದರೆ, ಅಹಮದಾಬಾದ್ ಮತ್ತು ನಾಗ್ಪುರದಲ್ಲಿ 41ರಿಂದ 43 ಡಿಗ್ರಿ ಸೆಲ್ಸಿಯಸ್, ಜೈಪುರ ಹಾಗೂ ಲಖನೌನಲ್ಲಿ 40ರಿಂದ 41 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿದೆ.

ಉತ್ತರ ಪ್ರದೇಶದ ಬಂದಾ ಜಿಲ್ಲೆಯಲ್ಲಿ ಸತತವಾಗಿ ತಾಪಮಾನವು ಭೀಕರ 42.6 ಡಿಗ್ರಿ ಸೆಲ್ಸಿಯಸ್ ದಾಟಿದೆ. ಮಹಾರಾಷ್ಟ್ರದ ವಿದರ್ಭ ಸೇರಿದಂತೆ ದಕ್ಷಿಣದ ಭಾಗಗಳಲ್ಲೂ ಇದೇ ರೀತಿಯ ಕಠಿಣ ಪರಿಸ್ಥಿತಿ ಇದೆ. ಹೈದರಾಬಾದ್ ಮತ್ತು ಚೆನ್ನೈನಲ್ಲಿ ತಾಪಮಾನವು 35 ಡಿಗ್ರಿ ಸೆಲ್ಸಿಯಸ್‌ಗಿಂತ ಹೆಚ್ಚಿದ್ದರೆ, ಕರಾವಳಿ ಪ್ರದೇಶವಾದ ಮುಂಬೈ ಮತ್ತು ಕೋಲ್ಕತಾದಲ್ಲಿ ತಾಪಮಾನ 30 ಡಿಗ್ರಿ ಆಸುಪಾಸಿನಲ್ಲಿದೆ. ಇನ್ನು ಕೆಲವು ದಿನಗಳ ಕಾಲ ತೀವ್ರ ಉಷ್ಣಗಾಳಿ ಮುಂದುವರಿಯಲಿದ್ದು, ಪಶ್ಚಿಮದ ಮಾರುತಗಳು ಹಾಗೂ ಪ್ರಾದೇಶಿಕ ಚಂಡಮಾರುತಗಳು ಬರುವ ಮುನ್ನ ಕೆಲವು ಭಾಗಗಳಲ್ಲಿ ತಾಪಮಾನ 45 ಡಿಗ್ರಿ ಸೆಲ್ಸಿಯಸ್ ದಾಟಬಹುದು ಎನ್ನಲಾ ಗುತ್ತಿದೆ.

ಡಿಸೆಂಬರ್‌ರೊಳಗೆ ಕಾಮಗಾರಿ ಪೂರ್ಣಗೊಳಿಸಿ

ಬೆಂಗಳೂರು: ಎಲ್ಲಾ ಯೋಜಿತ ಕಾಮಗಾರಿಗಳನ್ನು ಡಿಸೆಂಬರ್ 2026ರೊಳಗೆ ಪೂರ್ಣಗೊಳಿಸುವಂತೆ ಉತ್ತರ ನಗರ ಪಾಲಿಕೆ ಆಯುಕ್ತ ಪೊಮ್ಮಲ ಸುನೀಲ್ ಕುಮಾರ್ ಅಧಿಕಾರಿಗಳಿಗೆ ಸೂಚಿಸಿದರು.

ಬಜೆಟ್ ಟು ಆ್ಯಕ್ಷನ್ ಕಾರ್ಯಾಗಾರದ ಅಂಗವಾಗಿ ಸಿದ್ಧಪಡಿಸಲಾಗುತ್ತಿರುವ ಕರಡು ಕಾರ್ಯಯೋಜನೆಗಳ ಸಮಗ್ರ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಸಭೆಯಲ್ಲಿ ಆಕ್ಟಿವ್ ಮೊಬಿಲಿಟಿ, ಕ್ಲೈಮೇಟ್ ಆಕ್ಷನ್ ಪ್ಲಾನ್, ಕೆರೆಗಳ ಅಭಿವೃದ್ಧಿ, ಬ್ಯಾಂಬೂ ಸಿಟಿ ಯೋಜನೆ, ಸರಕಾರಿ ಕಟ್ಟಡಗಳ ಮೇಲೆ ಸೌರಶಕ್ತಿ ಅಳವಡಿಕೆ, ಉದ್ಯಾನವನ ಹಾಗೂ ಸಾರ್ವಜನಿಕ ಸ್ಥಳಗಳ ಅಭಿವೃದ್ಧಿ ಸೇರಿದಂತೆ ವಿವಿಧ ಯೋಜನೆಗಳ ಕುರಿತು ಚರ್ಚೆ ನಡೆಯಿತು. ನಗರದ ಪ್ರತಿಯೊಂದು ವಾರ್ಡ್‌ನಲ್ಲಿ 10 ಕಿ.ಮೀ ಉದ್ದದ ಪಾದಚಾರಿ ಮಾರ್ಗಗಳನ್ನು ಅಡೆತಡೆಯಿಲ್ಲದ, ಸ್ವಚ್ಛ ಹಾಗೂ ಸುಂದರ ವಾಕಬಲ್ ಫುಟ್‌ಬಾತ್‌ಗಳಾಗಿ ಅಭಿವೃದ್ಧಿಪಡಿಸುವ ಯೋಜನೆಗೆ ಸಭೆಯಲ್ಲಿ ಆದ್ಯತೆ ನೀಡಲಾಯಿತು ಎಂದರು.

ಸಂಸ್ಥೆಗಳು ಸಲ್ಲಿಸುವ ಸೂಕ್ತ ಯೋಜನೆಗಳಿಗೆ ಪಾಲಿಕೆಯ ವತಿಯಿಂದ ಅಗತ್ಯ ಬೆಂಬಲ ಹಾಗೂ ಅನುದಾನ ನೀಡುವ ಕುರಿತು ಚರ್ಚೆ ನಡೆಯಿತು. ಆಕ್ಷನ್ ಪ್ಲಾನ್ ಅಡಿಯಲ್ಲಿ ಪ್ರತಿ ಕಾರ್ಯಪಾಲಕ ಅಭಿಯಂತರರಿಗೆ ಸುಮಾರು 25 ಲಕ್ಷ ರು. ಅನುದಾನ ನೀಡಲಾಗುತ್ತಿದ್ದು, ಅದರಡಿ ವಿವಿಧ ಸಂಘ-ಸಂಸ್ಥೆಗಳ ಯೋಜನೆ ಅನುಷ್ಠಾನಗೊಳಿಸಲು ಅವಕಾಶವಿದೆ. ನಗರಾಭಿವೃದ್ಧಿಗೆ ಸಾರ್ವಜನಿಕರು, ಜನಪ್ರತಿನಿಧಿಗಳು, ಸಂಘ-ಸಂಸ್ಥೆಗಳು ಹಾಗೂ ಪಾಲಿಕೆ ಅಧಿಕಾರಿಗಳು ಸಮನ್ವಯದಿಂದ ಕಾರ್ಯನಿರ್ವಹಿಸಬೇಕು ಎಂದರು. ಸಭೆಯಲ್ಲಿ ಅಪರ ಆಯುಕ್ತರಾದ ಆರ್.ಲತಾ, ಪಲ್ಲವಿ, ಉಪ ನಿಯಂತ್ರಕರು (ಹಣಕಾಸು) ನಾಗೇಶ್, ಮುಖ್ಯ ಅಭಿಯಂತರರಾದ ರಾಘವೇಂದ್ರ ಪ್ರಸಾದ್ ಹಾಗೂ ಯಮುನಾ ಸೇರಿದಂತೆ ವಿವಿಧ ಅಧಿಕಾರಿಗಳು ಮತ್ತು ಸಂಘ-ಸಂಸ್ಥೆಗಳ ಪ್ರತಿನಿಧಿಗಳು ಉಪಸ್ಥಿತರಿದ್ದರು.

ಸಿಲ್ವರ್ ಲೈನ್ ಘೋಷಿಸಿದ್ದ ಎಲ್‌ಡಿಎಫ್ | ಪರಿಸರದ ಮೇಲೆ ಭೀಕರ ಪರಿಣಾಮ ಸಾಧ್ಯತೆ ಹಿನ್ನೆಲೆ

ಕೇರಳದ ಹೈಸ್ಪೀಡ್ ರೈಲು ಯೋಜನೆ ರದ್ದು

ತಿರುವನಂತಪುರಂ: ಕೇರಳದ ಮುಖ್ಯಮಂತ್ರಿ ವಿ. ಡಿ. ಸತೀಶನ್ ಅವರ ನೇತೃತ್ವದ ಸಚಿವ ಸಂಪುಟವು ವಿವಾದಿತ ಸಿಲ್ವರ್‌ಲೈನ್ ಯೋಜನೆಯನ್ನು ಅಧಿಕೃತವಾಗಿ ರದ್ದುಗೊಳಿಸುವ ನಿರ್ಧಾರವನ್ನು ಬುಧವಾರ ಪ್ರಕಟಿಸಿದೆ. ಹಿಂದಿನ ಪಿಣರಾಯಿ ವಿಜಯನ್ ನೇತೃತ್ವದ ಎಲ್‌ಡಿಎಫ್ ಸರಕಾರ ಜಾರಿಗೆ ತಂದಿದ್ದ ಈ ಸೆಮಿ-ಹೈಸ್ಪೀಡ್ ರೈಲು ಯೋಜನೆಗೆ ನೂತನ ಮುಖ್ಯಮಂತ್ರಿ ಕೆಂಪು ನಿಶಾನೆ ತೋರಿಸಿದ್ದಾರೆ.

ವಿ. ಡಿ. ಸತೀಶನ್ ಅವರು ಸುದ್ದಿಗೋಷ್ಠಿಯಲ್ಲಿ, ಈ ರೈಲು ಯೋಜನೆ ಪರಿಸರದ ಮೇಲೆ ಭೀಕರ ಪರಿಣಾಮ ಬೀರಲಿದ್ದು, ಪ್ರವಾಹ ಪರಿಸ್ಥಿತಿಗಳನ್ನು ಎದುರಿಸುತ್ತಿರುವ ಕೇರಳಕ್ಕೆ ಇದು ಸೂಕ್ತವಲ್ಲ ಎಂದಿದ್ದಾರೆ. ಸುಮಾರು 64 ಸಾವಿರ ಕೋಟಿ ರು. ಅಧಿಕ ವೆಚ್ಚದ ಈ ಯೋಜನೆಗೆ ಅಂತಾರಾಷ್ಟ್ರೀಯ ಸಾಲಗಳನ್ನು ಅವಲಂಬಿಸಬೇಕಾಗಿದ್ದು, ಇದು ರಾಜ್ಯವನ್ನು ಭಾರೀ ಸಾಲದ ಸುಳಿಗೆ ತಳ್ಳುತ್ತದೆ ಎಂದು ತಿಳಿಸಿದ್ದಾರೆ. ಯೋಜನೆಗಾಗಿ ಜಮೀನು ಗುರುತಿಸಿ ಹೊರಡಿಸಲಾಗಿದ್ದ ಎಲ್ಲಾ ಭೂಸ್ವಾಧೀನ ನಿಯಮಗಳು ಮತ್ತು ಪ್ರಾಥಮಿಕ ಆದೇಶಗಳನ್ನು ಸಂಪೂರ್ಣವಾಗಿ ಹಿಂಪಡೆಯಲು ಬುಧವಾರ ನಡೆದ ಸಚಿವ ಸಂಪುಟ ನಿರ್ಧರಿಸಿದೆ. ಇದರಿಂದಾಗಿ ವರ್ಷಗಳಿಂದ ತಮ್ಮ ಭೂಮಿಯನ್ನು ಮಾರಾಟ ಮಾಡಲು ಅಥವಾ ಅಡವಿಡಲು ಸಾಧ್ಯವಾಗದೆ ಸಂಕಷ್ಟದಲ್ಲಿದ್ದ ಸಾವಿರಾರು ಮಂದಿಗೆ ಪರಿಹಾರ ಸಿಕ್ಕಿದಂತಾಗಿದೆ. ರೈಲು ಮಾರ್ಗ ಗುರುತಿಸಲು ಸಾರ್ವಜನಿಕರ ಖಾಸಗಿ ಆಸ್ತಿ ಮತ್ತು ವಸತಿ ಪ್ರದೇಶಗಳಲ್ಲಿ ಅಳವಡಿಸಲಾಗಿದ್ದ ವಿವಾದಿತ ಹಳದಿ ಸರ್ವೇ ಕಲ್ಲುಗಳನ್ನು ತಕ್ಷಣವೇ ತೆರವುಗೊಳಿಸುವಂತೆ ಕಂದಾಯ ಇಲಾಖೆಗೆ ಸೂಚನೆ ನೀಡಲಾಗಿದೆ.ಕೆ-ರೈಲು ಯೋಜನೆ ವಿರೋಧಿಸಿ ರಾಜ್ಯಾದ್ಯಂತ ತೀವ್ರ ಹೋರಾಟ ಮತ್ತು ಪ್ರತಿಭಟನೆ ನಡೆಸಿದ್ದ ಸಾರ್ವಜನಿಕರು ಹಾಗೂ ರೈತರ ಮೇಲಿನ ಪೊಲೀಸ್ ಪ್ರಕರಣಗಳನ್ನು ಹಿಂಪಡೆಯಲು ಕೋರ್ಟ್‌ಗೆ ಶಿಫಾರಸು ಮಾಡುವುದಾಗಿ ಹೊಸ ಸರಕಾರ ಹೇಳಿದೆ

ಏನಿದು ಕೆ-ರೈಲು ಯೋಜನೆ?

ಕೇರಳ ಸಿಲ್ವರ್‌ಲೈನ್ ಯೋಜನೆ, ಕೆ-ರೈಲು ಎಂದೇ ಅಲ್ಲಿ ಜನಜನಿತವಾಗಿತ್ತು. ಅಲ್ಲಿನ ದಕ್ಷಿಣ ತುದಿಯ ತಿರುವನಂತಪುರಂನಿಂದ ಉತ್ತರ ತುದಿಯ ಕಾಸರಗೋಡು ನಡುವಿನ ಪ್ರಯಾಣದ ಅವಧಿಯನ್ನು ಕಡಿತಗೊಳಿಸುವುದು ಅದರ ಮುಖ್ಯ ಗುರಿಯಾಗಿತ್ತು. ಪ್ರಸ್ತುತ ರೈಲು ಅಥವಾ ರಸ್ತೆ ಮೂಲಕ ಈ ದೂರವನ್ನು ಕ್ರಮಿಸಲು 12ರಿಂದ 14 ಗಂಟೆ ಬೇಕು. ಕೆ-ರೈಲು ಯೋಜನೆಯ ಉದ್ದೇಶ ಕೇವಲ 4 ಗಂಟೆಗಳ ಅವಧಿಯದ್ದಾಗಿತ್ತು. ಸುಮಾರು 529.45 ಕಿ.ಮೀ. ಉದ್ದದ ಹಳಿ ನಿರ್ಮಿಸಿ ಗಂಟೆಗೆ ಗರಿಷ್ಠ 200 ಕಿ.ಮೀ, ವೇಗದಲ್ಲಿ ರೈಲು ಚಲಿಸುವಂತೆ ಯೋಜನೆ ಅದಾಗಿತ್ತು. ಕೇಂದ್ರ ಸರಕಾರ ಈ ಯೋಜನೆಗೆ ಅಗತ್ಯ ಒಪ್ಪಿಗೆಗಳನ್ನು ನೀಡಿರಲಿಲ್ಲ.

ಅನುಮತಿಯಿಲ್ಲದೆ ರಸ್ತೆ ಅಗೆದರೆ ದೂರು ದಾಖಲಿಸಿ

ಬೆಂಗಳೂರು: ಅನುಮತಿಯಿಲ್ಲದೆ ರಸ್ತೆ ಅಗೆದರೆ ದೂರು ದಾಖಲಿಸಿ ಕಠಿಣ ಕ್ರಮ ಕೈಗೊಳ್ಳುವಂತೆ ಪೂರ್ವ ನಗರ ಪಾಲಿಕೆ ಆಯುಕ್ತ ಡಿ.ಎಸ್. ರಮೇಶ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಮಳೆಗಾಲ ಪೂರ್ವಸಿದ್ಧತೆ, ಕೆರೆಗಳ ಸಂರಕ್ಷಣೆ ಹಾಗೂ ಪ್ರವಾಹ ನಿಯಂತ್ರಣ ಕ್ರಮಗಳ ಕುರಿತು ನಡೆಸಿದ ಸಮನ್ವಯ ಸಭೆಯಲ್ಲಿ ಮಾತನಾಡಿದ ಅವರು, ನಗರ ಪಾಲಿಕೆ ಅನುಮತಿ ಪಡೆಯದೆ ರಸ್ತೆ ಅಗೆದು ಕಾಮಗಾರಿ ನಡೆಸುವ ವಿವಿಧ ಇಲಾಖೆಗಳ ವಿರುದ್ಧ ಅಗತ್ಯವಿದ್ದರೆ ಎಫ್‌ಐಆರ್ ದಾಖಲಿಸುವಂತೆ ಎಚ್ಚರಿಕೆ ನೀಡಿದರು. ಐಟಿಪಿಎಲ್ ರಸ್ತೆ, ದೇವಸಂದ್ರ ರಸ್ತೆ, ಸರ್ಜಾಪುರ ರಸ್ತೆ ಹಾಗೂ ದೇವರಬೀಸನಹಳ್ಳಿ ಪ್ರದೇಶಗಳಲ್ಲಿ ಹೊಸದಾಗಿ ಡಾಂಬರೀಕರಣಗೊಂಡ ರಸ್ತೆಗಳ ಮಧ್ಯಭಾಗದಲ್ಲಿ ಅಗೆತ ನಡೆಸುತ್ತಿರುವ ಬಗ್ಗೆ ಮಾಹಿತಿ ಇದೆ. ಈ ವೇಳೆ ಕೌದೇನಹಳ್ಳಿ, ವೆಂಗಯ್ಯನ ಕೆರೆ ಹಾಗೂ ದೇವರಬೀಸನಹಳ್ಳಿ ಕೆರೆಗಳಿಗೆ ಸಂಸ್ಕರಿತ ನೀರು ಹರಿಸುವ ಯೋಜನೆಗಳ ಪ್ರಗತಿ ಪರಿಶೀಲಿಸಲಾಯಿತು. ಕೌದೇನಹಳ್ಳಿ ಕೆರೆಗೆ ಎಸ್‌ಟಿಪಿಯಿಂದ ಸಂಸ್ಕರಿತ ನೀರು ಹರಿಸಲು ಟ್ರೆಂಚ್‌ಲೆಸ್ ತಂತ್ರಜ್ಞಾನ ಬಳಸಿ ಮುಂದಿನ 20 ದಿನಗಳೊಳಗೆ ಪೈಪ್‌ಲೈನ್ ಕಾಮಗಾರಿ ಪೂರ್ಣಗೊಳಿಸುವಂತೆ ಜಲಮಂಡಳಿ ಅಧಿಕಾರಿಗಳಿಗೆ ಸೂಚಿಸಲಾಯಿತು. ವೆಂಗಯ್ಯನ ಕೆರೆ ಪ್ರದೇಶದಲ್ಲಿ ಸಂಸ್ಕರಿತ ನೀರು ಮತ್ತು ಅಶುದ್ಧ ನೀರು ಒಂದೇ ಮಾರ್ಗದಲ್ಲಿ ಮಿಶ್ರಣಗೊಂಡು ಕೆರೆಗೆ ಸೇರುತ್ತಿರುವ ಹಿನ್ನೆಲೆಯಲ್ಲಿ, ಸಂಸ್ಕರಿತ ನೀರಿಗೆ ಪ್ರತ್ಯೇಕ ಪೈಪ್‌ಲೈನ್ ಅಳವಡಿಸಿ ಅಶುದ್ಧ ನೀರನ್ನು ಡೈವರ್ಷನ್ ಮೂಲಕ ಹರಿಸುವಂತೆ ನಿರ್ದೇಶನ ನೀಡಲಾಯಿತು. ದೇವರಬೀಸನಹಳ್ಳಿ ಪ್ರದೇಶದ ಎಸ್‌ಟಿಪಿ ನಿರ್ವಹಣೆ ಹಾಗೂ ಒಳಚರಂಡಿ ನೀರಿನ ಸಂಸ್ಕರಣೆ ಕುರಿತೂ ಚರ್ಚೆ ನಡೆದಿದ್ದು, ಸಂಸ್ಕರಿಸಿದ ನೀರನ್ನು ಕೆರೆಗೆ ಬಿಡುವ ವ್ಯವಸ್ಥೆ ಕಲ್ಪಿಸಲು ಅಧಿಕಾರಿಗಳಿಗೆ ಸೂಚಿಸಲಾಯಿತು. ಸಭೆಯಲ್ಲಿ ಜಲಮಂಡಳಿ, ಬೆಸ್ಕಾಂ, ಸಂಚಾರಿ ಪೊಲೀಸ್, ಅಗ್ನಿಶಾಮಕ ದಳ, ಅರಣ್ಯ ಇಲಾಖೆ ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು ಭಾಗವಹಿಸಿದ್ದರು.



ಸಮನ್ವಯ ಸಭೆಯಲ್ಲಿ ಪೂರ್ವ ನಗರ ಪಾಲಿಕೆ ಆಯುಕ್ತ ಡಿ.ಎಸ್. ರಮೇಶ್ ಮಾತನಾಡಿದರು.

> ಮಳೆಗಾಲದಲ್ಲಿ ತುರ್ತು ಸ್ಪಂದನಾ ತಂಡಗಳನ್ನು ಸಜ್ಜುಗೊಳಿಸಿ, ಕಂಟ್ರೋಲ್ ರೂಮ್‌ನಿಂದ ದೂರು ಬಂದ 10 ರಿಂದ 15 ನಿಮಿಷಗಳೊಳಗೆ ಸ್ಥಳಕ್ಕೆ ತೆರಳಿ ಸಮಸ್ಯೆ ಪರಿಹರಿಸಬೇಕು.
> **ಡಿ.ಎಸ್.ರಮೇಶ್,** ಪಾಲಿಕೆ ಆಯುಕ್ತ

ಎಲ್‌ಇಡಿ ಪರದೆ ಮೊಬೈಲ್ ವ್ಯಾನ್ ಮೂಲಕ ಪ್ರಚಾರ ಅಭಿಯಾನ | ಗೌರವ್ ಗುಪ್ತ ಚಾಲನೆ

ಪಿಎಂ ಸೂರ್ಯ ಘರ್‌ಗೆ ರಾಜ್ಯವ್ಯಾಪಿ ಪ್ರಚಾರ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಪಿಎಂ ಸೂರ್ಯ ಘರ್ ಮುಫ್ತ್ ಬಿಜ್ಲಿ ಯೋಜನೆಯ ರಾಜ್ಯವ್ಯಾಪಿ ಪ್ರಚಾರಕ್ಕಾಗಿ ಎಲ್‌ಇಡಿ ಮೊಬೈಲ್ ವ್ಯಾನ್ ಅಭಿಯಾನಕ್ಕೆ ಇಂಧನ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ ಬೆಸ್ಕಾಂ ಕಾರ್ಪೊರೇಟ್ ಕಚೇರಿಯಲ್ಲಿ ಬುಧವಾರ ಅಧಿಕೃತ ಚಾಲನೆ ನೀಡಿದರು.

ಈ ವೇಳೆ ಇಂಧನ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ ಮಾತನಾಡಿ, ಸೌರ ಮಾಸ ಮೇ 2026 ಉಪಕ್ರಮದ ಭಾಗವಾಗಿ, ಪ್ರಧಾನ ಮಂತ್ರಿ ಸೂರ್ಯ ಘರ್ ಯೋಜನೆಯಡಿ ಮೇಲ್ಛಾವಣಿ ಸೌರ ಘಟಕ ವ್ಯವಸ್ಥೆ ಬಗ್ಗೆ ಮಾಹಿತಿ ಒದಗಿಸುವ ಜತೆಗೆ ಸೌರ ಫಲಕಗಳ ಅಳವಡಿಕೆಯನ್ನು ತ್ವರಿತಗೊಳಿಸಲು ರಾಜ್ಯದ ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಗಳಲ್ಲಿ ಈ ಎಲ್‌ಇಡಿ ಮೊಬೈಲ್ ವ್ಯಾನ್ ಅಭಿಯಾನ ನಡೆಯಲಿದ್ದು, 15 ದಿನಗಳ ಎಲ್‌ಇಡಿ ಮೊಬೈಲ್ ವ್ಯಾನ್ ಪ್ರಚಾರ ಅಭಿಯಾನವು ಬೆಂಗಳೂರು, ಮೈಸೂರು, ಮಂಗಳೂರು, ಹುಬ್ಬಳ್ಳಿ-ಧಾರವಾಡ ಮತ್ತು ಕಲಬುರಗಿ ಸೇರಿದಂತೆ ರಾಜ್ಯದ ಪ್ರಮುಖ ನಗರಗಳಲ್ಲಿ ನಡೆಯಲಿದೆ ಎಂದರು.

ಗೃಹ ಬಳಕೆದಾರರ ಮೇಲ್ಛಾವಣಿಯಲ್ಲಿ ಸೌರ ಫಲಕಗಳ ವಿದ್ಯುತ್ ಉತ್ಪಾದನಾ ಘಟಕ ಸ್ಥಾಪನೆ ಉತ್ತೇಜಿಸಲು ದೇಶಾದ್ಯಂತ ಪಿಎಂ ಸೂರ್ಯ ಘರ್ ಮುಫ್ತ್ ಬಿಜ್ಲಿ ಯೋಜನೆ ಕೇಂದ್ರದ ನವ ಮತ್ತು ನವೀಕರಿಸಬಹುದಾದ ಇಂಧನ ಸಚಿವಾಲಯ ಜಾರಿಗೊಳಿಸಿದೆ. ರಾಜ್ಯದಲ್ಲಿ ಈ ಯೋಜನೆಯ ಅನುಷ್ಠಾನಕ್ಕೆ ನೋಡಲ್ ಏಜೆನ್ಸಿಯಾಗಿರುವ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯು ಎಲ್ಲಾ ಎಸ್ಕಾಂ ವ್ಯಾಪ್ತಿಗಳಲ್ಲಿ ಯೋಜನೆಯ ಪ್ರಚಾರ, ಜನ ಸಂಪರ್ಕ ಚಟುವಟಿಕೆಗಳ ಸಮನ್ವಯ, ಮೇಲ್ವಿಚಾರಣೆ ಮತ್ತು ಯೋಜನೆ ಕಾರ್ಯಗತಗೊಳಿಸುವ ಜವಾಬ್ದಾರಿ ಹೊಂದಿದೆ ಎಂದರು. ಕಾರ್ಯಕ್ರಮದಲ್ಲಿ ಬೆಸ್ಕಾಂನ ಪ್ರಭಾರ ವ್ಯವಸ್ಥಾಪಕ ನಿರ್ದೇಶಕಿ ವೈಶಾಲಿ ಎಂ.ಎಲ್., ತಾಂತ್ರಿಕ ನಿರ್ದೇಶಕ ರಮೇಶ್ ಎಚ್.ಜೆ., ಡಿಎಸ್‌ಎಂ ವಿಭಾಗದ ಮುಖ್ಯ ಪ್ರಧಾನ ವ್ಯವಸ್ಥಾಪಕ ಸೈಯದ್ ಮಂಜೂರ್ ಹುಸೇನ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಎಲ್‌ಇಡಿ ಮೊಬೈಲ್ ವ್ಯಾನ್ ಅಭಿಯಾನಕ್ಕೆ ಇಂಧನ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ ಹಸಿರು ನಿಶಾನೆ ತೋರಿದರು. ಈ ವೇಳೆ ಬೆಸ್ಕಾಂನ ಪ್ರಭಾರ ವ್ಯವಸ್ಥಾಪಕ ನಿರ್ದೇಶಕಿ ವೈಶಾಲಿ ಎಂ.ಎಲ್., ತಾಂತ್ರಿಕ ನಿರ್ದೇಶಕ ರಮೇಶ್ ಎಚ್.ಜೆ., ಡಿಎಸ್‌ಎಂ ವಿಭಾಗದ ಮುಖ್ಯ ಪ್ರಧಾನ ವ್ಯವಸ್ಥಾಪಕ ಸೈಯದ್ ಮಂಜೂರ್ ಹುಸೇನ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

19,293 ಸೌರ ಘಟಕಗಳ ಸ್ಥಾಪನೆ

ಪಿಎಂ ಸೂರ್ಯ ಘರ್ ಮುಫ್ತ್ ಬಿಜ್ಲಿ ಯೋಜನೆಯಡಿ ರಾಜ್ಯದಲ್ಲಿ ಇದುವರೆಗೆ ಒಟ್ಟು 19,293 ಸೌರ ಘಟಕಗಳನ್ನು ಸ್ಥಾಪಿಸಲಾಗಿದ್ದು, 77.5 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಯಾಗುತ್ತಿದೆ. ಬೆಸ್ಕಾಂ ವ್ಯಾಪ್ತಿಯಲ್ಲಿ 7992 ಸೌರ ಘಟಕಗಳನ್ನು ಸ್ಥಾಪಿಸಿ, 35.57 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಮಾಡಲಾಗುತ್ತಿದೆ. ಸೂರ್ಯಘರ್ ಯೋಜನೆ ದೀರ್ಘಾವಧಿಗೆ ಹೆಚ್ಚು ಅನುಕೂಲವಾಗುತ್ತದೆ. ಹೆಚ್ಚುವರಿ ವಿದ್ಯುತ್ತನ್ನು ಗ್ರಿಡ್ ಗೆ ನೀಡಲು ಅವಕಾಶವಿದ್ದು, ಈ ವಿದ್ಯುತ್ತಿಗೆ ಎಸ್ಕಾಂಗಳ ವತಿಯಿಂದ ಹಣ ಪಾವತಿಸಲಾಗುತ್ತದೆ ಎಂಬುದನ್ನು ಜನರಿಗೆ ಮನವರಿಕೆ ಮಾಡಿಕೊಡಲು ಪ್ರಚಾರ ಅಭಿಯಾನ ನಡೆಸಲಾಗುತ್ತಿದೆ ಎಂದು ಗೌರವ್ ಗುಪ್ತ ತಿಳಿಸಿದರು.

> ಪರಿಸರ ಸ್ನೇಹಿಯಾದ ಸೂರ್ಯಘರ್ ಯೋಜನೆ ದೀರ್ಘಕಾಲ ಬಾಳಿಕೆ ಬರುತ್ತದೆ. ಹಣ ಉಳಿತಾಯ ಆಗುವುದರ ಜತೆಗೆ ಹೆಚ್ಚುವರಿ ವಿದ್ಯುತ್ ಉತ್ಪಾದಿಸಿ ಎಸ್ಕಾಂಗಳಿಗೆ ಮಾರಾಟ ಮಾಡಲು ಅವಕಾಶವಿರುವುದರಿಂದ ನಗರ ಪ್ರದೇಶಗಳಲ್ಲಿ ಜನರು ಒಲವು ತೋರುತ್ತಿದ್ದು, ಸಬ್ಸಿಡಿಯ ಲಾಭ ಪಡೆಯುತ್ತಿದ್ದಾರೆ. ಹೆಚ್ಚಿನ ಜನರು ಪ್ರಯೋಜನ ಪಡೆಯಬೇಕೆಂಬುದು ನಮ್ಮ ಉದ್ದೇಶ.
> **- ಕೆ.ಜೆ. ಜಾರ್ಜ್,** ಇಂಧನ ಸಚಿವ

ನಿರ್ದೇಶಕಿ ವೈಶಾಲಿ ಎಂ.ಎಲ್., ತಾಂತ್ರಿಕ ನಿರ್ದೇಶಕ ರಮೇಶ್ ಎಚ್.ಜೆ., ಡಿಎಸ್‌ಎಂ ವಿಭಾಗದ ಮುಖ್ಯ ಪ್ರಧಾನ ವ್ಯವಸ್ಥಾಪಕ ಸೈಯದ್ ಮಂಜೂರ್ ಹುಸೇನ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ವಿಶ್ವವಾಣಿ ವಿಶೇಷ

ಬೀದಿ ನಾಯಿ ದಾಳಿ ಪ್ರಕರಣ: ಸುಪ್ರೀಂಕೋರ್ಟ್‌ಗೂ ಸವಾಲು

2026ರ ಮೊದಲ ನಾಲ್ಕು ತಿಂಗಳಲ್ಲಿಯೇ ಕರ್ನಾಟಕಲ್ಲಿ 2 ಲಕ್ಷಕ್ಕೂ ಹೆಚ್ಚು ಬೀದಿ ನಾಯಿ ದಾಳಿ ಪ್ರಕರಣಗಳು ದಾಖಲಾಗಿವೆ.

ಭಾರತದಲ್ಲಿ ಬೀದಿ ನಾಯಿ ದಾಳಿ ಪ್ರಕರಣಗಳು ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿವೆ. 2024ರಲ್ಲಿ ಭಾರತದಲ್ಲಿ ಸುಮಾರು 37 ಲಕ್ಷಕ್ಕಿಂತ ಹೆಚ್ಚು ಬೀದಿ ನಾಯಿ ದಾಳಿ ಪ್ರಕರಣಗಳು ದಾಖಲಾಗಿವೆ. ದಿನಕ್ಕೆ ಸರಾಸರಿ 10,000ಕ್ಕೂ ಹೆಚ್ಚು ಪ್ರಕರಣಗಳು ವರದಿಯಾಗುತ್ತಿವೆ. ಇದೀಗ ಸುಪ್ರೀಂ ಕೋರ್ಟ್ ಅಕ್ರಮಣಕಾರಿ ಪ್ರವೃತ್ತಿಯ ಬೀದಿ ನಾಯಿಗಳನ್ನು ಕೊಲ್ಲಬಹುದು ಎಂದು ತಿಳಿಸಿದೆ. ಬೀದಿ ನಾಯಿಗಳ ಹಾವಳಿ ಕುರಿತ ಸಮಗ್ರ ಚಿತ್ರಣ ಇಲ್ಲಿದೆ.

ರೇಬೀಸ್?

- ರೇಬೀಸ್ ವೈರಸ್(ಆರ್‌ಎಬಿವಿ)ನಿಂದ ಬರುವ ಮಾರಕ ರೋಗ.
- ಲೈಸಾವೈರಸ್ ಎಂಬ ಗುಂಪು, ರಾಬ್ಡೋವಿರಿಡೆ ಕುಟುಂಬಕ್ಕೆ ಸೇರಿದೆ.

ರೇಬೀಸ್ ಲಕ್ಷಣಗಳು?

- ಜ್ವರ
- ತಲೆನೋವು
- ನೀರಿನ ಭಯ
- ಕೋಪ, ಗಾಬರಿ
- ಉಸಿರಾಟದ ತೊಂದರೆ
- ಪಾರ್ಶ್ವವಾಯು

ಭಾರತದಲ್ಲಿ ಎಷ್ಟು ಸಾವು?

- ಡಬ್ಲ್ಯುಎಚ್ಒ ಪ್ರಕಾರ ಭಾರತದಲ್ಲಿ ವರ್ಷಕ್ಕೆ ಸುಮಾರು 18,000-20,000 ರೇಬೀಸ್ ಸಾವುಗಳು ಸಂಭವಿಸುತ್ತವೆ.
- ಕೆಲವು ಹೊಸ ಅಧ್ಯಯನಗಳು ವರ್ಷಕ್ಕೆ 5,700ಕ್ಕೂ ಹೆಚ್ಚು ಮಾನವ ಸಾವುಗಳು ಸಂಭವಿಸಬಹುದು ಎಂದು ವರದಿ ನೀಡಿವೆ.
- 2024ರಲ್ಲಿ ಅಧಿಕೃತ ಅಂಕಿ-ಅಂಶಗಳ ಪ್ರಕಾರ ಕೇವಲ 54 ಸಾವುಗಳು ಮಾತ್ರ ದಾಖಲಾಗಿದ್ದವು.

ಕರ್ನಾಟಕದ ಪರಿಸ್ಥಿತಿ ಆತಂಕಕಾರಿ

- ಕರ್ನಾಟಕದಲ್ಲಿ ಬೀದಿ ನಾಯಿ ದಾಳಿ ಪ್ರಕರಣಗಳು ವೇಗವಾಗಿ ಏರಿಕೆಯಾಗುತ್ತಿವೆ.
- 2025ರ ಜನವರಿಯಿಂದ ಆಗಸ್ಟ್ ವರೆಗೆ ಸುಮಾರು 2.86 ಲಕ್ಷ ಬೀದಿ ನಾಯಿ ದಾಳಿ ಪ್ರಕರಣಗಳು ದಾಖಲಾಗಿವೆ.
- 2026ರ ಮೊದಲ ನಾಲ್ಕು ತಿಂಗಳಲ್ಲಿಯೇ 2 ಲಕ್ಷಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗಿವೆ.
- 2025ರಲ್ಲಿ ರಾಜ್ಯದಲ್ಲಿ ಸುಮಾರು 5 ಲಕ್ಷ ಪ್ರಕರಣಗಳು ಮತ್ತು 52 ರೇಬೀಸ್ ಸಾವುಗಳು ದಾಖಲಾಗಿವೆ.

ಎಲ್ಲಿ ಹೆಚ್ಚು ಪ್ರಕರಣಗಳು?



ಸರಕಾರದ ಕ್ರಮಗಳು?

ಭಾರತ ಸರಕಾರ:

- ರಾಷ್ಟ್ರೀಯ ರೇಬೀಸ್ ನಿಯಂತ್ರಣ ಕಾರ್ಯಕ್ರಮ (NRCP) ಜಾರಿಗೆ ತಂದಿದೆ.
- ಉಚಿತ ಆಂಟಿ ರೇಬೀಸ್ ಲಸಿಕೆ ಮತ್ತು ಇಮ್ಯುನೊಗ್ಲಾಬ್ಯುಲಿನ್ ವಿತರಣೆ
- ಪ್ರಾಣಿಗಳ ಜನನ ನಿಯಂತ್ರಣ (ABC) ಯೋಜನೆ
- ಬೀದಿ ನಾಯಿಗಳ ಸ್ಟೆರಿಲೈಸೇಶನ್ ಮತ್ತು ಲಸಿಕೆ ಅಭಿಯಾನ

ಕರ್ನಾಟಕ ಸರಕಾರ:

- ರೇಬೀಸ್ ಎಲಿಮಿನೇಷನ್ ಆಕ್ಷನ್ ಪ್ಲಾನ್ ಬಿಡುಗಡೆ ಮಾಡಿದೆ.
- ಜಿಲ್ಲಾವಾರು ನೋಡಲ್ ಅಧಿಕಾರಿಗಳನ್ನು ನೇಮಿಸಿದೆ.
- ಸರಕಾರಿ ಆಸ್ಪತ್ರೆಗಳಲ್ಲಿ ಲಸಿಕೆ ಸಂಗ್ರಹ ದಾಸ್ತಾನು ಮಾಡಲಾಗಿದೆ.
- ಶಾಲೆಗಳು, ಆಸ್ಪತ್ರೆಗಳ ಬಳಿ ಬೀದಿ ನಾಯಿಗಳ ನಿಯಂತ್ರಣಕ್ಕೆ ಕ್ರಮ

ಲಸಿಕೆಯ ನಂತರವೂ ರೇಬೀಸ್ ಬರುವ ಸಾಧ್ಯತೆ ಇದೆಯೇ?

ಸಾಮಾನ್ಯವಾಗಿ, ನಾಯಿ ಕಚ್ಚಿದ ತಕ್ಷಣ ಸರಿಯಾದ ಸಮಯಕ್ಕೆ ಗಾಯವನ್ನು ಚೆನ್ನಾಗಿ ತೊಳೆಯುವುದು, ಆಂಟಿ ರೇಬೀಸ್ ಲಸಿಕೆ ಪೂರ್ಣ ಡೋಸ್ ತೆಗೆದುಕೊಳ್ಳುವುದು, ರೇಬೀಸ್ ಇಮ್ಯುನೊಗ್ಲಾಬ್ಯುಲಿನ್ ಪಡೆಯುವುದು, ಇವುಗಳನ್ನು ಮಾಡಿದರೆ ರೇಬೀಸ್ ತಡೆಯಬಹುದು.

ಈ ಸಂದರ್ಭದಲ್ಲಿ ಲಸಿಕೆ ಬಳಿಕವೂ ಅಪಾಯ ಇದೆ

- ಲಸಿಕೆ ಪೂರ್ಣಗೊಳಿಸದೇ ಬಿಡುವುದು,
- ಚಿಕಿತ್ಸೆ ತಡವಾಗುವುದು
- ತೀವ್ರವಾಗಿ ದಾಳಿ
- ರೋಗನಿರೋಧಕ ಶಕ್ತಿ ಕಡಿಮೆ ಇರುವುದು

ವೈದ್ಯರ ಪ್ರಕಾರ, ಲಕ್ಷಣಗಳು ಕಾಣಿಸಿಕೊಂಡ ನಂತರ ರೇಬೀಸ್‌ಗೆ ಚಿಕಿತ್ಸೆ ಬಹಳ ಕಷ್ಟ. ನಾಯಿಗಳು ಕಚ್ಚಿದರೆ ತಕ್ಷಣ ಚಿಕಿತ್ಸೆ ಅತ್ಯಂತ ಮುಖ್ಯ. ಎಲ್ಲಾ ಸರಕಾರಿ ಆಸ್ಪತ್ರೆಗಳಲ್ಲೂ ರೇಬೀಸ್ ನಿರೋಧಕ ಲಸಿಕೆ ಲಭ್ಯವಿರುತ್ತವೆ.

ಸಮಾಚಾರ ಸಣ್ಣದಲ್ಲ



ಜಿರಲೆ ಜನತಾ ಪಕ್ಷ: ಯುವಜನರ ಅಣಕ

ದೆಹಲಿ: ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಅವರು ಉಲ್ಲೇಖಿಸಿದ 'ಕಾಕ್ರೋಚ್ ಯುವಜನ' ಅಂಶವನ್ನೇ ಆಧಾರವಾಗಿಟ್ಟುಕೊಂಡು ಅಭಿಜಿತ್ ದೀಪ್ಕೆ ಎಂಬ ಯುವಕ 'ಕಾಕ್ರೋಚ್ ಜನತಾ ಪಾರ್ಟಿ'



(ಜಿರಲೆ ಜನತಾ ಪಕ್ಷ) ಆರಂಭಿಸಿ ರುವುದಾಗಿ ಸಾಮಾಜಿಕ ಜಾಲತಾಣದಲ್ಲಿ ಹರಿಯ ಬಿಟ್ಟಿದ್ದು, ಆತನ ಅಣಕದ ರಾಜಕೀಯ ಪಕ್ಷಕ್ಕೆ 40 ಸಾವಿರ ಯುವಜನರ ಸದಸ್ಯರಾಗಿರುವು ದಾಗಿ ಮಾಧ್ಯಮಗಳಲ್ಲಿ ವರದಿಯಾಗಿದೆ. ನಾವು ದೇಶದ ಯುವಜನತೆ ಸರಿಯಾದ ನೌಕರಿ ಇಲ್ಲದೇ, ನಿರುದ್ಯೋಗ ಸಮಸ್ಯೆಯಿಂದ ಹತಾಶರಾಗಿದ್ದೇವೆ. ಹೀಗಿರುವಾಗ ನಮ್ಮನ್ನು ಜಿರಲೆಗಳಿಗೆ ಹೋಲಿಸಿ ಟೀಕಿಸಿರುವುದು ಎಷ್ಟು ಸರಿ? ಎಂದು ಪ್ರಶ್ನೆ ಮಾಡಿರುವ ಅಭಿಜಿತ್, 'ಜಿರಲೆ' ಎಂಬುದನ್ನೇ ಆಧಾರವಾಗಿಟ್ಟುಕೊಂಡು ರಾಜಕೀಯ ಪಕ್ಷ ಆರಂಭಿಸಲು ಯೋಚಿಸಿರುವೆ ಎಂದು ಸುದ್ದಿವಾಹಿನಿ ಸಂದರ್ಶನದಲ್ಲಿ ಹೇಳಿಕೊಂಡಿದ್ದಾರೆ.

25ರವರೆಗೆ ಸಮುದ್ರಕ್ಕೆ ಇಳಿಯದಂತೆ ಎಚ್ಚರಿಕೆ

ಮಂಗಳೂರು: ಅರಬ್ಬೀ ಸಮುದ್ರದಲ್ಲಿ ಪ್ರಕ್ಷುಬ್ಧ ವಾತಾವರಣ ಸಾಧ್ಯತೆ ಹಿನ್ನೆಲೆ ಮೇ 25ರವರೆಗೆ ಸಮುದ್ರಕ್ಕೆ ಇಳಿಯದಂತೆ ಮೀನುಗಾರರಿಗೆ ಹವಾಮಾನ ಇಲಾಖೆ ಎಚ್ಚರಿಕೆ ನೀಡಿದೆ.ಕರ್ನಾಟಕ ಕರಾವಳಿ ಸೇರಿ ಹಲವು ಸಮುದ್ರ ಪ್ರದೇಶಗಳಲ್ಲಿ ಬಿರುಗಾಳಿ ಬೀಸುವ ಮುನ್ಸೂಚನೆ ನೀಡಿದ್ದು, ಸೊಮಾಲಿಯಾ ಕರಾವಳಿ ಭಾಗದಲ್ಲಿ ಗಾಳಿಯ ವೇಗ 65 ಕಿ.ಮೀ ತಲುಪುವ ಸಾಧ್ಯತೆಯಿದೆ. ಈ ಹಿನ್ನೆಲೆ ಕರ್ನಾಟಕ, ಕೇರಳ ಕರಾವಳಿ, ಲಕ್ಷದ್ವೀಪ, ಮಾಲ್ಡೀವ್ಸ್,ಕೊಮೊರಿನ್ ಪ್ರದೇಶಗಳಿಗೆ ಅಲರ್ಟ್ ಘೋಷಿಸಲಾಗಿದೆ. ಅಲ್ಲದೇ ಸಮುದ್ರದಲ್ಲಿರುವ ಮೀನುಗಾರರು ತಕ್ಷಣ ದಡ ಸೇರುವಂತೆ ಸೂಚನೆ ನೀಡಲಾಗಿದೆ. ಮನ್ನಾರ್ ಕೊಲ್ಲಿ, ಬಂಗಾಳ ಕೊಲ್ಲಿ, ಅಂಡಮಾನ್ ಸಮುದ್ರ ಭಾಗಗಳಲ್ಲೂ ಹವಾಮಾನ ಅಸ್ಥಿರತೆಗೊಳ್ಳುವ ಸಾಧ್ಯತೆಯಿದ್ದು, ಹವಾಮಾನ ಇಲಾಖೆಯ ಅಧಿಕೃತ ಸೂಚನೆ ಪಾಲಿಸಲು ಮನವಿ ಮಾಡಲಾಗಿದೆ. ಮೇ 20ರಿಂದ ಮೇ 25ರವರೆಗೆ ಸಮುದ್ರ ಭಾಗದಲ್ಲಿ ಭಾರಿ ಬಿರುಗಾಳಿ ಬೀಸುವ ಸಾಧ್ಯತೆಯಿದೆ. ಕರ್ನಾಟಕ ಮತ್ತು ಕೇರಳ ಕರಾವಳಿ ತೀರದಲ್ಲಿ ಗಂಟೆಗೆ 40-50 ಕಿ.ಮೀ ವೇಗದಲ್ಲಿ ಸುಂಟರಗಾಳಿ ಬೀಸುವ ಸಾಧ್ಯತೆಯಿದ್ದು, ಕರಾವಳಿ ತೀರದಲ್ಲಿ ಬಿರುಗಾಳಿಯ ವೇಗ ಗರಿಷ್ಠ 60 ಕಿ.ಮೀ. ವರೆಗೆ ಹೆಚ್ಚಾಗುವ ಸಾಧ್ಯತೆಯಿದೆ.

ತ.ನಾಡು: ಕಾಂಗ್ರೆಸ್ ಸಚಿವರ ಪ್ರಮಾಣ

ಚೆನ್ನೈ: ಇತ್ತೀಚೆಗೆ ನಡೆದ ತಮಿಳುನಾಡು ವಿಧಾನ ಸಭೆ ಚುನಾವಣೆಯಲ್ಲಿ ಏಕೈಕ ಅತೀ ದೊಡ್ಡ ಪಕ್ಷವಾಗಿ ಹೊರಹೊಮ್ಮಿದ ಸಿಎಂ ವಿಜಯ್ ನೇತೃತ್ವದ ಟಿವಿಕೆಗೆ ಬೆಂಬಲ ನೀಡಿರುವ ಕಾಂಗ್ರೆಸ್ ಪಕ್ಷವು ಇದೀಗ ಸುದೀರ್ಘ 59 ವರ್ಷಗಳ ನಂತರ ತಮಿಳುನಾಡಿನಲ್ಲಿ ಅಧಿಕಾರ ಹಂಚಿಕೊಳ್ಳುತ್ತಿದೆ. ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಪಕ್ಷದ ಶಾಸಕರಾದ ಎಸ್. ರಾಜೇಶ್ ಕುಮಾರ್ ಮತ್ತು ಪಿ. ವಿಶ್ವನಾಥನ್ ಅವರನ್ನು ವಿಜಯ್ ನೇತೃತ್ವದ ತಮಿಳುನಾಡು ಸಚಿವ ಸಂಪುಟಕ್ಕೆ ಸೇರಿಸಿಕೊಳ್ಳಲು ಅನುಮೋದನೆ ನೀಡಿದ್ದಾರೆ. ಈ ಇಬ್ಬರು ನಾಯಕರು ನೂತನ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ ಸಿ. ವೇಣುಗೋಪಾಲ್ ಬುಧವಾರ ತಿಳಿಸಿದ್ದಾರೆ. 59 ವರ್ಷಗಳ ದೀರ್ಘ ಅಂತರದ ನಂತರ ಕಾಂಗ್ರೆಸ್ ತಮಿಳುನಾಡು ಸಚಿವ ಸಂಪುಟಕ್ಕೆ ಸೇರುತ್ತಿರುವುದು ಪಕ್ಷಕ್ಕೆ ಐತಿಹಾಸಿಕ ಸಂದರ್ಭವಾಗಲಿದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಧುರಂಧರ್-2 ಬಗ್ಗೆ ದೆಹಲಿ ಹೈ ಸೂಚನೆ

ದೆಹಲಿ: ಬಾಕ್ಸ್ ಆಫೀಸ್ ನಲ್ಲಿ ಅಬ್ಬರಿಸಿದ ಬಾಲಿವುಡ್ ನಟ ರಣವೀರ್ ಸಿಂಗ್ ಅಭಿನಯದ ಧುರಂಧರ್-2 ಚಿತ್ರವು ಸೇನಾಪಡೆಗಳ ಕಾರ್ಯಾಚರಣೆಯ ವಿವರಗಳನ್ನು ಬಹಿರಂಗಪಡಿಸಿದೆ ಎಂಬ ಆರೋಪದ ಬಗ್ಗೆ ಪರಿಶೀಲಿಸುವಂತೆ ದೆಹಲಿ ಹೈಕೋರ್ಟ್ ಬುಧವಾರ ಕೇಂದ್ರ ಸರಕಾರಕ್ಕೆ ಸೂಚಿಸಿದೆ. ಸಶಸ್ತ್ರ ಸೀಮಾ ಬಲ್‌ನ (ಎಸ್‌ಎಸ್‌ಬಿ) ಹೆಡ್ ಕಾನ್‌ಸ್ಟೆಬಲ್ ದೀಪಕ್ ಕುಮಾರ್ ಸಲ್ಲಿಸಿದ ಸಾರ್ವಜನಿಕ ಹಿತಾಸಕ್ತಿ ಅರ್ಜಿ(ಪಿಐಎಲ್) ವಿಚಾರಣೆ ನಡೆಸಿದ ಹೈಕೋರ್ಟ್, ಈ ಚಲನಚಿತ್ರವು ಕಾಲ್ಪನಿಕ ಕಥೆಯಾಗಿರಬಹುದು, ಆದರೆ ಭದ್ರತಾ ಪಡೆ ಸಿಬ್ಬಂದಿ ಎತ್ತಿರುವ ಕಳವಳಗಳನ್ನು ನಿರ್ಲಕ್ಷಿಸಲಾಗುವುದಿಲ್ಲ ಎಂದು ಹೇಳಿದೆ. 'ಧುರಂಧರ್' ಸಿನಿಮಾ ಸಶಸ್ತ್ರ ಪಡೆಗಳ ಕಾರ್ಯಾ ಚರಣೆಯ ವಿವರಗಳನ್ನು ಬಹಿರಂಗಪಡಿಸಿದೆ ಮತ್ತು ದೇಶದ ಭದ್ರತೆ ಹಾಗೂ ಸಮಗ್ರತೆಗೆ ಅಪಾಯವನ್ನುಂಟು ಮಾಡಬಹುದು ಎಂದು ಅರ್ಜಿಯಲ್ಲಿ ಆರೋಪಿಸಲಾಗಿದೆ.

ಮಾನವ-ವನ್ಯಜೀವಿ ಸಂಘರ್ಷ: 5 ವರ್ಷದಲ್ಲಿ 270 ಸಾವು

ರಾಜ್ಯದಲ್ಲಿ ಪ್ರತಿ ತಿಂಗಳು ನಾಲ್ಕರಿಂದ ಐವರು ಸಾವು



ಬೆಂಗಳೂರು: ಪಶ್ಚಿಮಘಟ್ಟದ ಶೇ.60ರಷ್ಟು ಭಾಗಕ್ಕೆ ಆಸರೆಯಾಗಿರುವ ಕರ್ನಾಟಕ ರಾಜ್ಯವು ಹುಲಿ, ಆನೆ, ಚಿರತೆ, ಕಾಡುಕೋಣ, ಕಾಡೆಮ್ಮೆ ಮುಂತಾದ ವನ್ಯಮೃಗಗಳಿಗೆ ದೇಶದಲ್ಲಿಯೇ ಪ್ರಮುಖ ಆವಾಸ ಸ್ಥಾನವೂ ಹೌದು. ಬಿಗಿಯಾದ ಅರಣ್ಯ ಕಾನೂನುಗಳಿಂದಾಗಿ ಈಗ ವನ್ಯಮೃಗಗಳ ಸಂತತಿ ಬೆಳೆದಿದೆ. ಇನ್ನೊಂದೆಡೆ ಅರಣ್ಯ ಅತಿಕ್ರಮಣ, ವಿವಿಧ ಯೋಜನೆಗಳಿಗೆ ಅರಣ್ಯ ಭೂಮಿ ಬಳಕೆಯಿಂದ ಕಾಡು ಕಿರಿದಾಗಿದೆ. ಕಳೆದ ಕೆಲವು ವರ್ಷಗಳಿಂದ ರಾಜ್ಯದಲ್ಲಿ ವನ್ಯಪ್ರಾಣಿ-ಮಾನವ ಸಂಘರ್ಷ ತಾರಕಕ್ಕೇರಿದೆ.

ಕಳೆದ ಐದೇ ವರ್ಷಗಳಲ್ಲಿ ಸುಮಾರು 270 ಮಂದಿ ವನ್ಯಪ್ರಾಣಿಗಳ ದಾಳಿಯಿಂದ ಸಾವಿಗೀಡಾಗಿದ್ದಾರೆ. ಈ ಸಂಘರ್ಷ ಇಳಿಸಲು ವನ್ಯಪ್ರಾ ಣಿಗಳಿಂದ ಸುರಕ್ಷಿತ ಅಂತರ ಇರಿಸುವುದು, ಅವುಗಳ ಆವಾಸಸ್ಥಾನದಲ್ಲಿ ಹಸ್ತಕ್ಷೇಪ ಮಾಡದಿರುವುದೇ ಮುಖ್ಯ ದಾರಿ ಎಂದು ವನ್ಯಜೀವಿ-ಪರಿಸರ ತಜ್ಞರು ಸಲಹೆ ನೀಡಿದ್ದಾರೆ. ಕಳೆದ 10 ದಿನಗಳಿಂದೀಚೆಗೆ ಪ್ರಾಣಿ ದಾಳಿಗೆ ಎರಡು ಬಲಿಯಾಗಿದೆ. ಮಲೆಮಹದೇಶ್ವರ ಬೆಟ್ಟದಲ್ಲಿ ಚಿರತೆಯೊಂದು ಬಾಲಕನನ್ನು ಬಲಿ ಪಡೆದಿದ್ದರೆ, ದುಬಾರೆಯಲ್ಲಿ ಆನೆಗಳ ಕಾದಾಟದ ನಡುವೆ ಮಹಿಳೆ ಮೃತಪಟ್ಟಿದ್ದಾರೆ. ಇದರ ಬೆನ್ನಲ್ಲೇ ರಾಜ್ಯದಲ್ಲಿ ವನ್ಯಜೀವಿ-ಮಾನವ ಸಂಘರ್ಷ ತಡೆಯುವುದರ ಜತೆಗೆ ವನ್ಯ ಪ್ರಾಣಿಗಳ ಆವಾಸಸ್ಥಾನ ರಕ್ಷಣೆಯ ಕೂಗೂ ಎದ್ದಿದೆ.

ಆರು ಜಿಲ್ಲೆಗಳಲ್ಲಿ ಅತ್ಯಧಿಕ ಸಾವು: ಅರಣ್ಯ ಇಲಾಖೆ ಅಂಕಿ-ಅಂಶಗಳ ಪ್ರಕಾರ, 2021-22ರಿಂದ ಈವರೆಗೆ ವನ್ಯಪ್ರಾಣಿಗಳಿಂದ ಮಾನವ ಸಾವಿನ 270 ಪ್ರಕರಣಗಳ ಪೈಕಿ ಆರು ಜಿಲ್ಲೆಗಳು ಅಗ್ರಸ್ಥಾನದಲ್ಲಿವೆ. ಕೊಡಗು 52 ಸಾವಿನೊಂದಿಗೆ ರಾಜ್ಯದಲ್ಲೇ ಪ್ರಥಮ ಸ್ಥಾನದಲ್ಲಿದ್ದರೆ, ಚಾಮರಾಜನಗರ (48), ಮೈಸೂರು (29), ಹಾಸನ (26), ಚಿಕ್ಕಮಗಳೂರು (24) ರಾಮನಗರ (23) ಜಿಲ್ಲೆಗಳಲ್ಲೂ ಗಮನಾರ್ಹ ಸಂಖ್ಯೆಯಲ್ಲಿ ಸಾವು ಸಂಭವಿಸಿದೆ. ಇತ್ತೀಚೆಗೆ ದಕ್ಷಿಣ ಕನ್ನಡ, ಉಡುಪಿಯಂತಹ ಕರಾವಳಿ ಭಾಗದಲ್ಲೂ ವನ್ಯಜೀವಿಗಳ ಉಪಟಳ ಹೆಚ್ಚಾಗಿದೆ. ವಿಶೇಷವೆಂದರೆ, ರಾಜ್ಯದಲ್ಲಿ ಅತಿಹೆಚ್ಚು ಅರಣ್ಯ ಪ್ರದೇಶ ಇರುವ ಉತ್ತರ ಕನ್ನಡ ಜಿಲ್ಲೆಯಲ್ಲಿ ಮಾನವ ಸಾವಿನ ಪ್ರಕರಣಗಳು ಕೇವಲ ಎಂಟು.

ರಾಜ್ಯದ ಎರಡು ಹುಲಿ ಸಂರಕ್ಷಿತ ಪ್ರದೇಶಗಳಲ್ಲಿ ಮಾತ್ರ ನಿರಂತರವಾಗಿ ಹುಲಿಗಳ ಹೆಚ್ಚಾಗುತ್ತಿದೆ. ಆದರೆ ಹುಲಿಗಳ ನೈಸರ್ಗಿಕ ಆವಾಸಸ್ಥಾನ ಅದಕ್ಕೆ ಅನುಗುಣವಾಗಿ ವಿಸ್ತಾರಗೊಂಡಿಲ್ಲ. ಹೀಗಾಗಿ ಹೆಚ್ಚಿನ ಸಂಖ್ಯೆಯ ಹುಲಿಗಳು ಕೃಷಿಭೂಮಿ, ಹಳ್ಳಗಳ ಪೊದೆಗಳಲ್ಲಿ ಆವಾಸಸ್ಥಾನ ಕಂಡುಕೊಳ್ಳುತ್ತಿವೆ. ಹುಲಿ ಯೋಜನಾ ಪ್ರದೇಶಗಳಲ್ಲಿ ಆವಾಸಸ್ಥಾನದ ಮಾರ್ಪಾಡು ನಿಲ್ಲಿಸಬೇಕು. ಅದೇ ರೀತಿ, ಚಿರತೆಗಳನ್ನು ಅನವಶ್ಯಕವಾಗಿ ಹಿಡಿದು ಬೇರೆಡೆಗೆ ಸ್ಥಳಾಂತರಿಸುವುದನ್ನು ನಿಲ್ಲಿಸಬೇಕು. ಮೈಸೂರು ಜಿಲ್ಲೆಯೊಂದರಲ್ಲೇ ಕಳೆದ 3 ವರ್ಷಗಳಲ್ಲಿ 200ಕ್ಕೂ ಹೆಚ್ಚು ಚಿರತೆಗಳನ್ನು ಸ್ಥಳಾಂತರಿಸಲಾಗಿದೆ. ಆದರೂ ಸಂಘರ್ಷ ಕಡಿಮೆಯಾಗಲಿಲ್ಲ ಎಂಬುದು ಈ ಕಾರ್ಯನೀತಿಯೇ ಸರಿಯಿಲ್ಲ ಎನ್ನುವುದನ್ನು ತೋರಿಸುತ್ತದೆ ಎಂದು ವನ್ಯಜೀವಿ ತಜ್ಞ ಸಂಜಯ್ ಗುಬ್ಬಿ ಅಭಿಪ್ರಾಯಪಡುತ್ತಾರೆ.

ರೆಸಾರ್ಟ್‌ಗಳ ಹಾವಳಿ: ಪಶ್ಚಿಮಘಟ್ಟ ಸೇರಿ ವನ್ಯಜೀವಿಗಳು ಯಥೇಚ್ಛವಾಗಿರುವ ದಟ್ಟಾರಣ್ಯಗಳ ನಡುವೆ ರಸ್ತೆ, ರೆಸಾರ್ಟ್‌ಗಳು, ಖಾಸಗಿ ಎಸ್ಟೇಟ್, ಬೃಹತ್ ಯೋಜನೆಗಳಿಗೆ ಅವಕಾಶ ನೀಡುವುದರಿಂದ ವನ್ಯಜೀವಿ-ಮಾನವ ಸಂಘರ್ಷ ಹೆಚ್ಚುತ್ತಿದೆ. ಈ ಹಸ್ತಕ್ಷೇಪವನ್ನು ಮೊದಲು ನಿಲ್ಲಿಸಬೇಕು ಎನ್ನುತ್ತಾರೆ ಕರಾವಳಿಯ ಪರಿಸರವಾದಿ ದಿನೇಶ್ ಹೊಳ್ಳ.

ಏಕೆ ಈ ಸಂಘರ್ಷ?

ಆನೆ ಮತ್ತು ಹುಲಿ ಸಂಘರ್ಷ ಪ್ರಕರಣಗಳ ಸಂಖ್ಯೆ ಏರಿಕೆಯಾಗಲು ಅವುಗಳ ನೈಸರ್ಗಿಕ ಆವಾಸ ಸ್ಥಾನಗಳನ್ನು ನಿರ್ವಹಿಸುತ್ತಿರುವ ಬಗೆಯೇ ಕಾರಣ ಎನ್ನುತ್ತಾರೆ ವನ್ಯಜೀವಿ ತಜ್ಞ ಸಂಜಯ್ ಗುಬ್ಬಿ. ಕೋರ್ಟ್ ಆದೇಶ, ತಜ್ಞರ ಸಲಹೆಗಳನ್ನು ಗಣನೆಗೆ ತೆಗೆದುಕೊಳ್ಳದೆ ಸಂಘ ರ್ಷದ ಯೋಜನೆಗಳನ್ನು ಅಳವಡಿಸಲಾಗುತ್ತಿದೆ. ಬೃಹತ್ ಅಭಿವೃದ್ಧಿ ಯೋಜನೆಗಳನ್ನು (ಎತ್ತಿನ ಹೊಳೆ ಯೋಜನೆ, ಶರಾವತಿ ಪಂಪ್ಡ್ ಸ್ಟೋರೇಜ್,ಮೇಕೆದಾಟು ಯೋಜನೆ, ಹೊಸ ಹೆದ್ದಾರಿಗಳು ಇತ್ಯಾದಿ) ವನ್ಯಜೀವಿಧಾಮ, ರಾಷ್ಟ್ರೀಯ ಉದ್ಯಾನ, ಹುಲಿ ಸಂರಕ್ಷಣಾ ಪ್ರದೇಶಗಳಿಂದ ಹೊರಗಿಡಬೇಕು ಎಂದವರು ಹೇಳುತ್ತಾರೆ.

ಆನೆ ದಾಳಿಯೇ ಅಧಿಕ

ವನ್ಯದಾಳಿಯಿಂದ ದುರ್ಮರಣಗಳಲ್ಲಿ ಆನೆಗಳಿಂದಲೇ ಶೇ. 66ಕ್ಕೂ ಅಧಿಕ (188) ಸಾವು ಸಂಭವಿಸಿದೆ. ಹುಲಿ ದಾಳಿಯಿಂದ 21, ಚಿರತೆ ದಾಳಿಯಿಂದ 15, ಕಾಡು ಹಂದಿಯಿಂದ 13, ಮೊಸಳೆಗಳಿಂದ 12, ಕರಡಿ 10, ಕಾಡೆಮ್ಮೆ-ಕಾಡುಕೋಣಗಳಿಂದ 7, ತೋಳ 2, ಜಿಂಕೆ 1, ಕಣಜದ ದಾಳಿಯಿಂದ ಒಬ್ಬರು ಸಾವಿಗೀಡಾಗಿದ್ದಾರೆ. ಮಂಗನ ದಾಳಿಯಿಂದಲೂ ಒಂದು ಸಾವು ಸಂಭವಿಸಿದೆ.

ಆನೆ ದಾಳಿಯೇ ಅಧಿಕ

ವನ್ಯದಾಳಿಯಿಂದ ದುರ್ಮರಣ
(2021-22ರಿಂದ 2025-26 ಮೇ ವರೆಗೆ)

ಆನೆ	188 (66.0%)
ಹುಲಿ	21 (7.8%)
ಚಿರತೆ	15 (5.6%)
ಕಾಡು ಹಂದಿ	13 (4.8%)
ಮೊಸಳೆ	12 (4.4%)
ಕರಡಿ	10 (3.7%)
ಕಾಡೆಮ್ಮೆ-ಕಾಡುಕೋಣ	7 (2.6%)
ತೋಳ	2 (0.7%)
ಜಿಂಕೆ	1 (0.4%)
ಕಣಜ	1 (0.4%)
ಮಂಗ	1 (0.4%)

ಒಟ್ಟು : 270 ಸಾವು

ಆರು ಜಿಲ್ಲೆಗಳಲ್ಲಿ ಅತ್ಯಧಿಕ ಸಾವು

2021-22ರಿಂದ 2025-26 ಮೇ ವರೆಗೆ



ಕೊಡಗು	52
ಚಾಮರಾಜನಗರ	48
ಮೈಸೂರು	29
ಹಾಸನ	26
ಚಿಕ್ಕಮಗಳೂರು	24
ರಾಮನಗರ	23

- ದಕ್ಷಿಣ ಕನ್ನಡ, ಉಡುಪಿ ಮುಂತಾದ ಕರಾವಳಿ ಜಿಲ್ಲೆಗಳಲ್ಲಿ ವನಜೀವಿಗಳ ಉಪಟಳ ಹೆಚ್ಚಾಗಿದೆ. ಉತ್ತರ ಕನ್ನಡದಲ್ಲಿ (ಅತಿ ಹೆಚ್ಚು ಅರಣ್ಯ ಪ್ರದೇಶ) ಮಾನವ ಸಾವಿನ ಪ್ರಕರಣಗಳು ಕೇವಲ 8.

ಚಾರಣ ಪಥ ಎಸ್‌ಒಪಿ ಮಾಸಾಂತ್ಯಕ್ಕೆ ಜಾರಿ

ಇತ್ತೀಚೆಗೆ ಕೊಡಗಿನಲ್ಲಿ ಚಾರಣಕ್ಕೆ ಒಂಟಿಯಾಗಿ ತೆರಳಿದ ಯುವತಿ ನಾಪತ್ತೆಯಾದ ಪ್ರಕರಣದ ಬಳಿಕ ಅರಣ್ಯ ಸಚಿವರು ಚಾರಣ ಪಥಗಳಿಗೆ ಪ್ರಮಾಣಿತ ಕಾರ್ಯಾಚರಣೆ ವಿಧಾನ (ಎಸ್‌ಒಪಿ) ಪಾಲಿಸಲು ಆದೇಶ ಹೊರಡಿಸಿದ್ದಾರೆ. ಇದನ್ನು ಚಾರಣ ಪಥಗಳಲ್ಲಿ ಜಾರಿಗೊಳಿಸಲಾಗುತ್ತಿದೆ. ಈ ತಿಂಗಳಾಂತ್ಯದೊಳಗೆ ಸಂಪೂರ್ಣವಾಗಿ ಜಾರಿಗೊಳಿಸಲಿದ್ದೇವೆ ಎಂದು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ಕುಮಾರ್ ಪುಷ್ಕರ್ ತಿಳಿಸಿದ್ದಾರೆ. ಇದೇ ವೇಳೆ ಕೊಡಗಿನ ದುಬಾರೆಯಲ್ಲಿ ಸಾಕಾನೆಗಳ ಕಾದಾಟದ ವೇಳೆ ಮಹಿಳೆಯೊಬ್ಬರು ಮೃತಪಟ್ಟ ಘಟನೆ ಹಿನ್ನೆಲೆಯಲ್ಲಿ ಆನೆ ಶಿಬಿರಗಳಲ್ಲಿ ಆನೆಗಳ ಹತ್ತಿರ ತೆರಳಲು ಸಾರ್ವಜನಿಕರಿಗೆ ಅವಕಾಶ ನೀಡದಂತೆ ಸಚಿವರು ಆದೇಶಿಸಿದ್ದಾರೆ. ದುಬಾರೆ, ಶಿವಮೊಗ್ಗ ಸಕ್ರೆಬೈಲು ಮುಂತಾದ ಕಡೆ ಪ್ರವಾಸಿಗರಿಗೆ ದುಬಾರಿ ಶುಲ್ಕ ನಿಗದಿ ಮಾಡಿ ಆನೆಗಳಿಗೆ ಸ್ನಾನ ಮಾಡಿಸಲು, ಸಫಾರಿ ತೆರಳಲು ಅವಕಾಶ ನೀಡಲಾಗುತ್ತಿತ್ತು. ಇನ್ನು ಮುಂದೆ ಇವೆಲ್ಲವುಗಳಿಗೆ ಬ್ರೇಕ್ ಬೀಳಲಿದೆ.

> ವನ್ಯಜೀವಿ-ಮಾನವ ಸಂಘರ್ಷ ತಡೆಗೆ ಅರಣ್ಯದಂಚಿನಲ್ಲಿ ಸೌರಶಕ್ತಿ ಬೇಲಿ, ಬ್ಯಾರಿಕೇಡ್ ಇತ್ಯಾದಿಗಳ ನಿರ್ಮಾಣ, ಆನೆ-ಚಿರತೆ ಕಾರ್ಯಪಡೆಗಳ ಸ್ಥಾಪನೆ, ಅರಣ್ಯದೊಳಗೆ ಜಲ ಸಂಪನ್ಮೂಲ ಅಭಿವೃದ್ಧಿ, ಪ್ರಾಣಿಗಳ ಆವಾಸಸ್ಥಾನ ಅಭಿವೃದ್ಧಿ, ಎಐ ಆಧಾರಿತ ಕ್ಯಾಮರಾಗಳು ಇತ್ಯಾದಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ದೇಶದಲ್ಲೇ ಅತಿ ಹೆಚ್ಚು ಆನೆಗಳು ಕರ್ನಾಟಕದಲ್ಲಿದ್ದರೂ ಆನೆಗಳು ಕಡಿಮೆ ಇರುವ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕದಲ್ಲಿ ಮಾನವ ಸಾವಿನ ಪ್ರಕರಣಗಳು ಅತಿ ಕಡಿಮೆ. ಹೀಗಾಗಿ ಸಂಘರ್ಷ ಹೆಚ್ಚಾಗಿದೆ ಎಂದು ಹೇಳಲಾಗದು.
>
> - ಕುಮಾರ್ ಪುಷ್ಕರ್, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ಮತ್ತು ವನ್ಯಜೀವಿ ಪರಿಪಾಲಕ

ಜೆಪಿಸಿ ಅಧ್ಯಕ್ಷ ಪಿ.ಪಿ.ಚೌಧರಿ ಹೇಳಿಕೆ

ಏಕಕಾಲ ಚುನಾವಣೆಯಿಂದ ₹7 ಲಕ್ಷ ಕೋಟಿ ಉಳಿತಾಯ

ಗಾಂಧಿನಗರ: ಲೋಕಸಭೆ ಮತ್ತು ರಾಜ್ಯ ವಿಧಾನಸಭಾ ಚುನಾವಣೆಗಳನ್ನು ಏಕಕಾಲದಲ್ಲಿ ನಡೆಸುವುದರಿಂದ ದೇಶದ ಬೊಕ್ಕಸಕ್ಕೆ ಏನಿಲ್ಲವೆಂದರೂ 7 ಲಕ್ಷ ಕೋಟಿ ರು. ಉಳಿತಾಯವಾಗುತ್ತದೆ. ಇಷ್ಟೂ ಹಣವನ್ನು ದೇಶದ ಅಭಿವೃದ್ಧಿ ಯೋಜನೆಗಳಿಗೆ ಬಳಸಬಹುದು ಎಂದು 'ಒಂದು ರಾಷ್ಟ್ರ-ಒಂದು ಚುನಾವಣೆ' ಪ್ರಸ್ತಾವನೆ ಕುರಿತು ಅವಲೋಕನ-ಚರ್ಚೆ ನಡೆಸುತ್ತಿರುವ ಜಂಟಿ ಸಂಸದೀಯ ಸಮಿತಿಯ ಅಧ್ಯಕ್ಷ, ಬಿಜೆಪಿ ಸಂಸದ ಪಿ.ಪಿ.ಚೌಧರಿ ಹೇಳಿದ್ದಾರೆ.

ಜಂಟಿ ಸಂಸದೀಯ ಸಮಿತಿಯು ಮೊದಲ ದಿನದ ಸಭೆಯನ್ನು ಗುಜರಾತ್ ರಾಜ್ಯದ ಗಾಂಧಿನಗರದಲ್ಲಿನ 'ಜಿಐಎಫ್‌ಟಿ' ನಗರದಲ್ಲಿ ನಡೆಸಿದ್ದು, 'ಒಂದು ದೇಶ-ಒಂದು ಚುನಾವಣೆ' ಪ್ರಸ್ತಾವನೆಗೆ ಸಂಬಂಧಿಸಿದಂತೆ ವಿವಿಧ ಇಲಾಖೆಗಳಿಂದ ಬಂದಿರುವ ಎಲ್ಲಾ ಸಲಹೆಗಳನ್ನು ಅಧ್ಯಯನ ಮಾಡಿ ವಿವರವಾದ ವರದಿ ಸಲ್ಲಿಸುವಂತೆ ಗುಜರಾತ್ ಮುಖ್ಯ ಕಾರ್ಯದರ್ಶಿ ಎಂ.ಕೆ.ದಾಸ್ ಅವರಿಗೆ ಚೌಧರಿ ನಿರ್ದೇಶನ ನೀಡಿದರು.

41 ಸದಸ್ಯರು ಇರುವ ಜಂಟಿ ಸಂಸದೀಯ ಸಮಿತಿಯ ಮುಖ್ಯಸ್ಥರಾಗಿರುವ ಚೌಧರಿ ಅವರು, ಗುಜರಾತ್ ರಾಜ್ಯದ ಬಿಜೆಪಿ ಸರಕಾರದ ಹಿರಿಯ ಅಧಿಕಾರಿಗಳು ಮತ್ತು ವಿವಿಧ ಇಲಾಖೆಗಳ ಕಾರ್ಯದರ್ಶಿಗಳ ಜತೆ ಸಭೆಗಳನ್ನು ನಡೆಸಿದರು. ಸಭೆ ನಂತರ ಪತ್ರಿಕಾಗೋಷ್ಠಿಯಲ್ಲಿ ಚೌಧರಿ ಮಾತನಾಡಿ, ಈ ದಿನದ ಸಭೆಯಲ್ಲಿ ಚರ್ಚೆ ತುಂಬಾ ಸಕಾರಾತ್ಮಕ ಮತ್ತು ರಚನಾತ್ಮಕವಾಗಿತ್ತು ಎಂದು ಹೇಳಿದರು. ಏಕಕಾಲದಲ್ಲಿ ಚುನಾವಣೆಗಳನ್ನು ನಡೆಸುವುದರಿಂದ ದೇಶದ ಜಿಡಿಪಿಯ ಶೇ.1.6ರಷ್ಟು ಹಣ(7 ಲಕ್ಷ ಕೋಟಿ ರು.) ಉಳಿತಾಯವಾಗುತ್ತದೆ ಎಂದು ಹೇಳಿದರು.

ದೇಗುಲದೊಳಗೆ ಚಪ್ಪಲಿ: ಮುಸ್ಲಿಂ ಸಿಬ್ಬಂದಿಗೆ ತರಾಟೆ

ಬಾಗಲಕೋಟೆ: ಜಿಲ್ಲೆಯ ಐತಿಹಾಸಿಕ ಪ್ರವಾಸಿ ತಾಣವಾದ ಬಾದಾಮಿ ಪಟ್ಟಣದ ದೇವಾಲಯದ ಆವರಣದಲ್ಲಿ ಮುಸ್ಲಿಂ ಸಿಬ್ಬಂದಿ ಚಪ್ಪಲಿ ಧರಿಸಿ ಕುಳಿತಿದ್ದಕ್ಕೆ ಹಿಂದೂ ಪ್ರವಾಸಿ ಮಹಿಳೆಯೊಬ್ಬರು ತೀವ್ರ ಆಕ್ಷೇಪ ವ್ಯಕ್ತಪಡಿಸಿ, ತರಾಟೆಗೆ ತೆಗೆದುಕೊಂಡಿದ್ದಾರೆ.

ಚಪ್ಪಲಿ ಧರಿಸಿದ ವಿಷಯಕ್ಕೆ ಸಂಬಂಧಿಸಿ ದಂತೆ ಇಬ್ಬರ ನಡುವೆ ಕೆಲಕಾಲ ತೀವ್ರ ವಾಗ್ವಾದ ನಡೆದಿದೆ. ಹಿಂದೂ ಮಹಿಳೆ ಮತ್ತು ಅಲ್ಲಿದ್ದ ಇತರ ಪ್ರವಾಸಿಗರು ತರಾಟೆಗೆ ತೆಗೆದುಕೊಳ್ಳುತ್ತಿದ್ದಂತೆ ಗಾಬರಿಗೊಂಡ ಮುಸ್ಲಿಂ ಯುವತಿ ಸ್ಥಳದಲ್ಲೇ ಅಳುತ್ತಾ ತನ್ನ ಪರಿಚಿತರಿಗೆ ಕರೆ ಮಾಡಿ ಘಟನೆಯ ಬಗ್ಗೆ ತಿಳಿಸಿರುವುದು ವಿಡಿ ಯೊದಲ್ಲಿ ಸೆರೆಯಾಗಿದೆ. ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗುತ್ತಿರುವ ವಿಡಿಯೊದಲ್ಲಿ ಹಿಂದೂ ಪ್ರವಾಸಿ ಮಹಿಳೆ, ಪವಿತ್ರವಾದ ದೇವಾಲಯದ ಆವರಣದಲ್ಲಿ ಚಪ್ಪಲಿ ಬಿಡುವಂತೆ ನಾನು ತಿಳಿಸಿದ್ದೆ.ಆದರೆ, ಎಷ್ಟು ಬಾರಿ ಹೇಳಿದರೂ ಯುವತಿ ಚಪ್ಪಲಿ ತೆಗೆಯದೆ ಹಠ ತೋರಿದ್ದಾಳೆ ಎಂದು ಆರೋ ಪಿಸಿದ್ದಾರೆ. ಯುವತಿಯ ವರ್ತನೆಯಿಂದ ಆಕ್ರೋಶಗೊಂಡ ಹಿಂದೂ ಮಹಿಳೆ, 'ನಾವು ಎಂದಾದರೂ ನಿಮ್ಮ ದರ್ಗಾಕ್ಕೆ ಚಪ್ಪಲಿ ಹಾಕಿಕೊಂಡು ಹೋಗುತ್ತೀವಾ? ನಿಮಗೇಕೆ ಇಷ್ಟೊಂದು ಅಹಂಕಾರ? ಐಡಿಯಲ್ಲಿ ರೋಷನಿ ಮುಸ್ತಾಫಿ ಅಂತ ಹೆಸರು ಇದೆ. ಧಾರ್ಮಿಕ ಸ್ಥಳಗಳಿಗೆ ಗೌರವ ಕೊಡುವುದನ್ನು ಕಲಿಯಿರಿ' ಎಂದು ಸ್ಥಳದಲ್ಲೇ ತೀವ್ರ ತರಾಟೆಗೆ ತೆಗೆದುಕೊಂಡಿದ್ದಾರೆ. ಈ ಇಡೀ ಘಟನೆಯನ್ನು ಅಲ್ಲಿನ ಪ್ರವಾಸಿಗರೊಬ್ಬರು ಮೊಬೈಲ್‌ನಲ್ಲಿ ಚಿತ್ರೀಕರಿಸಿದ್ದು, ಸದ್ಯ ಬಾಗಲಕೋಟೆ ಜಿಲ್ಲೆ ಸೇರಿದಂತೆ ರಾಜ್ಯಾದ್ಯಂತ ಸಾಮಾಜಿಕ ಜಾಲತಾಣಗಳಲ್ಲಿ ಈ ವಿಡಿಯೋ ವೈರಲ್ ಆಗುತ್ತಿದೆ.

ಲಕ್ಕುಂಡಿ:101 ಬಾವಿಗಳ ಪತ್ತೆಗೆ ಸ್ಯಾಟ್‌ಲೈಟ್ ತಂತ್ರಜ್ಞಾನ ಬಳಕೆ

ಉತ್ಖನನಕ್ಕೆ ಇಸ್ರೋ ಸಹಯೋಗ

ಗದಗ: ಜಿಲ್ಲೆಯ ಲಕ್ಕುಂಡಿಯಲ್ಲಿ ನೂರೊಂದು ಬಾವಿ ಮತ್ತು ದೇವಾಲಯಗಳನ್ನು ಪತ್ತೆಹಚ್ಚಲು ಇಸ್ರೋ ಸಹಯೋಗದೊಂದಿಗೆ ಸಾಟ್‌ಲೈಟ್ ತಂತ್ರಜ್ಞಾನವನ್ನು ಬಳಸಲಾಗುತ್ತಿದೆ. ಇತ್ತೀಚೆಗೆ ರಾಷ್ಟ್ರಕೂಟರ ಕಾಲದ ಅಪರೂಪದ ವೀರಗಲ್ಲೊಂದು ಪತ್ತೆಯಾಗಿದೆ.

ಸ್ಯಾಟ್‌ಲೈಟ್ ಇಮೇಜಿಂಗ್ ತಂತ್ರಜ್ಞಾನ: ಗದಗ ಜಿಲ್ಲೆಯ ಐತಿಹಾಸಿಕ ಗ್ರಾಮ ಲಕ್ಕುಂಡಿ ಉತ್ಖನನಕ್ಕೆ ಸ್ಯಾಟ್‌ಲೈಟ್ ತಂತ್ರಜ್ಞಾನ ಬಳಸುವ ಕುರಿತು ವಿಧಾನ ಸೌಧದಲ್ಲಿ ಸಭೆ ನಡೆಸಲಾಯಿತು. ಪ್ರವಾಸೋದ್ಯಮ ಸಚಿವ ಎಚ್.ಕೆ.ಪಾಟೀಲ್ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಅಧಿಕಾರಿಗಳು, ಇಸ್ರೋ ವಿಜ್ಞಾನಿಗಳು ಭಾಗಿಯಾಗಿದ್ದರು. ಸಚಿವ ಎಚ್.ಕೆ.ಪಾಟೀಲ್ ಅವರು ಸ್ಯಾಟ್‌ಲೈಟ್ ಇಮೇಜಿಂಗ್ ತಂತ್ರಜ್ಞಾನದ ಬಗ್ಗೆ ಮಾಹಿತಿ ಪಡೆದುಕೊಂಡಿದ್ದಾರೆ.

ಸಭೆ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, ಲಕ್ಕುಂಡಿಯಲ್ಲಿ ನೂರೊಂದು ಬಾವಿ, ನೂರೊಂದು ದೇವಾಲಯಗಳ ಹುಡುಕಾಟ ನಡೆಯುತ್ತಿದೆ. ರಾಜ್ಯ ಸರಕಾರ ತುಂಬಾ ಆಸಕ್ತಿ ವಹಿಸಿ ಉತ್ಖನನ ಮಾಡುತ್ತಿದೆ. ಲಕ್ಕುಂಡಿ ಗ್ರಾಮದಲ್ಲಿರುವ ಬಾವಿ, ದೇವಾಲಗಳ ಹುಡುಕಾಟಕ್ಕೆ ತಂತ್ರಜ್ಞಾನ ಬಳಕೆ ಮಾಡಬೇಕು. ಹಾಗಾಗಿ ಇಂದಿನ ಸಭೆಯಲ್ಲಿ ಇಸ್ರೋದ ತಜ್ಞರ ಸಲಹೆ ಪಡೆದಿದ್ದೇವೆ. ಇಸ್ರೋದ ಮಾಜಿ ಅಧ್ಯಕ್ಷ ಕಿರಣ್ ಕುಮಾರ್ ಜತೆ ಚರ್ಚೆ ಮಾಡಿದ್ದೇವೆ ಎಂದು ತಿಳಿಸಿದರು.

ದೇವಾಲಯ, ಬಾವಿಗಳ ಹುಡುಕಾಟಕ್ಕೆ ಸ್ಯಾಟಲೈಟ್ ತಂತ್ರಜ್ಞಾನ ಬಳಕೆ ಮಾಡುತ್ತೇವೆ. ಈಗ 38 ಬಾವಿ ದೇವಾಲಯ ಪತ್ತೆ ಹಚ್ಚಿದ್ದೇವೆ. ಇನ್ನು 62 ದೇವಾಲಯ ಹುಡುಕಬೇಕಿದೆ. ಲಕ್ಕುಂಡಿ ಉತ್ಖನನಕ್ಕೆ ಡಿಸೆಂಬರ್ ವರೆಗೆ ಗಡುವು ನೀಡಲಾಗಿದೆ.

> ಲಕ್ಕುಂಡಿ ಕೇವಲ ಗದಗ ಜಿಲ್ಲೆಯ ಹೆಮ್ಮೆಯಷ್ಟೇ ಅಲ್ಲದೆ, ಭಾರತದ ಸಾಂಸ್ಕೃತಿಕ ಭೂಪಟದಲ್ಲಿ ಅಗ್ರಸ್ಥಾನಕ್ಕೇರಿದೆ. ಇಲ್ಲಿನ ಪ್ರತಿ ಕಲ್ಲು ಈಗ ಇತಿಹಾಸದ ಕಥೆ ಹೇಳುತ್ತಿದ್ದು, ಪ್ರವಾಸಿಗರನ್ನು ಹಾಗೂ ಸಂಶೋಧಕರನ್ನು ಕೈಬೀಸಿ ಕರೆಯುತ್ತಿದೆ. ಇಲ್ಲಿನ ಮಣ್ಣಿನಲ್ಲಿ ಹುದುಗಿ ಹೋಗಿರುವ ಇತಿಹಾಸ ಅಗೆದಷ್ಟು ಆಳಕ್ಕಿಳಿಯುತ್ತಿದೆ.
>
> -ಎಚ್.ಕೆ. ಪಾಟೀಲ
> ಪ್ರವಾಸೋದ್ಯಮ, ಸಚಿವ

ರೋಮ್‌ನಲ್ಲಿ ಪ್ರಧಾನಿ ಮೋದಿ-ಇಟಲಿ ಪ್ರಧಾನಿ ಮೆಲೊನಿ ದ್ವಿಪಕ್ಷೀಯ ಸಭೆ

ರಕ್ಷಣಾ ವಲಯ ಕೈಗಾರಿಕೆ, ಶುದ್ಧ ಇಂಧನ, ತಂತ್ರಜ್ಞಾನ ಕ್ಷೇತ್ರ ಸಹಕಾರಕ್ಕೆ ಒಪ್ಪಂದ

3 ವರ್ಷಗಳಲ್ಲಿ ವ್ಯಾಪಾರ 2.25 ಲಕ್ಷ ಕೋಟಿ ರು.ಗೆ: ಇಟಲಿ-ಭಾರತ ಗುರಿ

ರೋಮ್: ಇಟಲಿ ಪ್ರಧಾನಿ ಜಾರ್ಜಿಯಾ ಮೆಲೋನಿ ನೇತೃತ್ವದ ಸಚಿವರು, ಉನ್ನತ ಮಟ್ಟದ ಅಧಿಕಾರಿಗಳ ತಂಡದ ಜತೆ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಭಾರತದ ಉನ್ನತ ಮಟ್ಟದ ನಿಯೋಗವು ಬುಧವಾರ ಬೆಳಗ್ಗೆ ದ್ವಿಪಕ್ಷೀಯ ಸಭೆ ನಡೆಸಿ ಹಲವು ಮಹತ್ವದ ಒಪ್ಪಂದಗಳನ್ನು ಮಾಡಿಕೊಂಡಿವೆ. ಭಾರತ-ಇಟಲಿ ನಡುವಿನ ದ್ವಿಪಕ್ಷೀಯ ವ್ಯಾಪಾರವನ್ನು 2029ರ ವೇಳೆಗೆ 2000 ಕೋಟಿ ಯೂರೋ(2.25 ಲಕ್ಷ ಕೋಟಿ ರು.) ಗಳಿಗಿಂತ ಹೆಚ್ಚು ಮಾಡುವ ಗುರಿ ಇಟ್ಟುಕೊಳ್ಳಲಾಗಿದೆ.

ರಕ್ಷಣೆ, ಪರಿಶುದ್ಧ ಇಂಧನ, ತಂತ್ರಜ್ಞಾನ ಮೊದಲಾದ ವಿಷಯಗಳಿಗೆ ಒತ್ತುಕೊಟ್ಟು ಪರಸ್ಪರ ಸಹಕಾರದ ಒಪ್ಪಂದಕ್ಕೆ ಆದ್ಯತೆ ನೀಡಲಾಗಿದೆ. ಭಾರತ-ಇಟಲಿ ದೇಶಗಳ ಸಂಬಂಧ ಈಗ 'ವಿಶೇಷ ಕಾರ್ಯತಂತ್ರಾತ್ಮಕ ಪಾಲುದಾರಿಕೆ' ಮಟ್ಟಕ್ಕೇರಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಹಲವಾರು ಕ್ಷೇತ್ರಗಳಲ್ಲಿ ಪರಸ್ಪರ ಸಹಕಾರ ವೃದ್ಧಿಗೆ ಆದ್ಯತೆ ನೀಡಿ ಒಪ್ಪಂದಗಳನ್ನು ಮಾಡಿಕೊಳ್ಳಲಾಗಿದೆ. ಎರಡೂ ದೇಶಗಳ ಮಟ್ಟಿಗೆ ಇದೊಂದು ಐತಿಹಾಸಿಕ ದಿನ ಎಂದು ಇಟಲಿ ಪ್ರಧಾನಿ ಜಾರ್ಜಿಯಾ ಮೆಲೋನಿ ಸಂತಸ ವ್ಯಕ್ತಪಡಿಸಿದ್ದಾರೆ. ಇದಕ್ಕೂ ಮುನ್ನ ಪ್ರಧಾನಿ ಮೋದಿ ಇಟಲಿ ಅಧ್ಯಕ್ಷ ಸೆರ್ಗಿಯೊ ಮೆಟ್ಟೆರೆಲ್ಲಾ ಅವರನ್ನೂ ಭೇಟಿ ಮಾಡಿ ಮಾತುಕತೆ ನಡೆಸಿದ್ದರು.

ಐದು ರಾಷ್ಟ್ರಗಳ ಪ್ರವಾಸದ ಕೊನೆಯ ಹಂತದಲ್ಲಿ ಇಟಲಿಗೆ ಭೇಟಿ ನೀಡಿರುವ ಪ್ರಧಾನಿ ಮೋದಿ, ಅಲ್ಲಿ ಮೆಲೋನಿ ಜೊತೆ ದ್ವಿಪಕ್ಷೀಯ ಮಾತುಕತೆಯಲ್ಲಿ ಪಾಲ್ಗೊಂಡಿದ್ದರು. ಐತಿಹಾಸಿಕ ರೋಮ್ ನಗರದ ವಿಲ್ಲಾ ಪಾಂಫಿಲ್‌ನಲ್ಲಿ ನಡೆದ ದ್ವಿಪಕ್ಷೀಯ ಮಾತುಕತೆ ನಂತರ ಉಭಯ ನಾಯಕರು ಜಂಟಿ ಸುದ್ದಿಗೋಷ್ಠಿ ನಡೆಸಿ ಮಾಹಿತಿ ಹಂಚಿಕೊಂಡರು. ಇದೇ ವೇಳೆ, ಭಾರತ ಮತ್ತು ಐರೋಪ್ಯ ಒಕ್ಕೂಟದ ಮಧ್ಯೆ ಮುಕ್ತ ವ್ಯಾಪಾರ ಒಪ್ಪಂದ ಏರ್ಪಡಲು ಇಟಲಿ ನೀಡಿದ ಬೆಂಬಲಕ್ಕಾಗಿ ಮೆಲೋನಿ ಅವರಿಗೆ ಮೋದಿ ಧನ್ಯವಾದ ಹೇಳಿದರು.

2014ರಲ್ಲಿ ಪ್ರಧಾನಿ ಹುದ್ದೆಗೇರಿದ ನಂತರ ಮೋದಿ ಅವರು ಇಟಲಿಗೆ ನೀಡುತ್ತಿರುವ ಮೊದಲ ದ್ವಿಪಕ್ಷೀಯ ಭೇಟಿ ಇದಾಗಿದೆ. ಈ ಹಿಂದೆ ಭಾರತದ ಪ್ರಧಾನಿಯೊಬ್ಬರು ಇಟಲಿಗೆ ದ್ವಿಪಕ್ಷೀಯ ಭೇಟಿ ನೀಡಿದ್ದು 2000ನೇ ಇಸವಿಯಲ್ಲಿ. ಈಗ ಮೋದಿ ಭೇಟಿಯಿಂದ ಭಾರತ ಹಾಗು ಇಟಲಿ ನಡುವಿನ ಸಂಬಂಧಕ್ಕೆ ಹೊಸ ಚೈತನ್ಯ ನೀಡಲಾಗುತ್ತಿದೆ ಎಂದು ಮೆಲೋನಿ ಅಭಿಪ್ರಾಯಪಟ್ಟರು.

ಇಟಲಿ ಪ್ರಧಾನಿ ಮೆಲೊನಿ ಅವರಿಗೆ ಪ್ರಧಾನಿ ಮೋದಿ ಹಸ್ತಲಾಘವ.

ಪ್ರಮುಖ ಒಪ್ಪಂದಗಳು

ತಂತ್ರಜ್ಞಾನ: ಕೃತಕ ಬುದ್ಧಿಮತ್ತೆ (ಎಐ), ಕ್ವಾಂಟಮ್ ಕಂಪ್ಯೂಟಿಂಗ್, ಬಾಹ್ಯಾಕಾಶ ತಂತ್ರಜ್ಞಾನ ಮತ್ತು ಡಿಜಿಟಲ್ ಮೂಲಸೌಕರ್ಯ ಕ್ಷೇತ್ರಗಳಲ್ಲಿ ಪರಸ್ಪರ ಸಹಕಾರ ವಿಸ್ತರಣೆ.

ಪ್ರಾದೇಶಿಕ ಸಂಪರ್ಕ: ಏಷ್ಯಾ, ಮಧ್ಯಪ್ರಾಚ್ಯ ಮತ್ತು ಯುರೋಪ್ ದೇಶಗಳನ್ನು ಪರಸ್ಪರ ಜೋಡಿಸುವ 'ಭಾರತ-ಮಧ್ಯಪ್ರಾಚ್ಯ-ಯುರೋಪ್ ಆರ್ಥಿಕ ಕಾರಿಡಾರ್' ಯೋಜನೆ ಜಾರಿಗೆ ಇಬ್ಬರೂ ನಾಯಕರಿಂದ ಬದ್ಧತೆಯ ಪುನರುಚ್ಚಾರ, ಭೌಗೋಳಿಕವಾಗಿ ಇಂಡೋ-ಪೆಸಿಫಿಕ್ ಮತ್ತು ಮೆಡಿಟರೇನಿಯನ್ ಪ್ರದೇಶಗಳನ್ನು ಜೋಡಿಸುವ ಮೂಲಕ ಈ ಪಾಲುದಾರಿಕೆ ಜಾಗತಿಕ ರಾಜತಾಂತ್ರಿಕತೆಗೆ ಹೊಸ ಆಯಾಮ ನೀಡಲಿದೆ ಎಂದು ಈ ನಾಯಕರು ಅಭಿಪ್ರಾಯಪಟ್ಟಿದ್ದಾರೆ. ವ್ಯಾಪಾರ ವಹಿವಾಟು ವೃದ್ಧಿ, ಬಂಡವಾಳ ಹೂಡಿಕೆಗೆ ಇರುವ ಅವಕಾಶಗಳು, ಅತಿವಿರಳ ಖನಿಜಗಳ ವಿನಿಮಯ, ಬ್ಯಾಹ್ಯಾಕಾಶ ಯಾನ, ಪರಮಾಣು ಇಂಧನ, ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಮೊದಲಾದ ವಿಷಯಗಳಲ್ಲಿ ಪರಸ್ಪರ ಸಹಕಾರ ವೃದ್ಧಿ, ಸಾಂಸ್ಕೃತಿಕ ಬಾಂಧವ್ಯಕ್ಕೆ ಒತ್ತು ನೀಡುವುದು ಮೊದಲಾದ ವಿಷಯಗಳ ಬಗೆಗೂ ಇಬ್ಬರೂ ನಾಯಕರ ನೇತೃತ್ವದ ನಿಯೋಗ ಚರ್ಚೆ ಮಾಡಿತು.

ತಪ್ಪಾಗಿ ಪಾರ್ಲೆ ಇಂಡಸ್ಟ್ರೀಸ್ ಷೇರು ಖರೀದಿಸಿದ ಜನ

ಮೆಲೊನಿಗೆ 'ಮೆಲೋಡಿ' ಗಿಫ್ಟ್: ರಿಯಲ್ ಎಸ್ಟೇಟ್ ಕಂಪನಿಗೆ ಲಾಭ

ದೆಹಲಿ: ಇಟಲಿ ಪ್ರವಾಸಕ್ಕೆ ತೆರಳಿರುವ ಪ್ರಧಾನಿ ನರೇಂದ್ರ ಮೋದಿ ಅವರು ಇಟಲಿ ಪ್ರಧಾನಿ ಜಾರ್ಜಿಯಾ ಮೆಲೋನಿ ಅವರಿಗೆ ಪಾರ್ಲೆ ಸಂಸ್ಥೆಯ ಮೆಲೋಡಿ ಚಾಕಲೇಟ್‌ಗಳನ್ನು ಗಿಫ್ಟ್ ಮಾಡಿದ್ದು ಈ ಬೆಳವಣಿಗೆ ಬೆನ್ನಲ್ಲೇ ರಿಯಲ್ ಎಸ್ಟೇಟ್ ಸಂಸ್ಥೆ ಪಾರ್ಲೆ ಇಂಡಸ್ಟ್ರೀಸ್ ಸಂಸ್ಥೆಯ ಷೇರುಗಳ ಮೌಲ್ಯದಲ್ಲಿ ಗಣನೀಯ ಏರಿಕೆಯಾಗಿದೆ !

ಅಚ್ಚರಿ ಎಂದರೆ ಪಾರ್ಲೆ ಇಂಡಸ್ಟ್ರೀಸ್‌ಗೂ ಈ ಚಾಕಲೇಟ್‌ಗೂ ಸಂಬಂಧವೇ ಇಲ್ಲ. ಪಾರ್ಲೆ ಮೆಲೋಡಿ ಪಾರ್ಲೆ ಪ್ರಾಡಕ್ಟ್ಸ್‌ನ ಸ್ವತ್ತು. ಜನಪ್ರಿಯ ಪಾರ್ಲೆ-ಜಿ ಬಿಸ್ಕತ್ತು ಮತ್ತು ಹಲವಾರು ಮಿಠಾಯಿ ವಸ್ತುಗಳಿಗೆ ಹೆಸರುವಾಸಿಯಾದ ಪಾರ್ಲೆ ಅತ್ತ ಪಾರ್ಲೆ ಇಂಡಸ್ಟ್ರೀಸ್‌ಈ ಮೆಲೋಡಿ ಟಾಫಿಗಳನ್ನು ಉತ್ಪಾದಿಸುತ್ತದೆ. ಪಾರ್ಲೆ ಇಂಡಸ್ಟ್ರೀಸ್ ಹೆಸರಿನ ಸಂಸ್ಥೆ ಮೂಲಸೌಕರ್ಯ, ರಿಯಲ್ ಎಸ್ಟೇಟ್ ಮತ್ತು ಕಾಗದದ ತ್ಯಾಜ್ಯ ಮರುಬಳಕೆಯಂತಹ ವ್ಯವಹಾರಗಳಲ್ಲಿ ತೊಡಗಿಸಿಕೊಂಡಿದೆ.

ಬರೊಬ್ಬರಿ 8 ಲಕ್ಷ ಮಂದಿ ಷೇರು ಖರೀದಿ: ಪ್ರಧಾನಿ ನರೇಂದ್ರ ಮೋದಿ ಮತ್ತು ಜಾರ್ಜಿಯಾ ಮೆಲೋನಿ ಅವರಿಗೆ ಪಾರ್ಲೆ ಮೆಲೋಡಿ ಚಾಕ್ಲೆಟ್ ಅನ್ನು ಉಡುಗೊರೆಯಾಗಿ ನೀಡಿದ ಬೆನ್ನಲ್ಲೇ ಲಕ್ಷಾಂತರ ಹೂಡಿಕೆದಾರರು ಇದು ಪಾರ್ಲೆ ಇಂಡಸ್ಟ್ರೀಸ್ ಸಂಸ್ಥೆಯ ಉತ್ಪನ್ನ ಎಂದು ಭಾವಿಸಿ ಈ ಕಂಪನಿ ಷೇರು ಖರೀದಿಸಿದ್ದಾರೆ. ಮೂಲಗಳ ಪ್ರಕಾರ ಸುಮಾರು 8 ಲಕ್ಷ ಮಂದಿ ಹೂಡಿಕೆದಾರರು ಪಾರ್ಲೆ ಇಂಡಸ್ಟ್ರೀಸ್ ಸಂಸ್ಥೆಯ ಷೇರುಗಳನ್ನು ಖರೀದಿ ಮಾಡಿದ್ದಾರೆ. ಮೂಲಗಳ ಪ್ರಕಾರ ಪಾರ್ಲೆ ಇಂಡಸ್ಟ್ರೀಸ್ ನ ಷೇರುಗಳ ಮೌಲ್ಯ ಬರೊಬ್ಬರಿ ಶೇ. 5ರಷ್ಟು ಏರಿಕೆ ಕಂಡಿದ್ದು, 5ರು.ಗಳಷ್ಟಿದ್ದ ಪಾರ್ಲೆ ಸಂಸ್ಥೆಯ ಷೇರು ಮೌಲ್ಯ ಇದೀಗ 5.25ಕ್ಕೆ ಏರಿಕೆಯಾಗಿ ವಹಿವಾಟು ನಡೆಸುತ್ತಿದೆ.

ವಿಡಿಯೋ ವೈರಲ್: ಇಟಲಿ ಪ್ರಧಾನಿ ಮೆಲೋನಿ ಅವರು ಪ್ರಧಾನಿ ಭಾರತದ ಮೋದಿ ತಮಗೆ ಮೆಲೋಡಿ ಚಾಕೊಲೇಟ್ ನೀಡುತ್ತಿರುವ ವಿಡಿಯೋವನ್ನು ಸೋಶಿಯಲ್ ಮೀಡಿಯಾದಲ್ಲಿ ಹಂಚಿಕೊಂಡಿದ್ದಾರೆ. 27 ಸೆಕೆಂಡುಗಳ ಈ ವಿಡಿಯೋ ಜೊತೆಗೆ 'ಧನ್ಯವಾದಗಳು ಪ್ರಧಾನಿ ಮೋದಿ' ಅಂತ ಮೆಲೋನಿ ಬರೆದುಕೊಂಡಿ ದ್ದಾರೆ. ಸದ್ಯ ಈ ವಿಡಿಯೋ ಸೋಷಿಯಲ್ ಮೀಡಿಯಾದಲ್ಲಿ ಸಖತ್ ವೈರಲ್ ಆಗಿದೆ.

ಧನ್ಯವಾದ ಹೇಳಿದ ಸಂಸ್ಥೆ: ಸಂಸ್ಥೆಯ ಷೇರುಗಳ ಮೌಲ್ಯ ಏರಿಕೆಯಾಗುತ್ತಲೇ ಇತ್ತ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪಾರ್ಲೆ ಅತ್ತ ಪಾರ್ಲೆ ಇಂಡಸ್ಟ್ರೀಸ್ ಧನ್ಯವಾದ ಹೇಳಿದೆ. ಈ ಕುರಿತು ಎಕ್ಸ್‌ನಲ್ಲಿ ಟ್ವೀಟ್ ಮಾಡಿರುವ ಸಂಸ್ಥೆ, 'ಜಾಗತಿಕ ವೇದಿಕೆಯಲ್ಲಿ ನಮ್ಮ ಸಂಸ್ಥೆಯ ಪ್ರಾಡಕ್ಟ್ ಅನ್ನು ತೆಗೆದುಕೊಂಡು ಹೋಗಿದ್ದಕ್ಕೆ ಪ್ರಧಾನಿ ಮೋದಿ ಅವರಿಗೆ ಧನ್ಯವಾದ' ಎಂದಿದೆ.

ವಿಶ್ವವಾಣಿ ಬೆಂಗಳೂರು 21-05-2026 ಗುರುವಾರ @vishwavaninews

ಆರಾಮ

ಅನುದಿನವೂ ವಿರಾಮಕ್ಕೆ ಒಂದು ನೆಪ

ಜಗ ಉಳಿಯಲು ಜೇನುನೊಣಗಳು ಉಳಿಯಬೇಕು!

ಆಧುನಿಕ ಜೇನುಸಾಕಣೆಯ ಪ್ರವರ್ತಕ ಆಂಟನ್ ಜನ್ಸಾ ಜನ್ಮದಿನ

ಅನಿಲ್ ಪ್ರಸಾದ್ ಹೆಗ್ಡೆ
ಮಾಜಿ ಸಂಸದ (ರಾಜ್ಯಸಭೆ) ಬಿಹಾರ

ಮೇ 20 ಅನ್ನು ವಿಶ್ವ ಜೇನುನೊಣ ದಿನವಾಗಿ ಆಚರಿಸಲಾಗುತ್ತದೆ. ಆಧುನಿಕ ಜೇನುಸಾಕಣೆಯ ಪ್ರವರ್ತಕ ಆಂಟನ್ ಜನ್ಸಾ (Anton Jansa) ಅವರ ಜನ್ಮದಿನವೇ ಈ ದಿನದ ಮಹತ್ವ. ಜೇನುನೊಣಗಳು ಆಹಾರ ಭದ್ರತೆ, ಜೀವವೈವಿಧ್ಯ ಮತ್ತು ಪರಿಸರ ವ್ಯವಸ್ಥೆಗೆ ಅತ್ಯಂತ ಅವಶ್ಯಕ. ಇವು ಪ್ರಮುಖ ಪರಾಗಸ್ಪರ್ಶಕಗಳಾಗಿದ್ದು, ಬೆಳೆಗಳ ಇಳುವರಿ ಹೆಚ್ಚಿಸಲು ಸಹಾಯಕ. ಪ್ರಪಂಚದ ಆಹಾರ ಭದ್ರತೆಯಲ್ಲಿ ಮೂರನೇ ಒಂದು ಭಾಗವು ಜೇನುನೊಣಗಳು ಮತ್ತು ಇತರ ಪ್ರಾಣಿ ಪರಾಗಸ್ಪರ್ಶಕ ಅವಲಂಬಿಸಿದೆ. ಜೇನುನೊಣಗಳು ಮತ್ತು ಇತರ ಪರಾಗಸ್ಪರ್ಶಕಗಳ ಮಹತ್ವ, ಪ್ರತಿಕೂಲಗಳು, ಅವುಗಳ ಸಂರಕ್ಷಣೆಗಾಗಿ ಮತ್ತು ಅವುಗಳ ಅಸ್ತಿತ್ವಕ್ಕೆ ಎದುರಾಗಿರುವ ಅಪಾಯಗಳ ಬಗ್ಗೆ ಜಾಗೃತಿ ಮೂಡಿಸಲು ವಿಶ್ವಸಂಸ್ಥೆಯ ಮಹಾಸಭೆಯು (UNGA) ಈ ದಿನವನ್ನು 'ವಿಶ್ವ ಜೇನುನೊಣ ದಿನ' ಎಂದು ಘೋಷಿಸಿದೆ.

ಪ್ರಸ್ತುತ ಕೃಷಿ ಪದ್ಧತಿಯ ಅತಿ ದೊಡ್ಡ ವಿರೋಧಾಭಾಸವೆಂದರೆ, ಜೇನುನೊಣಗಳು ನೈಸರ್ಗಿಕ ಪರಾಗಸ್ಪರ್ಶಕಗಳಾಗಿ ಬೆಳೆಗಳ ಉತ್ಪಾದನೆ ಮತ್ತು ಇಳುವರಿ ಹೆಚ್ಚಿಸುವಲ್ಲಿ ಅಮೂಲ್ಯವಾದ ಪಾತ್ರ ವಹಿಸುತ್ತವೆ. ಆದರೆ, ಕೃಷಿ ಇಳುವರಿ ಹೆಚ್ಚಿಸುವ ಉದ್ದೇಶದಿಂದ ಕೈಗಾರಿಕಾ ಕೃಷಿಯಲ್ಲಿ ಬಳಸಲಾಗುತ್ತಿರುವ ರಾಸಾಯನಿಕ ಗೊಬ್ಬರ ಮತ್ತು ಕೀಟನಾಶಕಗಳ ವಿವೇಚನಾರಹಿತ ಬಳಕೆಯು ಜೇನುನೊಣಗಳ ಅಸ್ತಿತ್ವಕ್ಕೆ ಅಪಾಯಕಾರಿಯಾಗಿದೆ. ಹವಾಮಾನ ಬದಲಾವಣೆಯ ವೈಪರೀತ್ಯ ಉಲ್ಬಣಗೊಳ್ಳಲು ಮತ್ತು ಕೃಷಿ ರಾಸಾಯನಿಕಗಳ ಬಳಕೆ ಜೇನುನೊಣಗಳ ಅಸ್ತಿತ್ವಕ್ಕೆ ದೊಡ್ಡ ಗಂಡಾಂತರವಾಗಿ ಪರಿಣಮಿಸಿವೆ.

ಹಿಂದಿನ ಆರು ದಶಕಗಳಲ್ಲಿ ಭಾರತದಲ್ಲಿ ಏಕಬೆಳೆ ಕೃಷಿ (monoculture farming) ಪದ್ಧತಿಯು ಹೆಚ್ಚಾಗಿದೆ. ಇದರ ಪರಿಣಾಮವಾಗಿ ವಿವಿಧ ಪ್ರಕಾರದ ಪರಾಗ ಮತ್ತು ಮಕರಂದ ಸಿಗುವ ಹೂವಿನ ಮತ್ತು ಇತರ ಗಿಡ, ಮರ, ಬೆಳೆಗಳ ವೈವಿಧ್ಯತೆ ಕುಗ್ಗಿ ಜೇನುನೊಣಗಳ ರೋಗನಿರೋಧಕ ಶಕ್ತಿಯ ಮೇಲೆ ಪರಿಣಾಮ ಬೀರುತ್ತಿದೆ. ಜೇನುನೊಣಗಳಲ್ಲಿ ಪೋಷಕಾಂಶಗಳ ಕೊರತೆ ಮತ್ತು ಕೀಟನಾಶಕಗಳ ಹಾವಳಿಯ ಈ ಮಾರಕ ಸಂಯೋಜನೆಯು ಜೇನುನೊಣಗಳ ಮರಣದರವನ್ನು ಗಮನಾರ್ಹವಾಗಿ ಹೆಚ್ಚಿಸುತ್ತಿದ್ದು, ಪರಾಗಸ್ಪರ್ಶ ಪ್ರಕ್ರಿಯೆಗೆ ಮತ್ತು ಕೃಷಿ ಪರಿಸರ ವ್ಯವಸ್ಥೆಗೆ (Agroeco-system) ತೀವ್ರ ಹಾನಿ ಉಂಟುಮಾಡುತ್ತದೆ.

ಯುರೋಪಿಯನ್ ಒಕ್ಕೂಟದ ಕಾಮನ್ ಅಗ್ರಿಕಲ್ಚರಲ್ ಪಾಲಿಸಿ(CAP) ಅಲ್ಲಿಯ ರೈತರಿಗೆ ಸುಸ್ಥಿರ, ಪರಿಸರ ಸ್ನೇಹಿ ಕೃಷಿ ಮತ್ತು ಜೀವವೈವಿಧ್ಯತೆ ಉತ್ತೇಜಿಸಲು ಪರಿಸರಕ್ಕೆ ಸಂಬಂಧಿಸಿದ ಯೋಜನೆಗಳ ಮೂಲಕ (eco- schemes) ವಿಶೇಷ ಆರ್ಥಿಕ ಬೆಂಬಲ ಒದಗಿಸುತ್ತದೆ. CAP ಅಡಿಯಲ್ಲಿ ಜೇನುನೊಣಗಳು ಮತ್ತು ಇತರ ಪರಾಗಸ್ಪರ್ಶಕಗಳನ್ನು ಆಕರ್ಷಿಸುವ ಸಸ್ಯಗಳನ್ನು ಬೆಳೆಯುವ ರೈತರಿಗೆ ಸಹಾಯಧನ (subsidy) ಒದಗಿಸುವ ಕೆಲವು ಯೋಜನೆಗಳನ್ನು ರೂಪಿಸಿ ರೈತರನ್ನು ಪ್ರೋತ್ಸಾಹಿಸಲಾಗುತ್ತದೆ. ಉದಾಹರಣೆಗೆ ಪರಾಗಸ್ಪರ್ಶಕಗಳನ್ನು (pollinators) ಆಕರ್ಷಿಸುವ ಫಾಸೆಲಿಯಾ ಟ್ಯಾನಾಸೆಟಿಫೋಲಿಯಾ (Phacelia), ಫಾಗೋಪೈರಮ್ ಎಸ್ಕುಲೆಂಟಮ್ (Buckwheat), ಮತ್ತು ಟ್ರೈಫೋಲಿಯಮ್ ರೆಪೆನ್ಸ್ (White Clover) ನಂತಹ ಸಸ್ಯಗಳನ್ನು ಬೆಳೆಯುವ ರೈತರಿಗೆ ಆರ್ಥಿಕ ಪ್ರೋತ್ಸಾಹವನ್ನು ನೀಡಲಾಗುತ್ತದೆ. ಈ ಯೋಜನೆಗಳು ಪರಿಸರ ಸಂರಕ್ಷಣೆ, ಜೀವವೈವಿಧ್ಯತೆ ಮತ್ತು ಹವಾಮಾನ ಬದಲಾವಣೆಯ ಸವಾಲುಗಳಿಗೆ ಹೊಂದಿಕೊಳ್ಳುವ ಕೃಷಿ ಪದ್ಧತಿಗಳನ್ನು ಉತ್ತೇಜಿಸುವ ಪ್ರಮುಖ ನೀತಿ ಸಾಧನಗಳಾಗಿವೆ.

ಯುರೋಪಿಯನ್ ಒಕ್ಕೂಟದಲ್ಲಿರುವ ಅನೇಕ ರೈತರು ತಮ್ಮ ಜಮೀನುಗಳಲ್ಲಿ ಜೇನುಗೂಡುಗಳನ್ನು ಇರಿಸಲು ಜೇನುಸಾಕಣೆದಾರರನ್ನು ಆಹ್ವಾನಿಸುತ್ತಾರೆ. ಇದರಿಂದ ರೈತರಿಗೆ ಬೆಳೆ ಇಳುವರಿಯನ್ನು ಹೆಚ್ಚಿಸಲು ಸಹಾಯ ವಾಗುವುದಲ್ಲದೆ, ಜೇನುಸಾಕಣೆದಾರರಿಗೆ ನೈಸರ್ಗಿಕ ಪರಾಗ ಮತ್ತು ಮಕರಂದ ಸುಲಭವಾಗಿ ಸಿಗಲು ಅನುಕೂಲ. ಈ ಕ್ರಮಗಳು ಜೀವವೈವಿಧ್ಯತೆಯನ್ನು ಹೆಚ್ಚಿಸಲು, ಪರಾಗಸ್ಪರ್ಶವನ್ನು ಸುಧಾರಿಸಲು ಮತ್ತು ಸುಸ್ಥಿರ ಕೃಷಿಯನ್ನು ಖಚಿತಪಡಿಸುವುದಲ್ಲದೆ ಕೃಷಿ ಉತ್ಪಾದಕತೆಯನ್ನು ಬಲಪಡಿಸುವ ಗುರಿಯನ್ನು ಹೊಂದಿದೆ. ಈ ನೀತಿಯ ಅಡಿಯಲ್ಲಿ, ಯುರೋಪಿಯನ್ ಒಕ್ಕೂಟ (EU) ಕಾಡುಜೇನು ಮತ್ತು ಸಾಕುಜೇನು ಎರಡೂ ರೀತಿಯ ಪರಾಗಸ್ಪರ್ಶಕಗಳ ವ್ಯಾಪಕ ಸಂರಕ್ಷಣೆಗೆ ಒತ್ತು ನೀಡುತ್ತದೆ.

2023ರಲ್ಲಿ ಯುರೋಪಿಯನ್ ಯೂನಿಯನ್ ತನ್ನ 'ಫಾರ್ಮ್ ಟು ಫೋರ್ಕ್' (Farm to Fork) ಕಾರ್ಯತಂತ್ರದ ಅಡಿಯಲ್ಲಿ ಸಸ್ಟೈನಬಲ್ ಯೂಸ್ ರೆಗ್ಯುಲೇಶನ್ (SUR) ಎಂಬ ಪ್ರಸ್ತಾವನೆ ಮುಂದಿಟ್ಟಿತ್ತು. ಇದು 2030ರ ವೇಳೆಗೆ ರಾಸಾಯನಿಕ ಕೀಟನಾಶಕಗಳ ಬಳಕೆಯನ್ನು ಶೇ.50ರಷ್ಟು ಕಡಿಮೆ ಮಾಡುವ ಗುರಿ ಹೊಂದಿತ್ತು. ಆದರೆ, ಯುರೋಪಿನ ಹಲವು ದೇಶಗಳ ರೈತರು 'ಟ್ರ್ಯಾಕ್ಟರ್ ಮಾರ್ಚ್' ನಡೆಸುವ ಮೂಲಕ ಈ ಕಾನೂನನ್ನು ತೀವ್ರವಾಗಿ ವಿರೋಧಿಸಿದರು. ಈ ಪ್ರಸ್ತಾವನೆ ಜಾರಿಗೆ ಬಂದರೆ ಇದು ತಮ್ಮ ಇಳುವರಿ ಕಡಿಮೆ ಮಾಡುತ್ತದೆ, ಕೃಷಿಯಲ್ಲಿ ಖರ್ಚು ಹೆಚ್ಚಿಸುತ್ತದೆ ಮತ್ತು ಜಾಗತಿಕ ಸ್ಪರ್ಧೆಯಲ್ಲಿ ತಾವು ಹಿಂದೆ ಬೀಳುತ್ತೇವೆ ಎಂಬ ಆತಂಕದಿಂದ ರೈತರು ಈ ಪ್ರಸ್ತಾವನೆ ವಿರೋಧಿಸಿದ್ದರು. ಯುರೋಪಿಯನ್ ಯೂನಿಯನ್ ಚುನಾವಣೆಗಳು 2024ರ ಜೂನ್‌ನಲ್ಲಿ ನಡೆಯಲು ನಿಗದಿಯಾಗಿದ್ದವು. ರೈತರ ಬೃಹತ್ ಪ್ರತಿಭಟನೆಗಳ ನಂತರ, ಯುರೋಪಿಯನ್ ಆಯೋಗದ ಅಧ್ಯಕ್ಷೆ ಉರ್ಸುಲಾ ವಾನ್‌ಡೆರ್ ಲೆಯೆನ್ ಅವರು ಚುನಾವಣೆಗಳಿಗೆ ಕೆಲವೇ ತಿಂಗಳುಗಳ ಮುಂಚಿತವಾಗಿ, ಫೆಬ್ರವರಿ 6, 2024ರಂದು ಎಸ್‌ಯುಆರ್ (SUR) ಪ್ರಸ್ತಾವನೆ ಹಿಂಪಡೆಯುವುದಾಗಿ ಘೋಷಿಸಿದರು. ಅನೇಕ ವಿಜ್ಞಾನಿಗಳು ಮತ್ತು ಪರಿಸರವಾದಿಗಳು ಈ ನಿರ್ಧಾರ ಟೀಕಿಸಿದ್ದು, ಇದು ಕೀಟನಾಶಕ ಮಾಲಿನ್ಯ ಕಡೆಗಣಿಸುತ್ತದೆ ಮತ್ತು ಜೇನುನೊಣಗಳ ಮೇಲೆ ಗಂಭೀರ ದುಷ್ಪರಿಣಾಮ ಬೀರುತ್ತದೆ, ಜತೆಗೆ ಜೀವವೈವಿಧ್ಯತೆಯ ನಷ್ಟ ಮತ್ತು ಜೇನುನೊಣಗಳ ಆರೋಗ್ಯದ ಅಪಾಯ ನಿರ್ಲಕ್ಷಿಸುತ್ತದೆ ಎಂದು ಎಚ್ಚರಿಸಿದ್ದಾರೆ. ಭಾರತದಲ್ಲಿ ಈಗಾಗಲೇ ಅನುಮೋದನೆ ಪಡೆದಿರುವ ಏಕೈಕ ಜಿಎಂ ತಳಿ ಬಿಟಿ ಹತ್ತಿ.

ಇದಕ್ಕೂ ಕೀಟನಾಶಕಗಳನ್ನು ಸಿಂಪಡಿಸುವ ಅಗತ್ಯವಿದೆ. ಆದರೆ, ಹರ್ಬಿಸೈಡ್ ಟಾಲರೆಂಟ್ ಬಿಟಿ (HTBt) ಹತ್ತಿ ಬೆಳೆಯಲು ಸರಕಾರದ ನಿಷೇಧವಿದ್ದರೂ, ಅನೇಕ ರಾಜ್ಯಗಳಲ್ಲಿ ರೈತರು ಅಕ್ರಮವಾಗಿ HTBt ಬೀಜಗಳನ್ನು ಬಳಸುತ್ತಿದ್ದಾರೆ. ಏಕೆಂದರೆ ಇದು ಕಳೆನಾಶಕವಾದ ಗ್ಲೈಫೋಸೇಟ್ ಅನ್ನು ತಡೆದುಕೊಳ್ಳುತ್ತದೆ, ಇದು ಹತ್ತಿ ಬೆಳೆಗೆ ಯಾವುದೇ ಹಾನಿಯಾಗದಂತೆ ಕಳೆಗಳನ್ನು ನಾಶಪಡಿಸುವುದರ ಮೂಲಕ ಕೈಯಿಂದ ಕಳೆ ಕೀಳುವ ವೆಚ್ಚವನ್ನು ಗಣನೀಯವಾಗಿ ಕಡಿಮೆ ಮಾಡುತ್ತದೆ.

ಯುರೋಪ್ ಮತ್ತು ಭಾರತದ ಈ ಎರಡು ಉದಾಹರಣೆಗಳು, ರೈತರು ತಮ್ಮ ಯೋಗಕ್ಷೇಮಕ್ಕೆ ಯಾವುದು ಉತ್ತಮ ಎಂದು ನಂಬುತ್ತಾರೋ ಅದನ್ನೇ ಮಾಡುತ್ತಾರೆ ಎಂಬುದನ್ನು ತೋರಿಸುತ್ತವೆ. ಜಾಗತಿಕ ಆರ್ಥಿಕ ಅಸಮಾನತೆಯ ನಡುವೆ, ರೈತರನ್ನು ನೇರವಾಗಿ ದೂರುವುದು ಅಥವಾ ಕೇವಲ ನೀತಿಪಾಠಗಳನ್ನು ಹೇಳುವುದು ಸರಿಯಲ್ಲ. ಏಕೆಂದರೆ, ಅವರು ತಮ್ಮ ಜೀವನೋಪಾಯವನ್ನು ಭದ್ರಪಡಿಸಿಕೊಳ್ಳಲು ಮತ್ತು ಬೆಳೆ ಇಳುವರಿ ಹೆಚ್ಚಿಸಿಕೊಳ್ಳಲು ಅನಿವಾರ್ಯವಾಗಿ ಈ ರಾಸಾಯನಿಕಗಳನ್ನು ಬಳಸುತ್ತಾರೆ. ಭಾರತದಲ್ಲಿ ಯಾವುದೇ ರಾಸಾಯನಿಕ ಗೊಬ್ಬರಗಳಾಗಲೀ, ಕೀಟನಾಶಕಗಳನ್ನಾಗಲೀ ಬಳಸದೇ ಈಗಲೂ ಉತ್ತಮ ಬೆಳೆ ತೆಗೆಯುವ ರೈತರು ಇದ್ದಾರೆ ಎಂಬುದನ್ನು ನಾವು ಮರೆಯಬಾರದು.

ಹವಾಮಾನ ಬದಲಾವಣೆಯ ಬಿಕ್ಕಟ್ಟು ದೇಶಗಳ ಗಡಿಗಳನ್ನು ಮೀರಿದ್ದಾಗಿದೆ. ಇದು ಯಾವುದೇ ಒಂದು ದೇಶಕ್ಕೆ ಸೀಮಿತವಾಗಿಲ್ಲ. ಈ ಕಾರಣಕ್ಕಾಗಿ 'ವಿಶ್ವ ಜೇನು ದಿನ'ದ (World Bee Day) ಸಂದರ್ಭದಲ್ಲಿ ಪ್ರಪಂಚದಾದ್ಯಂತ ಜನರು ಹೆಚ್ಚುತ್ತಿರುವ ಆರ್ಥಿಕ ಅಸಮಾನತೆ ಹೋಗಲಾಡಿಸಲು ಕೆಲಸ ಮಾಡುವುದರ ಜತೆ ಜತೆಗೆ, ಜಗತ್ತಿನ ಪ್ರತಿಯೊಬ್ಬ ವ್ಯಕ್ತಿಯೂ ಸ್ವತಃ ಜವಾಬ್ದಾರಿಯನ್ನು ಹೊತ್ತುಕೊಂಡು, ಒಬ್ಬ ಪರಿಸರವಾದಿಯಾಗಿ ಕಾರ್ಯನಿರ್ವಹಿಸಿ ಈ ವಿಷಯಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಿ, ಪ್ರತಿಯೊಂದು ಕುಟುಂಬವೂ ಹವ್ಯಾಸವಾಗಿ ಕನಿಷ್ಠ 2 ಜೇನುಗೂಡು ವಸಾಹತುಗಳನ್ನು (bee hive colonies) ಸಾಕುವ, ಸಾವಯವ ಕೃಷಿಯನ್ನು ಅಭ್ಯಾಸ ಮಾಡುವ ಅಥವಾ ಉತ್ತೇಜಿಸುವ ದೃಢಸಂಕಲ್ಪ ಮಾಡಿದರೆ ಮಾತ್ರ ಜೇನುನೊಣಗಳು ಬದುಕುಳಿಯುತ್ತವೆ ಮತ್ತು ಜಗತ್ತು ಉಳಿಯುತ್ತದೆ.

ಬೀಸು ಕಲ್ಲು ಬೀಸುವ ಕಾಲ ಮತ್ತೊಮ್ಮೆ ಬರಲಿ!

● ಎಂ. ಪರಮೇಶ್ವರ, ಮದ್ದಿಹಳ್ಳಿ

ಮುಂಜಾನೆ, ಮಧ್ಯಾಹ್ನ, ಸಾಯಂಕಾಲ ಒಂದಲ್ಲ ಒಂದು ಮನೆಗಳಲ್ಲಿ ರಾಗಿ ಬೀಸುವ ಕಲ್ಲಿನ ಶಬ್ದ ಜತೆಗೆ ಜಾನಪದ ಹಾಡುಗಳು ಕೇಳಿ ಬರುತ್ತಿದ್ದವು. ಅದರಲ್ಲೂ ವಿಶೇಷವಾಗಿ ಸಾಯಂಕಾಲ ಬೆಳದಿಂಗಳ ತಂಗಾಳಿಯಲ್ಲಿ ಬೀಸುವ ಕಲ್ಲಿನ ಹಾಡುಗಳು ಜತೆ ಜತೆಗೆ ಜಾನಪದ. ಹಾಡುಗಳು, ವೀರಗ್ಯಾತಾರಾಯನ ಹಾಡುಗಳು, ಸೋಬಾನೇ ಪದಗಳು ಎಲ್ಲೆಡೆ ತೇಲಿ ಬರುತ್ತಿದ್ದವು. ಒಂದಿಲ್ಲೊಂದು ಮನೆಯಲ್ಲಿ ಬೆಳಗಿನ ಜಾವದವರೆವಿಗೂ ಕೇಳಿ ಬರುತ್ತಿದ್ದ ಕಾಲವದು. ಬೀಸುವ ಕಲ್ಲಿನ ಹಾಡುಗಳು ಒಬ್ಬರಿಂದ ಮತ್ತೊಬ್ಬರಿಗೆ, ಒಬ್ಬರ ಬಾಯಿಂದ ಇನ್ನೊಬ್ಬರ ಬಾಯಿಗೆ ಬರುತ್ತಿದ್ದ ಕಾಲವದು. ಇಂದು ಹಾಡುವವರಿಲ್ಲ ಕಾರಣ ಬೀಸುವ ಕಲ್ಲು ಬಿಟ್ಟು ಹಿಟ್ಟಿನ ಗಿರಣಿಗೆ ಮಾರು ಹೋಗಿದ್ದಾರೆ. ಕಾರಣ ಬೇಗ ಹಾಗೂ ಕಷ್ಟ ಪಡುವುದು ಬೇಡವೆಂದು.

ಬೀಸುವ ಕಲ್ಲಿನ ಜತೆಗೆ ಹಾಡುಗಳು ನಮ್ಮಜ್ಜಿ ಕಾಲಕ್ಕೆ ಕೊನೆಗೊಂಡಿವೆ. ಹಳ್ಳಿಗಳಲ್ಲಿ ಉಪಯೋಗದಲ್ಲಿದ್ದ ಹಿಟ್ಟು ಬೀಸುವ ಕಲ್ಲಿನಲ್ಲಿ ಎರಡು ಕಲ್ಲಿನ ವೃತ್ತಗಳಿರುತ್ತವೆ. ಅದಕ್ಕೆ ಮೇಲಿನ ಕಲ್ಲಿನ ವೃತ್ತಕ್ಕೆ ಒಂದು ಮರದ ಗೂಟವಿರುತ್ತದೆ. ಕೆಳಗಿನ ಕಲ್ಲಿನ ಮಧ್ಯೆ ಒಂದು ಕಬ್ಬಿಣದ ಚಿಕ್ಕ ಮೊಳೆಯಿರುತ್ತದೆ. ಇದರ ಮೇಲೆ ವೃತ್ತಕಾರದ ಮೇಲಿನಕಲ್ಲು ಅದರ ಮೇಲೆ ಸರಿಯಾಗಿ ಕುಳಿತುಕೊಳ್ಳುತ್ತದೆ. ರಾಗಿ ಕಲ್ಲಿನಲ್ಲಿ ಬೀಸಲು ಇಬ್ಬರು ಇರುತ್ತಾರೆ. ಒಬ್ಬರೂ ಬೀಸಬಹುದು. ಮೊದಲು, ಈ ಬೀಸುವ ಕಲ್ಲನ್ನು ಒಂದು ಗೋಣಿತಟ್ಟಿನ ಮೇಲೆ ಹರಡಿದ ಬಿಳಿಯ ದಪ್ಪ-ಬಟ್ಟೆಯಮೇಲೆ ಇಡಬೇಕು. ಬೀಸುವಾಗ, ಬಲಗೈಯಲ್ಲೊ ಅಥವಾ ಎಡಗೈಯಲ್ಲೊ, ಒಂದು ಮುಷ್ಟಿ ಧಾನ್ಯವನ್ನು ಕಲ್ಲಿನ ಬಾಯಲ್ಲಿ ಹಾಕಬೇಕು. ನಿಧಾನವಾಗಿ ಕಲ್ಲನ್ನು ತಿರುಗಿಸಬೇಕು. ಕಾಳು ಚೆನ್ನಾಗಿ ಪುಡಿಯಾಗಿದೆಯೆಂಬುದನ್ನು ಖಾತ್ರಿಮಾಡಿಕೊಂಡ ಮೇಲೆ ಸ್ವಲ್ಪ ಜೋರಾಗಿ ಬೀಸಬಹುದು. ಯಾವುದೇ ಅಕ್ಷರ ವಿದ್ಯೆ ಗೊತ್ತಿಲ್ಲದೇ ತಮ್ಮ ಸ್ಮೃತಿ ನೆನಪುಗಳಿಂದ ತಲ ತಲಾಂತರಗಳಿಂದ ಉಳಿದುಕೊಂಡಿದ್ದ ಜಾನಪದ ಕಲೆ, ಸಂಸ್ಕೃತಿ ಬೀಸು ಕಲ್ಲಿನ ಜತೆಗೆ ನಶಿಸುತ್ತಿದೆ. ಇಂದಿನ ಮಹಿಳೆಯರಿಗೆ ಹಾಡುಗಳು ಬರುತ್ತಿಲ್ಲ, ರಾಗಿ ಬೀಸೋದು ಗೊತ್ತಿಲ್ಲ. ಇಂದು ಯೋಗಾಸನ ತರಗತಿಗಳಲ್ಲಿ ಬೀಸು ಕಲ್ಲಿನ ರೀತಿ ಕುಳಿತು ಆಸನ ಹಾಕಿ ಬೀಸು ಕಲ್ಲಿನ ರೀತಿ ಕೈ ತಿರುಗಿಸುವುದು ಕಲಿಸುತ್ತಿದ್ದಾರೆ ಅಂದು ಇಷ್ಟೆಲ್ಲಾ ಕೆಲಸ ಮಾಡುತ್ತಿದ್ದರೇ ಯಾವ ಖಾಯಿಲೆಯೂ ಬರುತ್ತಿರಲಿಲ್ಲ. ಅದಕ್ಕೆ ಕೆಲವು ಗಾದೆಗಳು ಉಂಟು.

'ಇಟ್ಟಮ್ ತಿಂದಂ ಬೆಟ್ಟಮ್ ಕಡಿದಂ
ಇಟ್ಟಮ್ ಬಿಟ್ಟಮ್ ಕೆಟ್ಟಮ್'

'ರಾಮ ರಾಜ್ಯ ಆಳಿದರೂ ರಾಗಿ ಬೀಸೋದು ತಪ್ಪಲಿಲ್ಲ'

'ಕುಟ್ಟಲಾರದವಳಿಗೆ ಕೂಳಿಲ್ಲ. ಬೀಸಲಾರದವಳಿಗೆ ಹಿಟ್ಟಿಲ್ಲ'

'ನೆಂಟರು ಬಿಕ್ಕಿ ಬಿಕ್ಕಿ ಅತ್ತರೆ ಬೀಸುವ ಕಲ್ಲು ತಿರುಗೀತೆ?'

ಬೀಸುವ ಕಲ್ಲು ಕೊಟ್ಟವರಿಗೆ ಸಕಲ ಸೌಭಾಗ್ಯ ಬರಲಿ, ಅಂಥವರ ಮನೆಗೆ ಮಲ್ಲಿಗೆ ಮುಡಿಯುವ ಸೊಸೆ ಬರಲಿ. ಮತ್ತೆ ಬೀಸುವ ಭಾಗ್ಯದ ಜತೆಗೆ ನಮ್ಮ ಜಾನಪದ ಕಲೆ, ಹಾಡುಗಳು ಚಿರವಾಗಿ ಮುಂದಿನ ಪೀಳಿಗೆಗೆ ಉಳಿಯುವಂತಾಗಲಿ.

ವೀಳ್ಯದೆಲೆ: ಆರೋಗ್ಯಕ್ಕೆ ಆಪ್ತ

● ಮೋಹನ ಭಟ್ಟ, ಅಗಸೂರು.

ಕರಾವಳಿಯಲ್ಲಿ ಹಾಗೂ ಮಲೆನಾಡಿನಲ್ಲಿ ಇತರೆಡೆಗಳಲ್ಲಿ ಕವಳ ಜನಪ್ರಿಯ ಹಾಗೂ ವ್ಯಾಪಕ. ಅದಕ್ಕೆ ವೀಳ್ಯದೆಲೆಯೇ ಮೂಲ ವಸ್ತು. ವೀಳ್ಯದೆಲೆ ಬೆಳೆಯಲು ಅದರದೇ ಆದ ವಾತಾವರಣ ಬೇಕು. ನೆರೆಯ ಜಿಲ್ಲೆಯಿಂದ ಪ್ರತಿನಿತ್ಯವೂ ಜಿಲ್ಲೆಯ ಮಾರುಕಟ್ಟೆಗೆ ವೀಳ್ಯದೆಲೆ ಪಿಂಡಿ ಬರುತ್ತದೆ. ಹೊನ್ನಾವರದಿಂದ ನೆರೆ ರಾಜ್ಯದ ವೀಳ್ಯದೆಲೆ ರವಾನೆಯಾಗುತ್ತದೆ. ಹೀಗಾಗಿ ಮಾರುಕಟ್ಟೆಯ ಬೇಡಿಕೆಯಂತೆ ಪೂರೈಕೆ.

ಭಾರತಕ್ಕೆ ವೀಳ್ಯದೆಲೆಯು ಬಂದಿದ್ದು ಪುರಾತನ ಕಾಲದಲ್ಲಿ. ಇಂಡೋನೇಷ್ಯಾದ ದ್ವೀಪಗಳಲ್ಲಿ ವ್ಯಾಪಕವಾಗಿ ಬೆಳೆಯುತ್ತಿದ್ದ ಇದನ್ನು ಗುಪ್ತ ರಾಜರ ಅವಧಿಯಲ್ಲಿ ಬಂತು ಎನ್ನಲಾಗಿದೆ. ಬನಾರಸ್ ಪಾನ್‌ಗೆ ಬಳಸುವ ತೆಳ್ಳಗೆ ಇರುವ ಎಲೆಗೆ ವ್ಯಾಪಕ ಬೇಡಿಕೆ. ಅಂಬಾಡಿ ಎಲೆ, ನಾಗಬಳ್ಳಿ ಎಲೆ ಎಂಬಿತ್ಯಾದಿ ತಳಿಯ ಎಲೆಗಳಿಗೆ ತುಂಬ ಹಾಗೂ ಎಲ್ಲ ಕಾಲದಲ್ಲಿಯೂ ಬೇಡಿಕೆ ಇರುತ್ತದೆ.

ನೂರಾರು ಬಗೆಯ ಪಾನ್‌ಗಳು ಪ್ರಾದೇಶಿಕತೆಯ ಬೇಡಿಕೆ. ವಿವಿಧ ಸಮಾರಂಭಗಳಲ್ಲಿ ಊಟದ ನಂತರ ಇದು ಬೇಕೇಬೇಕು. ಬೇಡಿಕೆಯ ಅನ್ವಯ ಪೂರೈಕೆ ದಾರರೂ ಇದ್ದಾರೆ. ಗಾಯ ಹಾಗೂ ಇತರ ದೈಹಿಕ ಸಮಸ್ಯೆಗಳಿಗೆ ಔಷಧವಾಗಿ ಬಳಕೆ ಹೀಗಾಗಿ ನಮ್ಮ ಬದುಕಿನಲ್ಲಿ ಇದು ಹಾಸು ಹೊಕ್ಕಾಗಿದೆ.

ಅಮ್ಮಾ ಅಮ್ಮಾ ಅನ್ನೋ ಮಾತು ಬಂತು ಎಲ್ಲಿಂದ...

● ನಂದಿನಿ ಪಟೇಲ್

ಅಮ್ಮಾ ಅಮ್ಮಾ ಅನ್ನೋ ಮಾತು ಬಂತು ಎಲ್ಲಿಂದ..ಭೂಮಿಗೆ ಬಂದ ಮೊದಲನೇ ಕಂದನ ಅಳುವ ದನಿಯಿಂದ... ಹೌದು.. ಮಗು ಹುಟ್ಟಿದ ಕ್ಷಣವೇ ಅಮ್ಮಾ ಅನ್ನೋ ಬಹು ದೊಡ್ಡ ಶಕ್ತಿಯ ಪದದಿಂದ ಅದು ಅಳುತ ಭುವಿಗೆ ಬರುತ್ತದೆ. ಆ ಅಗಮ್ಯ ಶಕ್ತಿಯ ಚೈತನ್ಯವೇ ಆ ಮಗು ಕೂಗುವ ಪದದಲ್ಲಿದೆ. ಅದುವೇ 'ಅಮ್ಮಾ'. ಈ ಜಗತ್ತಿನಲ್ಲಿ ದೇವರನ್ನು ಕಣ್ಣಾರೆ ನೋಡಿಲ್ಲವೆಂದು ಹಲವರು ಹೇಳಬಹುದು. ಆದರೆ, ದೇವರ ಪ್ರೀತಿಯನ್ನು ಅನುಭವಿಸಿಲ್ಲ ಎಂದು ಯಾರೂ ಹೇಳಲಾರರು. ಯಾಕೆಂದರೆ ಆ ಪ್ರೀತಿಯ ರೂಪವೇ ನಮ್ಮ-ನಿಮ್ಮೆಲ್ಲರ ಅಮ್ಮಾ.

ಮಗು ಈ ಭೂಮಿಗೆ ಬರುವ ಮೊದಲೇ ಆ ಮಗುವಿಗಾಗಿ ಕನಸು ಕಾಣುವವಳು ಅಮ್ಮ. ತನ್ನ ನೋವನ್ನು ಮರೆತು ಮಗುವಿನ ನಗು ನೋಡಿದರೆ ಸಾಕೆಂದು ಬದುಕುವ ಹೃದಯ ಅವಳದು. ಅವಳ ಕೈಯಲ್ಲಿ ಮಾಯೆಯಿದೆ, ಮಾತಿನಲ್ಲಿ ಮಮತೆಯಿದೆ, ಕಣ್ಣಲ್ಲಿ ಕಾಳಜಿಯಿದೆ. ಅದಕ್ಕೇ ಅಮ್ಮಾ ಎನ್ನೋದು ಕೇವಲ ಒಂದು ಪದವಲ್ಲ, ಅದು ಒಂದು ದೊಡ್ಡ ಶಕ್ತಿ.

ಮಗು ಬಿದ್ದಾಗ, ಅತ್ತಾಗ ಮೊದಲಾಗಿ ಓಡಿ ಬರುವವಳು ಅಮ್ಮಾ. ಜ್ವರ ಬಂದಾಗ ಇಡೀ ರಾತ್ರಿ ನಿದ್ರೆ ಮಾಡದೆ ಕಾದುಕೊಳ್ಳುವವಳು ಅಮ್ಮಾ. ತನ್ನ ಹಸಿವನ್ನು ಮರೆತು ಮಗುವಿನ ಹೊಟ್ಟೆ ತುಂಬಿಸುವವಳು ಅಮ್ಮಾ. ಮನೆಯ ಎಲ್ಲರ ಸಮಸ್ಯೆ ಕೇಳಿ, ತನ್ನ ನೋವನ್ನು ಒಳಗೊಳಗೆ ಮರೆಮಾಡಿಕೊಳ್ಳುವ ಸಹನೆಯ ಪ್ರತಿರೂಪವೇ ಅಮ್ಮಾ.

ನಾವು ಎಲ್ಲೇ ಹೋಗಿ ಮನೆಗೆ ಬಂದ ಕೂಡಲೇ ನಮಗೆ ಏನಾದರೂ ಬೇಕಿರಲಿ ಇಲ್ಲ ಬೇಡವಾಗಿರಲಿ ನಮ್ಮ ಕಣ್ಣು, ನಮ್ಮ ದನಿ, ನಮ್ಮ ಮನ ಎಲ್ಲವೂ ಬೇಡುವುದು ಅವಳನ್ನೇ, ಅಮ್ಮಾ ಎಲ್ಲಿ? ಎಂದು. ಜೀವನದಲ್ಲಿ ಎಷ್ಟೇ ದೊಡ್ಡವನಾದರೂ, ಎಷ್ಟೇ ದೂರ ಹೋದರೂ, ಅಮ್ಮಾ ಎನ್ನುವ ಕರೆಯ ಮುಂದೆ ಪ್ರತಿಯೊಬ್ಬರೂ ಮತ್ತೆ ಚಿಕ್ಕ ಮಕ್ಕಳಾಗಿಬಿಡುತ್ತಾರೆ. ಯಾಕೆಂದರೆ ಅಮ್ಮನ ಮಡಿಲು ಜಗತ್ತಿನ ಅತಿ ಸುರಕ್ಷಿತ ಸ್ಥಳ. ಅವಳ ಪ್ರೀತಿ ಯಾವುದೇ ಷರತ್ತುಗಳನ್ನೂ ಕೇಳುವುದಿಲ್ಲ. ಮಕ್ಕಳ ಜಯ ಕಂಡಾಗ ಹೆಮ್ಮೆಪಡುವವಳು ಅವಳು; ಸೋಲು ಬಂದಾಗ ಧೈರ್ಯ ತುಂಬುವವಳೂ ಅವಳೆ.

ಇಂದಿನ ಕಾಲದಲ್ಲಿ ಮಹಿಳೆಯರು ಮನೆ ಮತ್ತು ಉದ್ಯೋಗ ಎರಡನ್ನೂ ಸಮತೋಲನದಲ್ಲಿ ಸಾಗಿಸುತ್ತಿದ್ದಾರೆ. ಬೆಳಗ್ಗಿನಿಂದ ರಾತ್ರಿ ತನಕ ಓಡಾಡುತ್ತಾ ಕುಟುಂಬದ ನಗುವಿಗಾಗಿ ತಮ್ಮ ಆಯಾಸವನ್ನು ಮರೆತು ಬದುಕುತ್ತಿದ್ದಾರೆ. ಆದರೆ, ಅವರ ಶಕ್ತಿಯನ್ನು ನಾವು ಅನೇಕ ಬಾರಿ ಗಮನಿಸುವುದೇ ಇಲ್ಲ. ಅಮ್ಮಾ ಅಂದರೆ ಕೇವಲ ಅಡುಗೆ ಮಾಡುವವಳು ಅಲ್ಲ; ಕುಟುಂಬವನ್ನು ಒಂದಾಗಿ ಹಿಡಿದು ನಿಲ್ಲಿಸುವ ಜೀವನಾಡಿ.

ತಾಯಿಯ ಆಶೀರ್ವಾದ ಮಗುವಿನ ಜೀವನವನ್ನು ಬದಲಾಯಿಸಬಲ್ಲದು ಎನ್ನುವ ನಂಬಿಕೆ ನಮ್ಮ ಸಂಸ್ಕೃತಿಯಲ್ಲಿದೆ. ಯಾಕೆಂದರೆ ಅಮ್ಮನ ಹೃದಯದಲ್ಲಿ ಇರುವ ಪ್ರಾರ್ಥನೆ ನಿಸ್ವಾರ್ಥವಾದುದು. ಆ ಪ್ರಾರ್ಥನೆಯ ಶಕ್ತಿಯೇ ಅನೇಕ ಮಂದಿಯನ್ನು ಬದುಕಿನಲ್ಲಿ ಎತ್ತರಕ್ಕೆ ಕೊಂಡೊಯ್ಯುತ್ತದೆ.

ಅಮ್ಮನ ಪ್ರೀತಿಗೆ ಬೆಲೆ ಕಟ್ಟಲು ಸಾಧ್ಯವಿಲ್ಲ. ಅವಳ ತ್ಯಾಗವನ್ನು ಅಳೆಯಲು ಸಾಧ್ಯವಿಲ್ಲ. ಈ ಜಗತ್ತಿನಲ್ಲಿ ಯಾವ ಶಕ್ತಿಯೂ ತಾಯಿಯ ಮನಸ್ಸಿಗಿಂತ ದೊಡ್ಡದಾಗಲು ಸಾಧ್ಯವಿಲ್ಲ. ಅದಕ್ಕೇ - ಅಮ್ಮಾ ಎನ್ನುವುದು ಕೇವಲ ಸಂಬಂಧವಲ್ಲ, ಅದು ನಮ್ಮ ಬದುಕನ್ನೇ ಬೆಳಗಿಸುವ ಅಪಾರ ಶಕ್ತಿ.

ಮುಂಗಾರಿಗೆ ಆಹ್ವಾನ

ಕೋಲ್ಮಿಂಚುಗಳ ನರ್ತನದ ನಡುವೆ
ಕಾರ್ಮೋಡ ಇಳಿ ಸಂಜೆಯ ಶೃಂಗಾರದ ಒಡವೆ
ಮುಂಗಾರಿನ ಮೊದಲ ಮಳೆಯೇ
ಮೌನವ ಮುರಿದು ಧರೆಯ ತಣಿಸೇ
ಮಲ್ಲಿಗೆ ಸೊಗಸ ಮಣ್ಣಲ್ಲಿ ತರಿಸೇ
ಮುನಿಸದೆ ಬಂದು ಸೇರು ಮುಂಗಾರು
ಕಾಯುತಿದೆ ಜಗ ಬಲು ಜೋರು
ಭೂತಾಯಿಗೆ ಹಸಿರ ಸೀರೆಯನುಡಿಸು
ರೈತನ ಮೊಗದಲಿ ನಗುವ ತರಿಸು

- ಎಂ. ಎನ್. ಕರ್ಕಿಹಳ್ಳಿ

ಫೋಟೊಗೆ ಫೇಮಸ್!

ಕಾಫಿ ಅಂಗಡಿ ಇರಲಿ, ಮೇಳ ಇರಲಿ, ಉದ್ಯಾನವನ ಇರಲಿ ಮೊದಲು ಹುಡುಕುವುದು 'ಸೆಲ್ಫಿ ಸ್ಪಾಟ್.' ತಿನ್ನುವುದಕ್ಕಿಂತ ಫೋಟೊಗೆ, ನೋಡೋದಕ್ಕಿಂತ ಪೋಸ್ಟ್‌ಗೆ ಹೆಚ್ಚು ಮಹತ್ವ ಸಿಗುತ್ತದೆ. ನಗರಗಳಲ್ಲಿ ಈಗ 'ಚೆನ್ನಾಗಿದೆ ಜಾಗ' ಅಂದರೆ.. ಇನ್ಸ್ಟಾಗ್ರಾಮ್‌ನಲ್ಲಿ ಚೆನ್ನಾಗಿ ಕಾಣುವ ಜಾಗ! ಇದು ಜಾಗಗಳ ಹೊಸ ಜಮಾನಾ..

ಪದಬಂಧ

● ಸಿ.ರವಿಶಂಕರ ಶಾಸ್ತ್ರಿ, ದಂಬೆ



ಎಡದಿಂದ ಬಲಕ್ಕೆ

1. ಈ ಹಾದಿ ಹತ್ತಿರದ್ದಲ್ಲ (5)
3. ಕಾಮಾಲೆ ರೋಗದವರಿಗೆ ಲೋಕವೆಲ್ಲ ಈ ಬಣ್ಣ (3)
4. ಕುಬೇರನ ವಿಮಾನದ ಹೆಸರು (3)
6. ದಿಟವಾದ ಸ್ವಪ್ನ (3)
8. ಹರ ದಾರಿಯಲ್ಲಿ ನೀಡಿದ ಅಪ್ಪಣೆಚೀಟಿ (4)
10. ನಾನು, ನನ್ನದೆಂಬ ಭಾವ (4)
12. ಲೆಕ್ಕ ಬರೆಯುವವನು (4)
14. ಮನಸ್ಸಿನ ಒಳಭಾಗವೇ? (4)
16. ರೀತಿಯೊಂದಿಗೆ ಬರುವ ಜೋಡಿಪದವಿದು (3)
17. ಪಂಚ ಪಾಂಡವರಲ್ಲಿ ಒಬ್ಬಾತ (3)
19. ಸೊರಗುವಿಕೆ ಅಥವಾ ನಾಶವಿಲ್ಲದ್ದು ಒಂದು ಸಂವತ್ಸರದ ಹೆಸರೂ ಆದೀತು (3)
20. ಮದುವೆಯ ದಿನ ಹೆಣ್ಣಿನ ತಂದೆಯು ಮದುಮಗನಿಗೆ ಕೊಡುವ ಉಡುಗೊರೆ (5)

ಮೇಲಿಂದ ಕೆಳಕ್ಕೆ

1. ಒಂದು ಪಕ್ಕ (2)
2. ಎರಡಕ್ಷರದ ಶತ್ರು (2)
3. ಮನೆಯ ಪಡಸಾಲೆ (3)
5. ಬಿರುಸಾದ ಎನ್ನುವ ಅರ್ಥ ಮತ್ತೊಂದು ಕೈಯ ನಡುವೆ ಇದೆ (3)
6. ಮೋಸಕ್ಕೆ ಹೆಸರಾದ ಪ್ರಾಣಿ (2)
7. ಇನ್ನೊಂದು ಹೂವು (2)
9. ಲಂಗದ ಜತೆಗೆ ಬಂದಿರುವ ಮೇಲುಹೊದಿಕೆ (3)
11. ಗೌರವಕ್ಕೆ ಅರ್ಹನಾದವನು ಎಂದರ್ಥ (3)
12. ಇನ್ನೊಂದು ಹಸುವಿನೊಂದಿಗೆ ಬಂದಿರುವ ಸಮರ (3)
13. ಕಪ್ಪಗಿರುವ ಆನೆ (2)
14. ಹೆದರು ಎನ್ನುವ ಮತ್ತೊಂದು ಪದ (2)
15. ತಲೆಕೆಳಗಾಗಿರುವ ಜೋಡಿ ಅಥವಾ ಜತೆ (3)
18. ಕುಶನ ಸಹೋದರ (2)
19. ನಯಗೊಳಿಸುವ ಸಾಧನ (2)

ಸರಿಯುತ್ತರಗಳು

ಎಡದಿಂದ ಬಲಕ್ಕೆ: 1. ಬಹುದೂರ 3. ಹಳದಿ 4. ಪುಷ್ಪಕ 6. ನನಸು 8. ದಾಸೋಹ 10. ಮಮಕಾರ 12. ಕರಣಿಕ 14. ಅಂತರಂಗ 16. ರಿವಾಜು 17. ನಕುಲ 19. ಅಕ್ಷಯ 20. ವರದಕ್ಷಿಣೆ

ಮೇಲಿಂದ ಕೆಳಕ್ಕೆ: 1. ಬದಿ 2. ರಿಪು 3. ಹಜಾರ 5. ಕಠೋರ 6. ನರಿ 7. ಸುಮ 9. ದಾವಣಿ 11. ಮಹಿತ 12. ಕದನ 13. ಕರಿ 14. ಅಂಜು 15. ಯಮಳ 18. ಲವ 19. ಅರ

ಮಹಾತಾಯಿ ಯುಲಿಯಾನಾಳ ಮಹಾ ಪಯಣ

ಇದು 1941ರ ಕಡು ಬೇಸಿಗೆಯ ಸಮಯ. ಇಡೀ ಜಗತ್ತೇ ಎರಡನೇ ಮಹಾಯುದ್ಧದ ಕ್ರೌರ್ಯಕ್ಕೆ ತಲ್ಲಣಿಸಿ ಹೋಗಿತ್ತು. ನಾಜಿ ಸೈನಿಕರು ರಷ್ಯಾ ದೇಶದ ಮೇಲೆ ದಿಢೀರ್ ದಾಳಿ ಮಾಡಿದ್ದರು. ಆಕಾಶದಿಂದ ಸುರಿಯುತ್ತಿದ್ದ ಬಾಂಬ್‌ಗಳು, ಕಿವಿಗೆ ಅಪ್ಪಳಿಸುತ್ತಿದ್ದ ಸೈನಿಕರ ಬೂಟುಗಳ ಸದ್ದು, ಎಲ್ಲಿ ನೋಡಿದರೂ ಸಾವು ಮತ್ತು ರಕ್ತದ ಆಕ್ರಂದನ... ಕ್ಷಣಾರ್ಧದಲ್ಲಿ ಹಸಿರು ಹಳ್ಳಿಗಳು ಸ್ಮಶಾನಗಳಾಗಿ ಬದಲಾಗುತ್ತಿದ್ದವು. ಲಕ್ಷಾಂತರ ಕುಟುಂಬಗಳು ದಿಕ್ಕಾಪಾಲಾಗಿ ಓಡುತ್ತಿದ್ದವು.

ಆ ಭೀಕರ ಯುದ್ಧದ ಸುಳಿಗೆ ಸಿಲುಕಿದ್ದು 'ಯುಲಿಯಾನಾ ಶೋಖೋವಾ' ಎಂಬ ಒಬ್ಬ ಸಾಮಾನ್ಯ ತಾಯಿ ಮತ್ತು ಅವಳ ಮುದ್ದಿನ ಮಗ ಅಲೆಕ್ಸಿ. ಅಲೆಕ್ಸಿ ಆಗಿನ್ನೂ ಹದಿಹರೆಯದ ಹುಡುಗ. ರಜೆಯಲ್ಲಿದ್ದಾಗ ತನ್ನ ಬಡ ಕುಟುಂಬಕ್ಕೆ ಆಸರೆಯಾಗಲೆಂದು, ತಾಯಿಯಿಂದ ನೂರಾರು ಮೈಲಿ ದೂರದಲ್ಲಿದ್ದ ಒಂದು ಹಳ್ಳಿಯಲ್ಲಿ ಕೃಷಿ ಕೆಲಸಕ್ಕೆ ಸೇರಿದ್ದ. ಆದರೆ, ದುರದೃಷ್ಟವಶಾತ್ ನಾಜಿ ಸೈನಿಕರ ಮೊದಲ ದಾಳಿ ನಡೆದಿದ್ದೇ ಆ ಭಾಗದ ಮೇಲೆ! ಮಗನಿದ್ದ ವಲಯ ಸಂಪೂರ್ಣವಾಗಿ ಶತ್ರುಗಳ ವಶವಾಯಿತು. ಮನೆಯಲ್ಲಿದ್ದ ಯುಲಿಯಾನಾಳಿಗೆ ಮಗನ ಕಡೆಯಿಂದ ಬರುತ್ತಿದ್ದ ಸಂದೇಶಗಳು ಸಂಪೂರ್ಣವಾಗಿ ನಿಂತುಹೋದವು. ಸುತ್ತಮುತ್ತಲಿನ ಜನರೆಲ್ಲಾ ಪ್ರಾಣಭಯದಿಂದ ಊರು ಬಿಡುತ್ತಿದ್ದರು. ವೈರಿಗಳು ಆ ಭಾಗದಲ್ಲಿ ಯಾರನ್ನೂ ಬದುಕಲು ಬಿಡುತ್ತಿಲ್ಲ, ಅಲ್ಲಿಗೆ ಹೋದವರು ಸಾಯುವುದು

ಒಂದೊಳ್ಳೆ ಮಾತು
ರೂಪಾ ಗುರುರಾಜ್

Vishwavani TV Special
ಯೂಟ್ಯೂಬ್ ಚಾನೆಲ್‌ನಲ್ಲಿ

ಖಂಡಿತ! ಎಂದು ಆತಂಕದಿಂದ ಆಕೆಯನ್ನು ತಡೆಯಲು ನೋಡಿದರು. ಮಿಲಿಟರಿ ಅಧಿಕಾರಿಗಳು ಕೂಡ, ಅಲ್ಲಿಗೆ ಹೋಗುವುದು ಆತ್ಮಹತ್ಯೆಗೆ ಸಮಾನ, ಶತ್ರುಗಳ ರೇಖೆಯನ್ನು ದಾಟಲು ಸಾಧ್ಯವೇ ಇಲ್ಲ ಎಂದು ಕೈಚೆಲ್ಲಿದರು.

ಆದರೆ, ಒಬ್ಬ ತಾಯಿಯ ಹೃದಯಕ್ಕೆ ಆ ಮಾತುಗಳು ಕೇಳಿಸುವುದು ಹೇಗೆ ಸಾಧ್ಯ? ಲೋಕವೇ ಉರಿದು ಬೂದಿಯಾಗುತ್ತಿದ್ದರೂ, ತನ್ನ ಮಗ ಅಲ್ಲೆಲ್ಲೋ ಹಸಿದು, ಭಯದಿಂದ ಅಳುತ್ತಾ ತನ್ನನ್ನು ಕರೆಯುತ್ತಿದ್ದಾನೆ ಎಂಬ ಧ್ವನಿ ಮಾತ್ರ ಆಕೆಗೆ ಕೇಳಿಸುತ್ತಿತ್ತು. ಶತ್ರುಗಳ ಗುಂಡು ನನ್ನ ಎದೆ ಸೀಳುವ ಮುನ್ನ, ನನ್ನ ಮಗನನ್ನು ನಾನು ನೋಡಲೇಬೇಕು ಎಂದು ಆಕೆ ಸಂಕಲ್ಪ ಮಾಡಿದಳು. ಆಕೆಯ ಬಳಿ ಹಣವಿರಲಿಲ್ಲ, ಹೋಗಲು ಯಾವುದೇ ವಾಹನವಿರಲಿಲ್ಲ, ಜತೆಗೆ ಬರಲು ಯಾರೂ ಇರಲಿಲ್ಲ. ಇದ್ದದ್ದು ಕೇವಲ ಒಂದು ಹರಿದ ಜತೆ ಚಪ್ಪಲಿ, ಚೀಲದಲ್ಲಿ ಸ್ವಲ್ಪ ಒಣ ರೊಟ್ಟಿ ಮತ್ತು ಎದೆಯಲ್ಲಿದ್ದ ತಾಯ್ತನದ ಮಮಕಾರ ಮಾತ್ರ. ಆಕೆ ಸಾವಿನ ರಸ್ತೆಯಲ್ಲೇ ಒಂಟಿಯಾಗಿ ಹೆಜ್ಜೆ ಇಟ್ಟಳು.

ಸಾವಿರಾರು ಜನ ಪ್ರಾಣ ಉಳಿಸಿಕೊಳ್ಳಲು ಯುದ್ಧ ಭೂಮಿಯಿಂದ ಹಿಂದಕ್ಕೆ ಓಡಿ ಬರುತ್ತಿದ್ದರೆ, ಈ ಒಂಟಿ ತಾಯಿ ಮಾತ್ರ ಆ ಜನಪ್ರವಾಹಕ್ಕೆ ಎದೆಯೊಡ್ಡಿ, ಶತ್ರುಗಳು ನುಗ್ಗುತ್ತಿದ್ದ ದಿಕ್ಕಿನತ್ತಲೇ ಮುನ್ನಡೆದಳು. ಆಕೆ ಕ್ರಮಿಸಬೇಕಾಗಿದ್ದ ದೂರ ಬರೋಬ್ಬರಿ 400 ಮೈಲಿಗಳು (ಸುಮಾರು 640 ಕಿಲೋಮೀಟರ್).. ದಿನಗಳು ಉರುಳಿದಂತೆ ಚೀಲದಲ್ಲಿದ್ದ ರೊಟ್ಟಿ ಖಾಲಿಯಾಯಿತು. ಹಸಿವಿನಿಂದ ಹೊಟ್ಟೆ ಒಣಗಿದಾಗ ಗಿಡಗಳ ಎಲೆಗಳನ್ನು ಅಗಿದು, ಹಳ್ಳದ ನೀರು ಕುಡಿದು ಪ್ರಾಣ ಉಳಿಸಿಕೊಂಡಳು. ಮೈ ನಡುಗಿಸುವ ಚಳಿ, ಸುರಿಯುವ ಮಳೆಯಲ್ಲಿ ನೆನೆದು ಆಕೆಯ ದೇಹ ಜರ್ಜರಿತವಾಯಿತು. ಕಾಲುಗಳು ಸುಸ್ತಾಗಿ, ಮೈಯೆಲ್ಲಾ ನಡುಗುತ್ತಿದ್ದರೂ ಆಕೆ ನಿಲ್ಲಲಿಲ್ಲ. ನನ್ನ ಮಗ ನನಗಾಗಿ ಕಾಯುತ್ತಿದ್ದಾನೆ, ನಾನು ಆಯಾಸಗೊಂಡರೆ ಅವನು ಅನಾಥನಾಗುತ್ತಾನೆ ಎಂಬ ಒಂದೇ ಒಂದು ಆಶಾಕಿರಣ ಆಕೆಯ ಕಣ್ಣುಗಳಲ್ಲಿ ಜೀವಂತವಾಗಿತ್ತು.

ಕೊನೆಗೂ, ಒಂದು ತಿಂಗಳ ಕಠಿಣ ನಡಿಗೆಯ ನಂತರ, ಸಾಕ್ಷಾತ್ ಯಮನ ಸಾಮ್ರಾಜ್ಯದಂತಿದ್ದ ಶತ್ರುಗಳ ವಲಯವನ್ನು ಯುಲಿಯಾನಾ ತಲುಪಿಯೇ ಬಿಟ್ಟಳು. ಹಾಳಾಗಿದ್ದ ಮನೆಗಳು, ಸುಟ್ಟು ಕರಕಲಾಗಿದ್ದ ಹೊಲಗಳ ನಡುವೆ ಆಕೆ ಮಗನಿಗಾಗಿ ಹುಚ್ಚಿಯಂತೆ ಹುಡುಕಾಡಿದಳು. ಮತ್ತು... ಆ ತಾಯಿಯ ತಪಸ್ಸಿಗೆ ಜಗತ್ತೇ ತಲೆಬಾಗುವಂತೆ ಆ ಪವಾಡ ಸಂಭವಿಸಿತು! ಒಂದು ಹಳೆಯ ಶಿಥಿಲವಾದ ಕಟ್ಟಡದ ಮೂಲೆಯಲ್ಲಿ, ಹಸಿವಿನಿಂದ ಸೊರಗಿ, ದಿಕ್ಕಿಲ್ಲದೆ ನಡುಗುತ್ತಿದ್ದ ಮಗ ಅಲೆಕ್ಸಿ ಆಕೆಗೆ ಕಾಣಿಸಿದ. ಮಗನನ್ನು ಕಂಡೊಡನೆ ಆ ತಾಯಿಯ ಒಣಗಿದ ಕಣ್ಣುಗಳಿಂದ ಆನಂದಭಾಷ್ಪ ಧಾರೆಯಾಗಿ ಹರಿಯಿತು. ಅಲೆಕ್ಸಿಗೆ ತನ್ನ ಕಣ್ಣುಗಳನ್ನು ತಾನೇ ನಂಬಲಾಗಲಿಲ್ಲ. ಈ ಯುದ್ಧದ ನರಕದಲ್ಲೂ ತನ್ನ ತಾಯಿ ತನ್ನನ್ನು ಹುಡುಕಿಕೊಂಡು ಬಂದಿದ್ದಾಳೆ ಎನ್ನುವುದನ್ನು ಕಂಡು ಅವನು ಅವಳನ್ನು ಗಟ್ಟಿಯಾಗಿ ಅಪ್ಪಿ ಬಿಕ್ಕಿ ಬಿಕ್ಕಿ ಅತ್ತನು. ಆ ಒಂದು ಅಪ್ಪುವಿಕೆಯಲ್ಲಿ ತಿಂಗಳುಗಳ ಹಸಿವು, ನೋವು ಎಲ್ಲವೂ ಕರಗಿ ಹೋಗಿದ್ದವು. ಮರಳಿ ಮತ್ತೆ ಅದೇ ಕಾಡು-ಮೇಡುಗಳನ್ನು ದಾಟಿ ಕೊನೆಗೂ ತನ್ನ ಸುರಕ್ಷಿತ ಮನೆಗೆ ಮಗನನ್ನು ಕರೆತಂದಳು. ಅವರು ತಮ್ಮ ಗ್ರಾಮವನ್ನು ತಲುಪಿದಾಗ, ಯುಲಿಯಾನಾಳ ಕಾಲಲ್ಲಿದ್ದ ಚಪ್ಪಲಿಗಳು ಸಂಪೂರ್ಣವಾಗಿ ಹರಿದು ಹೋಗಿ ಪಾದಗಳು ರಕ್ತಸಿಕ್ತವಾಗಿದ್ದವು. ಆಕೆಯ ದೇಹದಲ್ಲಿ ಜೀವ ಉಳಿದಿದೆಯೇ ಎಂಬಷ್ಟು ಆಕೆ ಕೃಶವಾಗಿದ್ದಳು. ಆದರೆ, ಅವಳ ಮುಖದಲ್ಲಿ ಮಗನನ್ನು ಸಾವಿನ ದವಡೆಯಿಂದ ಗೆದ್ದು ತಂದ ಹೆಮ್ಮೆಯ ನಗು ಇತ್ತು. ಮುಂದೆ ಅಲೆಕ್ಸಿ ದೊಡ್ಡವನಾಗಿ, ಮಕ್ಕಳು-ಮೊಮ್ಮಕ್ಕಳನ್ನು ಪಡೆದಾಗಲೂ, ಪ್ರತಿವರ್ಷ ಈ ಕಥೆಯನ್ನು ಕಣ್ಣೀರು ತುಂಬಿದ ಕಣ್ಣುಗಳಿಂದ ಹೇಳುತ್ತಿದ್ದ. ಪ್ರಪಂಚದ ಯಾವ ಮೂಲೆಯಲ್ಲಿದ್ದರೂ ತಾಯಿಯ ಪ್ರೀತಿಗೆ ಸಮನಾವುದೂ ಇಲ್ಲ. ಮಾತೃ ದೇವೋಭವ!

ನೀವೂ ಬರೆಯಬಹುದು
ನಮ್ಮ ವಿಳಾಸ
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
e-mail: vishwavanimagazine@gmail.com

ಐಪಿಎಲ್ ಹಬ್ಬ 2026

ಆರೆಂಜ್ ಕ್ಯಾಪ್: ಸೂರ್ಯವಂಶಿ, ರಾಜಸ್ಥಾನ್

ಪರ್ಪಲ್ ಕ್ಯಾಪ್: ಭುವನೇಶ್ವರ್ ಕುಮಾರ್, ಆರ್‌ಸಿಬಿ

IPL T20 2026

ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಅಂಕ
Q ಬೆಂಗಳೂರು	13	9	4	18
Q ಗುಜರಾತ್	13	8	5	16
Q ಹೈದರಾಬಾದ್	13	8	5	16
ರಾಜಸ್ಥಾನ್	13	7	6	14
ಪಂಜಾಬ್	13	6	6	13
ಕೋಲ್ಕತಾ	13	6	6	13
ಚೆನ್ನೈ	13	6	7	12
ಡೆಲ್ಲಿ	13	6	7	12
ಮುಂಬೈ	12	4	9	8
ಲಖನೌ	13	4	9	8

ಸಮಾಚಾರ ಸಣ್ಣದಲ್ಲ

ಐಪಿಎಲ್ ಆದಾಯ ಕೊಹ್ಲಿ ದಾಖಲೆ



ದೆಹಲಿ: ಐಪಿಎಲ್ ಇತಿಹಾಸದಲ್ಲಿಯೇ ಅತ್ಯಧಿಕ ಆದಾಯ ಗಳಿಸಿದ ಆಟಗಾರರಾಗಿ ಆರ್‌ಸಿಬಿ ತಂಡದ ಹಿರಿಯ ಆಟಗಾರ ವಿರಾಟ್ ಕೊಹ್ಲಿ ಹೊಸ ಮೈಲುಗಲ್ಲು ನಿರ್ಮಿಸಿದ್ದಾರೆ. ವರದಿಯೊಂದರ ಅನ್ವಯ, ಐಪಿಎಲ್ ಮೂಲಕ ಇದು ವರೆಗೂ ಕೊಹ್ಲಿ 230 ಕೋಟಿ ರು. ಆದಾಯ ಗಳಿಸಿದ್ದಾರೆ. 2008ರಲ್ಲಿ ಐಪಿಎಲ್ ಲೀಗ್ ಆರಂಭ ವಾದಂದಿನಿಂದ ರಾಯಲ್ ಚಾಲೆಂಜರ್ಸ್ ಬೆಂಗಳೂರು ಫ್ರಾಂಚೈಸಿ ಪರ ಮಾತ್ರ ಭಾರತ ತಂಡದ ಮಾಜಿ ನಾಯಕ ಆಗಿರುವ ಕೊಹ್ಲಿ ಆಡುತ್ತಿದ್ದಾರೆ. ಟೀಮ್ ಇಂಡಿಯಾದ ಇನ್ನೋರ್ವ ಮಾಜಿ ನಾಯಕ, ಮುಂಬೈ ಇಂಡಿಯನ್ಸ್‌ನ ರೋಹಿತ್ ಶರ್ಮಾ 227.2 ಕೋಟಿ ರು. ಆದಾಯ ಗಳಿಸಿ ಐಪಿಎಲ್ ಆದಾಯ ಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿದ್ದಾರೆ. ಚೆನ್ನೈ ಸೂಪರ್ ಕಿಂಗ್ಸ್‌ನ ಮಾಜಿ ನಾಯಕ ಎಂಎಸ್ ಧೋನಿ 200 ಕೋಟಿ ರು.ಗಳೊಂದಿಗೆ ಐಪಿಎಲ್ ಆದಾಯ ಗಳಿಕೆಯಲ್ಲಿ 3ನೇ ಸ್ಥಾನದಲ್ಲಿದ್ದಾರೆ.

ಶ್ರೇಯಸ್ ಅಯ್ಯರ್‌ಗೆ ಪಾಂಟಿಂಗ್ ಬೆಂಬಲ

ದೆಹಲಿ: ಶ್ರೇಯಸ್ ಅಯ್ಯರ್ ಅವರು ಭಾರತ ಟಿ20 ತಂಡಕ್ಕೆ ಸೂಕ್ತ ನಾಯಕ ಎಂದು ಪಂಜಾಬ್ ಕಿಂಗ್ಸ್ ಹೆಡ್ ಕೋಚ್ ರಿಕಿ ಪಾಂಟಿಂಗ್ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಅಯ್ಯರ್ ಅವರ ನಾಯಕತ್ವ ಮತ್ತು ಬ್ಯಾಟಿಂಗ್ ಸಾಮರ್ಥ್ಯದ ಮೇಲೆ ಪಾಂಟಿಂಗ್ ಭರವಸೆ ವ್ಯಕ್ತಪಡಿಸಿ ಈ ಹೇಳಿಕೆ ನೀಡಿದ್ದಾರೆ. ಈ ಸಲದ ಐಪಿಎಲ್‌ನಲ್ಲಿ ಶ್ರೇಯಸ್ ಅಯ್ಯರ್ ಪಂಜಾಬ್ ತಂಡವನ್ನು ಸಮರ್ಥವಾಗಿ ಮುನ್ನಡೆಸಿದ್ದಾರೆ ಎಂದೂ ಪಾಂಟಿಂಗ್ ಹೇಳಿದ್ದಾರೆ. ಭಾರತ ತಂಡವು ಐರ್ಲೆಂಡ್ ಮತ್ತು ಇಂಗ್ಲೆಂಡ್ ಪ್ರವಾಸ ಕೈಗೊಂಡು ಟಿ20 ಸರಣಿಗಳನ್ನು ಆಡಲಿದೆ. ಹಾಗಾಗಿ ಭಾರತ ಟಿ20 ತಂಡಕ್ಕೆ ಬಿಸಿಸಿಐ ನೂತನ ನಾಯಕನನ್ನು ಸದ್ಯದಲ್ಲೇ ನೇಮಿಸುವ ಸಾಧ್ಯತೆ ಇದೆ.

ಅಜಿಂಕ್ಯಾ ರಹಾನೆ ಪಡೆಗೆ ಪ್ಲೇಆಫ್ ಆಸೆ ಜೀವಂತ | ಕೆಕೆಆರ್‌ಗೆ 4 ವಿಕೆಟ್‌ಗಳ ಜಯ

ಮುಂಬೈಗೆ ಸೋಲುಣಿಸಿದ ಕೋಲ್ಕತಾ

ಕೋಲ್ಕತಾ: ಬೌಲಿಂಗ್ ಹಾಗ ಬ್ಯಾಟಿಂಗ್ ಎರಡೂ ವಿಭಾಗಗಳಲ್ಲಿ ಸಂಘಟಿತ ಪ್ರದರ್ಶನವನ್ನು ತೋರಿದ ಕೋಲ್ಕತಾ ನೈಟ್ ರೈಡರ್ಸ್ ತಂಡವು ಮುಂಬೈ ಇಂಡಿಯನ್ಸ್ ಎದುರಿನ ಪಂದ್ಯದಲ್ಲಿ 4 ವಿಕೆಟ್‌ಗಳ ಗೆಲುವು ಸಾಧಿಸಿತು. ಆ ಮೂಲಕ ಈ ಐಪಿಎಲ್ ಟೂರ್ನಿಯ ತನ್ನ ಪ್ಲೇಆಫ್ ಆಸೆಯನ್ನು ಜೀವಂತವಾಗಿರಿಸಿಕೊಂಡಿತು.

ಈ ಗೆಲುವಿನ ಮೂಲಕ 13 ಅಂಕಗಳನ್ನು ಕಲೆ ಹಾಕಿರುವ ಕೆಕೆಆರ್ ಆರನೇ ಸ್ಥಾನಕ್ಕೆ ಲಗ್ಗೆ ಇಟ್ಟಿದೆ. ತನ್ನ ಕೊನೆಯ ಪಂದ್ಯವನ್ನು ಮೇ 24 ರಂದು ಡೆಲ್ಲಿ ಕ್ಯಾಪಿಟಲ್ಸ್ ಎದುರು ಗೆದ್ದರೂ ಕೆಕೆಆರ್ ಪ್ಲೇಆಫ್ಸ್‌ಗೆ ಪ್ರವೇಶ ಮಾಡಬೇಕೆಂದರೆ, ರಾಜಸ್ಥಾನ್ ರಾಯಲ್ಸ್ ಹಾಗೂ ಪಂಜಾಬ್ ಕಿಂಗ್ಸ್ ತಂಡಗಳು ಆಯಾಯ ಪ್ರತ್ಯೇಕ ಪಂದ್ಯಗಳಲ್ಲಿ ಸೋಲು ಅನುಭವಿಸಬೇಕಾಗಿದೆ.

ಬುಧವಾರ ಇಲ್ಲಿನ ಈಡನ್ ಗಾರ್ಡನ್ಸ್ ಕ್ರೀಡಾಂಗಣದಲ್ಲಿ ಮುಂಬೈ ಇಂಡಿಯನ್ಸ್ ತಂಡ ನೀಡಿದ್ದ 148 ರನ್‌ಗಳ ಗುರಿಯನ್ನು ಹಿಂಬಾಲಿಸಿದ ಕೋಲ್ಕತಾ ನೈಟ್ ರೈಡರ್ಸ್ ತಂಡವು ಮನೀಷ್ ಪಾಂಡೆ ಹಾಗೂ ರೊವ್ಮನ್ ಪೊವೆಲ್ ಅವರ ನಿರ್ಣಾಯಕ

ಪಂದ್ಯಶ್ರೇಷ್ಠ ಮನೀಶ್ ಪಾಂಡೆ

ಬ್ಯಾಟಿಂಗ್ ಬಲದಿಂದ 18.5 ಓವರ್‌ಗಳಿಗೆ 6 ವಿಕೆಟ್ ನಷ್ಟಕ್ಕೆ 148 ರನ್ ಗಳಿಸಿ ಗೆದ್ದು ಬೀಗಿತು.

ಅಜಿಂಕ್ಯ ರಹಾನೆ ಜತೆ ಇನ್ನಿಂಗ್ಸ್ ಆರಂಭಿಸಿದ ಫಿನ್ ಆಲೆನ್ ಬಹುಬೇಗ ವಿಕೆಟ್ ಒಪ್ಪಿಸಿದರು, ಆದರೆ ನಾಯಕ ಅಜಿಂಕ್ಯ ರಹಾನೆ 21 ರನ್ ಗಳಿಸಿ ಉತ್ತಮ ಆರಂಭ ಪಡೆದರೂ ಇದನ್ನು ದೊಡ್ಡ ಮೊತ್ತವನ್ನಾಗಿ ಪರಿವರ್ತಿಸುವಲ್ಲಿ ವಿಫಲರಾದರು. ಇವರು ಮನೀಷ್ ಪಾಂಡೆ ಜತೆ 38 ರನ್‌ಗಳ ಜೊತೆಯಾಟವನ್ನು ಆಡಿದರು, ಆದರೆ ಇದೇ ಮೊದಲ ಬಾರಿ ಕನ್ನಡಿಗ ಮನೀಷ್ ಪಾಂಡೆ 33 ಎಸೆತಗಳಲ್ಲಿ 6 ಬೌಂಡರಿಗಳೊಂದಿಗೆ ನಿರ್ಣಾಯಕ 45 ರನ್ ಗಳಿಸಿದರು. ರೊವ್ಮನ್ ಪೊವೆಲ್ ಜೊತೆ 64 ರನ್‌ಗಳ ಪ್ರಮುಖ ಜತೆಯಾಟವನ್ನು ಆಡಿದ ಬಳಿಕ 15ನೇ ಓವರ್‌ನಲ್ಲಿ ಜಸ್‌ಪ್ರೀತ್ ಬುಮ್ರಾಗೆ ಕ್ಲೀನ್ ಬೌಲ್ಡ್ ಆದರು.

ನಂತರ ಜವಾಬ್ದಾರಿಯುತ ಬ್ಯಾಟಿಂಗ್ ಮುಂದುವರಿಸಿದ ರೊವ್ಮನ್ ಪೊವೆಲ್ 30 ಎಸೆತಗಳಲ್ಲಿ ಎರಡು ಸಿಕ್ಸರ್ ಹಾಗೂ ನಾಲ್ಕು ಬೌಂಡರಿಗಳೊಂದಿಗೆ 40 ರನ್ ಗಳಿಸಿ ತಂಡವನ್ನು ಗೆಲುವಿನ ಸನಿಹ ತಂದು ವಿಕೆಟ್ ಒಪ್ಪಿಸಿದರು. ಕೊನೆಯಲ್ಲಿ ರಿಂಕು ಸಿಂಗ್ (9 ರನ್ ಅಜೇಯ) ಬೌಂಡರಿ ಬಾರಿಸಿ ತಮ್ಮ ತಂಡವನ್ನು ಗೆಲ್ಲಿಸಿದರು.

ಇದಕ್ಕೂ ಮುನ್ನ ಟಾಸ್ ಸೋತು ಮೊದಲು ಬ್ಯಾಟ್ ಮಾಡುವಂತಾದ ಮುಂಬೈ ಇಂಡಿಯನ್ಸ್ ತಂಡ ಬ್ಯಾಟಿಂಗ್ ವೈಫಲ್ಯ ಅನುಭವಿಸಿತು. ತನ್ನ ಪಾಲಿನ 20 ಓವರ್‌ಗಳಿಗೆ 8 ವಿಕೆಟ್‌ಗಳ ನಷ್ಟಕ್ಕೆ 147 ರನ್‌ಗಳನ್ನು ಕಲೆ ಹಾಕಿತು. ಮುಂಬೈ ಪರ ಕಾರ್ಬಿನ್ ಬಾಷ್ ಅವರು 18 ಎಸೆತಗಳಲ್ಲಿ ಅಜೇಯ 32 ರನ್‌ಗಳನ್ನು ಕಲೆ ಹಾಕಿ ವೈಯಕ್ತಿಕ ಗರಿಷ್ಠ ಸ್ಕೋರರ್ ಎನಿಸಿಕೊಂಡಿದ್ದಾರೆ.

ಕ್ಯಾಮೆರಾನ್ ಗ್ರೀನ್, ಸೌರಭ್ ದುಬೇ ಹಾಗೂ ಕಾರ್ತಿಕ್ ತ್ಯಾಗಿ ಅವರು ಮಾರಕ ಬೌಲಿಂಗ್ ದಾಳಿಯ ಎದುರು ಮುಂಬೈ ಇಂಡಿಯನ್ಸ್ ಬ್ಯಾಟ್ಸ್‌ಮನ್‌ಗಳು ವಿಫಲರಾದರು. ರಿಕೆಲ್ಟನ್ (6) ಹಾಗೂ ನಮನ್ ಧಿರ್ (0) ಅವರನ್ನು ಕ್ಯಾಮೊರೋನ್ ಗ್ರೀನ್ ಅವರು ಔಟ್ ಮಾಡಿದರು. 15 ರನ್ ಗಳಿಸಿದ ಬಳಿಕ ರೋಹಿತ್ ಶರ್ಮಾ ಹಾಗೂ ಸೂರ್ಯಕುಮಾರ್ ಯಾದವ್ (15) ಅವರನ್ನು ಸೌರಭ್ ದುಬೇ ಔಟ್ ಮಾಡಿದರು. ತಿಲಕ್ ವರ್ಮಾ 20 ರನ್ ಗಳಿಸಿ ಔಟ್ ಆದರು.

ಹಾರ್ದಿಕ್ ಪಾಂಡ್ಯ ಅವರು 27 ಎಸೆತಗಳಲ್ಲಿ 26 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ವಿಲ್ ಜ್ಯಾಕ್ಸ್ ಬೇಗ ಔಟ್ ಆದರು, ಆದರೆ ಒಂದು ತುದಿಯಲ್ಲಿ ಸ್ಫೋಟಕ ಬ್ಯಾಟ್ ಮಾಡಿದ ಕಾರ್ಬಿನ್ ಬಾಷ್ ಅವರು 18 ಎಸೆತಗಳಲ್ಲಿ 32 ರನ್‌ಗಳನ್ನು ಗಳಿಸಿದರು. ಆ ಮೂಲಕ ಮುಂಬೈ ಇಂಡಿಯನ್ಸ್ ತಂಡದ ಮೊತ್ತವನ್ನು 150ರ ಸನಿಹಕ್ಕೆ ತಲುಪಿಸುವಲ್ಲಿ ನೆರವು ನೀಡಿದರು.

ಸ್ಕೋರ್ ಬೋರ್ಡ್

ಮುಂಬೈ 147/8 20 ಓವರ್

	ರನ್	ಎಸೆತ	4s	6s
ರಿಕೆಲ್ಟನ್ ಸಿ ಪಾಂಡೆ, ಬಿ ಗ್ರೀನ್	6	7	1	0
ರೋಹಿತ್ ಸಿ ಗ್ರೀನ್, ಬಿ ದುಬೆ	15	13	0	2
ನಮನ್ ಧೀರ್ ಸಿ ರಘುವಂಶಿ, ಬಿ ಗ್ರೀನ್	0	3	0	0
ಸೂರ್ಯಕುಮಾರ್ ಬಿ ದುಬೆ	15	6	2	1
ತಿಲಕ್ ವರ್ಮಾ ಸಿ ರಾಯ್, ಬಿ ತ್ಯಾಗಿ	20	32	0	1
ಹಾರ್ದಿಕ್ ಪಾಂಡ್ಯ ಬಿ ನರೈನ್	26	27	2	1
ವಿಲ್ ಜ್ಯಾಕ್ಸ್ ರನ್ ಔಟ್	14	7	1	1
ಕಾರ್ಬಿನ್ ಬಾಷ್ ನಾಟ್ ಔಟ್	32	18	3	2
ದೀಪಕ್ ಚಹಾರ್ ಸಿ ರಾಯ್, ಬಿ ತ್ಯಾಗಿ	10	7	2	0

ಬೌಲಿಂಗ್ ಕೋಲ್ಕತಾ

	ಓವರ್	ಮೇಡನ್	ರನ್	ವಿಕೆಟ್
ಅನುಕೂಲ್	1	0	6	0
ಸೌರಭ್ ದುಬೆ	4	0	34	2
ಕ್ಯಾಮರೂನ್ ಗ್ರೀನ್	3	0	23	2
ಕಾರ್ತಿಕ್ ತ್ಯಾಗಿ	4	0	37	2
ಸುನಿಲ್ ನರೈನ್	4	0	13	1
ವರುಣ್ ಚಕ್ರವರ್ತಿ	4	0	28	0

ವಿಕೆಟ್ ಪತನ: 1/17, 2/17, 3/23, 4/41, 5/84, 6/96, 7/105, 8/147.

ಕೋಲ್ಕತಾ 148/6 18.5 ಓವರ್

	ರನ್	ಎಸೆತ	4s	6s
ರಹಾನೆ ಸಿ ರಿಕಲ್ಟನ್, ಬಿ ಬಾಷ್	21	17	4	0
ಫಿನ್ ಅಲೆನ್ ಬಿ ಚಾಹರ್	8	5	2	0
ಮನೀಷ್ ಪಾಂಡೆ ಬಿ ಬುಮ್ರಾ	45	33	6	0
ಕ್ಯಾಮರೂನ್ ಗ್ರೀನ್ ಸಿ ಗಜನ್‌ಫರ್, ಬಿ ಬಾಷ್	4	8	0	0
ಪೊವೆಲ್ ಸಿ ಬಾಷ್, ಬಿ ಗಜನ್‌ಫರ್	40	30	4	2
ರಿಂಕು ಸಿಂಗ್ ನಾಟ್ ಔಟ್	9	5	2	0
ತೇಜಸ್ವಿ ದಹಿಯಾ ಸಿ ರಿಕಲ್ಟನ್, ಬಿ ಬಾಷ್	11	12	2	0
ಅನುಕುಲ್ ರಾಯ್ ನಾಟ್ ಔಟ್	4	4	0	0

ಮುಂಬೈ ಬೌಲಿಂಗ್

	ಓವರ್	ಮೇಡನ್	ರನ್	ವಿಕೆಟ್
ಚಾಹರ್	3	1	23	1
ಜಸ್ಪ್ರಿತ್ ಬುಮ್ರಾ	4	0	26	1
ಕಾರ್ಬಿನ್ ಬಾಷ್	3	0	30	3
ಗಜನ್‌ಫರ್	4	0	25	1
ಹಾರ್ದಿಕ್ ಪಾಂಡ್ಯ	2	0	13	0
ರಘು ಶರ್ಮಾ	2	0	23	0
ವಿಲ್ ಜ್ಯಾಕ್ಸ್	0.5	0	7	0

ವಿಕೆಟ್ ಪತನ : 1/10, 2/48, 3/54, 4/118, 5/124, 6/140.

ಪ್ಲೇಯರ್ ಆಫ್ ದಿ ಮ್ಯಾಚ್ ▶▶ ಮನೀಶ್ ಪಾಂಡೆ

ವಿರಾಮ ಪ್ರತಿ ಭಾನುವಾರ

ಗೆಲುವಿನ ತವಕದಲ್ಲಿ ಗಿಲ್ ಪಡೆ | ಗಾಯಕ್ವಾಡ್ ತಂಡಕ್ಕೂ ಆಶಾವಾದ

ಇಂದು ಗುಜರಾತ್-ಚೆನ್ನೈ ಹಣಾಹಣಿ

ಅಹಮದಾಬಾದ್: ಇಲ್ಲಿನ ಮೋದಿ ಸ್ಟೇಡಿಯಂನಲ್ಲಿ ಇಂದು ನಡೆಯಲಿರುವ ಐಪಿಎಲ್ ಪಂದ್ಯದಲ್ಲಿ ಗುಜರಾತ್ ತಂಡವು ಚೆನ್ನೈಯನ್ನು ಎದುರಿಸಲಿದೆ.

ಶುಭ್‌ಮನ್ ಗಿಲ್ ನಾಯಕತ್ವದ ಗುಜರಾತ್ ಟೈಟಾನ್ಸ್ ತಂಡವು ಈಗಾಗಲೇ 13 ಪಂದ್ಯಗಳನ್ನು ಆಡಿದ್ದು, 8 ಪಂದ್ಯಗಳಲ್ಲಿ ಗೆಲುವನ್ನು ದಾಖಲಿಸಿ, 5 ಪಂದ್ಯಗಳಲ್ಲಿ ಸೋತು 16 ಅಂಕಗಳೊಂದಿಗೆ ಅಂಕಪಟ್ಟಿಯಲ್ಲಿ 2ನೇ ಸ್ಥಾನದಲ್ಲಿದೆ. 13 ಪಂದ್ಯಗಳನ್ನು ಆಡಿರುವ ಋತುರಾಜ್ ಗಾಯಕ್ವಾಡ್ ತಂಡವು 6 ಗೆಲುವು, 7 ಸೋಲುಗಳನ್ನು ಕಂಡು 12 ಅಂಕಗಳೊಂದಿಗೆ 6ನೇ ಸ್ಥಾನದಲ್ಲಿದೆ.

ಈ ಆವೃತ್ತಿಯ ಮೊದಲ 2 ಪಂದ್ಯದಲ್ಲಿ ಗುಜರಾತ್ ಮುಗ್ಗರಿಸಿತಾದರೂ, 3ನೇ ಪಂದ್ಯದಲ್ಲಿ 1 ರನ್ ರೋಚಕ ಜಯ ಸಾಧಿಸಿತ್ತು. ಬಳಿಕ 4ನೇ, 5ನೇ ಪಂದ್ಯಗಳಲ್ಲಿ ಅದು ಗೆಲುವನ್ನು ದಾಖಲಿಸುವಲ್ಲಿ ಶಕ್ತವಾಯಿತು. ಆದರೆ 6ನೇ ಪಂದ್ಯದಲ್ಲಿ ಮುಂಬೈನ ವಿರುದ್ಧ ಮತ್ತು 7ನೇ ಪಂದ್ಯದಲ್ಲಿ ಆರ್‌ಸಿಬಿ ವಿರುದ್ಧ ಸೋಲನ್ನು ಕಂಡಿತ್ತು. ತನ್ನ ಎಂಟನೇ, ಒಂಭತ್ತನೇ, ಹತ್ತನೇ ಮತ್ತು ಹನ್ನೊಂದನೇ ಪಂದ್ಯದಲ್ಲಿ ಗುಜರಾತ್ ಮತ್ತೆ ನಿರಂತರವಾಗಿ ಗೆಲುವನ್ನು ಕಂಡುಕೊಂಡಿತು. ಆದರೆ 12ನೇ ಪಂದ್ಯದಲ್ಲಿ ಗುಜರಾತ್ ತಂಡವು ಕೋಲ್ಕತಾ ವಿರುದ್ಧ ಸೋತಿತ್ತು.

ಈ ಆವೃತ್ತಿಯ ಚೆನ್ನೈ ತಂಡದ ಆರಂಭ ಉತ್ತಮವಾಗಿರಲಿಲ್ಲ. ಮೊದಲ 3 ಪಂದ್ಯಗಳಲ್ಲಿ

ಅದು ತನ್ನ ಎದುರಾಳಿಗಳ ವಿರುದ್ಧ ಸೋತು ಸುಣ್ಣವಾಗಿತ್ತು. ಆದರೆ 4ನೇ ಪಂದ್ಯದಲ್ಲಿ ಡೆಲ್ಲಿ ವಿರುದ್ಧ, 5ನೇ ಪಂದ್ಯದಲ್ಲಿ ಕೋಲ್ಕತ್ತಾ ವಿರುದ್ಧ ಗೆಲುವು ಕಂಡಿತು. 6ನೇ ಪಂದ್ಯದಲ್ಲಿ ಹೈದರಾಬಾದ್ ವಿರುದ್ಧ ಸೋತರೆ, 7ನೇ ಪಂದ್ಯದಲ್ಲಿ ಮುಂಬೈ ವಿರುದ್ಧ ಗೆದ್ದಿತ್ತು. 8ನೇ ಪಂದ್ಯದಲ್ಲಿ ಗುಜರಾತ್ ವಿರುದ್ಧ ಸೋಲುಂಡರೆ, 9ನೇ ಪಂದ್ಯದಲ್ಲಿ ಮುಂಬೈ ವಿರುದ್ಧ ಗೆದ್ದಿತ್ತು.

10ನೇ ಪಂದ್ಯದಲ್ಲಿ ಡೆಲ್ಲಿ ವಿರುದ್ಧ ಗೆದ್ದ ಚೆನ್ನೈ ತಂಡವು, ತನ್ನ 11ನೇ ಪಂದ್ಯದಲ್ಲಿ ಲಖನೌ ವಿರುದ್ಧ ಸೋತಿತ್ತು. 12ನೇ ಪಂದ್ಯದಲ್ಲಿ ಹೈದರಾಬಾದ್ ವಿರುದ್ಧವೂ ಅದು ಸೋಲನುಭವಿಸಿತು.

ಗುಜರಾತ್ ತಂಡವು ಈಗಾಗಲೇ ಪ್ಲೇಆಫ್‌ಗೆ ತೇರ್ಗಡೆಯಾಗಿದೆ. ಆದರೆ ಇಂದಿನ ಪಂದ್ಯ ಚೆನ್ನೈ ಪಾಲಿಗೆ ಭಾರೀ ಸವಾಲಿನದ್ದಾಗಿದೆ. ಅದು

ಇಂದಿನ ಪಂದ್ಯ
ಗುಜರಾತ್-ಚೆನ್ನೈ
ಸಮಯ: ರಾತ್ರಿ 7.30
ಸ್ಥಳ: ಮೋದಿ ಕ್ರೀಡಾಂಗಣ, ಅಹಮದಾಬಾದ್
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್
ಲೈವ್ ಸ್ಟ್ರೀಮಿಂಗ್: ಜಿಯೋ ಹಾಟ್‌ಸ್ಟಾರ್.

ಈ ಪಂದ್ಯವನ್ನು ಬಹು ದೊಡ್ಡ ಅಂತರದಲ್ಲಿ ಗೆಲ್ಲಬೇಕಾಗುತ್ತದೆ. ಅಷ್ಟೇ ಅಲ್ಲದೆ ಆ ಬಳಿಕ ಅಂಕಪಟ್ಟಿಯಲ್ಲಿ ತನ್ನ ಮೇಲಿರುವ ಪಂಜಾಬ್ ಮತ್ತು ರಾಜಸ್ಥಾನ ತಂಡವು ದೊಡ್ಡ ಅಂತರದಲ್ಲಿ ಸೋತರೆ, ಚೆನ್ನೈ ಸೂಪರ್ ಕಿಂಗ್ಸ್ ತಂಡವು ಒಂದು ವೇಳೆ ಪ್ಲೇಆಫ್‌ಗೆ ಅವಕಾಶ ಗಿಟ್ಟಿಸುವ ಸಾಧ್ಯತೆಯನ್ನೂ ಅಲ್ಲಗೆಳೆಯಲಾಗದು.

ಫಿಫಾ ವಿಶ್ವಕಪ್ ಫುಟ್ಬಾಲ್‌ಗೆ ಪೋರ್ಚುಗಲ್ ತಂಡ ಪ್ರಕಟ

ದೆಹಲಿ: ಜೂ.12ರಿಂದ ಜು.19ರ ವರೆಗೆ ಅಮೆರಿಕ, ಕೆನಡಾ ಮತ್ತು ಮೆಕ್ಸಿಕೋದಲ್ಲಿ ನಡೆಯುವ ಫಿಫಾ ವಿಶ್ವಕಪ್ ಟೂರ್ನಿಗೆ ಪೋರ್ಚುಗಲ್ 27 ಜನರ ತಂಡವನ್ನು ಹೆಸರಿಸಿದೆ. 41ನೇ ವಯಸ್ಸಿನ ಕ್ರಿಸ್ಟಿಯಾನೊ ರೊನಾಲ್ಡೊ ಅವರಿಗೆ ಇದು ಆರನೇ ವಿಶ್ವಕಪ್ ಹಾಗೂ ಕೊನೆಯ ವಿಶ್ವಕಪ್ ಆಗುವ ಸಾಧ್ಯತೆ ಇದೆ.

ಪೋರ್ಚುಗಲ್‌ನ ಮುಖ್ಯ ತರಬೇತುದಾರ ರಾಬರ್ಟೊ ಮಾರ್ಟಿನೆಜ್ ಅವರು ಸಿಡೇಡ್ ಡೊ ತಂಡವನ್ನು ಪ್ರಕಟಿಸಿದರು ಪೋರ್ಚುಗಲ್ ತಂಡವು ಗ್ರೂಪ್-ಕೆಯಲ್ಲಿ ಸ್ಥಾನ ಪಡೆದಿದ್ದು, ಜೂ.17ರಂದು ಹೂಸ್ಟನ್‌ನಲ್ಲಿ ಕಾಂಗೋ ಪ್ರಜಾಸತ್ತಾತ್ಮಕ ಗಣರಾಜ್ಯ ವಿರುದ್ಧ ಅದರ ಅಭಿಯಾನ ಪ್ರಾರಂಭವಾಗಲಿದೆ. ಜೂನ್ 23ರಂದು ಅದು ಉಜ್ಬೇಕಿಸ್ತಾನ್ ವಿರುದ್ಧ ಪಂದ್ಯವಾಡಲಿದೆ. ಪೋರ್ಚುಗಲ್‌ನ ಗುಂಪು ಹಂತವು ಜೂನ್ 27ರಂದು ಮಿಯಾಮಿಯಲ್ಲಿ ಕೊಲಂಬಿಯಾ ವಿರುದ್ಧ ಕೊನೆಗೊಳ್ಳಲಿದೆ.

ಮಾರ್ಟಿನೆಜ್ ತಮ್ಮ ತಂಡದ ಸಂಯೋಜನೆಯನ್ನು ಪತ್ರಿಕಾಗೋಷ್ಠಿಯಲ್ಲಿ ವಿವರಿಸಿ, 'ಕಳೆದ ವರ್ಷ ಕಾರು ಅಪಘಾತದಲ್ಲಿ ನಿಧನರಾದ ಡಿಯೋಗೊ ಜೋಟಾ ಅವರನ್ನು ಕಳೆದುಕೊಂಡಿದ್ದು ಮರೆಯಲಾಗದ ಮತ್ತು ತುಂಬಾ ಕಷ್ಟಕರ ಕ್ಷಣವಾಗಿತ್ತು' ಎಂದು ಹೇಳಿದ್ದಾರೆ.

ಅದ್ದೂರಿಯಾಗಿದೆ ಡ್ರ್ಯಾಗನ್ ಗ್ಲಿಂಪ್ಸ್

ಜೂ.ಎನ್‌ಟಿಆರ್ ಹುಟ್ಟುಹಬ್ಬದ ಪ್ರಯುಕ್ತ ಡ್ರ್ಯಾಗನ್ ಚಿತ್ರದ ಗ್ಲಿಂಪ್ಸ್ ರಿಲೀಸ್ ಆಗಿದೆ. ಡ್ರ್ಯಾಗನ್ ಅದ್ದೂರಿ ವೆಚ್ಚದ ಸಿನಿಮಾವಾಗಿದ್ದು, ತಾರಕ್ ಮಾಸ್ ಅವತಾರದಲ್ಲಿ ಮಿಂಚಿದ್ದಾರೆ. ದೇಶ ಪ್ರೇಮ ಸಾರುವ ಸ್ಟೋರಿ ಸಿನಿಮಾದಲ್ಲಿದೆ ಎಂಬುದು ತಿಳಿಯುತ್ತದೆ. ಸಲಾರ್, ಕೆಜಿಎಫ್ ಸಿನಿಮಾಗಿಂತ ಅದ್ಭುತವಾದ ಕಥೆ ಈ ಚಿತ್ರದಲ್ಲಿದೆ ಎಂಬುದು ಸದ್ಯ ಬಿಡುಗಡೆಯಾಗಿರುವ ಗ್ಲಿಂಪ್ಸ್‌ನಲ್ಲಿ ತಿಳಿಯುತ್ತದೆ. ಪ್ರಶಾಂತ್ ನೀಲ್ ಕೆಜಿಎಫ್ ಸಲಾರ್ ಬಳಿಕ ಮತ್ತೊಂದು ಅದ್ಭುತ ಕಥೆ ಹೆಣೆದು ತೆರೆಗೆ ತರುತ್ತಿದ್ದಾರೆ. ಡ್ರ್ಯಾಗನ್‌ನಲ್ಲಿ ತಾರಕ್ ಆ್ಯಕ್ಷನ್‌ನಲ್ಲಿ ಮಿಂಚಿದ್ದು, ಸಿಕ್ಸ್ ಪ್ಯಾಕ್ ಅವತಾರದಲ್ಲಿ ಕಂಗೊಳಿಸಿದ್ದಾರೆ. ತಾರಕ್ ಹುಟ್ಟುಹಬ್ಬಕ್ಕೆ ಅಭಿಮಾನಿಗಳು ಶುಭಕೋರಿ ಸಂಭ್ರಮಿಸಿದ್ದಾರೆ.

ಚಿತ್ರರಂಗದಲ್ಲಿ ಒಂದು ಸಣ್ಣ ಜನ್ಮದಿನದ ಪೋಸ್ಟ್ ಇಷ್ಟೊಂದು ದೊಡ್ಡ ಮಟ್ಟದ ಚರ್ಚೆಗೆ ಕಾರಣವಾಗಬಹುದು ಎಂದು ಯಾರೂ ಊಹಿಸಿರಲಿಲ್ಲ. ಜೂ.ಎನ್‌ಟಿಆರ್ ಹುಟ್ಟುಹಬ್ಬಕ್ಕೆ ಸ್ಯಾಂಡಲ್‌ವುಡ್‌ನ ಪ್ರತಿಷ್ಠಿತ ನಿರ್ಮಾಣ ಸಂಸ್ಥೆ ಹೊಂಬಾಳೆ ಫಿಲಂಸ್ ಹಂಚಿಕೊಂಡಿರುವ ವಿಶೇಷ ಪೋಸ್ಟ್ ಮತ್ತು ಡ್ರ್ಯಾಗನ್ ಪವರ್ ಪ್ಯಾಕ್ಡ್ ಗ್ಲಿಂಪ್ಸ್, ಸದ್ಯ ಭಾರತೀಯ ಚಿತ್ರರಂಗದಲ್ಲೇ ದೊಡ್ಡ ಸಂಚಲನ ಮೂಡಿಸಿದೆ. ಇದು ಕೇವಲ ಒಂದು ಶುಭಾಶಯದ ಪೋಸ್ಟ್ ಅಲ್ಲ, ಇದರ ಹಿಂದೆ ದೊಡ್ಡದೊಂದು ಸಿನಿಮೀಯ ಲೆಕ್ಕಾಚಾರ ಅಡಗಿದೆ ಎಂಬುದು ಇದರಿಂದ ತಿಳಿಯುತ್ತದೆ. ಡ್ರ್ಯಾಗನ್ ಚಿತ್ರವನ್ನು ಮೈತ್ರಿ ಮೂವಿ ಮೇಕರ್ಸ್ ಮತ್ತು ಎನ್‌ಟಿಆರ್ ಆರ್ಟ್ಸ್ ಸಂಸ್ಥೆಗಳು ಜಂಟಿಯಾಗಿ ನಿರ್ಮಿಸುತ್ತಿವೆ. ಹೀಗಿದ್ದರೂ, ಹೊಂಬಾಳೆ ಫಿಲಂಸ್ ಈ ಚಿತ್ರದ ಗ್ಲಿಂಪ್ಸ್ ಅನ್ನು ತನ್ನದೇ ಚಿತ್ರದಂತೆ ಸಂಭ್ರಮಿಸಿ ಹಂಚಿಕೊಂಡಿರುವುದರ ಹಿಂದೆ ನಿರ್ದೇಶಕ ಪ್ರಶಾಂತ್ ನೀಲ್ ಅವರ ಮೇಲಿರುವ ಅಪಾರ ಗೌರವ ಕಾಣುತ್ತಿದೆ. ಹೊಂಬಾಳೆ ಸಂಸ್ಥೆಗೆ ಕೆಜಿಎಫ್ ಮತ್ತು ಸಲಾರ್ ನಂತಹ ಐತಿಹಾಸಿಕ ಬ್ಲಾಕ್‌ಬಸ್ಟರ್‌ಗಳನ್ನು ನೀಡಿದ ಪ್ರಶಾಂತ್ ನೀಲ್ ಅವರ ವಿಷನ್ ಅನ್ನು ಹೊಂಬಾಳೆ ಮತ್ತೊಮ್ಮೆ ಮುಕ್ತವಾಗಿ ಶ್ಲಾಘಿಸಿದೆ. ಈಗಾಗಲೇ ಹೊಂಬಾಳೆ ಫಿಲಂಸ್ ಅದ್ದೂರಿ ಸಿನಿಮಾಗಳನ್ನು ನಿರ್ಮಿಸುವ ಜತೆಗೆ ವಿತರಣಾ ಕ್ಷೇತ್ರಕ್ಕೂ ಕಾಲಿಟ್ಟಿದೆ. ರಾಮ್ ಚರಣ್ ಅಭಿನಯದ ಪೆದ್ದಿ ಚಿತ್ರವನ್ನು ವಿಶ್ವಮಟ್ಟಕ್ಕೆ ಕೊಂಡೊಯ್ದಿದೆ. ಮುಂದೆ ಡ್ರ್ಯಾಗನ್ ಸಿನಿಮಾವನ್ನು ವಿಶ್ವಮಟ್ಟದಲ್ಲಿ ವಿತರಣೆ ಮಾಡಲಿದೆ ಎಂಬ ನಿರೀಕ್ಷೆಯೂ ಇದೆ. ಹೊಂಬಾಳೆ ಫಿಲಂಸ್ ಮತ್ತು ಜೂನಿಯರ್ ಎನ್‌ಟಿಆರ್ ಒಟ್ಟಿಗೆ ಕೈಜೋಡಿಸಿದರೆ ಅದು ಕೇವಲ ಒಂದು ಸಿನಿಮಾ ಪ್ರಕಟಣೆ ಆಗಿರುವುದಿಲ್ಲ, ಬದಲಿಗೆ ಭಾರತೀಯ ಬಾಕ್ಸ್ ಆಫೀಸ್‌ನಲ್ಲಿ ಹೊಸ ದಾಖಲೆಗಳನ್ನು ಬರೆಯಲಿದೆ ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ. ಅದೇನೇ ಇರಲಿ ಪ್ರಶಾಂತ್ ನೀಲ್ ನಿರ್ದೇಶನದಲ್ಲಿ ಮತ್ತೊಂದು ಅದ್ಭುತ ಸಿನಿಮಾ ತೆರೆಗೆ ಬರಲಿದೆ. ಡ್ರ್ಯಾಗನ್ ಸಿನಿಮಾದಲ್ಲಿ ರುಕ್ಮಿಣಿ ವಸಂತ್ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ಬಾಲಿವುಡ್ ನಟ ಅನಿಲ್ ಕಪೂರ್ ಸೇನಾಧಿಕಾರಿಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಉಳಿದಂತೆ ದಿಗ್ಗಜ ಕಲಾವಿದರ ದಂಡೇ ಸಿನಿಮಾದಲ್ಲಿದೆ.



ವಿ ಟಾಕೀಸ್

ಮಹಾಕಾಳಿ ತಂಡ ಸೇರಿದ ರೋಹಿತ್

ಹನುಮಾನ್ ಚಿತ್ರ ಖ್ಯಾತಿಯ ನಿರ್ದೇಶಕ ಪ್ರಶಾಂತ್ ವರ್ಮಾ ಕಥೆ ಬರೆದಿರುವ ಮಹಾಕಾಳಿ ಸಿನಿಮಾ ಆರಂಭದಿಂದಲೂ ಕುತೂಹಲ ಮೂಡಿಸಿದೆ. ಈ ಸಿನಿಮಾ ತಂಡಕ್ಕೆ ಈಗ ಬಾಲಿವುಡ್ ನಟ ರೋಹಿತ್ ಸರಾಫ್ ಎಂಟ್ರಿ ಕೊಟ್ಟಿದ್ದಾರೆ. ರೋಹಿತ್ ತಮ್ಮ ಭಾಗದ ಚಿತ್ರೀಕರಣವನ್ನು ಮುಗಿಸಿದ್ದಾರೆ. ಉತ್ತರ ಭಾರತದಲ್ಲಿ ರೋಹಿತ್‌ಗೆ ತಮ್ಮದೇ ಆದ ಅಭಿಮಾನಿ ಬಳಗವಿದೆ. ಡಿಯರ್ ಜಿಂದಗಿ ಚಿತ್ರದಲ್ಲಿ ಆಲಿಯಾ ಭಟ್ ಅವರ ಕಿರಿಯ ಸಹೋದರನಾಗಿ ಬಾಲಿವುಡ್ ಪ್ರಯಾಣವನ್ನು ಪ್ರಾರಂಭಿಸಿದ ರೋಹಿತ್ ಸರಾಫ್, ಹಲವು ಸಿನಿಮಾಗಳಲ್ಲಿ ನಟಿಸಿ ಪ್ರೇಕ್ಷಕರ ಮನಸೂರೆಗೊಂಡಿದ್ದಾರೆ. ಭೂಮಿ ಶೆಟ್ಟಿ ಮಹಾಕಾಳಿ ಅವತಾರ ತಾಳಿದ್ದು, ಹೊಸ ಲುಕ್‌ನಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಧುರಂಧರ್ ಯಶಸ್ಸಿನ ಖುಷಿಯಲ್ಲಿರುವ ಅಕ್ಷಯ್ ಖನ್ನಾ ಕೂಡ ಈ ಸಿನಿಮಾದಲ್ಲಿ ನಟಿಸಿದ್ದು, ಸಿನಿಮಾದ ಬಗ್ಗೆ ಕುತೂಹಲ ಹೆಚ್ಚಲು ಕಾರಣವಾಗಿದೆ. ಈಗಾಗಲೇ ಸಿನಿಮಾದ ಪೋಸ್ಟರ್ ರಿಲೀಸ್ ಆಗಿದ್ದು ಸಿನಿಮಾ ಬಗ್ಗೆ ನಿರೀಕ್ಷೆ ಹೆಚ್ಚುವಂತೆ ಮಾಡಿದೆ. ಮಹಾಕಾಳಿ ಪ್ಯಾನ್ ಇಂಡಿಯಾ ಸಿನಿಮಾವಾಗಿದ್ದು, ಪೂಜಾ ಅಪರ್ಣಾ ಕೊಲ್ಲೂರು ಈ ಚಿತ್ರವನ್ನು ನಿರ್ದೇಶನ ಮಾಡುತ್ತಿದ್ದಾರೆ. ಆರ್‌ಕೆಡಿ ಸ್ಟುಡಿಯೋಸ್ ಬ್ಯಾನರ್‌ನಲ್ಲಿ ಆರ್.ಕೆ.ದುಗ್ಗಲ್ ಮತ್ತು ರಿವಾಜ್ ರಮೇಶ್ ದುಗ್ಗಲ್ ಚಿತ್ರ ನಿರ್ಮಾಣ ಮಾಡುತ್ತಿದ್ದಾರೆ. ಮಹಾಕಾಳಿ ಮಹಿಳಾ ಪ್ರಧಾನ ಕಥೆಯ ಸಿನಿಮಾವಾಗಿದ್ದು, ಹೈದರಾಬಾದ್‌ನಲ್ಲಿ ಅದ್ದೂರಿ ಸೆಟ್ ನಿರ್ಮಿಸಿ ಚಿತ್ರೀಕರಣ ನಡೆಸಲಾಗಿದೆ.

ನೀನಿದ್ದರೆ ಆಲ್ಬಂ ಸಾಂಗ್ ಬಿಡುಗಡೆ

ಮೊಗಾಚಿ ಲಾರಂ ಕ್ರಿಯೇಷನ್‌ನಲ್ಲಿ ನಿರ್ಮಾಣವಾಗಿರುವ ನೀನಿದ್ದರೆ... ಆಲ್ಬಂ ಸಾಂಗ್ ಬಿಡುಗಡೆಯಾಗಿದೆ. ಹಿರಿಯ ನಟ ರಮೇಶ್ ಭಟ್ ಈ ಹಾಡನ್ನು ಬಿಡುಗಡೆ ಮಾಡಿ ಶುಭಕೋರಿದರು. ನಿರ್ಮಾಪಕರು ನನಗೆ ಬಹಳ ಹಿಂದಿನಿಂದಲೂ ಪರಿಚಯ. ಸಿನಿಮಾದ ಮೇಲಿನ ಪ್ರೀತಿಯಿಂದ ಈಗ ಹಾಡೊಂದನ್ನು ನಿರ್ಮಾಣ ಮಾಡಿದ್ದಾರೆ. ಈ ಗೀತೆ ಸುಮಧುರವಾಗಿ ಮೂಡಿಬಂದಿದೆ ಎಂದು ರಮೇಶ್ ಭಟ್ ಮೆಚ್ಚುಗೆ ವ್ಯಕ್ತಪಡಿಸಿದರು. ಹಿರಿಯ ನಟ ಟೆನ್ನಿಸ್ ಕೃಷ್ಣ, ಸಿರಿ ಮ್ಯೂಸಿಕ್‌ನ ಸುರೇಶ್ ಚಿಕ್ಕಣ್ಣ ಹಾಡು ನೋಡಿ ಮೆಚ್ಚಿದರು.

ಮೊದಲು ಒಂದು ಹಾಡು ನಿರ್ಮಾಣ ಮಾಡಲು ಯೋಜನೆ ಹಾಕಿಕೊಳ್ಳಲಾಗಿತ್ತು. ಈಗ ಅದು ಐದು ಆಲ್ಬಂಗಳ ಸಾಂಗ್ ಆಗಿ ಮೂಡಿಬಂದಿದೆ. ಮುಂದೆ ಸಿನಿಮಾ ಮಾಡುವ ಪ್ಲಾನ್ ಇದ್ದು, ಶೀಘ್ರದಲ್ಲಿಯೇ ಸಿನಿಮಾ ಕೂಡ ಸೆಟ್ಟೇರಲಿದ್ದು, ಅದ್ದೂರಿಯಾಗಿ ಮೂಡಿಬಲಿದೆ ಎಂದು ನಿರ್ಮಾಪಕ ನೂರ್‌ಬರ್ಟ್ ಹೇಳಿದರು.

ವಿನ್ಸೆಂಟ್ ಫರ್ನಾಂಡಿಸ್ ಕಾಸ್ಸಿಯಾ ಈ ಹಾಡಿಗೆ ಸಾಹಿತ್ಯ ಬರೆದಿದು, ಸಂಗೀತ ಸಂಯೋಜಿಸುವ ಜತೆಗೆ ನಿರ್ದೇಶನ ಮಾಡಿದ್ದಾರೆ. ನೂರ್ ಬರ್ಟ್ ಆಲ್ಬಂ ಸಾಂಗ್ ನಿರ್ಮಾಣ ಮಾಡಿದ್ದಾರೆ. ನಾಯಕಿಯ ಮನೆಯಲ್ಲಿ ಬ್ರೇಸ್‌ಲೆಟ್ ಇರುತ್ತದೆ. ಅದನ್ನು ನೋಡುವ ನಾಯಕ ಕಳೆದ ದಿನಗಳನ್ನು ನೆನಪಿಸಿಕೊಳ್ಳುವ ದೃಶ್ಯಗಳೊಂದಿಗೆ ಗೀತೆಯು ಸಾಗುತ್ತದೆ. ಇದರಲ್ಲಿ ತಾಯಿ, ಮಗಳು ನಟಿಸಿರುವುದು ವಿಶೇಷ. ನಾಯಕನಾಗಿ ಅವಿಲ್ ರೊಡ್ರೀಗಸ್, ನಾಯಕಿಯಾಗಿ ಕೆರನ್ ಪಿಂಟೋ ಹಾಗೂ ಹಳೇ ಪ್ರೇಯಸಿಯಾಗಿ ಸ್ಮಿತಾಪಿಂಟೋ ಅಭಿನಯಿಸಿದ್ದಾರೆ. ಛಾಯಾಗ್ರಹಣ ಲಕ್ಷ್ಮೀಕಾಂತ್, ಸಂಕಲನ ರಾಜೇಶ್ ಚೌಹಾಣ್, ಅವರದ್ದಾಗಿದೆ. ಹಿಮಗಿರಿ ಎಸ್ಟೇಟ್ ಸುತ್ತಮುತ್ತ ಚಿತ್ರೀಕರಣ ನಡೆಸಲಾಗಿದೆ.

ಹಾಡಿನಲ್ಲಿ ಮನಗೆದ್ದ ಕೀರ್ತಿ

ಹೊಸಬರೇ ಸೇರಿ ನಿರ್ಮಿಸಿ, ನಿರ್ದೇಶಿಸಿರುವ ಕೀರ್ತಿ ಐ ಲವ್ ಯು ಚಿತ್ರ ಸದ್ದಿಲ್ಲದೆ ಚಿತ್ರೀಕರಣ ಮುಗಿಸಿದ್ದು ತೆರೆಗೂ ಸಿದ್ಧವಾಗಿದೆ. ಶೀರ್ಷಿಕೆಯೇ ಹೇಳುವಂತೆ ಚಿತ್ರದಲ್ಲಿ ಪ್ರೇಮಕಥೆ ಇದ್ದು, ಅದರ ಜತೆಗೆ ಸಾಮಾಜಿಕ ಸಂದೇಶವೂ ಬೆರೆತಿದೆ. ಪೂಜಿತಾ. ಎಸ್.ರಾವ್ ನಿರ್ಮಾಣದ ಈ ಚಿತ್ರವನ್ನು ನಿರಂಜನ್ ಆರಾಧ್ಯ ನಿರ್ದೇಶನ ಮಾಡಿದ್ದಾರೆ. ಈ ಚಿತ್ರದ ಮೊದಲ ಹಾಡು ಬಿಡುಗಡೆಯಾಗಿದ್ದು, ಸಂಗೀತ ಪ್ರಿಯರನ್ನು ಸೆಳೆಯುತ್ತಿದೆ. ಮುದ್ದಾದ ಮೂಗುತಿ... ಹಾಡು ಇದಾಗಿದ್ದು, ಅರುಣ್ ಕುಮಾರ್ ಸಾಹಿತ್ಯ ಬರೆದಿದ್ದು, ಅಭಿರಾಮ್ ಸಂಗೀತ ಸಂಯೋಜಿಸಿದ್ದಾರೆ. ಅರ್ಫಾಜ್ ಉಲ್ಲಾಳ್ ದನಿಯಲ್ಲಿ ಹಾಡು ಮಧುರವಾಗಿ ಮೂಡಿಬಂದಿದೆ. ಪ್ರಜ್ಯೋತ್.ಎಸ್.ರಾವ್ ನಾಯಕನಾಗಿ ನಟಿಸಿದ್ದು, ನಿಧಿ ಗೌಡ ನಾಯಕಿಯಾಗಿ ಅಭಿನಯಿಸಿದ್ದಾರೆ.

ನನಗೆ ಮೊದಲಿನಿಂದಲೂ ನಿರ್ದೇಶನದಲ್ಲಿ ಬಲು ಆಸಕ್ತಿ. ಹಾಗಾಗಿಯೇ ಈ ಸಿನಿಮಾಗೆ ಕಥೆ ಬರೆದು ನಿರ್ದೇಶನ ಮಾಡಿದ್ದೇನೆ. ಪ್ರೀತಿಯ ಕುರಿತು ಹಲವು ಚಿತ್ರಗಳು ತೆರೆಗೆ ಬಂದಿದೆಯಾದರೂ ನಾವು ಈ ಚಿತ್ರದಲ್ಲಿ ಪ್ರೀತಿಯ ಬಗ್ಗೆ ಹೇಳಿರುವ ವ್ಯಾಖ್ಯಾನವೇ ಬೇರೆ. ಅದರಲ್ಲೂ ಈಗಂತೂ ಚಿಕ್ಕವಯಸ್ಸಿನಲ್ಲೇ ಲವ್, ಡೇಟಿಂಗ್ ಎನ್ನುತ್ತಾರೆ. ಅದೆಲ್ಲಾ ತಪ್ಪು ಎಂದು ಯುವಜನತೆಗೆ ಜಾಗೃತಿ ಮೂಡಿಸುವ ಪ್ರಯತ್ನವೂ ಈ ಚಿತ್ರದಲ್ಲಿದೆ ಎಂದು ನಿರ್ದೇಶಕ ನಿರಂಜನ್ ಆರಾಧ್ಯ ಹೇಳಿದರು.

ನನ್ನ ತಮ್ಮ ಪ್ರಜ್ಯೋತ್‌ಗೆ ಮೊದಲಿನಿಂದಲೂ ಸಿನಿಮಾ ನಟನಾಗಬೇಕು ಎಂಬ ಆಸೆ. ಅವನ ಕನಸು ನನಸಾಗಬೇಕು ಎಂಬ ನಿಟ್ಟಿನಲ್ಲಿ ಈ ಚಿತ್ರಕ್ಕೆ ನಾನೇ ಬಂಡವಾಳ ಹೂಡಿದ್ದೇನೆ. ಇಂದಿನ ಯುವಜನತೆಗೆ ಹೇಳಿ ಮಾಡಿಸಿದ ಕಥೆ ಈ ಚಿತ್ರದಲ್ಲಿದೆ ಎಂದು ನಿರ್ಮಾಪಕಿ ಪೂಜಿತಾ ಹೇಳಿದರು. ಕೀರ್ತಿ ಐ ಲವ್ ಯು ಜುಲೈನಲ್ಲಿ ತೆರೆಗೆ ಬರಲಿದೆ.